

MACMILLAN & CO., LIMITED:
CALCUTTA, MADRAS, AND LONDON
1919

ION BOOK AND TRACT DEPOSITORY, MANGALORE

 [ಕ್ರಯ: ೭ ಆಣೆ.

GEOGRAPHY

OF THE

MADRAS PRESIDENCY

IN KANARESE

WITH NUMEROUS ILLUSTRATIONS AND A LARGE MAP

BY

E. MARSDEN, B. A.
Inspector of Schools, Central Circle (Retired)

APPROVED BY THE TEXT-BOOK COMMITTEE

Ninth Edition, revised.

ಮದ್ರಾಸು ಆಧಿಪತ್ಯದ ವಿವರ

MACMILLAN & CO., LIMITED:

BOMBAY, CALCUTTA, MADRAS AND LONDON

SOLD BY THE

KANARESE MISSION BOOK AND TRACT DEPOSITORY, MANGALORE

1919

Price: 7 Annas.] [ಕ್ರಯ: ೭ ಆಣೆ.

PRINTED AT THE KANARESE MISSION PRESS, MANGALORE.

ಅನುಕ್ರಮಣಿಕೆ.

ಮೊದಲನೇ ಭಾಗ.

ಎರಡನೇ ಭಾಗ.

ಮೂರನೇ ಭಾಗ.

ನಾಲ್ಕನೇ ಭಾಗ.

ಮದ್ರಾಸ ಸಂಸ್ಥಾನದ ವಿವರ

ನಾವು ವಾಸಿಸಿರುವ ಈ ಸೀಮೆಯು ಹಿಂದೂದೇಶದ ಬಲು ಚಿಕ್ಕ ಭಾಗವಾಗಿದೆ. ಹಿಂದೂದೇಶವನ್ನು ಕೆಲವು ಸಂಸ್ಥಾನಗಳಾಗಿ ವಿಭಾಗಿಸಿ, ಒಂದೊಂದು ಸಂಸ್ಥಾನವನ್ನು ಅನೇಕ ಜಿಲ್ಲೆಗಳಾಗಿ ವಿಂಗಡಿಸಿದ್ದಾರೆ. ನಾವು ಇರುವ ಜಿಲ್ಲೆಯು ಮದ್ರಾಸ ಸಂಸ್ಥಾನಕ್ಕೆ ಸೇರಿದೆ. ಈ ಸಂಸ್ಥಾನದ ಮುಖ್ಯ ಪಟ್ಟಣವೇ ಮದ್ರಾಸ; ಇದರಿಂದ ಇಡೀ ಸಂಸ್ಥಾನಕ್ಕೆ ಮದ್ರಾಸ ಸಂಸ್ಥಾನವೆಂದು ಹೆಸರಾಗಿದೆ. ಮದ್ರಾಸ ಪಟ್ಟಣದಲ್ಲಿರುವ ಸೆಂಟ್ ಜೊರ್ಜ ಎಂಬ ಹೆಸರಿನ ಕೋಟೆಯಲ್ಲಿ ಈ ಸಂಸ್ಥಾನದ ಆಡಳಿತವು ನಡೆಯುವುದರಿಂದ, ಮದ್ರಾಸ ಸಂಸ್ಥಾನವನ್ನು ಸೆಂಟ್ ಜೊರ್ಜ ಎಂಬ ಹೆಸರಿನಿಂದಲೂ ಕರೆಯುತ್ತಾರೆ.

ವಿಸ್ತಾರ.—ಮದ್ರಾಸ ಸಂಸ್ಥಾನವು ಹಿಂದೂದೇಶದ ಈಶಾನ್ಯಮೂಲೆಯಿಂದ ನೈಋತ್ಯಮೂಲೆಯ ವರೆಗೆ ಚಾಚಿಕೊಂಡಿದೆ; ಆ ಮೂಲೆಯಿಂದ ಈ ಮೂಲೆ ವರೆಗೆ 950 ಮೈಲು ಉದ್ದ. ಅದು ಬಹು ಅಗಲವಾಗಿದ್ದಲ್ಲಿ ಅದರ ಅಗಲವು ಸುಮಾರು 450 ಮೈಲು. ಇಷ್ಟು ವಿಶಾಲವಾದ ಸಂಸ್ಥಾನವನ್ನು ಪಟದಲ್ಲಿ ಬರೆಯುವಾಗ ಸಣ್ಣ ಅಳತೆಯಲ್ಲಿ ಕಾಣಿಸಬೇಕಾಗುತ್ತದೆ. ಈ ಪುಸ್ತಕದಲ್ಲಿಯ ಮದ್ರಾಸ ಸಂಸ್ಥಾನದ ಪಟವನ್ನು ಒಂದು ಇಂಚಿಗೆ 65 ಮೈಲುಗಳ ಅಳತೆಯಲ್ಲಿ ತೆಗೆದಿರುವುದರಿಂದ, ಆ ಸ್ಕೇಲಳತೆಯನ್ನು ಎಣಿಸಿ ಸಂಸ್ಥಾನದ ಉದ್ದವೂ ಅಗಲವೂ ಸರಿಯುಂಟೊ ಇಲ್ಲವೊ ಎಂಬುದನ್ನು ನೀನೇ ಕಂಡುಹಿಡಿಯಬಹುದು. ಒಂದು ಸ್ಥಳವು 3 ಮೈಲು ಉದ್ದವಾಗಿಯೂ 2 ಮೈಲು ಅಗಲವಾಗಿಯೂ ಇದ್ದರೆ, ಅದರ ವಿಸ್ತೀರ್ಣವು 3 × 2 ಎಂದರೆ 6 ಚದರಮೈಲು ಎಂದು ಹೇಳುವುದು ವಾಡಿಕೆಯಾಗಿದೆ. ಇದರಂತೆಯೇ ಒಂದು ಚೌಕ ಪ್ರದೇಶದ ಉದ್ದವು 20 ಮೈಲು, ಅಗಲವು 15 ಮೈಲು ಎಂದು ಇಟ್ಟುಕೊಂಡರೆ, ಆ ಪ್ರದೇಶವು 20 × 15 ಅಥವಾ 300 ಚದರಮೈಲು ವಿಸ್ತೀರ್ಣವಾಗಿರುತ್ತದೆ ಎಂದು ತಿಳಿದುಕೊಳ್ಳುತ್ತೇವೆ. ಮದ್ರಾಸ ಸಂಸ್ಥಾನವು ಸರಿಯಾದ ಚೌಕವಲ್ಲ. ಅದು ಸರಿಯಾದ ಚೌಕವಾಗಿದ್ದು, 950 ಮೈಲು

ಉದ್ದವೂ 450 ಮೈಲು ಅಗಲವೂ ಇದ್ದಿದ್ದರೆ ಅದರ ಚದರಳತೆಯು 950 × 450 = 4,27,500 ಚ. ಮೈಲು ಆಗಬೇಕಿತ್ತು. ಆದರೆ ಅದು ಚೌಕವಾಗಿಲ್ಲದ್ದರಿಂದ, ಅದರ ವಿಸ್ತೀರ್ಣವು ಅಷ್ಟಾಗಲಾರದೆಂಬುದು ಸ್ಪಷ್ಟವಾಗಿದೆ. ಮದ್ರಾಸ ಸಂಸ್ಥಾನವು 1,50,000 ಚದರಮೈಲು ವಿಸ್ತೀರ್ಣವಾಗಿದೆ ಎಂದು ಲೆಕ್ಕಿಸಿ ನೋಡಿದ್ದಾರೆ. ಇಷ್ಟು ವಿಸ್ತಾರವಾದ ಪ್ರದೇಶವೆಲ್ಲಾ ಬ್ರಿಟಿಷ್ ಸರಕಾರದ ಅಧಿಕಾರಕ್ಕೆ ಒಳಪಟ್ಟಿರುವುದಿಲ್ಲ; ಇದರಲ್ಲಿ ಸುಮಾರು 10,000 ಚದರಮೈಲು ವಿಸ್ತೀರ್ಣವಾದ ಭಾಗವು ದೇಶೀಯ ರಾಜರ ವಶದಲ್ಲಿದೆ; ಉಳಿದ 1,40,000 ಚದರಮೈಲು ಪ್ರದೇಶವನ್ನು ಬ್ರಿಟಿಷರೇ ಆಳುತ್ತಾರೆ.

ಮೇರೆಗಳು.—ಮದ್ರಾಸ ಸಂಸ್ಥಾನದ ಪಟವನ್ನು ನೋಡಿ, ಅದರ ನಾಲ್ಕು ದಿಕ್ಕುಗಳಲ್ಲಿಯೂ ನೀರುಂಟೊ ನೆಲವುಂಟೊ ಎಂಬುದನ್ನು ನಾವು ಸುಲಭವಾಗಿ ನೋಡಿ ಹೇಳಬಹುದು. ಸಂಸ್ಥಾನದ ಉತ್ತರದಲ್ಲಿಯೂ ವಾಯವ್ಯದಲ್ಲಿಯೂ ನೆಲವಿದೆ; ಪೂರ್ವದಿಕ್ಕಿನಲ್ಲಿಯೂ ದಕ್ಷಿಣದಿಕ್ಕಿನಲ್ಲಿಯೂ ಜಲವಿದೆ; ಪಶ್ಚಿಮ ಕಡೆಯಲ್ಲಿ ಜಲವೂ ನೆಲವೂ ಇವೆ. ಇನ್ನೂ ಇದರ ಉತ್ತರ ಮೇರೆಗಳನ್ನು ಸರಿಯಾಗಿ ಹೇಳೋಣ. ಒರಿಸ್ಸಾ, ಬಂಗಾಳ ಸಂಸ್ಥಾನದ ಒಂದು ಭಾಗ, ಹೈದರಾಬಾದು ಸೀಮೆ, ಮೈಸೂರು ಸೀಮೆ, ಮುಂಬಯಿ ಸಂಸ್ಥಾನ, ಇವೇ ಮದ್ರಾಸ ಸಂಸ್ಥಾನಕ್ಕೆ ಉತ್ತರದಲ್ಲಿವೆ. ಇವುಗಳಲ್ಲಿ ಹೈದರಾಬಾದು ಸೀಮೆ ನಿಜಾಮ ಎಂಬ ಮನೆತನದ ಹೆಸರುಳ್ಳ ಮಹಮ್ಮದಿ ರಾಜನ ರಾಜ್ಯವಾಗಿದೆ; ಮೈಸೂರು ಸೀಮೆ ಮಹಾರಾಜ ಎಂಬ ಬಿರುದುಳ್ಳ ಒಬ್ಬ ಹಿಂದೂ ಅರಸನ ವಶವಾಗಿದೆ. ಇವರಿಬ್ಬರೂ ನಮ್ಮನ್ನು ಆಳುವ ಮಹಾರಾಜ ಚಕ್ರವರ್ತಿಯವರ ಆಶ್ರಯದಲ್ಲಿರುವ ಅರಸರು. ಮದ್ರಾಸ ಸಂಸ್ಥಾನದ ಉಳಿದ ಮೂರು ಕಡೆಗಳಲ್ಲಿ ಸಮುದ್ರವಿದೆ. ಪೂರ್ವಮೇರೆಯಾದ ಸಮುದ್ರಭಾಗಕ್ಕೆ ಬಂಗಾಳ ಕೊಲ್ಲಿ ಎಂತಲೂ ಪಶ್ಚಿಮಮೇರೆಯಾದ ಸಮುದ್ರಭಾಗಕ್ಕೆ ಅರಬಿ ಸಮುದ್ರವೆಂತಲೂ ಹೆಸರು. ಈ ಎರಡೂ ಸಮುದ್ರಭಾಗಗಳು ಹಿಂದೂದೇಶದ ದಕ್ಷಿಣದಿಕ್ಕಿನಲ್ಲಿ ಒಟ್ಟುಗೂಡುತ್ತವೆ; ಇವು ಹಿಂದೂಸಾಗರ ಎಂಬ ಹೆಸರಿನಿಂದ ಕರೆಯಲಾಗುವ ಸಾಗರದ ಭಾಗಗಳು.

ಪಟದ ತೆಂಕು ಮೂಲೆಯಲ್ಲಿ ಕಾಣುವುದು ಲಂಕಾದ್ವೀಪ. ಈ ದ್ವೀಪಕ್ಕೂ ಮದ್ರಾಸ ಸಂಸ್ಥಾನಕ್ಕೂ ನಡುವೆ ಸಮುದ್ರವು ಬಹು ಆಳವಾಗಿಲ್ಲ. ಹೀಗೆ

ಆಳವಿಲ್ಲದ ಕಡೆಯಲ್ಲಿ ಕೆಲವು ಸಣ್ಣ ಸಣ್ಣ ದ್ವೀಪಗಳಿವೆ. ಇವುಗಳಲ್ಲಿ ರಾಮೇಶ್ವರವೆಂಬುದೇ ಮುಖ್ಯವಾದುದು. ಮೊದಲು ರಾಮೇಶ್ವರದಿಂದ ಲಂಕಾದ್ವೀಪಕ್ಕೆ ಹೋಗುವಾಗ ಹಡಗುಗಳನ್ನು ಹತ್ತಿಹೋಗಬೇಕಾಗಿತ್ತು. ಇತ್ತಲಾಗೆ ಒಂದು ದ್ವೀಪದಿಂದ ಇನ್ನೊಂದು ದ್ವೀಪಕ್ಕೆ ಹೋಗುವುದಕ್ಕೆ ರೈಲು ಮಾರ್ಗವನ್ನು ಹಾಕಿರುತ್ತಾರೆ.

ಪ್ರಾಕೃತಿಕ ಲಕ್ಷಣಗಳು. — ಹಿಂದೂದೇಶವನ್ನು ಆಳುವುದಕ್ಕೆ ಅನುಕೂಲ ವಾಗುವಂತೆ ಅದನ್ನು ಸಂಸ್ಥಾನಗಳಾಗಿಯೂ, ಸಂಸ್ಥಾನಗಳನ್ನು ಜಿಲ್ಲೆಗಳಾ ಗಿಯೂ ವಿಭಾಗಿಸಿರುವುದಾದರೂ ನೆಲವು ಒಂದು ಸಂಸ್ಥಾನದಲ್ಲಿರುವಂತೆ ಇನ್ನೊಂದು ಸಂಸ್ಥಾನದಲ್ಲಿ ಇರುವುದಿಲ್ಲ; ಭೂಮಿಯ ಸ್ವರೂಪವು ಒಂದು ಜಿಲ್ಲೆಯಲ್ಲಿ ಇದ್ದಂತೆ ಇನ್ನೊಂದು ಜಿಲ್ಲೆಯಲ್ಲಿ ಇರುವುದಿಲ್ಲ. ಭೂಸ್ವರೂಪವು ಎಲ್ಲೆಲ್ಲಿ ಹೇಗೆ ಹೇಗೆ ಇದೆ ಎಂಬುದನ್ನು ತಿಳಿದುಕೊಳ್ಳುವುದು ಆವಶ್ಯಕವಾಗಿ ರುವುದರಿಂದ, ಹಿಂದೂದೇಶವನ್ನು ಪ್ರಾಕೃತಿಕ ಲಕ್ಷಣಗಳಿಗೆ ಅನುಸಾರವಾಗಿ ವಿಭಾಗಿಸಿರುತ್ತಾರೆ. ಹಿಂದೂದೇಶದ ಹಲವು ಭಾಗಗಳಲ್ಲಿ ನೆಲವು ಸಮುದ್ರ ಮಟ್ಟಕ್ಕಿಂತ ಎತ್ತರವಾಗಿಯೂ ಕೆಲವು ಭಾಗಗಳಲ್ಲಿ ತಗ್ಗಾಗಿಯೂ ಕೆಲವು ಕಡೆಗಳಲ್ಲಿ ಕಡಲುಮಟ್ಟಕ್ಕೆ ಸರಿಯಾಗಿಯೂ ಇರಬಹುದು. ಆದರೆ ಸಮುದ್ರ ಮಟ್ಟಕ್ಕಿಂತ ತಗ್ಗಾದ ಪ್ರದೇಶವು ಹಿಂದೂದೇಶದಲ್ಲಿ ಎಲ್ಲಿಯೂ ಇಲ್ಲ. ಸಮುದ್ರ ಮಟ್ಟಕ್ಕಿಂತ 500 ಫೀಟು ಎತ್ತರವಿಲ್ಲದ ನೆಲವನ್ನು ಬಯಲು ಸೀಮೆ ಎಂದು ಕರೆಯುತ್ತಾರೆ. ಮದ್ರಾಸ ಸಂಸ್ಥಾನದ ಕರಾವಳಿಯಲ್ಲಿ ಕಾಣುವ ನೆಲವೆಲ್ಲ 500 ಫೀಟಿಗಿಂತ ಎತ್ತರವಾಗಿಲ್ಲ. ಹೊಳೆಗಳು ಹರಿಯುವಾಗ ಇಕ್ಕಡೆಗಳಲ್ಲಿ ಇರುವ ನೆಲವು ಪ್ರಾಯಶಃ ಬಯಲುಗಳೇ. ಈ ಪುಸ್ತಕದಲ್ಲಿ ಕೊಟ್ಟಿರುವ ಮದ್ರಾಸ ಸಂಸ್ಥಾನದ ಪಟವನ್ನು ನೋಡಿ ಅಂಥ ಬಯಲುಗಳು ಎಲ್ಲೆಲ್ಲಿ ವಿಸ್ತರಿಸಿರುತ್ತವೆಂತಲೂ ಅವು ಎಷ್ಟು ವಿಸ್ತಾರವಾಗಿವೆಯೆಂತಲೂ ತಿಳಿದುಕೊಳ್ಳಬಹುದು. ಸಂಸ್ಥಾನದ ಪಶ್ಚಿಮಭಾಗದಲ್ಲಿ ಇರುವುದಕ್ಕಿಂತ ಪೂರ್ವಭಾಗದಲ್ಲಿಯೇ ಅನೇಕ ಬಯಲುಗಳುಂಟೆಂಬುದು ಗೊತ್ತಾಗುವುದು. ಇಂಥ ಒಂದು ಬಯಲು ದಕ್ಷಿಣೋತ್ತರವಾಗಿ ಹರಡಿರುತ್ತದೆ. ಅದು ಉತ್ತರ ದಲ್ಲಿ ಸುಮಾರು 20 ಮೈಲು ಉದ್ದವಾಗಿಯೂ ದಕ್ಷಿಣದಲ್ಲಿ ಸುಮಾರು 100 ಮೈಲುಗಳಿಂದ 150 ಮೈಲುಗಳ ಅಗಲವಾಗಿಯೂ ಹಬ್ಬಿಕೊಂಡಿದೆ. ಈ ಬಯಲಿಗೆನೇ ಕರ್ಣಾಟಕ ಎಂಬ ಹೆಸರು. ಪಶ್ಚಿಮ ಕರಾವಳಿಯಲ್ಲಿ ಕಾಣುವ

ಬಯಲು ಇದರಷ್ಟು ಅಗಲವಾಗಿಲ್ಲ. ಈ ಕರಾವಳಿಯಲ್ಲಿಯ ಬಯಲಿನ ಉತ್ತರಭಾಗಕ್ಕೆ **ಕೊಂಕಣ** ಎಂದು ಹೆಸರು; ದಕ್ಷಿಣಭಾಗಕ್ಕೆ **ಕೇರಳ** ಎಂದು ಹೆಸರು.


ಪರ್ವತಗಳು.—ಕರ್ಣಾಟಕ ಬಯಲಿನ ಪಡುವಣದಿಕ್ಕಿನಲ್ಲಿಯೂ ಕೊಂಕಣ ಕೇರಳ ಬಯಲುಗಳ ಮೂಡಲು ದಿಕ್ಕಿನಲ್ಲಿಯೂ ನೆಲವು ಬಹಳ ಉನ್ನತವಾಗಿ ಏರಿ ಪರ್ವತಗಳಾಗಿ ಪರಿಣಮಿಸಿದೆ. ಈ ಪರ್ವತಗಳು ಅತ್ಯುನ್ನತವಾದ ಗೋಡೆಗಳಂತೆ ಮದ್ರಾಸ ಸಂಸ್ಥಾನದ ಒಳಭಾಗದಲ್ಲಿ ಸಾಲಾಗಿ ಉತ್ತರದಿಂದ ದಕ್ಷಿಣಕ್ಕೆ ನೀಡಿಕೊಂಡಿವೆ. ಈ ಪರ್ವತಶ್ರೇಣಿಗಳಲ್ಲಿ ಕೊಂಕಣ ಕೇರಳಗಳಿಗೆ ಒತ್ತಾಗಿರುವುದಕ್ಕೆ ಪಶ್ಚಿಮಘಟ್ಟವೆಂದು ಹೆಸರು. ಈ ಘಟ್ಟಗಳು ಉತ್ತರದಲ್ಲಿ ಮುಂಬಯಿ ಪಟ್ಟಣದಿಂದ ದಕ್ಷಿಣದಲ್ಲಿ ಕನ್ಯಾಕುಮಾರಿಯ ವರೆಗೆ ಸುಮಾರು 1000 ಮೈಲು ಉದ್ದವಾಗಿವೆ. ಇವು ಕೆಲವು ಕಡೆ ಸಮುದ್ರ ತೀರದಿಂದ ಬರೆ 25 ಮೈಲು ದೂರವಾಗಿಯೂ ಕೆಲವು ಕಡೆ ಸುಮಾರು 100 ಮೈಲು ದೂರವಾಗಿಯೂ ಇರುತ್ತವೆ. ಇವುಗಳ ಎತ್ತರವು ಎಲ್ಲಾ ಕಡೆಗಳಲ್ಲಿಯೂ ಒಂದೇಯಾಗಿಲ್ಲ; ಕೆಲವು ಶಿಖರಗಳು ಸುಮಾರು 4000 ಫೀಟು ಉನ್ನತವಾಗಿಯೂ ಕೆಲವು ಸುಮಾರು 8760 ಫೀಟು ಏರಾಗಿಯೂ ಇವೆ. ಪೂರ್ವಘಟ್ಟಗಳು ಉತ್ತರದಿಂದ ದಕ್ಷಿಣದ ವರೆಗೆ ತುಂಡುತುಂಡಾಗಿ ವಿಸ್ತರಿಸಿವೆ; ಆದರೆ ಪಶ್ಚಿಮಘಟ್ಟಗಳು ಹೀಗಿರುವುದಿಲ್ಲ. ಅವು ಬಡಗು ಕಡೆಯಿಂದ ತೆಂಕು ಕಡೆಯ ವರೆಗೆ ನಡುನಡುವೆ ಸಂದುಗಳಿಲ್ಲದೆ ಒತ್ತಾಗಿ ನಿಂತಿರುತ್ತವೆ. ಈ ಪರ್ವತಶ್ರೇಣಿಯ ಮಧ್ಯದಲ್ಲಿ ಗಂಡಿಗಳು ಇಲ್ಲದಿರುವುದರಿಂದ ಪಶ್ಚಿಮ ಕರಾವಳಿಯ ಬಯಲಿನಿಂದ ಘಟ್ಟದ ಸಾಲುಗಳನ್ನು ದಾಟಿ ಮುಂದರಿಸುವುದು ಬಹು ಕಷ್ಟವಾಗಿದೆ. ಆದರೂ ಈ ಘಟ್ಟಗಳಲ್ಲಿ ಒಂದೆರಡು ಕಡೆ ತುಸ ಅಗಲವಾದ ಗಂಡಿಬಾಗಿಲುಗಳುಂಟು; ಈ ಪ್ರದೇಶದಲ್ಲಿಯೂ ಕೂಡ ನೆಲವು ಸಮುದ್ರಮಟ್ಟಕ್ಕಿಂತ ಬಲು ಎತ್ತರವಾಗಿದ್ದರೂ, ರೈಲುಬಂಡಿಯು ಹೋಗುವುದಕ್ಕೆ ತೊಡಕಾಗುವಷ್ಟು ಎತ್ತರವಾಗಿಲ್ಲ.

ಮದ್ರಾಸ ಸಂಸ್ಥಾನದ ಪೂರ್ವದಿಕ್ಕಿನಲ್ಲಿರುವ ಪರ್ವತಶ್ರೇಣಿಗಳಿಗೆ ಪೂರ್ವಘಟ್ಟಗಳೆಂದು ಹೆಸರು. ಈ ಘಟ್ಟಗಳು ಸಂಸ್ಥಾನದ ಈಶಾನ್ಯ ಮೇರೆಯಾಗಿರುವ ಒರಿಸ್ಸಾ ಸಂಸ್ಥಾನದಿಂದ ಪ್ರಾರಂಭಿಸಿ, ಮೊದಲುಮೊದಲು ಕರಾವಳಿಯಿಂದ ಬಹು ದೂರವಾಗಿರದೆ, ದಕ್ಷಿಣಕ್ಕೆ ಹೋಗುವಷ್ಟಕ್ಕೆ ತೀರವನ್ನು

ಬಿಟ್ಟು ಒಳಗೆ ವ್ಯಾಪಿಸಿಕೊಂಡು, ಕಟ್ಟಕಡೆಗೆ ಪಶ್ಚಿಮಘಟ್ಟದ ಒಂದು ಭಾಗವೆಂಬಂತೆ ಕಾಣಿಸಿಕೊಂಡು, ನೀಲಗಿರಿಯೆಂಬಲ್ಲಿ ಬೆರಸಿಹೋಗುತ್ತವೆ. ಈ ಘಟ್ಟಗಳು ಪಶ್ಚಿಮಘಟ್ಟಗಳಷ್ಟು ಉನ್ನತವಾಗಿಲ್ಲ. ಪಶ್ಚಿಮಘಟ್ಟಗಳ ಸರಾಸರಿ ಉನ್ನತವು 4000 ಫೀಟು. ಇವುಗಳ ಸರಾಸರಿ ಎತ್ತರವು ಬರೆ 2000 ಫೀಟು, ಅಂದರೆ ಪಶ್ಚಿಮಘಟ್ಟಗಳು ಪೂರ್ವಘಟ್ಟಗಳಿಗಿಂತ ಇಮ್ಮಡಿ ಎತ್ತರವಾಗಿವೆ. ಪೂರ್ವಘಟ್ಟಗಳಲ್ಲಿ ಅತ್ಯುನ್ನತವಾದ ಶಿಖರವು 6000 ಫೀಟು ಎತ್ತರ. ಈ ಘಟ್ಟಗಳು ಪಶ್ಚಿಮಘಟ್ಟಗಳಂತೆ ಒತ್ತೊತ್ತಾಗಿರದೆ ಅಲ್ಲಲ್ಲಿ ಕಡಿದು ಬಿಟ್ಟಂತಿವೆ ಎಂದು ಮೊದಲು ಹೇಳಿದೆವಷ್ಟೆ. ಹೀಗೆ ಇವುಗಳ ನಡುನಡುವೆ ವಿಶಾಲವಾದ ಗಂಡಿಗಳಿರುವುದರಿಂದ ಹೊಳೆಗಳೂ ತೊರೆಗಳೂ ಆ ಸಂದುಗಳ ಮಾರ್ಗವಾಗಿ ಹರಿದುಬರುವುದಕ್ಕೆ ಅನುಕೂಲವಾಗಿವೆ. ಬಂಗಾಳ ಕೊಲ್ಲಿಗೆ ಬೀಳುವ ಮದ್ರಾಸ ಸಂಸ್ಥಾನದ ಹೊಳೆಗಳೆಲ್ಲ ಪೂರ್ವಘಟ್ಟಗಳಲ್ಲಿಯ ಈ ಬಿರುಕುಗಳನ್ನು ಹಾದು ಹರಿಯುತ್ತವೆ. ಪೂರ್ವಘಟ್ಟಗಳೂ ಪಶ್ಚಿಮಘಟ್ಟಗಳೂ ಜೋಡಾಗುವಲ್ಲಿ ನೆಲವು ಬಹಳ ಎತ್ತರವಾಗಿದೆ. ಇದೇ ನೀಲಗಿರಿಯ ಬೆಟ್ಟಗಳು.

ನೀಲಗಿರಿಯ ತೆಂಕು ಕಡೆಯಲ್ಲಿ ಒಂದು ಗಂಡಿಯಿದೆ. ಇದು 16 ಮೈಲು ಅಗಲವಾಗಿದ್ದು ಪಶ್ಚಿಮಘಟ್ಟಗಳಲ್ಲಿದೆ. ಇದಕ್ಕೀಗ **ಪಾಲೆಕಾಡು** ಸಂದು ಎಂದು ಹೆಸರು; ಅದು ಪಾಲೆಕಾಡಿಗೆ ಸಮೀಪವಾಗಿದೆ. ಪಾಲೆಕಾಡು ಸಂದಿನ ದಕ್ಷಿಣಕ್ಕೆ ಘಟ್ಟಗಳು ಬಹು ಎತ್ತರವಾಗಿವೆ. ಇವುಗಳಲ್ಲಿ ಎತ್ತರವಾದ **ಆನೆ ಮುಡಿ** ಎಂಬ ಶಿಖರವು ಆನೆಮಲೆಯ ಹತ್ತಿರವಿದ್ದು, 8837 ಫೀಟು ಉನ್ನತವಾಗಿದೆ. ಘಟ್ಟಗಳು ಅಲ್ಲಿಂದ ಇನ್ನೂ ದಕ್ಷಿಣಕ್ಕೆ ಹೋಗುವಷ್ಟಕ್ಕೆ ಇಳಿಯುತ್ತ ಇಳಿಯುತ್ತ ಬಂದು, ಕನ್ಯಾಕುಮಾರಿಯಲ್ಲಿ ಅಂತ್ಯವಾಗುತ್ತವೆ.

ಸಮುದ್ರಕರಾವಳಿಗೂ ಪೂರ್ವಘಟ್ಟಗಳಿಗೂ ನಡುವೆ, ಸಮುದ್ರಕರಾವಳಿಗೂ ಪಶ್ಚಿಮಘಟ್ಟಗಳಿಗೂ ನಡುವೆ ನೆಲವು ಬಹು ಏರದೆ ಬಯಲುಗಳಾಗಿದೆ ಎಂದು ಮೊದಲೆ ಹೇಳಿದೆವಷ್ಟೆ. ಪೂರ್ವಘಟ್ಟಗಳಿಗೂ ಪಶ್ಚಿಮಘಟ್ಟಗಳಿಗೂ ಮಧ್ಯದಲ್ಲಿರುವ ಪ್ರದೇಶವು ಈ ಬಯಲುಗಳಿಗಿಂತ ಎತ್ತರದಲ್ಲಿದೆ. ಈ ಪ್ರದೇಶದಲ್ಲಿ ನೆಲವು ಕೆಲವೆಡೆ ಸಮುದ್ರಮಟ್ಟಕ್ಕಿಂತ ಒಂದು ಸಾವಿರ ಫೀಟು ಏರಾಗಿಯೂ ಕೆಲವೆಡೆ ಮೂರು ಸಾವಿರ ಫೀಟು ಎತ್ತರವಾಗಿಯೂ ಹೋಗಿದೆ. ಇಂಥ ಪ್ರದೇಶಕ್ಕೆ ಪೀಠಭೂಮಿ ಎಂದು ಹೆಸರು. ಎರಡೂ ಘಟ್ಟಗಳ ನಡುವಣ ಈ ಪೀಠಭೂಮಿಯು ಪಡುಕಡೆಗೆ ಉನ್ನತವಾಗಿಯೂ ಅಲ್ಲಿಂದ ಮೂಡುಕಡೆಗೆ


ಭೂತಿರ
ದ್ವೀಪಸಮುದಾಯ
ಕಡಲು
ಕೊಲ್ಲಿ
ಗ್ರಾಮ
ದ್ವೀಪಕಲ್ಪ
ಭೂಕಂಠ
ಆಖಾತ
ಲಂಕೆ
ಬಲದಡ
ಉಪನದಿ
ಎಡದಡ
ಉಗಮ
ಶಿಖರ
ನದಿ
ಗುಡ್ಡ
ದ್ವೀಪ
ಜಲಸಂಧಿ
ಪಟ್ಟಣ
ರೇವು
ಸೇತುವೆ
ಬಂದರು
ಸರೋವರ



ಹೋಗುವಷ್ಟಕ್ಕೆ ಇಳುಕಲಾಗಿಯೂ ಇದೆ. ದಕ್ಕಣವೆಂದು ಕರೆಯಲಾಗುವ ಪ್ರದೇಶವು ಇದೇ ಪೀಠಭೂಮಿ. ಇಲ್ಲಿ ಗುಡ್ಡಗಳೂ ಮಲೆಗಳೂ ಇರುವ ಪ್ರದೇಶವನ್ನು ದುರ್ಗವೆಂದು ಕರೆಯುತ್ತಾರೆ. ದುರ್ಗಗಳು ಕೆಲವೆಡೆಗಳಲ್ಲಿ ಸಮುದ್ರಮಟ್ಟಕ್ಕಿಂತ 4000 ಫೀಟು ಎತ್ತರವಾಗಿವೆ. ಈ ಪೀಠಭೂಮಿಯ ಒಂದು ಭಾಗವು ಮೈಸೂರು ಸೀಮೆ. ಇದು ಎತ್ತರವಾಗಿರುವ ಪೀಠಭೂಮಿಯಾಗಿದ್ದುದರಿಂದ ಪಶ್ಚಿಮಘಟ್ಟದಲ್ಲಿ ಹುಟ್ಟಿದ ಹೊಳೆಗಳು ಇದರ ಮೂಲಕವಾಗಿ ಹರಿದು ಪೂರ್ವಕ್ಕೆ ಪ್ರವಹಿಸಿ, ಮೂಡು ಕರಾವಳಿಯ ಬಯಲನ್ನು ಸೇರಿ, ಬಂಗಾಳ ಕೊಲ್ಲಿಯಲ್ಲಿ ಬೀಳುತ್ತವೆ.

ಹವೆ.—ಪೃಥ್ವಿಯ ಮೇಲಿನ ಉಷ್ಣಪ್ರದೇಶಗಳಲ್ಲಿ ಮದ್ರಾಸ ಸಂಸ್ಥಾನವು ಒಂದಾಗಿದೆ. ದಿನಮಾನವು 24 ತಾಸುಗಳು ಎಂದಿದ್ದರೂ ವರ್ಷದಲ್ಲೆಲ್ಲ ಹಗಲು 12 ತಾಸಾಗಿಯೂ ಇರುಳು 12 ತಾಸಾಗಿಯೂ ಇರುವುದಿಲ್ಲ. ಚಳಿಗಾಲದಲ್ಲಿ ಶಾಲೆಯನ್ನು ಬಿಟ್ಟನಂತರ ಆಡುವುದಕ್ಕೆ ಸಮಯವೇ ಕಡಿಮೆ ಎಂಬಂತೆ ತೋರುವುದು. ಏಕೆಂದರೆ ಸೂರ್ಯನು ನವೆಂಬರ್, ಡಿಸೆಂಬರ್, ಜನವರಿ ಮಾಸಗಳಲ್ಲಿ ಬಹು ಬೇಗನೇ ಅಸ್ತಮಿಸುವನು. ಆ ಮಾಸಗಳಲ್ಲಿ ರಾತ್ರಿ ಮಲಗಿ ಎಂದಿನಂತೆ ಎಚ್ಚತ್ತರೆ, ಬೆಳಕು ಹರಿಯುವುದಕ್ಕೆ ಇನ್ನೂ ಹೊತ್ತುಂಟೆಂಬದಾಗಿ ಕಾಣುವುದು. ಸೆಕೆಕಾಲದಲ್ಲಿ ಅಂದರೆ ಮೇ ಜೂನು ಜುಲೈ ತಿಂಗಳುಗಳಲ್ಲಿ ಇದಕ್ಕೆ ಸರಿ ವಿರೋಧವಾಗಿ ತೋರುವುದು. ಆ ಮಾಸಗಳಲ್ಲಿ ಹಗಲು ಹೆಚ್ಚಾಗಿಯೂ ಇರುಳು ಕಡಮೆಯಾಗಿಯೂ ಇದೆ. ಸೆಕೆಕಾಲದಲ್ಲಿ ಸೂರ್ಯನು ಈ ಪ್ರದೇಶದಲ್ಲಿ ಬಹಳ ಹೊತ್ತಿನ ವರೆಗೆ ಮುಳುಗುವುದಿಲ್ಲವಾದ್ದರಿಂದ, ಆತನ ಬಿಸಿಲು ಕಾದು ಉಷ್ಣವು ಅಧಿಕವಾಗುತ್ತದೆ. ರಾತ್ರಿಯಲ್ಲಿ ಗಾಳಿಗಾಗಿ ಜನರು ಮನೆಯ ಅಂಗಳದಲ್ಲಾಗಲಿ ತಿಟ್ಟೆಯ ಮೇಲಾಗಲಿ ಮಲಗುವುದುಂಟು. ಸೂರ್ಯನು ಚಳಿಗಾಲದಲ್ಲಿ ಬೇಗನೆ ಅಸ್ತಮಿಸುವುದರಿಂದ ಹಗಲಿನ ಪರಿಮಾಣವೇ ಕಡಮೆಯಾಗಿ ಸೆಕೆಯು ತಗ್ಗುವುದು. ಆ ರಾತ್ರಿಗಳಲ್ಲಿ ಚಳಿಯು ಅತ್ಯಧಿಕವಾಗುತ್ತದೆ.

ಸಮುದ್ರಕರಾವಳಿಯಿಂದ ದೂರವಾಗಿರುವ ಒಳನಾಡುಗಳಲ್ಲಿಯ ಜನಗಳಿಗೆ ಸೆಕೆಕಾಲದಲ್ಲಿ ಬಿಸಿಲಿನ ತಾಪವು ಕರಾವಳಿಯ ಪ್ರದೇಶಗಳಲ್ಲಿ ಇರುವವರಿಗಿಂತ ಅಧಿಕವಾಗಿದೆ. ಹೀಗೆ ಒಂದೇ ಋತುವಿನಲ್ಲಿ ಒಂದು ಪ್ರದೇಶದಲ್ಲಿ ಉಷ್ಣವು ಅಧಿಕವಾಗುವುದಕ್ಕೂ ಇನ್ನೊಂದು ಕಡೆಯಲ್ಲಿ ಕಡಮೆಯಾಗು

ವುದಕ್ಕೂ ಸಮುದ್ರದ ನೀರು ಒಂದು ಕಾರಣವಾಗುತ್ತದೆ. ಇದು ಹೇಗಂದರೆ:— ನಮ್ಮ ಮನೆಗಳಲ್ಲಿ ನೀರು ಕಾಸುವುದನ್ನು ನೀವು ನೋಡಿರಬಹುದಷ್ಟೆ. ತಣ್ಣೀರು ಬಿಸಿಯಾಗುವುದಕ್ಕೂ ಬಿಸಿ ನೀರು ಆರುವುದಕ್ಕೂ ಸ್ವಲ್ಪ ಸಮಯವು ಹಿಡಿಯುತ್ತದೆಂದು ನಿನಗೆ ಗೊತ್ತಿದೆಯಷ್ಟೆ. ನೀರು ಬೆಂಕಿಯಿಂದ ಹೇಗೋ ಹಾಗೆಯೇ ಬಿಸಿಲಿನಿಂದಲೂ ಬೆಚ್ಚಗಾಗುತ್ತದೆ. ಸೂರ್ಯನ ಬಿಸಿಲು ನೆಲದ ಮೇಲೂ ನೀರಿನ ಮೇಲೂ ಒಂದೇ ರೀತಿಯಾಗಿ ಬಿದ್ದರೂ, ನೆಲವು ನೀರಿಗಿಂತ ಬಹು ಬೇಗನೆ ಬಿಸಿಯಾಗುತ್ತದೆ. ಬೇಸಿಗೆಯಲ್ಲಿ ಸೂರ್ಯನು ನೆತ್ತಿಯ ಮೇಲೆ ಬಂದಾಗ ಕಾದ ರಸ್ತೆಯ ಮೇಲೆ ಕಾಲಿಡುವುದಕ್ಕೆ ಆಗದಿದ್ದರೂ, ಅದೇ ಸಮಯದಲ್ಲಿ ಕೆರೆತೊರೆಗಳ ನೀರಿನಲ್ಲಿ ಕಾಲಾಡಿಸಬಹುದೆಂದು ನಿಮ್ಮ ಅನುಭವಕ್ಕೆ ಬಂದಿರಬಹುದು. ಇದರಂತೆಯೇ ನೆಲವು ಸೂರ್ಯನ ಬಿಸಿಲಿನಿಂದ ನೀರಿಗಿಂತ ಬಹು ಬೇಗನೆ ಕಾದು ಬಹು ಜಾಗ್ರತೆಯಾಗಿ ಆರುತ್ತದೆ. ಕರಾವಳಿಯ ಪ್ರದೇಶಗಳಲ್ಲಿ ಸೂರ್ಯನ ಬಿಸಿಲು ಕವಿದು ನೆಲವು ಕಾವೇರುತ್ತದೆ. ಆಗ ಸಮುದ್ರದ ನೀರು ನೆಲದಷ್ಟು ಬೆಚ್ಚಗಿರುವುದಿಲ್ಲ. ಕಾದ ನೆಲವನ್ನು ಸೋಕಿ ಬರುವ ಗಾಳಿಯು ಕಾವು ತಗಲಿದ್ದರಿಂದ ಹಗುರವಾಗಿ ಮೆಲ್ಲಗೆ ಮೇಲೇರುತ್ತದೆ. ಮೇಲಕ್ಕೆ ಹೋದ ಗಾಳಿಯ ಸ್ಥಳವನ್ನು ತುಂಬಿಕೊಳ್ಳುವುದಕ್ಕೆ ಸಮುದ್ರದಿಂದ ಗಾಳಿಯು ನೆಲದ ಕಡೆ ಬೀಸಹತ್ತುವುದು. ಸಮುದ್ರದ ನೀರು ಆ ಹೊತ್ತಿನಲ್ಲಿ ನೆಲದಷ್ಟು ಬೆಚ್ಚಗೆ ಇಲ್ಲದಿರುವುದರಿಂದ ನೆಲದ ಮೇಲಿನ ಗಾಳಿಯು ಹಗುರಾಗಿ ಮೇಲೆ ಮೇಲೆ ಹೋಗುವಷ್ಟಕ್ಕೆ ಕೆಳಕೆಳಗೆ ಬರಿದಾಗುವ ಸ್ಥಳವನ್ನು ಸಮುದ್ರದ ಕಡೆಯಿಂದ ನೆಲದ ಕಡೆಗೆ ಗಾಳಿಯು ಬೀಸಿ ತುಂಬಿಕೊಳ್ಳುತ್ತದೆ. ಹೀಗೆ ಕಡಲ ಕಡೆಯಿಂದ ಕರೆಗೆ ಬೀಸುವ ಗಾಳಿಗೆ ಕಡಲುಗಾಳಿಯೆಂದು ಹೆಸರು. ಈ ಕಡಲುಗಾಳಿಯು ಹಗಲಿನಲ್ಲಿ ತಪ್ಪದೆ ತಂಪಾಗಿ ಬೀಸುವುದು. ಕರಾವಳಿಯ ಪ್ರಾಂತಗಳಲ್ಲಿ ಸೆಕೆಯ ಕಾಲದ ಧಗೆಯನ್ನು ಕೊಂಚಮಟ್ಟಿಗೆ ಈ ಕಡಲುಗಾಳಿಯು ನಿವಾರಿಸುತ್ತದೆ.

ಹಗಲುಹೊತ್ತಿನಲ್ಲಿ ಪೃಥ್ವಿಯ ಮೇಲಣ ನೆಲವು ಸೂರ್ಯನ ಬಿಸಿಲಿನಿಂದ ಸಮುದ್ರದ ನೀರಿಗಿಂತ ಜಾಗ್ರತೆಯಾಗಿ ತಪ್ತವಾಗುವುದೆಂತಲೂ ಹೊತ್ತು ಮುಳುಗುತ್ತಲೆ ಶೀಘ್ರವಾಗಿ ಆರುವುದೆಂತಲೂ ಹಿಂದೆ ಹೇಳಿದೆವು. ಇರುಳು ಕವಿದಾಗ ಸಮುದ್ರದ ನೀರು ಕರಾವಳಿಯ ಮೇಲಿನ ನೆಲಕ್ಕಿಂತಲೂ ಸ್ವಲ್ಪ ಶಾಕವಾಗಿದೆ. ಇದರ ದೆಸೆಯಿಂದ ನೀರ ಮೇಲಣ ಗಾಳಿಯು ಸಡಿಲಾಗಿ

ಲಘುವಾಗಿ ಮೇಲಕ್ಕೆ ಏಳುತ್ತದೆ. ಹೀಗೆ ಗಾಳಿಯು ಬಿಟ್ಟುಹೋದ ಸ್ಥಳವನ್ನು ಸೇರಿಕೊಳ್ಳುವುದಕ್ಕೆ ನೆಲದ ಮೇಲಿನ ಗಾಳಿಯು ಸಮುದ್ರದ ಕಡೆಗೆ ಓಡ ತೊಡಗುತ್ತದೆ. ಈ ಗಾಳಿಯು ಕರೆಯಿಂದ ಕಡಲ ಕಡೆಗೆ ಬೀಸುವುದರಿಂದ ಕರೆಗಾಳಿ ಎನ್ನಿಸುತ್ತದೆ. ಕರೆಗಾಳಿಯು ರಾತ್ರಿ 9 ಗಂಟೆಯಿಂದ ಪ್ರಾರಂಭವಾಗಿ, ಬೆಳಗ್ಗೆ ಸುಮಾರು 9 ಗಂಟೆಯ ವರೆಗೆ ಬೀಸುತ್ತಾ ಇರುವುದು; ಅನಂತರ ಕಡಲ ಕಡೆಯಿಂದ ನೆಲದ ಕಡೆಗೆ ಕಡಲಗಾಳಿಯು ಬೀಸುವುದಕ್ಕೆ ತೊಡಗಿ, ರಾತ್ರಿ ಸುಮಾರು 9 ಗಂಟೆಯ ವರೆಗೆ ಇರುತ್ತದೆ.

ಹಗಲುಹೊತ್ತಿನಲ್ಲಿ ಕಡಲ ಕಡೆಯಿಂದ ಕಡಲುಗಾಳಿಯು ನೆಲದ ಕಡೆಗೆ ಏತಕ್ಕೆ ಬೀಸುತ್ತಿರುವುದೆಂದೂ, ರಾತ್ರಿಕಾಲದಲ್ಲಿ ಕರೆಗಾಳಿಯು ನೆಲದ ಕಡೆಯಿಂದ ಸಮುದ್ರದ ಕಡೆಗೆ ಏತಕ್ಕೆ ಚಲಿಸುತ್ತಿರುವುದೆಂದೂ, ನಮಗೆ ಈಗ ಗೊತ್ತಾಯಿತು. ಹಗಲುಹೊತ್ತಿನಲ್ಲಿ ಬೀಸುತ್ತಿರುವ ಕಡಲುಗಾಳಿಯು ಕರಾವಳಿಯ ಬಯಲುಗಳನ್ನು ದಾಟಿ ಬಹು ದೂರ ಹೋಗುವಷ್ಟರಲ್ಲಿ, ಅದರ ಚಲನೆಯು ಕಡಮೆಯಾಗುವುದು; ಕೆಲವು ವೇಳೆ ಗುಡ್ಡಗಳು ಇದರ ವೇಗವನ್ನು ತಡೆಯುವುವು; ಕೆಲವು ಕಡೆಗಳಲ್ಲಿ ಮರಗಿಡಗಳು ಈ ಗಾಳಿಯ ಚಲನೆಗೆ ತಡೆಯಾಗುತ್ತವೆ. ಹೀಗಾಗಿ ಈ ಕಡಲುಗಾಳಿಯು ಕರಾವಳಿಯ ಪ್ರದೇಶದಲ್ಲಿ ಚೆನ್ನಾಗಿ ಬೀಸುವುದಾದರೂ, ಸಮುದ್ರದಿಂದ ದೂರವಿರುವ ಒಳನಾಡುಗಳಲ್ಲಿ ಸರಿಯಾಗಿ ಸೋಕುವುದಿಲ್ಲ. ಆದುದರಿಂದ ಸೆಕೆಯ ಕಾಲದಲ್ಲಿ ಅಂಥಾ ಒಳನಾಡುಗಳಲ್ಲಿ ಗಾಳಿಯ ಸುಳಿವೇ ಇಲ್ಲದಂತಾಗಿ, ಬಿಸಿಲಿನ ತಾಪವೂ ಧಗೆಯೂ ಕರಾವಳಿಯಲ್ಲಿ ಇರುವುದಕ್ಕಿಂತಲೂ ಅಧಿಕವೆಂದು ಅನುಭವವಾಗುತ್ತದೆ. ಕರಾವಳಿಯಲ್ಲಿ ಇರುವುದಕ್ಕಿಂತಲೂ ಒಳನಾಡುಗಳಲ್ಲಿ ಚಳಿಯು ಅಧಿಕವಾಗಿರುವುದಕ್ಕೆ ಕಾರಣವೇನೆಂದು ನೋಡೋಣ.

ಒಲೆಯ ಮೇಲಿಟ್ಟ ಪಾತ್ರೆಯೊಳಗಿನ ನೀರು ಬೆಂಕಿಯಿಂದ ಕಾದು ಹಬೆಯಾಗುವ ಹಾಗೆಯೇ ಸಮುದ್ರ, ನದಿ, ಮೊದಲಾದ ಜಲಾಶಯಗಳಲ್ಲಿಯ ನೀರು ಸೂರ್ಯನ ಬಲವಾದ ಉಷ್ಣದಿಂದ ನಮ್ಮ ಕಣ್ಣಿಗೆ ತೋರದಿದ್ದರೂ, ನಿರಂತರ ಆವಿಯಾಗಿ ಮೇಲಕ್ಕೆ ಏಳುತ್ತದೆ. ಪಾತ್ರೆಯಿಂದ ಹೊರಡುವ ಹಬೆಗೆ ಕೈ ತೋರಿಸಿದರೆ ಕೈಗೆ ಕಾವು ಸೋಕುವುದು. ಆದರೆ ಪಾತ್ರೆಯಿಂದ ಸ್ವಲ್ಪ ದೂರ ಕೈಯಾಡಿಸಿದರೆ ಹಬೆಯ ಉಷ್ಣವು ಅಷ್ಟು ವಿಶೇಷವಾಗಿ ಅನುಭವವಾಗುವುದಿಲ್ಲ. ಇದರಂತೆಯೇ ಸೂರ್ಯನ ಬಿಸಿಲಿನಿಂದ ಮಾರ್ಪಟ್ಟ ನೀರಾವಿಯು

ಕರಾವಳಿಯ ಮೇಲಿನ ಗಾಳಿಯಲ್ಲಿ ಸೇರಿಕೊಂಡು ಕೊಂಚಮಟ್ಟಿಗೆ ಆ ಗಾಳಿಯನ್ನು ಬೆಚ್ಚಗಿರಿಸುತ್ತದೆ. ಆದರೆ ಸಮುದ್ರದಿಂದ ದೂರವಿರುವ ಒಳನಾಡುಗಳಲ್ಲಿ ಅಷ್ಟು ವಿಶೇಷವಾಗಿ ಆವಿಯಾಗುವುದಕ್ಕೆ ಜಲಾಶಯಗಳೇ ಕಡಮೆ. ಸೂರ್ಯನ ಬಿಸಿಲಿನಿಂದ ಹುಟ್ಟಿದ ಆವಿಯ ಉಷ್ಣವು ಸಹಜವಾಗಿಯೇ ಕಡಮೆಯಾಗಬೇಕಾಯಿತು. ಕರೆಗಾಳಿಯು ನೆಲದ ಕಡೆಯಿಂದ ಕಡಲ ಕಡೆಗೆ ರಾತ್ರಿ ಸುಮಾರು 9 ಗಂಟೆಯಿಂದ ಹಗಲು 9 ಗಂಟೆಯ ವರೆಗೆ ಬೀಸುವಾಗ, ಆ ಗಾಳಿಯಲ್ಲಿ ಉಷ್ಣವು ಕಡಲ ಬಳಿಗೆ ಬರುವಷ್ಟಕ್ಕೆ ಹೆಚ್ಚುತ್ತ ಬರುವುದು. ಏಕೆಂದರೆ ಕರಾವಳಿಯ ಮೇಲಿದ್ದ ಗಾಳಿಯಲ್ಲಿಯೇ ಉಷ್ಣವಾದ ಆವಿಯು ಹೆಚ್ಚಾಗಿ ಸೇರಿಕೊಂಡಿರುತ್ತದೆ. ಈ ಸಂಗತಿಯನ್ನು ಇನ್ನೊಂದು ವಿಧವಾಗಿ ದೃಷ್ಟಾಂತಪಡಿಸ ಬಹುದು. ನಾವು ಬಟ್ಟೆಯನ್ನು ಹೊದೆದುಕೊಂಡರೆ ನಮಗೆ ಚಳಿಯಾಗುವುದಿಲ್ಲ. ಇದರ ಅರ್ಥವೇನಂದರೆ—ನಮ್ಮ ಮೈಯ ಕಾವನ್ನು ಬಟ್ಟೆಯು ಹೊರಗೆ ಹೋಗದಂತೆ ಕಾಪಾಡಿಕೊಳ್ಳುತ್ತದೆ. ಇದರಿಂದಲೇ ನಮಗೆ ಬಟ್ಟೆ ಮುಚ್ಚಿಕೊಂಡರೆ ಬೆಚ್ಚಗಾಗುವುದೆಂಬ ಅನುಭವವಾಗುತ್ತದೆ. ಹೊದಿಕೆಯನ್ನು ತೆಗೆದುಬಿಟ್ಟರೆ, ಮೈಯೊಳಗಿನ ಕಾವು ಸುತ್ತಲೆಲ್ಲಾ ಹರಡುವುದರಿಂದ ಚಳಿಯಾಗುವುದೆಂಬ ಬೋಧೆಯಾಗುತ್ತದೆ. ಕರಾವಳಿಯ ಮೇಲೆ ಬೀಸುವ ಗಾಳಿಯಲ್ಲಿ ಇರುವಷ್ಟು ಉಷ್ಣವು ಒಳನಾಡುಗಳ ಮೇಲಿನ ನಾಡುಗಳಲ್ಲಿ ಇರುವುದಿಲ್ಲವೆಂದು ಹಿಂದೆ ಹೇಳಿದ್ದಾಯಿತು. ಸೂರ್ಯನ ಬಿಸಿಲು ಬಿದ್ದು ಹಗಲುಹೊತ್ತು ತಪ್ತವಾಗಿ ಕಾವನ್ನು ಒಳಕೊಂಡ ನೆಲವು ಸಾಯಂಕಾಲದಲ್ಲಿ ಆರುತ್ತ ಆ ಕಾವನ್ನೇ ಹೊರಗೆ ಕಾರುತ್ತದೆ. ಹೀಗೆ ಹೊರಗೆಡವಿದ ಉಷ್ಣವನ್ನು ಕರಾವಳಿಯ ಮೇಲಿರುವ ಆವಿಯ ಹೊದಿಕೆಯು ಅಲ್ಲಿಯೇ ಕಾಪಾಡಿಕೊಳ್ಳುತ್ತದೆ. ಒಳನಾಡುಗಳಲ್ಲಿಯೊ ಅಂದರೆ ಗಾಳಿಯಲ್ಲಿ ಉಷ್ಣವಾದ ಆವಿಯ ಹೊದಿಕೆಯು ಇಲ್ಲದಿರುವುದರಿಂದ ನೆಲದಿಂದ ಈಚೆಗೆ ಬರುತ್ತಲಿರುವ ಕಾವು ಬೇಗನೆ ಹಾರಿಹೋಗುತ್ತದೆ. ಇದರ ದೆಸೆಯಿಂದ ಒಳನಾಡುಪ್ರದೇಶಗಳಲ್ಲಿ ಕರಾವಳಿಗಿಂತಲೂ ರಾತ್ರಿಕಾಲದಲ್ಲಿ ಚಳಿಯು ಹೆಚ್ಚಾಗಿದೆ. ಒಂದು ಪ್ರದೇಶವು ಸಮುದ್ರಕ್ಕಿಂತ ದೂರವೊ ಸಮೀಪವೊ ಇದ್ದ ಹಾಗೆ ಅದರ ಶೀತೋಷ್ಣಸ್ಥಿತಿಗಳಲ್ಲಿ ಹೇಗೆ ಹೆಚ್ಚುಕಡಮೆ ಉಂಟಾಗುತ್ತದೆಂಬುದು ಈಗ ನಮಗೆ ಗೊತ್ತಾಯಿತು. ಹವೆಯಲ್ಲಿ ಭೇದವುಂಟಾಗುವುದಕ್ಕೆ ಇನ್ನೊಂದು ಕಾರಣವಿದೆ.

ಸೂರ್ಯನು ಬೆಂಕಿಯ ಕೆಂಡದಂತೆ ಹೊತ್ತುವುದರಿಂದ ನಾವು ಅಂತರಿಕ್ಷದಲ್ಲಿ ಮೇಲೇರುವಷ್ಟಕ್ಕೆ ಸೂರ್ಯನಿಗೆ ಸಮೀಪಿಸುತ್ತೇವೆ. ಆಗ ನಮ್ಮ ಮೈ ಸುಟ್ಟು ಸೀದುಹೋಗಬೇಕಿತ್ತಷ್ಟೆ. ಅದರ ಬದಲಾಗಿ ನಾವು ಎತ್ತರವಾದ ಗುಡ್ಡಗಳನ್ನೊ ಉನ್ನತವಾದ ಪರ್ವತಗಳನ್ನೊ ಹತ್ತಿ, ಸಮುದ್ರಮಟ್ಟದಿಂದ ಬಹು ಮೇಲಕ್ಕೆ ಹೋಗುವಾಗ ಇನ್ನೂ ಇನ್ನೂ ಚಳಿಯಾಗುವುದು. ಬಿಸಿಲಿನ ತಾಪವನ್ನು ತಾಳಲಾರದೆ ಬಯಲುಪ್ರದೇಶಗಳಲ್ಲಿ ಇರುವವರು ಬೇಸಿಗೆಯಲ್ಲಿ ಕುದುರೆಮುಖ, ಕೊಡಿಯಕನಲ್, ಉಟಕಮಂಡ್ ಮೊದಲಾದ ಪರ್ವತ ಶಿಖರಗಳನ್ನು ಕೆಲ ಕಾಲ ಆಶ್ರಯಿಸುವರಲ್ಲವೆ? ಬೆಟ್ಟಗಳ ಮೇಲ್ಭಾಗವು ಕೆಳಗಿನ ನೆಲಕ್ಕಿಂತ ಸೂರ್ಯನಿಗೆ ಹತ್ತಿರವಾಗಿದ್ದರೂ ಉಷ್ಣವಾಗಿರದೆ ತಣ್ಣಗಿರುವುದಕ್ಕೆ ಕಾರಣವೇನು?

ಗಾಳಿಯು ಸಮುದ್ರಮಟ್ಟದಿಂದ ಮೇಲಕ್ಕೆ ಅಂತರಿಕ್ಷದಲ್ಲೆಲ್ಲಾ ಬಹು ದೂರದ ವರೆಗೆ ಹರಡಿಕೊಂಡಿರುತ್ತದೆ. ಬಟ್ಟೆಗಳನ್ನು ಒಂದರ ಮೇಲೆ ಒಂದಾಗಿ ದಾಳಿ ಇಟ್ಟರೆ ಅಡಿಯಲ್ಲಿರುವ ಬಟ್ಟೆಗಳು ಮೇಲಿನವುಗಳ ಭಾರದಿಂದ ಬಹು ಒತ್ತಾಗಿ ನಿಲ್ಲುತ್ತವೆ. ಮೇಲಿನವುಗಳಲ್ಲಿ ಭಾರವು ಕಡಮೆಯಾಗಿರುವುದರಿಂದ ಅವು ಸಡಿಲಾಗಿ ನಿಲ್ಲುತ್ತವೆ. ಇದೇ ರೀತಿ ಗಾಳಿಯು ನೆಲದಿಂದ ಮೇಲಕ್ಕೆ ಬಹು ಎತ್ತರದ ವರೆಗೆ ಪದರುಪದರುಗಳಾಗಿ ತುಂಬಿಕೊಂಡಿದ್ದರೂ ಹಿಂದಿನ ದೃಷ್ಟಾಂತದಲ್ಲಿದ್ದ ಬಟ್ಟೆಗಳಂತೆಯೇ ಆ ಗಾಳಿಯಲ್ಲಿ ಅಡಿಯ ಪದರುಗಳು ಮೇಲಿನವುಗಳ ಭಾರದಿಂದ ಒತ್ತೊತ್ತಾಗಿ ಇರುತ್ತವೆ. ಮೇಲಿನ ಪದರುಗಳು ಅಷ್ಟು ಸಾಂದ್ರವಾಗಿ ನಿಲ್ಲುವುದಿಲ್ಲ. ಬೆಟ್ಟಗಳ ಶಿಖರಗಳು ಸಮುದ್ರಮಟ್ಟಕ್ಕಿಂತ ಎತ್ತರವಿದ್ದುದರಿಂದ ಅಲ್ಲಿಯ ಗಾಳಿಯ ಪದರುಗಳು ಕರಾವಳಿಯ ಪ್ರದೇಶದ ಮೇಲೆ ನಿಲ್ಲುವ ಗಾಳಿಯ ಪದರುಗಳಿಗಿಂತ ಕಡಮೆಯಾಗಿಯೂ ಸಡಿಲಾಗಿಯೂ ಇರುತ್ತವೆ. ಹೊದೆದುಕೊಂಡ ಬಟ್ಟೆಯು ದಪ್ಪವಾಗಿದ್ದರೆ ಮೈಯ ಶಾಕವು ಹೊರಕ್ಕೆ ಹೋಗದೆ ಅಲ್ಲಿಯೇ ಉಳಿದುಕೊಂಡು, ಮೈಯನ್ನು ಬೆಚ್ಚಗೆ ಇರಿಸುತ್ತದೆ ಎಂದು ಹಿಂದೆ ಹೇಳಿದೆವು. ಒಂದೇ ಬಟ್ಟೆಯನ್ನು ಹೊದೆದುಕೊಳ್ಳುವ ಬದಲಿಗೆ ಅನೇಕ ಬಟ್ಟೆಗಳಿಂದ ಮುಚ್ಚಿಕೊಂಡರೆ ಚಳಿಯಾಗುವುದು ಕಡಮೆಯಾಗಿ ಸೆಕೆಯಾಗುತ್ತದೆ. ಇದೇ ರೀತಿಯಲ್ಲಿ ಕರಾವಳಿಯ ಮೇಲೆ ಗಾಳಿಯ ಪದರುಗಳು ದಟ್ಟವಾಗಿಯೂ ಅನೇಕವಾಗಿಯೂ ಇರುವುದರಿಂದ ಬಿಸಿಲಿನಿಂದ ನೆಲವು ಹೀರಿಕೊಂಡ ಕಾವು ಸುತ್ತಲೆಲ್ಲಾ ಹಸರಿಸದೆ ಅಲ್ಲಿಯೇ

ತಿರುಗುತ್ತ ಆ ಪ್ರದೇಶದಲ್ಲಿ ಸೆಕೆಯನ್ನು ಉಂಟುಮಾಡುತ್ತದೆ. ಸಮುದ್ರ ಮಟ್ಟದಿಂದ ಬಹಳ ಎತ್ತರವಾದ ಬೆಟ್ಟಪ್ರದೇಶಗಳ ಮೇಲಿನ ಗಾಳಿಯ ಪದರುಗಳು ನೆಲದ ಕಾವನ್ನು ಹೊರಬಿಡುವಷ್ಟು ತೆಳ್ಳಗಾಗಿಯೂ ಕಡಮೆಯಾಗಿಯೂ ಇವೆ. ಇದರ ದೆಸೆಯಿಂದ ಅಂಥ ಪ್ರದೇಶಗಳಲ್ಲಿ ಸೂರ್ಯನ ಉಷ್ಣವು ಕಡಮೆ ಎಂಬಂತೆಯೂ ಚಳಿಯು ಅಧಿಕವೆಂಬಂತೆಯೂ ಅನುಭವವಾಗುತ್ತದೆ.

ಇದಲ್ಲದೆ ಪರ್ವತಗಳ ಮೇಲ್ಭಾಗವು ತಣ್ಣಗಿರುವುದಕ್ಕೆ ಇನ್ನೊಂದು ಕಾರಣವೂ ಇದೆ. ಸೂರ್ಯನ ಕಿರಣಗಳು ಸೋಕುವುದರಿಂದ ಗಾಳಿಯು ನೆಟ್ಟಗೆ ಬಿಸಿಯಾಗುವುದಿಲ್ಲ, ಸೂರ್ಯರಶ್ಮಿಗಳಿಂದ ನೆಲವು ತಪ್ತವಾಗುವುದು. ಹೀಗೆ ತಪ್ತವಾದ ಯಾವದಾದರೂ ಒಂದು ವಸ್ತುವಿಗೆ ತಗಲುವುದರಿಂದ ಗಾಳಿಯು ಬಿಸಿಯಾಗುವುದು. ಬಯಲುಪ್ರದೇಶಗಳ ಮೇಲೆ ಕವಿಯುವ ಬಿಸಿಲಿಂದ ನೆಲಕ್ಕೆ ಒತ್ತಾಗಿರುವ ಗಾಳಿಯು ಬಿಸಿಯಾಗಿ ಮೆಲ್ಲನೆ ಅಂತರಿಕ್ಷದಲ್ಲಿ ಏರುವುದು. ಹೀಗೆ ಮೇಲೇರುವಷ್ಟಕ್ಕೆ ಆ ಗಾಳಿಯು ತಾನು ಹೊತ್ತುಕೊಂಡ ಕಾವನ್ನು ಮೆಲ್ಲಮೆಲ್ಲನೆ ಬಿಟ್ಟುಕೊಡುತ್ತದೆ. ಆದ್ದರಿಂದ ಸಮುದ್ರಮಟ್ಟದಿಂದ 4000 ಫೀಟು ಉನ್ನತವಾದ ಪರ್ವತಗಳ ಮೇಲೆ ಸಮಭೂಮಿಯಲ್ಲಿರುವ ಉಷ್ಣವು ಇರುವುದಿಲ್ಲ; 8000 ಫೀಟು ಎತ್ತರದ ಪ್ರದೇಶಗಳು 4000 ಫೀಟು ಏರಾದ ಭಾಗಗಳಿಗಿಂತಲೂ ತಣ್ಣಗಿರುತ್ತವೆ.

ಒಂದು ಪ್ರದೇಶವು ಸಮುದ್ರತೀರದಲ್ಲಿಯೊ. ಸಮುದ್ರದಿಂದ ದೂರದಲ್ಲಿಯೊ ಇದ್ದರೆ, ಇಲ್ಲವೆ ಸಮುದ್ರಮಟ್ಟಕ್ಕೆ ಸರಿಯಾಗಿಯೊ ಏರಾಗಿಯೊ ಇದ್ದರೆ, ಅದರ ಶೀತೋಷ್ಣಸ್ಥಿತಿಗಳಲ್ಲಿ ವ್ಯತ್ಯಾಸವು ಕಂಡುಬರುವುದೆಂದು ಮೇಲೆ ವಿವರಿಸಿದ್ದಾಯಿತು. ಒಂದು ಪ್ರದೇಶದ ಶೀತೋಷ್ಣಗಳು ಹೆಚ್ಚುಕಡಮೆಯಾಗುವುದಕ್ಕೆ ಇನ್ನೊಂದು ಕಾರಣವು ಮಳೆ. ಕರಾವಳಿಯನ್ನು ಬಿಟ್ಟು ದೂರವಿರುವ ಮತ್ತು ಎತ್ತರವಿಲ್ಲದ ಒಳನಾಡುಗಳು ಸೆಕೆಕಾಲದಲ್ಲಿ ಏತಕ್ಕೆ ಅತಿ ಉಷ್ಣವಾಗಿ ಇರಬಹುದೆಂದು ನೀವು ತಿಳಿದಿರುವಿರಷ್ಟೆ. ಇಂಥ ಒಳನಾಡುಗಳಲ್ಲಿ ಒಂದು ವೇಳೆ ಮಳೆಯು ವರ್ಷದಲ್ಲೆಲ್ಲಾ ಸುರಿಯುತ್ತಲೆ ಇದ್ದರೆ, ಅಲ್ಲಿ ಉಷ್ಣಕ್ಕೆ ಬದಲಾಗಿ ಶೀತವೇ ಹೆಚ್ಚಾಗಿರುತ್ತದೆಂದು ಊಹಿಸಿಕೊಳ್ಳಬಹುದು. ಮದ್ರಾಸ ಸಂಸ್ಥಾನದ ಶೀತೋಷ್ಣಸ್ಥಿತಿಯು ಮಳೆಯ ಮೇಲೂ ಹೊಂದಿರುತ್ತದೆ. ಇಲ್ಲಿ ಕುಂಭ ಮಾಸದಿಂದ ಸೆಕೆಯು ಪ್ರಾರಂಭವಾಗಿ ಕರ್ಕಾ

ಟಕ ಮಾಸದ ವರೆಗೆ ಜರಗುವುದು. ವೃಷಭ, ಮಿಥುನ, ಕರ್ಕಾಟಕ ಮಾಸಗಳಲ್ಲಿ ಮದ್ರಾಸ ಸಂಸ್ಥಾನದ ಬಹು ಭಾಗವು ಅತ್ಯುಷ್ಣವಾಗಿದೆ. ಪರಂತು ಪಶ್ಚಿಮಕರಾವಳಿಯವರಿಗೆ ಆ ಕಾಲವು ಮಳೆಗಾಲವೆನ್ನಿಸುತ್ತದೆ. ಅಲ್ಲಿ ಅಂತರಿಕ್ಷವೆಲ್ಲ ಮುಗಿಲು ಕವಿದು, ಸೂರ್ಯನು ಮೇಘಗಳಿಂದ ಮುಚ್ಚಿಹೋಗಿ, ಗಾಳಿಯು ಪ್ರಚಂಡವಾಗಿ ಬೀಸಿ ಮೇಘಗಳನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ಒಯ್ಯುತ್ತದೆ. ಗಾಳಿಯಿಂದ ಒಯ್ಯಲ್ಪಟ್ಟ ಮೇಘಗಳು ಮಳೆಯನ್ನು ಧಾರಾಳವಾಗಿ ಹೊಯ್ಯುತ್ತವೆ. ಒಂದು ಪ್ರದೇಶದಲ್ಲಿ ಮಳೆಯು ಸುರಿಯುತ್ತದೊ ಇಲ್ಲವೋ ಎಂದು ತಿಳಿಯಬೇಕಾದರೆ ಮೇಘಗಳನ್ನು ಕೊಂಡೊಯ್ಯುವ ಗಾಳಿಯ ಗತಿಯನ್ನು ಕಂಡುಹಿಡಿಯುವುದು ಆವಶ್ಯಕ. ಗಾಳಿಯು ಯಾವ ದಿಕ್ಕಿಗೆ ಬೀಸುತ್ತದೆ, ಯಾವ ಕಡೆಗೆ ತಿರುಗುತ್ತದೆ ಎಂಬುದನ್ನು ನಿಶ್ಚಯಿಸುವುದಕ್ಕೆ ಸುಲಭವಾದ ಒಂದು ಉಪಾಯವಿದೆ. ಹುಡುಗರು ಎರಡು ಚೂರು ಓಲೆ ಗರಿಗಳನ್ನು ಮಡಚಿ, "ಗಿರಿಗಿಟಿ" ಮಾಡಿ ಆಡುವುದುಂಟು. ಗಾಳಿ ಯಾವ ದಿಕ್ಕಿನಿಂದ ಯಾವ ದಿಕ್ಕಿಗೆ ಬೀಸುತ್ತದೆ ಎಂಬುದನ್ನು ಆ "ಗಿರಿಗಿಟಿ" ತಿರುಗುವುದರಿಂದ ನಿಶ್ಚೈಸಬಹುದು. ಗಾಳಿಯ ಗತಿಯನ್ನು ತೋರಿಸುವುದಕ್ಕಾಗಿ, "ಗಾಳಿಕೋಳಿ" ಎಂಬ ಒಂದು ಉಪಕರಣವನ್ನು ಕೆಲವು ಪಾಠಶಾಲೆಗಳಲ್ಲಿ ಇಟ್ಟಿರುತ್ತಾರೆ. ಆ ಕೋಳಿ ಗಾಳಿಗೆ ತಿರುಗುತ್ತದೆ. ಅದರ ಬುಡದಲ್ಲಿ ದಿಕ್ಕು ತೋರಿಸುವುದಕ್ಕಾಗಿ ಎರಡು ಕಡ್ಡಿಗಳನ್ನು ಬಿಗಿದಿರುತ್ತಾರೆ. ಕೋಳಿ ಯಾವ ಕಡೆಯಿಂದ ಯಾವ ಕಡೆಗೆ ತಿರುಗುತ್ತದೋ ಎಂದು ಕಣ್ಣಿಟ್ಟು ನೋಡಿ, ಗಾಳಿ ಬೀಸುವ ದಿಕ್ಕನ್ನು ಸುಲಭವಾಗಿ ಕಂಡುಹಿಡಿಯಬಹುದು. ಗಾಳಿ ದಕ್ಷಿಣದಿಂದ ಬೀಸಿದರೆ ಅದಕ್ಕೆ ತೆಂಕುಗಾಳಿಯೆಂದೂ, ಪಶ್ಚಿಮದಿಂದ ಬೀಸಿದರೆ ಪಡುಗಾಳಿಯೆಂದೂ ಹೆಸರು. ನಮ್ಮ ದೇಶದಲ್ಲಿ ಸೆಕೆಕಾಲದಲ್ಲಿಯ ಗಾಳಿ ನೈಋತ್ಯದಿಕ್ಕಿನಿಂದ ಬೀಸುವ ಕಾರಣ ಅದನ್ನು ನೈಋತ್ಯಗಾಳಿ ಎಂದು ಕರೆಯುವರು. ನಮ್ಮ ದೇಶದ ನೈಋತ್ಯದಿಕ್ಕಿಗೆ ಹರಿಯುವ ವಿಶಾಲವಾದ ಸಮುದ್ರವನ್ನು ದಾಟಿ ಬರುವಾಗ, ಈ ನೈಋತ್ಯಗಾಳಿಯು ಮಳೆಯ ಮೋಡಗಳನ್ನು ಹೊತ್ತುಕೊಂಡು ಬೀಸುತ್ತದೆ. ಹೀಗೆ ಆ ಕಾರ್ಮುಗಿಲುಗಳನ್ನು ಹಿಡಿದುಕೊಂಡು ಬರುವ ನೈಋತ್ಯಗಾಳಿ ಪಶ್ಚಿಮಘಟ್ಟಗಳ ತಂಪಾದ ಕೋಡುಗಳನ್ನು ಮುಟ್ಟುತ್ತಲೆ ಮೋಡಗಳು ತಣಿದು ಮಳೆಯಾಗಿ ಬೀಳುತ್ತವೆ. ಪಶ್ಚಿಮಘಟ್ಟಕ್ಕೂ, ಅರಬಿಸಮುದ್ರಕ್ಕೂ ಮಧ್ಯದಲ್ಲಿರುವ ಸಮಭೂಮಿಯಲ್ಲಿ

ಮಳೆ ಧಾರಾಳವಾಗಿ ಹೊಯ್ಯುವುದಕ್ಕೆ ಇದೇ ಕಾರಣ. ನೈಋತ್ಯಗಾಳಿ ಪಶ್ಚಿಮಘಟ್ಟವನ್ನು ದಾಟಿ ಹೋಗುವ ಮುಂಚಿತವಾಗಿಯೇ ಮೇಘಗಳೆಲ್ಲಾ ಮಳೆಯಾಗಿ ಈಚೆಗೆ ಸುರಿಯುವುದರಿಂದ, ಆ ಘಟ್ಟದ ಆಚೆಗಿನ ಪ್ರದೇಶಗಳಲ್ಲಿ ಮಳೆ ಅಷ್ಟು ಚೆನ್ನಾಗಿ ಬೀಳುವುದಿಲ್ಲ. ಪಶ್ಚಿಮಕರಾವಳಿಯಲ್ಲಿ ಪ್ರತಿವರ್ಷ ಸರಾಸರಿ ಬೀಳುವ ಮಳೆ* 100 ಇಂಚಿಗೆ ಕಡಮೆಯಾಗಿಲ್ಲ; ಆದರೆ ಪೂರ್ವಕರಾವಳಿಯಲ್ಲಿ ಸರಾಸರಿ 25 ಇಂಚಿಗೆ ಹೆಚ್ಚಾಗಿರುವುದಿಲ್ಲ. ಕೆಲವು ಜಿಲ್ಲೆಗಳಲ್ಲಿ 5 ಇಂಚು ಮಳೆ ಬಿದ್ದರೆ ಹೆಚ್ಚು. ಈ ನೈಋತ್ಯಗಾಳಿ ಹೊತ್ತುಕೊಂಡು ಬರುವ ಮೇಘಗಳನ್ನು ಪಶ್ಚಿಮಘಟ್ಟವು ಅಡ್ಡಯಿಸುವುದರಿಂದ, ಮಳೆಯೆಲ್ಲಾ ಮಲಬಾರು ಕರಾವಳಿಯಲ್ಲಿ ಬೀಳುತ್ತದಾದರೂ, ಆ ಘಟ್ಟದಲ್ಲಿರುವ ಸಂದುಗಳನ್ನು ಗಾಳಿಯು ದಾಟಿ ಹೋಗುವಾಗ ಕೆಲವು ಮೇಘಗಳು ಆ ಗಾಳಿಯೊಡನೆ ಕೂಡಿಕೊಂಡು ಈಶಾನ್ಯದಿಕ್ಕಿಗೆ ಹೋಗುತ್ತವೆ. ಹೀಗೆ ತಪ್ಪಿಸಿಕೊಂಡು ಹೋಗುವ ಮೇಘಗಳು ಪೂರ್ವಘಟ್ಟಗಳನ್ನು ಸಮೀಪಿಸುತ್ತಲೆ ತಣಿದು, ಆ ಪರ್ವತಗಳ ಹತ್ತಿರವಿರುವ ಪ್ರದೇಶಗಳಿಗೆ ತಕ್ಕಷ್ಟು ಮಳೆಯನ್ನು ಕೊಡುತ್ತವೆ. ಆದರೆ ಪಶ್ಚಿಮಘಟ್ಟವನ್ನು ದಾಟುವ ಮೊದಲೆ ಗಾಳಿಯಲ್ಲಿದ್ದ ಮೋಡಗಳು ಮಳೆಯಾಗಿಹೋದುದರಿಂದ, ಮುಂದರಿಸಿ ಹೋಗುವ ಮೇಘಗಳು ಕಡಮೆಯಾಗಿ ಮಳೆ ಕೊಂಚವೇ ಬೀಳುತ್ತದೆ. ಪೂರ್ವಕರಾವಳಿಯ ಕೆಲವು ಸ್ಥಳಗಳಲ್ಲಿ ಹೆಚ್ಚೆಂದರೆ 50 ಯಾ 60 ಇಂಚು ಮಳೆ ಬೀಳುತ್ತದೆ. ಮದ್ರಾಸ ಪಟ್ಟಣದಲ್ಲಿ 10 ಇಲ್ಲವೆ 12 ಇಂಚು ಮಳೆ ಸುರಿಯುತ್ತದೆ. ದಕ್ಷಿಣ ಪೀಠಭೂಮಿಯಲ್ಲಿ ಸುಮಾರು 15ರಿಂದ 20 ಇಂಚು ವರೆಗೆ ಮಳೆ ಬೀಳುವುದೆಂದು ಲೆಕ್ಕ ಮಾಡಿದ್ದಾರೆ.

ಈ ಪ್ರಕಾರವಾಗಿ ಸೆಕೆಕಾಲದಲ್ಲಿ ಬೀಸುವ ನೈಋತ್ಯಗಾಳಿಯು ಹೊತ್ತುಕೊಂಡು ಬರುವ ಮುಗಿಲುಗಳಿಂದ ಉಂಟಾಗುವ ಮಳೆ ಪಶ್ಚಿಮ ಕರಾವಳಿಯಲ್ಲಿ ಜೂನ್ ಮಾಸದಲ್ಲಿ ಪ್ರಾರಂಭವಾಗಿ ಸೆಪ್ಟೆಂಬರ್ ಮಾಸದಲ್ಲಿ ಅಂತ್ಯವಾಗುವುದು. ಅದುವರೆಗೆ ಆ ಗಾಳಿ ನೈಋತ್ಯದಿಕ್ಕಿನಿಂದ ಈಶಾನ್ಯದಿಕ್ಕಿಗೆ

---

* ಎಷ್ಟು ಮಳೆ ಬೀಳುತ್ತದೆಂದು ಲೆಕ್ಕ ಹಿಡಿಯುವುದಕ್ಕಾಗಿ ಆಯಾ ಸ್ಥಳದಲ್ಲಿ ಒಂದು ಉಪಕರಣವನ್ನು ಸರಕಾರದವರು ಇಟ್ಟಿರುತ್ತಾರೆ. ಇಂಥಾ ಸ್ಥಳಗಳಲ್ಲಿ ಗಾಳಿಯ ಗತಿಯನ್ನೂ ಅದರ ವೇಗವನ್ನೂ ಗೊತ್ತುಮಾಡಿಕೊಳ್ಳುವುದಕ್ಕಾಗಿ ಉಪಕರಣಗಳೂ ಇವೆ. ಇವುಗಳನ್ನು ನೋಡಿ ಆ ಸ್ಥಳದಲ್ಲಿ ಎಷ್ಟು ಇಂಚು ಮಳೆ ಬೀಳುತ್ತದೆ ಎಂದು ತಿಳಿದುಕೊಳ್ಳಬಹುದು.

ಬೀಸುತ್ತಿರುವುದು. ಒಕ್ಟೋಬರ್ ಮಾಸವು ಬರುತ್ತಲೆ ಗಾಳಿಯ ಗತಿ ಬೇರೆಯಾಗುತ್ತದೆ. ಆಗ ಗಾಳಿ ಈಶಾನ್ಯದಿಂದ ನೈಋತ್ಯಕ್ಕೆ ಬೀಸುವುದಕ್ಕೆ ತೊಡಗುತ್ತದೆ. ಮದ್ರಾಸ ಸಂಸ್ಥಾನದ ನೈಋತ್ಯಕ್ಕೆ ವಿಸ್ತಾರವಾದ ಸಮುದ್ರ ವಿದ್ದುದರಿಂದ, ಆ ನೈಋತ್ಯಗಾಳಿ ಮೇಘಗಳನ್ನು ಧರಿಸಿಕೊಂಡು ಬರುತ್ತವೆಂದು ಹಿಂದೆ ಹೇಳಿದೆವು. ಈ ಸಂಸ್ಥಾನದ ಈಶಾನ್ಯದಲ್ಲಿ ಸಮುದ್ರಕ್ಕೆ ಬದಲಾಗಿ ವಿಶಾಲವಾದ ಭೂಭಾಗವಿದ್ದುದರಿಂದ, ಆ ದಿಕ್ಕಿನಿಂದ ಬೀಸುವ ಗಾಳಿಯಲ್ಲಿ ಮೇಘಗಳು ಅನೇಕವಾಗಿ ಇರುವುದಿಲ್ಲ. ಈಶಾನ್ಯದಿಕ್ಕಿನಿಂದ ಬೀಸುವ ಗಾಳಿಯು ನಮ್ಮ ಸಂಸ್ಥಾನವನ್ನು ಮುಟ್ಟುವ ಮೊದಲು ಬಂಗಾಳ ಕೊಲ್ಲಿ ಯನ್ನು ತಾಗಿ ಬರಬೇಕಾದುದೇನೋ ನಿಜ. ಬಂಗಾಳ ಕೊಲ್ಲಿ ಎಂಬುದು ಸಮುದ್ರದ ಚಿಕ್ಕದೊಂದು ತುಂಡು; ಮೇಘಗಳು ಹುಟ್ಟುವುದಕ್ಕೆ ಬೇಕಾದ ಅಪಾರವಾದ ನೀರು ಅದರಲ್ಲಿಲ್ಲ. ಈ ಕಾರಣದಿಂದ ಈಶಾನ್ಯದಿಕ್ಕಿನಿಂದ ಬೀಸುವ ಗಾಳಿಯಲ್ಲಿ ನೈಋತ್ಯಗಾಳಿಯಲ್ಲಿದ್ದಷ್ಟು ಮೇಘಗಳು ಇರುವುದಿಲ್ಲ. ಇದ್ದಷ್ಟು ಮುಗಿಲುಗಳನ್ನು ಕಟ್ಟಿಕೊಂಡು ಬರುವ ಈಶಾನ್ಯಗಾಳಿಯು ಪೂರ್ವಘಟ್ಟಗಳಿಗೆ ತಗಲುತ್ತಲೆ ಆ ಮೋಡಗಳು ಅಲ್ಲಿಯ ತಂಗಾಳಿಗೆ ತಾಗಿ ತಣಿದು ಮಳೆಯಾಗಿ ಪೂರ್ವಪ್ರದೇಶಗಳಲ್ಲಿಯೂ ಆ ಭಾಗಗಳಲ್ಲಿರುವ ಸಮ ಭೂಮಿಯಲ್ಲಿಯೂ ಬೀಳುತ್ತವೆ. ಈ ಗಾಳಿಯಲ್ಲಿದ್ದ ಮೋಡಗಳೆಲ್ಲಾ ಮಳೆ ಯಾಗಿ ಹೋಗುವುದಿಲ್ಲ; ಕೆಲವು ಮೇಘಗಳು ಪೂರ್ವಘಟ್ಟಗಳನ್ನು ದಾಟಿ ಪಶ್ಚಿಮಘಟ್ಟದ ಬಿರುಕುಗಳಿಂದ ನುಸುಳಿಕೊಂಡು, ಪಶ್ಚಿಮಕರಾವಳಿಗೆ ಕೊಂಚ ಮಳೆಯನ್ನು ತರುತ್ತವೆ.

ಪಶ್ಚಿಮಕರಾವಳಿಯಲ್ಲಿ ವರ್ಷಕ್ಕೆ ಎರಡು ಸಲ ಮಳೆ ಹೊಯ್ಯುವು ದುಂಟು. ನೈಋತ್ಯಗಾಳಿಯಿಂದ ಬರುವ ಮಳೆಗೆ ಮುಂಗಾರುಮಳೆ ಎಂದೂ, ಈಶಾನ್ಯಗಾಳಿಯಿಂದ ಬರುವ ಮಳೆಗೆ ಹಿಂಗಾರುಮಳೆ ಇಲ್ಲವೆ ತುಲಾ ವರ್ಷವೆಂದೂ ಹೆಸರು. ಪಶ್ಚಿಮಪ್ರದೇಶದಲ್ಲಿ ಮುಂಗಾರುಕಾಲವೇ ಮಳೆ ಗಾಲ, ಪೂರ್ವಪ್ರದೇಶದಲ್ಲಿ ಹಿಂಗಾರುಕಾಲವೇ ಮಳೆಗಾಲ. ಪಶ್ಚಿಮಕರಾ ವಳಿಯಲ್ಲಿ ಸೆಕೆಕಾಲದಲ್ಲಿ ಬೀಳುವ ಈ ಮುಂಗಾರುಮಳೆ ಸುಮಾರು 150 ಇಂಚು ಇರುತ್ತದೆ. ಶೀತಕಾಲದಲ್ಲಿ ಪೂರ್ವಪ್ರದೇಶದಲ್ಲಿ ಸುರಿಯುವ ಮಳೆ ಹೆಚ್ಚುಕಡಮೆ 50 ಇಂಚು ನಿಲ್ಲುತ್ತದೆ. ಮದ್ರಾಸಿನಲ್ಲಿ ಈ ಹಿಂಗಾರು ಮಳೆ ಹೆಚ್ಚು ಆದರೆ 30 ಇಂಚು ವರೆಗೆ ಹೊಯ್ಯುತ್ತದೆ. ಪೂರ್ವಸಮುದ್ರ

ದಿಂದ ಬಹಳ ದೂರದಲ್ಲಿರುವ ದಕ್ಷಿಣ ಪೀಠಭೂಮಿಯಲ್ಲಿ ಸುಮಾರು 25 ಇಂಚು ಬೀಳುತ್ತದೆ.

ಈ ಸಂಸ್ಥಾನದ ಆಗ್ನೇಯ ದಿಕ್ಕಿನಲ್ಲಿ ಸಿಲೋನ್ ದ್ವೀಪವಿದೆ. ಇದರಲ್ಲಿ ಎತ್ತರವಾದ ಪರ್ವತಗಳ ಸಾಲು ಇದೆ. ನೈಋತ್ಯಗಾಳಿಯು ಮುಂಗಾರು ಮಳೆಯ ಮೇಘಗಳನ್ನು ವಹಿಸಿಕೊಂಡು ಬರುವಾಗ ಆ ಪರ್ವತಗಳ ಕೋಡುಗಳು ಕೆಲವು ಮೇಘಗಳನ್ನು ತಡೆಯುವುದರಿಂದ, ಈ ಸಂಸ್ಥಾನದ ಆಗ್ನೇಯ ದಿಕ್ಕಿನಲ್ಲಿರುವ ಜಿಲ್ಲೆಗಳಲ್ಲಿ ಮಳೆ ಚೆನ್ನಾಗಿ ಹೊಯ್ಯುವುದಿಲ್ಲ. ಪೂರ್ವಕರಾವಳಿಯಲ್ಲಿ ಒಕ್ಟೋಬರ್ ನವೆಂಬರ್ ಮಾಸಗಳಲ್ಲಿ ಮಳೆ ಬರುವಾಗ ಕೆಲವು ವೇಳೆ ಬಿರುಗಾಳಿ ಬೀಸಿ, ಕಡಲಿನಲ್ಲಿರುವ ಹಡಗುಗಳಿಗೂ, ಕರೆಯಲ್ಲಿರುವ ಮನೆಗಳಿಗೂ, ಅಪಾಯ ತಟ್ಟುವುದುಂಟು. ಆಗಾಗ ಸಮುದ್ರವು ಉಕ್ಕಿಬಂದು ದಡದ ಮೇಲೆ ಹೊರಳಿ, ಭಯಂಕರವಾದ ನಾಶವು ಸಂಭವಿಸಿದ್ದುಂಟು.

ನದಿಗಳು.—ಮೇಘಗಳು ಹೇಗೆ ಉಂಟಾಗುತ್ತವೆ, ಮಳೆ ಹೇಗೆ ಬರುತ್ತದೆ ಎಂಬುದನ್ನು ಹೇಳಿದ್ದಾಯಿತು. ಮಳೆ ಬರುವಾಗ ಕಣ್ಣಿಟ್ಟು ನೋಡುವವನಿಗೆ ಅನೇಕ ಸಂಗತಿಗಳು ಗೊತ್ತಾಗುತ್ತವೆ. ಮಳೆ ಅಂತರಿಕ್ಷದಿಂದ ಬೀಳುವಾಗ ಧಾರೆಧಾರೆಯಾಗಿ ಸುರಿಯುವುದಿಲ್ಲ; ಅದು ಹನಿಹನಿಯಾಗಿ ಬೀಳುತ್ತದೆ; ಹನಿ ಕೂಡಿ ನೆಲದ ಮೇಲೆ ಹಳ್ಳವಾಗಿ ಹರಿಯತೊಡಗುತ್ತದೆ. ನೆಲವು ಅಲ್ಲಲ್ಲಿ ಏರಾಗಿಯೂ ತಗ್ಗಾಗಿಯೂ ಇದ್ದರೆ, ಆದಕ್ಕೆ ಅನುಸಾರವಾಗಿ ಮಳೆಯ ನೀರು ಏರುಗಳಿಂದ ತಗ್ಗುಗಳಿಗೆ ಇಳಿಯುತ್ತಾ ಚರಂಡಿಗಳಲ್ಲಿ ಹರಿಯುತ್ತಾ ತೋಡುಗಳಲ್ಲಿ ಹೊರಳುತ್ತಾ ಹೋಗುವುದು. ಹೀಗೆ ಹರಿದುಹೋಗುವಾಗ ಅಲ್ಲಲ್ಲಿ ಇದ್ದ ಕಸಕಡ್ಡಿ, ಸೊಪ್ಪುಸದೆ, ಮೆದುಮಣ್ಣು, ಚೂರುಕಲ್ಲು ಇವನ್ನು ತನ್ನೊಟ್ಟಿಗೆ ಸೆಳೆದುಕೊಂಡು ಓಡುತ್ತದೆ. ಮಳೆ ಹೊಯಿದಾಗ ಮನೆಯ ತೂಬುಗಳಿಂದಲೂ ರಸ್ತೆಯ ಇಕ್ಕಡೆಗಳಲ್ಲಿಯ ಚರಂಡಿಗಳಿಂದಲೂ ಹರಿಯುವ ನೀರು ಬಗ್ಗಡವಾಗುವುದಕ್ಕೆ ಇದೇ ಕಾರಣವಾಗಿದೆ. ಮಳೆ ಬಂದಾಗ ಹೀಗೆ ಹರಿಯುವ ನೀರು ಯಾವ ಕಡೆಯಿಂದ ಯಾವ ಕಡೆಗೆ ಹರಿಯುತ್ತದೆ ಎಂಬುದನ್ನೂ, ಆ ನೀರು ಎಷ್ಟು ವೇಗವಾಗಿ ಓಡುತ್ತದೆ ಎಂಬುದನ್ನೂ, ಆ ನೀರಿನ ಸ್ವಭಾವವೇನು ಎಂಬುದನ್ನೂ ನೀವು ನೋಡಿ ವಿಚಾರಿಸಿಕೊಳ್ಳತಕ್ಕದ್ದು. ಏಕೆಂದರೆ ಆ ಸಂಗತಿಗಳನ್ನು ತಿಳಿದುಕೊಂಡವನಿಗೆ ಹೊಳೆಗಳು ಹೇಗೆ ಹುಟ್ಟುತ್ತವೆಂಬುದನ್ನು ಗ್ರಹಿಸುವುದಕ್ಕೆ ಕಷ್ಟವಾಗಲಾರದು. ಅನೇಕ ಹೊಳೆಗಳು ಎತ್ತರವಾದ

ಬೆಟ್ಟಗಳ ಹೊಡೆಯಲ್ಲಿರುವ ಮಲೆಗಳಲ್ಲಿ ಹುಟ್ಟುತ್ತವೆ. ಮೊತ್ತಮೊದಲು ಅವು ಬಲು ಸಣ್ಣಗೆ ಇದ್ದು, ಹುಟ್ಟಿದಲ್ಲಿಂದ ದೂರ ದೂರ ಹರಿಯುವಾಗ ಅವುಗಳಿಗೆ ಅಲ್ಲಲ್ಲಿ ಹರಿಯುವ ನೀರು ಬಂದು ಕೂಡಿ ಪುಟ್ಟ ತೊರೆಯಾಗಿ, ಮುಂದೆಮುಂದೆ ದೊಡ್ಡದೊಡ್ಡ ತೊರೆಗಳಾಗಿ ಹರಿಯುತ್ತವೆ. ಉಗಮ ಸ್ಥಾನದಲ್ಲಿ ಕಿರಿಬೆರಳಿನಷ್ಟು ತೋರವಾದ ನೀರು ಕಟ್ಟಕಡೆಗೆ ದೊಡ್ಡ ಹೊಳೆಯಾಗಿ ಹೋಗಿ ಸಮುದ್ರಕ್ಕೆ ಸಂಗಮವಾಗುತ್ತದೆ. ಹೀಗೆ ಹೊಳೆಗಳು ಎತ್ತರವಾದ ಬೆಟ್ಟಗಳ ಹೊಡೆಯಲ್ಲಿ ಉಗಮಿಸಿ, ತಗ್ಗಾದ ಸಮಭೂಮಿಗಳಲ್ಲಿ ಪ್ರವಹಿಸಿ, ಸಮುದ್ರಕ್ಕೆ ಕೂಡುತ್ತವೆ. ಈಗ ನದಿಯ ಉಗಮವನ್ನು ಕುರಿತು ಹೇಳೋಣ.

ಮಳೆ ಹೊಯ್ಯುವಾಗ ಸ್ವಲ್ಪ ನೀರು ನೆಲದೊಳಗೆ ಇಂಗಿಹೋಗುತ್ತದೆ; ಮಳೆ ಚೆನ್ನಾಗಿ ಸುರಿದರೆ, ನೀರೆಲ್ಲ ಹೀಗೆ ಇಂಗಿಹೋಗುವುದಿಲ್ಲ; ಅದರಲ್ಲಿ ಹೆಚ್ಚಿನ ಭಾಗವು ಹರಿದುಹೋಗುತ್ತದೆ. ಎತ್ತರವಾದ ಬೆಟ್ಟಗಳಲ್ಲಿಯ ಮಲೆಗಳಲ್ಲಿ ಸುರಿಯುವ ಮಳೆಯ ನೀರು ತೊರೆಗಳಾಗಿ ಕೆಳಗೆ ಇಳಿದು, ಇದರಂತೆಯೇ ಅಲ್ಲಲ್ಲಿಂದ ಹುಟ್ಟಿಬಂದ ತೊರೆಗಳನ್ನು ಕೂಡಿಕೊಂಡು ಪ್ರವಹಿಸುತ್ತದೆ. ಇದಲ್ಲದೆ ನೆಲದೊಳಕ್ಕೆ ಹೋದ ಮಳೆಯ ನೀರು ಅಲ್ಲಿಯೇ ನಿಲ್ಲುವುದಿಲ್ಲ. ಅದು ಎಲ್ಲಿ ಹೋಗುತ್ತದೆ? ತೋಟದಲ್ಲಿರುವ ಹೂವಿನ ತೊಟ್ಟಿಯಲ್ಲಿ ನೀರು ಎರೆಯುವುದನ್ನು ನೀವು ನೋಡಿರಬಹುದು. ತೊಟ್ಟಿಯಲ್ಲಿ ಮಣ್ಣು ಇದೆ. ತೊಟ್ಟಿಯ ಬುಡದಲ್ಲಿ ನಾಲ್ಕಾರು ತೂತುಗಳು ಇವೆ. ಗಿಡಕ್ಕೆ ನೀರು ಚಿಮುಕಿಸುವಾಗ ತೊಟ್ಟಿಯ ಒಳಗಿದ್ದ ಮಣ್ಣು ಆ ನೀರನ್ನು ಒಳಕೊಳ್ಳುತ್ತದೆ. ಆದರೆ ಮಣ್ಣಿನಲ್ಲಿ ಹಿಡಿಯಲಾರದಷ್ಟು ನೀರನ್ನು ಹಾಕಿದರೆ ಆ ಹೆಚ್ಚಿನ ನೀರು ತೂತುಗಳ ಮೂಲಕವಾಗಿ ಈಚೆಗೆ ಹೋಗಿಬಿಡುವುದು. ತೊಟ್ಟಿಯ ಬುಡದಲ್ಲಿ ರಂಧ್ರಗಳಿಲ್ಲದಿದ್ದರೆ, ಆ ಹೆಚ್ಚಿನ ನೀರು ತೊಟ್ಟಿಯಲ್ಲಿಯೇ ನಿಂತು, ಮಣ್ಣು ಕೆಸರಾಗಿ, ಗಿಡವು ಕೊಳತು ಸತ್ತುಹೋಗಲೂ ಬಹುದು. ನೆಲದ ಅಡಿಯಲ್ಲಿ ಅಲ್ಲಲ್ಲಿ ಬಂಡೆಗಳು ಇರುತ್ತವೆ. ನೆಲದ ಮೇಲೆ ಬಿದ್ದ ಮಳೆಯ ನೀರು ಮಣ್ಣಿನಲ್ಲಿ ಇಳಿದು ಹರಿಯುವಾಗ ಬಂಡೆಗಳು ಅಡ್ಡವಾಗಿ ಬಂದರೆ, ಆ ನೀರು ಗಟ್ಟಿಯಾದ ಕಲ್ಲುಗಳಲ್ಲಿ ಇಂಗಿಹೋಗದೆ ಇಳಿಜಾರಾದ ಕಡೆಗೆ ಹರಿಯುವುದು. ಈ ರೀತಿ ಹರಿಯುವುದಕ್ಕೆ ದಾರಿ ತೋರದೆ ನೆಲದ ಅಡಿಯಲ್ಲಿಯೇ ನಿಂತ ನೀರು ಮೇಲೆ ಬರುವುದಕ್ಕೆ ನೋಡುತ್ತದೆ.

ಅಡಿಯಲ್ಲಿಯ ನೀರು ಅಲ್ಲಿಯೇ ನಿಲ್ಲಲಾರದಷ್ಟು ಹೆಚ್ಚಾಗುತ್ತಲೇ ಒಂದು ತೂತನ್ನು ಕೊರೆದು ಮೇಲಕ್ಕೆ ಹಾರತೊಡಗುತ್ತದೆ. ಇಂಥ ತೂತುಗಳಿಗೆ ಸೆಲೆಗಳೆಂದೂ ಊಟೆಗಳೆಂದೂ ಬುಗ್ಗೆಗಳೆಂದೂ ಹೆಸರು. ಊಟೆಗಳಿಂದ ಹೊರಟು ಬರುವ ನೀರು ಕ್ರಮೇಣ ಪುಟ್ಟ ತೊರೆಯಾಗಿ ಕಡೆಗೆ ದೊಡ್ಡ ತೋಡಾಗಿ ಹರಿಯುತ್ತದೆ. ಮಳೆಗಾಲದಲ್ಲಿ ನೆಲದೊಳಕ್ಕೆ ಹೋಗುವ ನೀರು ಅಧಿಕವಾಗುವುದರಿಂದ ಊಟೆಗಳಿಂದ ಈಚೆಗೆ ಬರುವ ನೀರು ಹೆಚ್ಚಾಗುವುದು. ಮಳೆ ಇಲ್ಲದಿದ್ದಾಗ ಒರತೆಯ ನೀರು ಕಡಮೆಯಾಗಿ ಆ ಒರತೆಯಿಂದ ಹುಟ್ಟುವ ತೋಡುಗಳು ಬತ್ತಿಹೋಗುತ್ತವೆ; ಮಳೆ ಬಂದರೆ ಉಬ್ಬೇರುತ್ತವೆ. ಮಲೆಗಳ ಅಡಿಯಿಂದ ಕಡಲಿನ ವರೆಗೆ ನೆಲವು ಒಂದೇ ಮಟ್ಟವಾಗಿಲ್ಲ; ಅಲ್ಲಲ್ಲಿ ಏರಾಗಿಯೂ ತಗ್ಗಾಗಿಯೂ ಇದೆ. ಈ ಕಾರಣದಿಂದ ಮಲೆಗಳಲ್ಲಿ ಹುಟ್ಟಿ ಕಡಲಿಗೆ ಹರಿಯುವ ಹೊಳೆಗಳು ಒಂದೇ ಸವನೆ ಹರಿಯದೆ, ನೆಲವು ಎತ್ತರವಾಗಿದ್ದಲ್ಲಿ ಸುತ್ತಿಕೊಂಡು, ತಗ್ಗಾದಲ್ಲಿ ಸರಿಯಾಗಿ ಜಾರಿ, ನೆಲದ ಸ್ವಭಾವಕ್ಕೆ ಅನುಸಾರವಾಗಿ ಪ್ರವಹಿಸುತ್ತವೆ. ನೀರು ನೆಲದ ಮೇಲಿಂದ ಹರಿದು ಬರುವಾಗ ಅದರ ಬಾಯಿಗೆ ಸಿಕ್ಕಿದ ಮೆದು ಮಣ್ಣೂ ಚೂರು ಕಲ್ಲೂ ನೀರೊಡನೆ ಕೊಚ್ಚಿಕೊಂಡು ಓಡುತ್ತವೆ. ಆಗ ಆ ಭಾಗದಲ್ಲಿದ್ದ ಮಣ್ಣು ಹೋಗಿಬಿಟ್ಟು ಸ್ವಲ್ಪ ಆಳವಾಗುತ್ತದೆ. ನೀರು ಹರಿದುಹೋಗುವ ದಾರಿ ಇಳಿಜಾರಾಗಿದ್ದರೆ, ನೀರಿನ ವೇಗವು ಅಧಿಕವಾಗಿ, ಆ ಸೆಳವಿಗೆ ಕಲ್ಲು ಮಣ್ಣು ಕೊಚ್ಚಿಕೊಂಡು ಹೋಗಿ, ಆ ದಾರಿಯೆಲ್ಲಾ ನೀರಿನಿಂದ ತೋಡಿದಂತಾಗಿ, ಆಳವಾದ ತೋಡುಗಳಾಗುತ್ತವೆ. ಹೀಗೆ ಹರಿಯುವ ಹೊಳೆಯ ಎರಡು ದಡಗಳಲ್ಲಿ ಕಾಣುವ ತಗ್ಗಾದ ನೆಲಕ್ಕೆ ತಗ್ಗುಗಳೆಂತಲೂ ಸಣ್ಣ ಬಯಲುಗಳೆಂತಲೂ ಹೆಸರು. ನೆಲವು ಒಂದೇ ಮಟ್ಟವಾಗಿಲ್ಲದೆ ಏರು ತಗ್ಗಾಗಿರುವುದರಿಂದ, ಅದರ ಮೇಲೆ ಬಿದ್ದ ನೀರು ನಾಲ್ಕು ದಿಕ್ಕುಗಳಿಂದಲೂ ಹರಿದು, ಆಳವಾದ ತೋಡುಗಳಿಗೆ ಕೂಡಿ, ಆ ತೋಡುಗಳು ಅಗಾಧವಾದ ನದಿಗಳಿಗೆ ಸೇರುತ್ತವೆ. ಕೆಲವು ವೇಳೆ ನೆಲದ ಮೇಲೆ ಹರಿಯುವ ನೀರು ಎತ್ತರವಾದ ಪರ್ವತಗಳ ಮೇಲಿನ ಬಂಡೆಗಳಿಂದ ದುಮುಕಿ, ಆಳದಲ್ಲಿರುವ ನೆಲದ ಮೇಲೆ ನಿಲ್ಲುತ್ತದೆ; ಇಲ್ಲವೆ ಕೆಳಗೆ ಆಳದಲ್ಲಿ ಹರಿಯುವ ತೋಡುಗಳಿಗೆ ಹಾರುತ್ತದೆ. ಹೀಗೆ ಹಾರಿ ಬೀಳುವ ನೀರಿನ ಭಾಗಕ್ಕೆ ಅರಬ್ಬಿ, ಇಲ್ಲವೆ ಜೋಗು, ಇಲ್ಲವೆ ಜಲಪ್ರಪಾತ ಎನ್ನುವರು.

ಪರ್ವತಗಳಿಂದ ಹರಿದುಬರುವ ತೋಡುಗಳು ಸಮಭೂಮಿಯನ್ನು ಸೇರುವ ವರೆಗೆ ವೇಗವಾಗಿ ಓಡುತ್ತವೆ; ಸಮಭೂಮಿಯನ್ನು ಮುಟ್ಟಿದ ಬಳಿಕ ಅವುಗಳ ವೇಗವು ಕಡಮೆಯಾಗುತ್ತದೆ. ಸಮಭೂಮಿಯಲ್ಲಿ ಪರ್ವತಪ್ರದೇಶದಲ್ಲಿದ್ದಷ್ಟು ಏರುತಗ್ಗುಗಳು ಇಲ್ಲದಿರುವುದೇ ಇದರ ಕಾರಣವಾಗಿದೆ. ಉನ್ನತ ಪ್ರದೇಶಗಳಿಂದ ನೀರು ಬಹು ವೇಗವಾಗಿ ಕೆಳಕ್ಕೆ ಹರಿದುಹೋಗುವಾಗ ಕಲ್ಲನ್ನೂ ಮಣ್ಣನ್ನೂ ತನ್ನ ಒಟ್ಟಿಗೆ ಸೆಳೆದುಕೊಂಡು ಬಂದು ಸಮಭೂಮಿಯಲ್ಲಿ ಅವನ್ನು ಅಲ್ಲಲ್ಲಿ ಒಡ್ಡುತ್ತದೆ. ನೀರಿನ ಸೆಳವು ಕಡಮೆಯಾದ ಹಾಗೆ ಆ ಕಲ್ಲೂ ಮಣ್ಣೂ ಅಲ್ಲಲ್ಲಿ ನಿಂತುಬಿಡುತ್ತವೆ. ನದಿಯು ಸಮುದ್ರಕ್ಕೆ ಹತ್ತಿರವಾಗಿರುವಲ್ಲಿ ನದಿಯ ನೀರಿನ ವೇಗವು ಬಹು ಕಡಮೆಯಾಗುವುದರಿಂದ, ನೀರಿನೊಂದಿಗೆ ಬಂದ ಕಲ್ಲೂ ಮಣ್ಣೂ ಒಂದು ಕಡೆ ರಾಶಿಯಾಗಿ ನಿಂತು, ಕುದುರುಗಳು ಏಳುತ್ತವೆ. ನದಿಯ ಅಳಿವೆಯ ಹತ್ತಿರ ತ್ರಿಕೋಣಾಕಾರವಾದ ದ್ವೀಪಗಳು ಇರುವುದನ್ನು ನೀವು ನೋಡಿರಬಹುದು. ಇವುಗಳು ಹುಟ್ಟುವುದಕ್ಕೆ ಹೊಳೆಯ ನೀರಿನೊಂದಿಗೆ ಕೊಚ್ಚಿಕೊಂಡು ಬಂದ ಕಲ್ಲೂ ಮಣ್ಣೂ ಮಳಲೂ ಮೊದಲಾದವು ಕಾರಣವಾಗಿವೆ. ವಿಲಾಯತಿಯ ಭಾಷೆಯಲ್ಲಿ 'ಡೆಲ್ಟಾ' ಎಂಬ ಹೆಸರಿನ ಅಕ್ಷರವು ತ್ರಿಕೋಣಾಕಾರವಾಗಿದೆ. ಹೊಳೆಯ ಕೈಗಳ ನಡುವೆ ಸಮುದ್ರದ ಹತ್ತಿರ ತ್ರಿಕೋಣಾಕಾರವಾಗಿ ಇರುವ ಈ ದ್ವೀಪಗಳಿಗೆ ಇಂಗ್ಲಿಷರು ಡೆಲ್ಟಾ ಎಂದು ಹೆಸರು ಇಟ್ಟಿರುತ್ತಾರೆ. ಮದ್ರಾಸ ಸಂಸ್ಥಾನದ ಪೂರ್ವಕರಾವಳಿಯಲ್ಲಿ ದೊಡ್ಡ ನದಿಗಳು ಕಡಲಿಗೆ ಕೂಡುವಲ್ಲಿ ಪ್ರಾಯಶಃ ಇಂಥ ಡೆಲ್ಟಾಗಳು ಕಾಣುತ್ತವೆ.


ಮದ್ರಾಸ ಸಂಸ್ಥಾನದ ನದಿಗಳು.—ಮದ್ರಾಸ ಸಂಸ್ಥಾನದಲ್ಲಿರುವ ನದಿಗಳಲ್ಲಿ ಕೆಲವು ಬಲು ಉದ್ದವಾಗಿವೆ. ಇವು ಪಶ್ಚಿಮಘಟ್ಟದಲ್ಲಿ ಉಗಮಿಸಿ, ಪೂರ್ವ ಸಮಭೂಮಿಯನ್ನು ದಾಟಿ, ಬಂಗಾಳ ಕೊಲ್ಲಿಯಲ್ಲಿ ಕಲೆಯುತ್ತವೆ. ಮದ್ರಾಸ ಸಂಸ್ಥಾನದಲ್ಲಿ ನೆಲವು ಪಡುದಿಕ್ಕಿನಿಂದ ಮೂಡುದಿಕ್ಕಿಗೆ ಇಳಿಯುತ್ತಾ ಹೋಗುವುದರಿಂದ ಸಂಸ್ಥಾನದ ಪಶ್ಚಿಮದಿಕ್ಕಿನಲ್ಲಿ ಹುಟ್ಟಿದ ಹೊಳೆಗಳು ಪೂರ್ವದಿಕ್ಕಿಗೆ ಹರಿಯುತ್ತಿರಬೇಕೆಂಬುದು ಸ್ಪಷ್ಟವಾಗಿದೆ. ಪಶ್ಚಿಮಘಟ್ಟಗಳಲ್ಲಿ ಉದ್ಭವಿಸುವ ನದಿಗಳು ಆ ಘಟ್ಟಗಳಿಗಿಂತ ತಗ್ಗಾದ ಪೀಠಭೂಮಿಗಳಲ್ಲಿ ಹರಿದು, ಪೂರ್ವಘಟ್ಟಗಳಲ್ಲಿಯ ಗುಡ್ಡಗಳನ್ನು ಬಳಸಿಕೊಂಡು, ಇಲ್ಲವೆ ಆ ಗುಡ್ಡಗಳ ನಡುವೆ ಇರುವ ತಗ್ಗಾದ ಪ್ರದೇಶಗಳಲ್ಲಿ ಹರಿದುಹೋಗಿ, ಪೂರ್ವ ಸಮಭೂಮಿ

ಯನ್ನು ಪ್ರವೇಶಿಸಿ, ಕಡೆಗೆ ಬಂಗಾಳ ಕೊಲ್ಲಿಗೆ ಬೀಳುತ್ತವೆ. ಪಶ್ಚಿಮಘಟ್ಟಗಳಿಗೂ ಅರಬಿಸಮುದ್ರಕ್ಕೂ ನಡುವಿರುವ ಸಮಭೂಮಿಯು ಅಗಲಕಿರಿದಾಗಿರುವುದರಿಂದ, ಆ ಘಟ್ಟಗಳಲ್ಲಿ ಉದ್ಭವಿಸಿ ಪಶ್ಚಿಮಾಭಿಮುಖವಾಗಿ ಹರಿಯುವ ಹೊಳೆಗಳು ಹೆಚ್ಚು ಉದ್ದವಾಗಿರುವುದಿಲ್ಲ. ಇನ್ನೂ ಕೆಲವು ಹೊಳೆಗಳು ಪೂರ್ವಘಟ್ಟಗಳಲ್ಲಿಯೆ ಎದ್ದು, ಮೂಡುಕಡೆ ಹರಿದು, ಬಂಗಾಳ ಕೊಲ್ಲಿಗೆ ಕೂಡುತ್ತವೆ. ಇವು ಬಲು ಸಣ್ಣವು. ಮದ್ರಾಸ ಸಂಸ್ಥಾನದೊಳಗಿನ ನದಿಗಳಲ್ಲೆಲ್ಲ ಗೋದಾವರಿ, ಕೃಷ್ಣಾ, ಕಾವೇರಿ ಎಂಬೀ ಮೂರು ಪ್ರಸಿದ್ಧವಾದ ನದಿಗಳು.

ಗೋದಾವರಿನದಿ.—ಇದು ಮುಂಬಯಿ ಸಂಸ್ಥಾನದಲ್ಲಿ ಪಶ್ಚಿಮಘಟ್ಟಗಳ ಹೊಡೆಯಲ್ಲಿ ಹುಟ್ಟುತ್ತದೆ. ಇದರ ಉಗಮಸ್ಥಾನವು ಅರಬಿಸಮುದ್ರದಿಂದ ಸುಮಾರು 50 ಮೈಲು ದೂರವಿದ್ದು, ಹಿಂದುಗಳ ಒಂದು ಪುಣ್ಯಕ್ಷೇತ್ರವೆನ್ನಿಸುತ್ತದೆ. ಅಲ್ಲಿದ್ದ ಒಂದು ಮಂಟಪದೊಳಗಿನ ದೊಡ್ಡ ವಿಗ್ರಹದ ಬಾಯಿಯಿಂದ ತಟಕುತಟಕಾಗಿ ಜಿನುಗುವ ನೀರು ಒಂದಾಗಿ ಸೇರಿ ಸುಳಿಸುಳಿಯುವ ಸಣ್ಣ ತೊರೆಯೇ ಗೋದಾವರಿಯ ಪ್ರಾರಂಭವು. ಪಶ್ಚಿಮಘಟ್ಟಗಳಲ್ಲಿ ಹುಟ್ಟುವ ಈ ನದಿಯು ಮುಂಬಯಿ ಸಂಸ್ಥಾನದ ಉತ್ತರಪ್ರದೇಶದಿಂದ ಇಳಿದುಬಂದು, ಸ್ವಲ್ಪ ಆಗ್ನೇಯಕ್ಕೆ 120 ಮೈಲು ದೂರ ಹರಿದುಹೋಗಿ, ಹೈದರಾಬಾದು ಸೀಮೆಗೂ ಮಧ್ಯಸೀಮೆಗೂ ನಡುವಿನ ಗಡಿಯಾಗಿ ಪರಿಣಮಿಸುತ್ತದೆ. ಪೂರ್ವಘಟ್ಟವನ್ನು ಮುಟ್ಟುವ ವರೆಗೆ ಅದು ಕೆಲವೆಡೆ ಒಂದು ಮೈಲು ಅಗಲವಾಗಿಯೂ ಕೆಲವೆಡೆ ಎರಡು ಮೈಲು ಅಗಲವಾಗಿಯೂ ಇದೆ. ಪೂರ್ವಘಟ್ಟಗಳನ್ನು ದಾಟುವಾಗ ಗೋದಾವರಿನದಿಯು ಆ ಘಟ್ಟಗಳ ಇಕ್ಕಡೆಗಳಲ್ಲಿಯೂ ಇರುವ ದೊಡ್ಡ ದೊಡ್ಡ ಮಲೆಗಳನ್ನು ಸೀಳಿಕೊಂಡು ಹರಿಯುತ್ತದೆ. ಹೀಗೆ ಮಲೆಗಳಲ್ಲಿ ಹರಿದು ಪೂರ್ವ ಸಮಭೂಮಿಯನ್ನು ಸೇರುವ ವರೆಗೆ ನದಿಯ ಅಗಲವು ಸ್ವಲ್ಪ ಕಡಮೆ; ಆಳವು ಮಾತ್ರ ಅಧಿಕವಾಗಿದ್ದು ನೀರು ಸುಳಿಸುಳಿಯಾಗಿ ಸುಳಿಯುವುದು. ಪೂರ್ವ ಸಮಭೂಮಿಯನ್ನು ಸೇರಿದ ಕೂಡಲೆ ನದಿಯ ಸೆಳತವು ಕಡಮೆಯಾಗುವುದಾದರೂ ಅಗಲವು ವಿಸ್ತಾರವಾಗುತ್ತ ಹೋಗುವುದು. ಉನ್ನತಸ್ಥಳಗಳಿಂದ ನೀರಿನೊಡನೆ ಕೊಚ್ಚಿಕೊಂಡು ಬಂದ ಕಲ್ಲುಮಣ್ಣು, ಕಸಕಡ್ಡಿ ಮೊದಲಾದುವು ಈಗ ಅಲ್ಲಲ್ಲಿ ರಾಶಿಯಾಗಿ ನಿಲ್ಲತೊಡಗುತ್ತವೆ. ಹೀಗೆ ಹಲವು ಕಾಲದಿಂದ ರಾಶಿಬಿದ್ದು ನೀರಿನೊಳಗಿಂದ ತಲೆ ಎತ್ತಿ ನಿಂತ ತ್ರಿಕೋಣಾಕಾರದ ದ್ವೀಪಗಳನ್ನು ಅಲ್ಲಲ್ಲಿ ಕಾಣಬಹುದು. ನದಿಯು ಸಮುದ್ರಕರಾವಳಿಯನ್ನು

ಸಮೀಪಿಸುವ ಮೊದಲು ಈ ಕುದುರುಗಳನ್ನು ಸುತ್ತಿಕೊಂಡು ಶಾಖೆಶಾಖೆಯಾಗಿ ಹರಿಯುವಂತೆ ಕಾಣುತ್ತದೆ. ಗೋದಾವರಿ ಜಿಲ್ಲೆಯ ಮುಖ್ಯ ಪಟ್ಟಣವಾದ ರಾಜಮಹೇಂದ್ರದಲ್ಲಿ ರೈಲುಮಾರ್ಗಕ್ಕಾಗಿ ಈ ಹೊಳೆಯ ಮೇಲೆ $1\frac{3}{4}$ ಮೈಲು ಉದ್ದವಾದ ದೊಡ್ಡದೊಂದು ಸೇತುವೆಯನ್ನು ಕಟ್ಟಿರುತ್ತಾರೆ. ಈ ಪಟ್ಟಣಕ್ಕೆ ನಾಲ್ಕೈದು ಮೈಲು ಹತ್ತಿರ ಈ ನದಿಯು ಎರಡು ಕವಲುಗಳಾಗಿ ಒಡೆದಿರುತ್ತದೆ. ಮೂಡುಕವಲಿಗೆ ಗೌತಮಗೋದಾವರಿ ಎಂದೂ, ಪಡುಕವಲಿಗೆ ವಸಿಷ್ಟಗೋದಾವರಿ ಎಂದೂ ಹೆಸರು. ನದಿಯ ಈ ಎರಡು ಕೈಗಳ ನಡುವೆ ಇರುವ ಸ್ಥಳವೇ ಧವಳೇಶ್ವರವೆಂಬ ಪಟ್ಟಣವು. ಧವಳೇಶ್ವರವು ಸಮುದ್ರದಿಂದ 45 ಮೈಲು ದೂರವಾಗಿದೆ. $2\frac{1}{4}$ ಮೈಲು ಉದ್ದವಿದ್ದು ಬಹು ಪ್ರಸಿದ್ಧವಾದ ಧವಳೇಶ್ವರ ಎಂಬ ಅಣೆಕಟ್ಟು ಈ ಸ್ಥಳದಲ್ಲಿಯೇ ಇದೆ. ಗೋದಾವರಿಯ ಈ ಭಾಗದಲ್ಲಿ ಕಂಡುಬರುವ ಎರಡು ಕುದುರುಗಳನ್ನು ಜೋಡಿಸಿ ಕಟ್ಟಿದ್ದ ಈ ಅಣೆಯಿಂದ ಮೂರು ಕಾಲುವೆಗಳನ್ನು ತೋಡಿ, ಹೊಳೆಯ ನೀರನ್ನು ಆ ಕಾಲುವೆಗಳಲ್ಲಿ ತಿರುಗಿಸಿ, ನೀರಾವರಿ ಕೆಲಸಕ್ಕಾಗಿ ನೀರನ್ನು ಬಹು ದೂರ ಹರಿಯುವ ಹಾಗೆ ಮಾಡಿರುತ್ತಾರೆ. ಈ ಕಾಲುವೆಗಳು ಹಡಗುಗಳ ಚಲಾವಣೆಗೆ ಸಾಕಷ್ಟು ಆಳವಾಗಿವೆ. ಉಗಮಸ್ಥಾನದಿಂದ ಅಳಿವೆಯ ವರೆಗೆ ಗೋದಾವರಿನದಿಯು 898 ಮೈಲು ಉದ್ದವಾಗಿದೆ. ಜೂನ್ ಜುಲೈ ಮಾಸಗಳಲ್ಲಿ ನೈಋತ್ಯದಿಕ್ಕಿನಿಂದ ಬೀಸುವ ಗಾಳಿಯೊಡನೆ ಬರುವ ಮೇಘಗಳು ಪೂರ್ವಘಟ್ಟಗಳ ಮೇಲೆ ಮಳೆಯಾಗಿ ಸುರಿಯುವ ಕಾಲದಲ್ಲಿ ಗೋದಾವರಿನದಿಯಲ್ಲಿ ನೆರೆ ಬರುವುದುಂಟು. ಈ ನದಿಯು ಚಿರಕಾಲದಿಂದ ಸಾವಿರಾರು ಜನಗಳ ಉಪಜೀವನಕ್ಕೂ ದಿನ ದಿನದ ವೃತ್ತಿಗಳಿಗೂ ಆಧಾರವಾಗಿರುವುದರಿಂದ, ಹಿಂದುಗಳು ಇದನ್ನು ಪುಣ್ಯನದಿಯೆಂತಲೂ ಗೋದಾವರಿಸ್ನಾನವು ಸ್ವರ್ಗದಾಯಕವೆಂತಲೂ ನಂಬಿ, ಇದರ ಎರಡೂ ದಡಗಳ ಮೇಲೆ ಅನೇಕ ದೇವಾಲಯಗಳನ್ನು ಅಲ್ಲಲ್ಲಿ ಸ್ಥಾಪಿಸಿರುತ್ತಾರೆ. ದೂರ ದೇಶಗಳಿಂದ ಹಲವರು ಈ ಕ್ಷೇತ್ರಗಳಿಗೆ ಯಾತ್ರಿಕರಾಗಿ ಬರುತ್ತಾರೆ.

ಕೃಷ್ಣಾನದಿ.— ಇದು ಪಶ್ಚಿಮಘಟ್ಟಗಳಲ್ಲಿಯ ಮಹಾಬಲೇಶ್ವರ ಎಂಬ ಸ್ಥಳದಲ್ಲಿ ಹುಟ್ಟುತ್ತದೆ. ಮಹಾಬಲೇಶ್ವರವು ಅರಬಿಸಮುದ್ರದಿಂದ ಸುಮಾರು 50 ಮೈಲು ದೂರವಿದೆ. ಈ ನದಿಯು ಮುಂಬಯಿ ಸಂಸ್ಥಾನದಲ್ಲಿ ಸುಮಾರು 300 ಮೈಲು ಆಗ್ನೇಯಕ್ಕೆ ಹರಿದುಹೋದನಂತರ ಹೈದರಾಬಾದುಸೀಮೆಯನ್ನು



BEZVADA ANICUT ಬೆಜವಾಡದ ಅಣೆಕಟ್ಟು.

ಪ್ರವೇಶಿಸಿ, ಆ ಸೀಮೆಗೂ ಮದ್ರಾಸ ಸಂಸ್ಥಾನಕ್ಕೂ ಮಧ್ಯಮೇರೆಯಾಗಿ ಪ್ರವಹಿಸಿ, ಪೂರ್ವಘಟ್ಟಗಳ ಕೆಲಕೆಲವು ಗುಡ್ಡಗಳ ಬುಡದಲ್ಲಿ ಸುತ್ತಿ, ಕೃಷ್ಣಾ ಜಿಲ್ಲೆಯನ್ನು ಸೇರಿ, ಬಂಗಾಳ ಕೊಲ್ಲಿಗೆ ಬೀಳುತ್ತದೆ. ಇದು ಉಗಮದಿಂದ ಸಂಗಮದ ವರೆಗೆ 800 ಮೈಲು ಉದ್ದವಾಗಿದೆ; ಮುಂಬಯಿ ಸಂಸ್ಥಾನದಲ್ಲಿ 300 ಮೈಲು, ಹೈದರಾಬಾದಿನಲ್ಲಿ 400 ಮೈಲು, ಮದ್ರಾಸ ಸಂಸ್ಥಾನದಲ್ಲಿ 100 ಮೈಲು. ಕೃಷ್ಣಾನದಿಯ ಬಹುಭಾಗವು ಮುಂಬಯಿ, ಹೈದರಾಬಾದು ಗಳಲ್ಲಿ ಹರಿಯುತ್ತದಾದರೂ, ಮದ್ರಾಸ ಸಂಸ್ಥಾನದಲ್ಲಿ ಇದರ ಉಪಯೋಗವು ಬಹಳವಾಗಿದೆ. ಇದು ಸಮುದ್ರಕ್ಕೆ ಸಂಗಮವಾಗುವಲ್ಲಿ ಎದ್ದಿದ್ದ ಡೆಲ್ಟಾ ಎಂಬ ತ್ರಿಕೋಣಾಕಾರದ ದ್ವೀಪವು ಬೆಜವಾಡ ಎಂಬ ಪಟ್ಟಣದ ಹತ್ತರ ಪ್ರಾರಂಭಿಸುತ್ತದೆ. ಬೆಜವಾಡದಲ್ಲಿ ಈ ನದಿಗೆ ಅಣೆಕಟ್ಟನ್ನು ಕಟ್ಟಿ, ಕಾಲುವೆ ಗಳ ಮೂಲಕವಾಗಿ ನೀರನ್ನು ಕೃಷಿಗಾಗಿ ಬಹು ದೂರದ ವರೆಗೆ ಸಾಗಿಸಿ ಉಪಯೋಗಿಸಿಕೊಳ್ಳುತ್ತಾರೆ. ಸಮುದ್ರಕ್ಕೂ ಬೆಜವಾಡ ಪಟ್ಟಣಕ್ಕೂ ಸುಮಾರು 45 ಮೈಲು ದೂರವಿದೆ. ಹೊಳೆಯು ಸಾಕಷ್ಟು ಆಳವಾಗಿದ್ದು ಹಡಗುಗಳ ಸಂಚಾರಕ್ಕೆ ಅನುಕೂಲವಾಗಿದೆ. ಇತರ ಅನೇಕ ನದಿಗಳಂತೆ ಇದನ್ನು ಸಹ ಹಿಂದುಗಳು ಪುಣ್ಯನದಿಯೆಂದು ಭಾವಿಸುತ್ತಾರೆ.

ಕಾವೇರಿನದಿ.—ಕಾವೇರಿನದಿಯು ಕೊಡಗುಸೀಮೆಯ ಪಶ್ಚಿಮಘಟ್ಟ ಗಳಲ್ಲಿ ತಲೆಕಾವೇರಿ ಎಂಬಲ್ಲಿ ಉದ್ಭವಿಸಿ, ಕೊಡಗು ಮೈಸೂರುಸೀಮೆಗಳನ್ನು ದಾಟಿ, ಆಗ್ನೇಯಕ್ಕೆ ತಿರುಗಿ, ಆ ಪೂರ್ವಘಟ್ಟಗಳ ಮಲೆಗಳನ್ನು ಕಳೆದು, ಮದ್ರಾಸ ಸಂಸ್ಥಾನದ ಸಮಭೂಮಿಯನ್ನು ಪ್ರವೇಶಿಸಿ, ಸೇಲಂ ಮತ್ತು ಕೊಯ ಮುತ್ತೂರು ಜಿಲ್ಲೆಗಳ ಮೇರೆಯಾಗಿ ಹರಿದು, ಅಲ್ಲಿಂದ ತೆಂಕುದಿಕ್ಕಿಗೆ ಒತ್ತಿ, ತಿರುಚಿನಾಪಳ್ಳಿ ತಂಜಾಪೂರು ಜಿಲ್ಲೆಗಳಲ್ಲಿ ಪೂರ್ವಕ್ಕೆ ಪ್ರವಹಿಸಿ, ನಾಗಪಟ್ಟಣದ ಹತ್ತಿರ ಬಂಗಾಳ ಕೊಲ್ಲಿಗೆ ಹೋಗಿ ಕೂಡುತ್ತದೆ. ಇದರ ಉದ್ದ 475 ಮೈಲು. ಮೈಸೂರುಸೀಮೆಯಲ್ಲಿ ಕಾವೇರಿನದಿಗೆ ಹನ್ನೆರಡು ಅಣೆಕಟ್ಟುಗಳನ್ನು ಕಟ್ಟಿರು ತ್ತಾರೆ. ಶ್ರೀರಂಗಪಟ್ಟಣ ಎಂಬ ಸ್ಥಳದಲ್ಲಿ ಈ ನದಿಯು ಎರಡು ಕವಲಾಗಿ ಒಡೆದು ತಿರುಗಿ ಒಂದಾಗಿ ಕೂಡಿ, ಶ್ರೀರಂಗಪಟ್ಟಣವನ್ನು ಒಂದು ದ್ವೀಪವನ್ನಾಗಿ ಮಾಡಿ, ಮುಂದಕ್ಕೆ ಹರಿದುಹೋಗುತ್ತದೆ. ಸುಮಾರು 110 ವರ್ಷಗಳ ಹಿಂದೆ ಮೈಸೂರುಸೀಮೆಯಲ್ಲಿ ಮಂತ್ರಿಯಾಗಿದ್ದ ಪೂರ್ಣಯ್ಯನೆಂಬಾತನು ಸುಮಾರು 1400 ಅಡಿ ಉದ್ದವಾದ ಸೇತುವೆಯನ್ನು ಇದರ ಮೇಲೆ ಕಟ್ಟಿಸಿದನು. ಮೈಸೂರು

ಯುದ್ಧದಲ್ಲಿ ಟಿಪ್ಪುಸುಲ್ತಾನನನ್ನು ಸೋಲಿಸಿದ ಕರ್ನಲ್ ವೆಲ್ಲಸ್ಲಿಯೆಂಬವನ ಹೆಸರಿನಿಂದ ಈ ಸೇತುವೆಯನ್ನು ಈಗ ಕರೆಯುತ್ತಾರೆ. ಶ್ರೀರಂಗಪಟ್ಟಣದಿಂದ ಸುಮಾರು 50 ಮೈಲು ದೂರ ಶಿವಸಮುದ್ರ ಎಂಬ ಹೆಸರಿನ ಇನ್ನೊಂದು ದ್ವೀಪವಿದೆ. ಶಿವಸಮುದ್ರದಲ್ಲಿ ಕಾವೇರಿನದಿಯು ಪೂರ್ವಘಟ್ಟಕ್ಕೆ ಸೇರಿದ ಒಂದು ಮಲೆಯ ಮೇಲಿನಿಂದ ಎರಡು ಶಾಖೆಗಳಾಗಿ ಒಡೆದು, ಸುಮಾರು 320 ಅಡಿ ಎತ್ತರದಿಂದ ಆಕಾಶಗಂಗೆಯ ಹಾಗೆ ಕೆಳಕ್ಕೆ ದುಮುಕುತ್ತದೆ. ಈ ಜಲಪ್ರಪಾತವು ಅತ್ಯದ್ಭುತವಾಗಿದೆ. ಜೂನ್ ಜುಲೈ ಮಾಸಗಳಲ್ಲಿ ನೆರೆ ತುಂಬಿ ಪ್ರವಹಿಸುವ ನದಿಯ ನೋಟವು ಆಶ್ಚರ್ಯಕರವಾಗಿಯೂ ಅಂದ ವಾಗಿಯೂ ಇದೆ. ಶಿವಸಮುದ್ರದಲ್ಲಿ ಮೇಲಿನಿಂದ ದುಮುಕುವ ಮೊದಲು ಎರಡು ಶಾಖೆಗಳಾಗಿದ್ದ ಕಾವೇರಿನದಿಯು ಕೆಳಗೆ ಬಿದ್ದನಂತರ ತಿರಿಗಿ ಒಂದಾಗಿ ಮದ್ರಾಸ ಸಂಸ್ಥಾನವನ್ನು ಪ್ರವೇಶಿಸುತ್ತದೆ. ಮೈಸೂರುಸೀಮೆಯಲ್ಲಿ ಕೆಲ ಕಾಲದ ಹಿಂದೆ ದಿವಾನನಾಗಿದ್ದ ಸರ್ ಶೇಷಾದ್ರಿ ಅಯ್ಯರ್ ಎಂಬಾತನ ಸೂಚನೆಯ ಮೇರೆಗೆ ಶಿವಸಮುದ್ರದಲ್ಲಿ ಕಾವೇರಿನದಿಯಿಂದ ಉಂಟಾದ ಜಲ ಪ್ರಪಾತದಿಂದ ವಿದ್ಯುತ್‌ಶಕ್ತಿಯನ್ನು ಹುಟ್ಟಿಸುವ ಯಂತ್ರಗಳನ್ನು ಸ್ಥಾಪಿಸಿ, ಆ ಶಕ್ತಿಯನ್ನು ತಂತಿಯ ಮೂಲಕವಾಗಿ ಬಹು ದೂರ ಸ್ಥಳಗಳಿಗೆ ಕೊಂಡು ಹೋಗಿ, ಅದರ ಬಲದಿಂದ ನಾನಾ ಕೈಗಾರಿಕೆಗಳನ್ನು ನಡಿಸುವುದಕ್ಕೆ ಬೇಕಾದ ಏರ್ಪಾಡುಗಳನ್ನು ಆಶ್ಚರ್ಯಕರವಾದ ರೀತಿಯಲ್ಲಿ ಮಾಡಿರುತ್ತಾರೆ. ಕಾವೇರಿ ನದಿಯು ಮದ್ರಾಸ ಸಂಸ್ಥಾನವನ್ನು ಪ್ರವೇಶಿಸುತ್ತಲೆ ಭವಾನಿ ಅಮರಾವತಿ ಎಂಬ ಎರಡು ಉಪನದಿಗಳು ಅದರೊಂದಿಗೆ ಕಲೆಯುತ್ತವೆ. ತಿರುಚಿನಾಪಳ್ಳಿ ಜಿಲ್ಲೆಯ ಶ್ರೀರಂಗ ಎಂಬ ಸ್ಥಳದಲ್ಲಿ ಕಾವೇರಿನದಿಯಿಂದ ಉಂಟಾದ ಒಂದು ಡೆಲ್ಟವು ಇದೆ. ಇಲ್ಲಿ ಕಾವೇರಿನದಿಯು ಎರಡು ಕೈಗಳಾಗಿ ಹರಿಯುತ್ತದೆ. ಬಡಗು ಕೈಗೆ ಕೊಲ್ಲಡ ಎಂತ ಹೆಸರು. ಈ ಕೈಯೇ ಕೊಲ್ಲಡ ನದಿಯಾಗಿ ಮುಂದು ವರಿದು ಪ್ರತ್ಯೇಕವಾಗಿ ಸಮುದ್ರಕ್ಕೆ ಕೂಡುತ್ತದೆ. ತೆಂಕು ಕೈ ಕಾವೇರಿ; ಈ ಶಾಖೆಯಿಂದ ನೀರು ಕೃಷಿಗಾಗಿ ಪೂರ್ವದಲ್ಲಿ ರಾಜ್ಯವಾಳಿದ ಚೋಳ ದೇಶದ ಅರಸರು ತೋಡಿಸಿದ್ದ ಹಲವು ಕಾಲುವೆಗಳ ಮೂಲಕ ಒಯಲ್ಪಟ್ಟುದರಿಂದ, ಸಮುದ್ರಕ್ಕೆ ಸೇರುವಾಗ ಕಾವೇರಿನದಿಯು ಅಗಲಕಿರಿದಾಗಿ ಕಾಣುತ್ತದೆ. ಆದರೆ ಕೃಷಿಗೆ ಕಾವೇರಿನದಿಯಷ್ಟು ಉಪಕಾರಿಯಾದ ಹೊಳೆಯು ಮದ್ರಾಸ ಸಂಸ್ಥಾನದಲ್ಲಿ ಮತ್ತೊಂದಿಲ್ಲ. ಶ್ರೀರಂಗದ ನೈಋತ್ಯದಲ್ಲಿ ದೊಡ್ಡ ಅಣೆಯನ್ನು

ಕಟ್ಟಿ, ಕಾಲುವೆಯ ಮೂಲಕ ನೀರಾವರಿಗಾಗಿ ಸಾಗಿಸಲ್ಪಟ್ಟ ನೀರು ಸುತ್ತ ಮುತ್ತಲಿನ ಪ್ರದೇಶವನ್ನೆಲ್ಲ ಅತ್ಯಂತ ಫಲವತ್ತಾಗಿ ಮಾಡಿರುವುದರಿಂದ, ಶ್ರೀರಂಗದ ದಕ್ಷಿಣಭಾಗವು ಹಿಂದುಸ್ಥಾನದ ಉದ್ಯಾನವೆಂದು ಹೆಸರು ಪಡೆದಿದೆ.

ಮೇಲೆ ಹೇಳಿದ ಮೂರು ನದಿಗಳಲ್ಲದೆ ಈ ಸಂಸ್ಥಾನದಲ್ಲಿ ಅನೇಕ ಸಣ್ಣ ನದಿಗಳೂ ಇವೆ. ಇವುಗಳಲ್ಲಿ ತುಂಗಭದ್ರಾ ಎಂಬುದೊಂದು; ಮೈಸೂರು ಪೀಠಭೂಮಿಯಲ್ಲಿ ತುಂಗಾ ಮತ್ತು ಭದ್ರಾ ಎಂಬ ಎರಡು ಹೊಳೆಗಳು ಹುಟ್ಟಿ ಆ ಸೀಮೆಯಲ್ಲಿಯೇ ಒಂದಾಗಿ ಕಲೆತು ತುಂಗಭದ್ರಾನದಿಯು ಉಂಟಾಗಿದೆ. ಮೈಸೂರುಸೀಮೆಯೂ ಮುಂಬಯಿ ಸಂಸ್ಥಾನವೂ ಒಂದಕ್ಕೊಂದು ತಾಗಿರುವಲ್ಲಿ ತುಂಗಭದ್ರಾನದಿಯು ಆ ಎರಡು ಸೀಮೆಗಳನ್ನು ಪ್ರತ್ಯೇಕಿಸಿ ಮುಂದುವರಿಯುತ್ತದೆ; ತರುವಾಯ ಮದ್ರಾಸ ಮುಂಬಯಿ ಸಂಸ್ಥಾನಗಳು ಕೂಡುವಲ್ಲಿ ಮೇರೆಯಾಗಿ ಹರಿಯುತ್ತದೆ; ಅನಂತರ ಮದ್ರಾಸ ಸಂಸ್ಥಾನಕ್ಕೂ ಹೈದರಾಬಾದುಸೀಮೆಗೂ ಒಂದು ಕಡೆಯಲ್ಲಿ ಮಧ್ಯಮೇರೆಯಾಗಿ ಪ್ರವಹಿಸುತ್ತದೆ; ಕೊನೆಗೆ ಕೃಷ್ಣಾನದಿಗೆ ಹೋಗಿ ಬೀಳುತ್ತದೆ. ತುಂಗಭದ್ರಾನದಿಯು ಕೃಷಿಗೆ ಬಹಳ ಪ್ರಯೋಜನಕಾರಿಯಾಗಿದೆ.

ವೆಣ್ಣಾರು.— ಈ ನದಿಗೆ ಬಡಗು ವೆಣ್ಣಾರು ಮತ್ತು ಪಿನಾಕಿನಿ ಎಂಬ ಎರಡು ಹೆಸರುಗಳಿವೆ. ಇದು ಮೈಸೂರುಸೀಮೆಯ ಮಲೆಗಳಲ್ಲಿ ನಂದಿದುರ್ಗದ ಹತ್ತಿರ ತಲೆದೋರಿ, ಆಗ್ನೇಯಕ್ಕೆ ಹರಿದು, ಮದ್ರಾಸ ಸಂಸ್ಥಾನದೊಳಗಿನ ಅನಂತಪುರ ಕಡಪಾ ಜಿಲ್ಲೆಗಳಲ್ಲಿ ಒಂದು ಸಲ ಬಡಗುದಿಕ್ಕಿಗೂ ಮತ್ತೊಂದು ಸಲ ಮೂಡುದಿಕ್ಕಿಗೂ ಸುಳಿದು, ಪೂರ್ವಘಟ್ಟಗಳ ಮಲೆಗಳನ್ನು ಕಳೆದು, ನೆಲ್ಲೂರು ಜಿಲ್ಲೆಯಲ್ಲಿ ಕಡಲಿಗೆ ಕೂಡುತ್ತದೆ. ಸುಮಾರು 350 ಮೈಲು ಉದ್ದವಾದ ಈ ನದಿಯನ್ನು ಕೂಡಿಕೊಳ್ಳುವ ಎರಡು ಉಪನದಿಗಳು ಯಾವವೆಂದರೆ, ಪಾಪಘ್ನಿ ಮತ್ತು ಚಿತ್ರಾವತಿ. ವೆಣ್ಣಾರು ಹೊಳೆಯ ಡೆಲ್ಟವು ನೆಲ್ಲೂರು ಜಿಲ್ಲೆಯಲ್ಲಿ ಪ್ರಾರಂಭಿಸುತ್ತದೆ. ನೀರಾವರಿಯ ಕೆಲಸಕ್ಕಾಗಿ ಈ ಹೊಳೆಗೂ ಎರಡು ಅಣೆಗಳನ್ನು ಕಟ್ಟಿರುತ್ತಾರೆ.


ಪಾಲಾರು.— ಪಾಲಾರು ಹೊಳೆಯು ಮೈಸೂರುಸೀಮೆಯಲ್ಲಿ ಪಿನಾಕಿನಿ ನದಿಯು ಉಗಮಸ್ಥಾನದ ಹತ್ತಿರ ಹುಟ್ಟಿ, ಆ ಸೀಮೆಯಲ್ಲಿ ಸುಮಾರು 40 ಮೈಲು ಹರಿದು, ಪೂರ್ವಘಟ್ಟಗಳ ಸಂದುಗಳಿಂದ ಇಳಿದು, ಮದ್ರಾಸ ಸಂಸ್ಥಾನಕ್ಕೆ ಬಂದು, ಉತ್ತರ ಆರ್ಕಾಡು ಚೆಂಗಲ್ಪಟ್ಟು ಜಿಲ್ಲೆಗಳನ್ನು ದಾಟಿ, ಹೀಗೆ

ಮದ್ರಾಸ ಸಂಸ್ಥಾನದಲ್ಲಿ ಒಟ್ಟಿಗೆ ಸುಮಾರು 183 ಮೈಲು ಪೂರ್ವಕ್ಕಾಗಿ ಹರಿದು, ಸಮುದ್ರಕ್ಕೆ ಹೋಗಿ ಬೀಳುತ್ತದೆ. ನೀರಾವರಿಗಾಗಿ ಕಟ್ಟಲ್ಪಟ್ಟ ಅಣೆಯನ್ನೂ ಕಾಲುವೆಗಳನ್ನೂ ಇಲ್ಲಿಯೂ ಕಾಣಬಹುದು.

ದಕ್ಷಿಣ ವೆಣ್ಣಾರು.—ದಕ್ಷಿಣ ವೆಣ್ಣಾರು ಎಂಬ ಹೊಳೆಯು ಮೈಸೂರು ಸೀಮೆಯ ನಂದಿದುರ್ಗ ಎಂಬಲ್ಲಿ ಉಗಮಿಸಿ, ಆ ಸೀಮೆಯನ್ನು ದಾಟಿದನಂತರ ಈ ಸಂಸ್ಥಾನದೊಳಗಿನ ಸೇಲಂ, ಉತ್ತರ ಆರ್ಕಾಡು ಜಿಲ್ಲೆಗಳಲ್ಲಿ ಹರಿದು, ಕಡಲೂರಿನ ಬಳಿಯಲ್ಲಿ ಸಮುದ್ರಕ್ಕೆ ಹೋಗಿ ಬೀಳುತ್ತದೆ. ಇದಕ್ಕೂ ಅಣೆಕಟ್ಟನ್ನು ಕಟ್ಟಿಸಿರುತ್ತಾರೆ. ಇದು ಕೃಷ್ಣಾ ಕಾವೇರಿ ನದಿಗಳಂತೆಯೇ ಹಿಂದೂ ಜನರಿಗೆ ಒಂದು ಪುಣ್ಯನದಿಯಾಗಿದೆ. ಕುಂಭ ಮಾಸದಲ್ಲಿ ಗಂಗಾನದಿಯು ನೆಲದೊಳಗಿನಿಂದ ಈ ಹೊಳೆಯೊಡನೆ ಕಲೆಯುತ್ತದೆಂಬ ನಂಬಿಕೆಯಿಂದ ಆ ಮಾಸದಲ್ಲಿ ಹಲವು ಯಾತ್ರಿಕರು ಸ್ನಾನಕ್ಕಾಗಿ ಹೋಗುತ್ತಾರೆ. .

ತಾಮ್ರಪರ್ಣಿ.—ತಾಮ್ರಪರ್ಣಿಯು ತಿರುವಾಂಕೂರುಸೀಮೆಯ ಪಶ್ಚಿಮ ಘಟ್ಟಗಳಲ್ಲಿಯ ಅಗಸ್ತ್ಯಮಲೆಯಲ್ಲಿ ಜನಿಸಿ, ಎತ್ತರವಾದ ಪರ್ವತಗಳ ನಡುವಿನಿಂದ ಹಾಯ್ದುಹೋಗಿ, ಸ್ವಲ್ಪ ದೂರಕ್ಕೆ ಹರಿದನಂತರ ಪಾಪವಿನಾಶಿ ಎಂಬ ಸ್ಥಳದಲ್ಲಿ ಜಲಪ್ರಪಾತವಾಗಿ ದುಮುಕುತ್ತದೆ. ಹೀಗೆ ಕೆಳಕ್ಕೆ ಹಾರಿದ ತರುವಾಯ ಅದು ಕವಲೊಡೆದು, ಒಂದು ಶಾಖೆಯು ಚಿತ್ತೂರು ಎಂಬ ಹೆಸರಿನಿಂದ ಮುಂದಕ್ಕೆ ಹರಿದುಹೋಗಿ ಕುತ್ತಾಲ ಎಂಬ ಸ್ಥಳದಲ್ಲಿ ತಿರಿಗಿ ಜಲಪ್ರಪಾತವಾಗಿ ಕೆಳಗೆ ಬೀಳುತ್ತದೆ. ಜಲಪ್ರಪಾತವನ್ನು ನೋಡುವುದಕ್ಕೂ ಜೇಸಿಗೆಯಲ್ಲಿ ನದಿಸ್ನಾನ ಮಾಡುವುದಕ್ಕೂ ಹಲವರು ಹೋಗುವುದುಂಟು. ಇನ್ನೊಂದು ಶಾಖೆಯು ತಾಮ್ರಪರ್ಣಿ ಎಂಬ ಹೆಸರಿನಿಂದ ಮುಂದುವರಿದು, ತಿರುನೇಲ್ವೇಲಿ ಜಿಲ್ಲೆಯಲ್ಲಿ ಪ್ರವಹಿಸಿ, ಬಂಗಾಳ ಕೊಲ್ಲಿಗೆ ಸಂಗಮವಾಗುತ್ತದೆ. ಈ ನದಿಯು ಬರೆ 80 ಮೈಲು ಉದ್ದವಾಗಿದ್ದರೂ ಇದಕ್ಕೆ ಮುಂಗಾರುಮಳೆಯೂ ಹಿಂಗಾರು ಮಳೆಯೂ ದೊರೆಯುವುದರಿಂದ ಇದರಲ್ಲಿ ಯಾವಾಗಲೂ ನೀರು ತಪ್ಪುವುದಿಲ್ಲ. ನೀರಿನ ಸಮೃದ್ಧಿಯು ಇದ್ದುದರಿಂದ ಇದನ್ನು ಅಲ್ಲಲ್ಲಿ ಒಟ್ಟು ಎಂಟು ಅಣೆಕಟ್ಟುಗಳಿಂದ ಬಿಗಿದಿರುತ್ತಾರೆ.

ಸರೋವರಗಳು.—ಮದ್ರಾಸ ಸಂಸ್ಥಾನದಲ್ಲಿ ಸರೋವರಗಳು ಕಡಮೆ, ಇದ್ದವುಗಳು ಕೂಡಾ ಚಿಕ್ಕವು. ಉತ್ತರದಿಕ್ಕಿನಲ್ಲಿರುವ ಚಿಲುಕಾ ಸರೋವರದ ದೊಡ್ಡ ಭಾಗವು ಒರಿಸ್ಸಾಸೀಮೆಗೆ ಸೇರಿದೆ. ಇದು ನಿಜವಾಗಿಯೂ



TAMRAPARNI RIVER ತಾಮ್ರಪರ್ಣೀನದಿ.

ಸರೋವರವೆನ್ನಿಸುವುದಿಲ್ಲ. ಯಾಕಂದರೆ ಸಮುದ್ರಕ್ಕೆ ತಾಗಿರುವಲ್ಲಿ ಇದರ ನೀರು ಸಮುದ್ರಕ್ಕೆ ಬೆರಸಿಹೋಗುತ್ತದೆ. ವರ್ಷದ ಬಹುಭಾಗದಲ್ಲಿ ಇದರ ನೀರು ಉಪ್ಪಾಗಿದೆ. ಆಳವು ಎಲ್ಲೆಲ್ಲಿಯೂ ಆರು ಫೀಟಿಗಿಂತ ಕಡಮೆ ಇಲ್ಲ.

ಕೊಲ್ಲೇರು ಸರೋವರವು ಕೃಷ್ಣಾ ಜಿಲ್ಲೆಯಲ್ಲಿದೆ. ಇದು ಸುಮಾರು 25 ಮೈಲು ಉದ್ದ 10 ಮೈಲು ಅಗಲ. ಇದು ಅಷ್ಟು ಆಳವಾಗಿಲ್ಲ. ಮದ್ರಾಸ ಪಟ್ಟಣದ ಉತ್ತರಕ್ಕಿರುವ ಪುಲಿಕಾಟು ಸರೋವರವು ಮೊದಲು ಹೇಳಿದ್ದ ಸರೋವರಗಳಿಗಿಂತ ಉದ್ದವಾಗಿಯೂ ಅಗಲವಾಗಿಯೂ ಇದೆ. ಇದು ಕೂಡಾ ಬಹು ಆಳವಾಗಿಲ್ಲ. ಕಡಲಿನ ಹತ್ತಿರವಿದ್ದು ಸಮುದ್ರದ ನೀರು ಇದರಲ್ಲಿ ಕಲೆತುಹೋಗುವುದರಿಂದ ಇದರ ನೀರು ಕೃಷಿಗೆ ಉಪಯೋಗ ವಾಗುವುದಿಲ್ಲ.

ಪ್ರಾಕೃತಿಕ ವಿಭಾಗಗಳು.— ಮದ್ರಾಸ ಸಂಸ್ಥಾನದ ಪ್ರಾಕೃತಿಕ ಲಕ್ಷಣ ಗಳನ್ನೂ ಶೀತೋಷ್ಣಸ್ಥಿತಿಯನ್ನೂ ಹಿಂದೆ ವಿವರಿಸಿದ್ದಾಯಿತು. ಆ ಪ್ರಾಕೃತಿಕ ಲಕ್ಷಣಗಳಿಗೆ ಅನುಸಾರವಾಗಿಯೂ ಸಂಸ್ಥಾನದ ಬೇರೆ ಬೇರೆ ಕಡೆಗಳಲ್ಲಿ ಕಾಣುವ ಶೀತೋಷ್ಣಗಳಿಗೆ ಅನುಸಾರವಾಗಿಯೂ ಈ ಸಂಸ್ಥಾನವನ್ನು ವಿಭಾ ಗಿಸಿ ನೋಡಬೇಕಾಗಿದೆ. ಪ್ರಾಕೃತಿಕ ಲಕ್ಷಣಗಳನ್ನು ಇಟ್ಟುಕೊಂಡು ಸಂಸ್ಥಾ ನವನ್ನು ವಿಭಾಗಿಸೋಣ. (1) ಪಶ್ಚಿಮಕರಾವಳಿಯಲ್ಲಿ ತಗ್ಗಾಗಿ ಕಂಡು ಬರುವ ಸಮಭೂಮಿ. (2) ಇದಕ್ಕೆ ಸೇರಿದ ಮಲೆನಾಡು ಎಂಬ ಎತ್ತರವಾದ ಪೀಠಭೂಮಿ. (3) ಆಗ್ನೇಯದಲ್ಲಿರುವ ಸಮಭೂಮಿ. (4) ಪೂರ್ವಕರಾವಳಿ ಯಲ್ಲಿಯ ಸಮಭೂಮಿಯ ಮಧ್ಯಭಾಗ. (5) ಪೂರ್ವಕರಾವಳಿಯಲ್ಲಿ ಸಮ ಭೂಮಿಯ ಉತ್ತರಭಾಗ. (6) ಪೂರ್ವಘಟ್ಟಗಳಿಗೆ ಸೇರಿದ ಮಲೆನಾಡು ಎಂಬ ಏಜನ್ಸಿ ಟ್ರಾಕ್ಟುಗಳು. (7) ದಕ್ಷಿಣ ಪೀಠಭೂಮಿ. ಒಂದು ದೇಶವನ್ನು ಇಲ್ಲವೆ ಒಂದು ಸಂಸ್ಥಾನವನ್ನು ಆಳುವುದಕ್ಕೆ ಸುಲಭವಾಗುವಂತೆಯೂ ಪ್ರಜೆ ಗಳಿಂದ ಕಂದಾಯವನ್ನು ಪಡೆಯುವುದಕ್ಕೆ ಅನುಕೂಲವಾಗುವಂತೆಯೂ ಅದನ್ನು ಚಿಕ್ಕ ಚಿಕ್ಕ ಭಾಗಗಳನ್ನಾಗಿ ವಿಂಗಡಿಸುತ್ತಾರೆ ಎಂಬುದನ್ನು ನೀವು ಈ ಮೊದಲೇ ಓದಿರಬಹುದು. ಪ್ರಜೆಗಳ ರಕ್ಷಣೆಗಾಗಿಯೂ ಕಂದಾಯದ ವಸೂಲಿಗಾಗಿಯೂ ಮದ್ರಾಸ ಸಂಸ್ಥಾನವನ್ನು 25 ಜಿಲ್ಲೆಗಳನ್ನಾಗಿ ವಿಭಾಗಿಸಿ ದ್ದಾರೆ. ಇವುಗಳಲ್ಲಿ ಗಂಜಾಂ, ವಿಶಾಖಪಟ್ಣ, ಗೋದಾವರಿ, ಕೃಷ್ಣ,

ಮತ್ತು ಗುಂಟೂರು ಎಂಬ 5 ಜಿಲ್ಲೆಗಳು ಪೂರ್ವಕರಾವಳಿಯ ಉತ್ತರಕ್ಕಿದ್ದು, ಉತ್ತರ ಸರಕಾರದ ಜಿಲ್ಲೆಗಳು ಎನ್ನಿಸಿಕೊಳ್ಳುತ್ತವೆ. ಈ ಐದು ಜಿಲ್ಲೆಗಳಲ್ಲಿ ಗಂಜಾಂ, ವಿಶಾಖಪಟ್ಣ ಮತ್ತು ಗೋದಾವರಿ ಜಿಲ್ಲೆಗಳ ಪಶ್ಚಿಮಕ್ಕೆ ಸೇರಿದ ಮಲೆನಾಡುಗಳಿಗೆ ಏಜನ್ಸಿ ಟ್ರಾಕ್ಟು ಎಂದು ಹೆಸರು. ಇಲ್ಲಿ ಕಡಲಿನ ಹತ್ತಿರದ ಪ್ರದೇಶದಲ್ಲಿ ನೆಲವು ಸಮುದ್ರಮಟ್ಟಕ್ಕಿಂತ 600 ಫೀಟು ಮಿಕ್ಕು ಎತ್ತರ ವಾಗಿಯೂ ದೂರ ಹೋದ ಹಾಗೆ ಅದು 2000 ಫೀಟಿಗಿಂತ ಎತ್ತರವಾಗಿಯೂ ಏರುತ್ತದೆ.

ಪೂರ್ವಕರಾವಳಿಯಲ್ಲಿ ಗುಂಟೂರಿನ ದಕ್ಷಿಣಕ್ಕೆ ನೆಲ್ಲೂರು, ಮದ್ರಾಸು, ಚೆಂಗಲ್ಪಟ್ಟು, ದಕ್ಷಿಣ ಆರ್ಕಾಡು, ತಂಜಾವೂರು ಎಂಬ ಐದು ಜಿಲ್ಲೆಗಳು ಪೂರ್ವಕರಾವಳಿಯ ಮಧ್ಯಪ್ರದೇಶದ ಜಿಲ್ಲೆಗಳು. ಚೆಂಗಲ್ಪಟ್ಟು ಜಿಲ್ಲೆಯ ಪಶ್ಚಿಮದಲ್ಲಿರುವ ಒಳನಾಡನ್ನು ಉತ್ತರ ಆರ್ಕಾಡು ಮತ್ತು ಚಿತ್ತೂರು ಎಂಬೀ ಎರಡು ಜಿಲ್ಲೆಗಳನ್ನಾಗಿ ಮಾಡಿರುತ್ತಾರೆ. ಇವು ಕರಾವಳಿಯಿಂದ ದೂರವಿದ್ದು ಪೂರ್ಣ ಸಮಭೂಮಿಯಾಗಿರುವುದಿಲ್ಲ. ಆ ಎರಡು ಜಿಲ್ಲೆಗಳ ಲ್ಲಿಯೂ ಕೆಲಕಡೆ ಮಲೆಗಳೂ ಕೆಲಕಡೆ ಸಮಭೂಮಿಗಳೂ ಇರುತ್ತವೆ. ತಂಜಾ ವೂರು ಜಿಲ್ಲೆಯ ಪಶ್ಚಿಮಕ್ಕಿರುವ ತಿರುಚಿನಾಪಳ್ಳಿ ಎಂಬ ಜಿಲ್ಲೆಯು ಸಮುದ್ರ ಕರಾವಳಿಯಿಂದ ಸ್ವಲ್ಪ ದೂರದಲ್ಲಿದೆ. ಪಟವನ್ನು ಚೆನ್ನಾಗಿ ನೋಡಿ ಉತ್ತರ ಆರ್ಕಾಡು, ದಕ್ಷಿಣ ಆರ್ಕಾಡು, ತಿರುಚಿನಾಪಳ್ಳಿ ಎಂಬ ಜಿಲ್ಲೆಗಳನ್ನು ಕಂಡು ಹಿಡಿದು, ಆ ಜಿಲ್ಲೆಗಳ ಇನ್ನೂ ಪಶ್ಚಿಮಕ್ಕಿರುವ ಸೇಲಂ ಮತ್ತು ಕೊಯ ಮುತ್ತೂರು ಜಿಲ್ಲೆಗಳನ್ನು ಗೊತ್ತು ಮಾಡಿಕೊಳ್ಳಿರಿ. ಸೇಲಂ ಕೊಯಮುತ್ತೂರು ಜಿಲ್ಲೆಗಳು ಮಲೆನಾಡುಗಳಿಂದಲೂ ಅಲ್ಲಲ್ಲಿ ಪೀಠಭೂಮಿಗಳಿಂದಲೂ ತುಂಬಿ ಹೋಗಿವೆ.

ಪೂರ್ವಕರಾವಳಿಯ ಉತ್ತರದಲ್ಲಿಯೂ ಮಧ್ಯದಲ್ಲಿಯೂ ಇರುವ ಜಿಲ್ಲೆ ಗಳನ್ನು ಹೇಳಿದ್ದಾಯಿತು. ರಾಮನಾಡು ಮತ್ತು ತಿರುನೇಲ್ವೇಲಿ ಎಂಬ 2 ಜಿಲ್ಲೆಗಳು ಪೂರ್ವಕರಾವಳಿಯ ದಕ್ಷಿಣಕ್ಕಿರುವ ಜಿಲ್ಲೆಗಳು. ರಾಮನಾಡಿನ ವಾಯವ್ಯದಲ್ಲಿರುವ ಮಧುರೆ ಜಿಲ್ಲೆಯು ಸಮುದ್ರದಿಂದ ದೂರವಾಗಿದೆ. ರಾಮ ನಾಡು, ತಿರುನೇಲ್ವೇಲಿ ಮತ್ತು ಮಧುರೆ ಇವು ಮೂರು ತಂಜಾವೂರು ಜಿಲ್ಲೆಯ ದಕ್ಷಿಣಕ್ಕಿವೆ. ಪಶ್ಚಿಮಕರಾವಳಿಯಲ್ಲಿ ಮಲಬಾರು ಮತ್ತು ದಕ್ಷಿಣ ಕನ್ನಡ ಎಂಬೀ 2 ಜಿಲ್ಲೆಗಳಿವೆ. ಮಲಬಾರು ಜಿಲ್ಲೆಯ ಪೂರ್ವಕ್ಕೆ ಕೊಯಮುತ್ತೂರು

ಜಿಲ್ಲೆ ಇದೆ; ಮಲಬಾರು ಜಿಲ್ಲೆಯ ಪಶ್ಚಿಮಕ್ಕಿರುವ ನೀಲಗಿರಿ ಎಂಬ ಸಣ್ಣ ಜಿಲ್ಲೆಯು ತೀರಾ ಮಲೆನಾಡಾಗಿದೆ.

ದಕ್ಷಿಣ ಪೀಠಭೂಮಿಯಲ್ಲಿರುವ ಕಡಪ, ಕರ್ನೂಲು, ಅನಂತಪುರ ಮತ್ತು ಬಳ್ಳಾರಿ ಎಂಬೀ ನಾಲ್ಕು ಜಿಲ್ಲೆಗಳು ಸಮುದ್ರದಿಂದ ಬಹು ದೂರವಾಗಿವೆ.

ಇದುವರೆಗೆ ಹೇಳಿದ 25 ಜಿಲ್ಲೆಗಳಲ್ಲದೆ ಅಂಜಿತೆಂಗ್ ಅಥವಾ ಅಂಜೆಂಗಾವ್ ಎಂಬ ಸಣ್ಣ ಜಿಲ್ಲೆಯೊಂದು ಪಶ್ಚಿಮಕರಾವಳಿಯಲ್ಲಿ ತಿರುವಾಂಕೂರು ಸೀಮೆಯ ಉತ್ತರದಲ್ಲಿದೆ.

ಈಗ ಪಟವನ್ನು ಚೆನ್ನಾಗಿ ನೋಡಿ, ಒಂದೊಂದು ಜಿಲ್ಲೆಯಲ್ಲಿಯೂ ಹರಿಯುವ ಮುಖ್ಯವಾದ ನದಿಗಳು ಯಾವುವು ಎಂಬುದನ್ನು ಕಂಡುಹಿಡಿಯೋಣ. ಗೋದಾವರಿನದಿಯು ಗೋದಾವರಿ ಜಿಲ್ಲೆಯಲ್ಲಿಯೂ; ಕೃಷ್ಣಾನದಿಯು ಕೃಷ್ಣಾ ಮತ್ತು ಗುಂಟೂರು ಜಿಲ್ಲೆಗಳಲ್ಲಿಯೂ; ಬಡಗು ವೆಣ್ಣಾರು ಹೊಳೆಯು ಅನಂತಪುರ, ಕಡಪಾ, ನೆಲ್ಲೂರು ಜಿಲ್ಲೆಗಳಲ್ಲಿಯೂ; ಪಾಲಾರು ಹೊಳೆಯು ಉತ್ತರ ಆರ್ಕಾಡು ಚೆಂಗಲ್ಪಟ್ಟು ಜಿಲ್ಲೆಗಳಲ್ಲಿಯೂ; ತೆಂಕು ವೆಣ್ಣಾರು ಹೊಳೆಯು ಸೇಲಂ ದಕ್ಷಿಣ ಆರ್ಕಾಡು ಜಿಲ್ಲೆಗಳಲ್ಲಿಯೂ ಹರಿದುಹೋಗುತ್ತವೆ. ಕಾವೇರಿ ನದಿಯು ಸೇಲಂ ಮತ್ತು ಕೊಯಮುತ್ತೂರು ಜಿಲ್ಲೆಗಳ ಮೇರೆಯಾಗಿ ಹರಿದು, ತಿರುಚಿನಾಪಳ್ಳಿ ತಂಜಾವೂರು ಜಿಲ್ಲೆಗಳನ್ನು ದಾಟಿ, ಸಮುದ್ರಕ್ಕೆ ಕೂಡುತ್ತದೆ. ತಾಮ್ರಪರ್ಣಿಯು ತಿರುನೇಲ್ವೇಲಿಯಲ್ಲಿ ಹರಿಯುವ ಮುಖ್ಯವಾದ ನದಿ.

ಮದ್ರಾಸ ಸಂಸ್ಥಾನದಲ್ಲಿ ಪಶ್ಚಿಮಕರಾವಳಿಯ ಮೇಲೆ ಮಳೆ ಚೆನ್ನಾಗಿ ಹೊಯ್ಯುತ್ತದೆ; ಇತರ ಪ್ರದೇಶಗಳಲ್ಲಿ ಮಳೆ ಕಡಮೆ. ಮದ್ರಾಸ ಪಟ್ಟಣದಲ್ಲಿ ಬೀಳುವ ಮಳೆ 50 ಇಂಚಿಗಿಂತ ಅಧಿಕವಾಗಿರುವುದಿಲ್ಲ, ಮತ್ತು ಇಷ್ಟು ಮಳೆಯೆಲ್ಲಾ ಒಂದೇ ಮಾಸದ ಅವಧಿಯಲ್ಲಿ ಸುರಿಯುತ್ತದೆ. ಮಳೆ ಕಡಮೆಯಾದ ಪ್ರದೇಶಗಳಲ್ಲಿ ಮಳೆನೀರನ್ನು ಕೃಷಿಗಾಗಿ ಕಟ್ಟಿ ಶೇಖರಿಸುವುದುಂಟು; ಹೀಗೆ ಕಟ್ಟಿದ ನೀರನ್ನು ಗದ್ದೆಗಳಿಗೆ ಹಾಯಿಸಿ ಸಾಗುವಳಿ ಮಾಡುವರು. ಮಳೆ ಸುರಿಯದ ಕಾಲದಲ್ಲಿ ಈ ನೀರೇ ಅಂಥಾ ಸ್ಥಳದಲ್ಲಿ ಕೃಷಿಗೆ ಆಧಾರವಾಗಿದೆ.

ಹೊಳೆಗಳ ಸುತ್ತಮುತ್ತಲಿರುವ ಭಾಗಗಳನ್ನು ಫಲವತ್ತಾಗಿ ಮಾಡುವುದಕ್ಕೋಸ್ಕರ ಅವುಗಳಿಗೆ ಅಣೆಗಳನ್ನು ಕಟ್ಟಿ, ಕಾಲುವೆಗಳ ಮೂಲಕವಾಗಿ ನೀರನ್ನು ಸಾಗಿಸುತ್ತಾರೆ. ಇಂಥ ಕಾಲುವೆಗಳು ಮೊದಲು ಮೊದಲು ಅಗಲವಾಗಿದ್ದು ಅಲ್ಲಲ್ಲಿ ಹಲವು ಶಾಖೋಪಶಾಖೆಗಳು ಹೊರಟು ಬೇರೆ ಬೇರೆ ಪ್ರದೇಶಗಳಿಗೆ

ನೀರನ್ನು ತಿದ್ದಿಕೊಂಡು ಹೋಗುವುದರಿಂದ, ಆ ಶಾಖೆಗಳು ಕ್ರಮೇಣ ಸಣ್ಣ ಸಣ್ಣ ತೋಡುಗಳಾಗಿ ಪರಿಣಮಿಸುತ್ತವೆ. ಇಂಥ ಕಾಲುವೆಗಳೂ ತೋಡುಗಳೂ ಡೆಲ್ಟಾಗಳನ್ನು ದಾಟಿಹೋಗುವುದೂ ಉಂಟು. ಗೋದಾವರಿನದಿಯ ನೀರನ್ನು ಈ ಪ್ರಕಾರವಾಗಿ ಸಾಗಿಸಿಕೊಂಡು ಹೋಗುವುದಕ್ಕೆ ಮಾಡಿದ ತೋಡುಗಳನ್ನು ಸಾಲಾಗಿಟ್ಟರೆ, ಸುಮಾರು ಎರಡು ಸಾವಿರ ಮೈಲು ಉದ್ದವಾಗಬಹುದು. ಆ ನದಿಯ ಕಾಲುವೆಯಲ್ಲಿ ಸಣ್ಣ ಹಡಗುಗಳೂ ದೊಡ್ಡ ದೋಣಿಗಳೂ ಸುಮಾರು 500 ಮೈಲು ದೂರಕ್ಕೆ ಓಡಾಡುತ್ತವೆ. ಕೃಷ್ಣಾನದಿಯ ಕಾಲುವೆಗಳ ಒಟ್ಟು ಉದ್ದವು ಸುಮಾರು 370 ಮೈಲು; ದೋಣಿಗಳೂ ಮಂಜಿಗಳೂ 300 ಮೈಲು ದೂರ ಅಡ್ಡಾಡುತ್ತಿವೆ. ಕಾವೇರಿನದಿಯ ನೀರನ್ನು ಕೃಷಿಗಾಗಿ ಉಪಯೋಗಿಸುವುದಕ್ಕೆ ಪೂರ್ವಕಾಲದ ಅರಸರು ಹಲವು ಏರ್ಪಾಡುಗಳನ್ನು ಮಾಡಿದ್ದರೆಂದು ತಿಳಿಯಬಂದಿದೆ. ಆ ಕಾಲದಲ್ಲಿಯೂ ಅದರಿಂದ ಬೇಕಾದಷ್ಟು ನೀರನ್ನು ಜಮೀನಿನ ಸಾಗುವಳಿಗೆ ಪಡೆಯುತಿದ್ದರು. ಈಗ ಅದರ ನೀರಿನ ಸಹಾಯದಿಂದ ಸುಮಾರು ಹತ್ತು ಲಕ್ಷ ಎಕ್ರೆಗಿಂತ ವಿಸ್ತಾರವಾದ ಜಮೀನನ್ನು ಸಾಗುಮಾಡುತ್ತಾರೆ. ಕೃಷ್ಣಾನದಿಗೆ ಸಂಗಮವಾಗುವ ತುಂಗಭದ್ರಾನದಿಯಿಂದ ಕಡಿದ ಕಾಲುವೆಯು ಸುಮಾರು 190 ಮೈಲು ಉದ್ದವಿದ್ದು, ಕಡಪಾ ಕರ್ನೂಲು ಜಿಲ್ಲೆಗಳನ್ನು ದಾಟಿಹೋಗುತ್ತದೆ. ಮೇಲೆ ಹೇಳಿದ ಇತರ ಕಾಲುವೆಗಳಂತೆ ತುಂಗಭದ್ರೆಯ ಕಾಲುವೆಯು ಕೃಷಿಗೆ ಅಷ್ಟೊಂದು ಉಪಯುಕ್ತವಲ್ಲದಿದ್ದರೂ, ಬರಬಿದ್ದು ದವಸಧಾನ್ಯಗಳು ತುಟ್ಟಿಯಾಗುವ ಕಾಲದಲ್ಲಿ ಸರಕುಗಳನ್ನು ಬೇರೆ ಬೇರೆ ಕಡೆಗಳಿಂದ ಸಾಗಿಸುವುದಕ್ಕೆ ಬಹಳಮಟ್ಟಿಗೆ ಸಹಾಯಕವಾಗಿದೆ.

ಕೃಷಿಭೂಮಿ.—ಕೃಷಿಗೆ ಬೇಕಾದ ನೀರನ್ನು ಇನ್ನೊಂದು ವಿಧವಾಗಿ ಒದಗಿಸಿಕೊಳ್ಳುವುದುಂಟು. ಎತ್ತರ ನೆಲದ ಮೇಲೆ ಬಿದ್ದ ಮಳೆಯ ನೀರನ್ನು ಹರಿಯಬಿಡದೆ, ತಗ್ಗು ಸ್ಥಳದಲ್ಲಿ ನಾಲ್ಕು ಕಡೆ ಕಲ್ಲುಮಣ್ಣಿನಿಂದ ಎತ್ತರಿಸಿ ಗಟ್ಟಿಯಾಗಿಯೂ ಗಾತ್ರವಾಗಿಯೂ ಇರುವ ಕಲ್ಲುಗೋಡೆಗಳನ್ನು ಕಟ್ಟಿ, ಈ ಆವರಣದ ಒಳಗೆ ಆ ನೀರನ್ನು ಸಂಗ್ರಹಿಸುವರು. ಇದಕ್ಕೆ 'ಏರಿ' ಎಂದು ಹೆಸರು. ಏರಿಯು ಸಣ್ಣದಾಗಿದ್ದರೆ, ಅಲ್ಲಲ್ಲಿ ಏತಗಳನ್ನು ಹಾಕಿ ಅವುಗಳ ಮೂಲಕವಾಗಿ ನೀರನ್ನು ಸಣ್ಣ ತೋಡುಗಳಲ್ಲಿ ಹಾಯಿಸಿ, ಬೇಕಾದ ಕಡೆಗೆ ಅದನ್ನು ಸಾಗಿಸುವರು. ದೊಡ್ಡ ಏರಿಗಳ ಗೋಡೆಗಳಲ್ಲಿ ಬೇಕೆಂತ ಮಾಡಿದ

ಬಿರುಕುಗಳು ಇವೆ. ಅವನ್ನು ಮುಚ್ಚುವುದಕ್ಕೂ ತೆರೆಯುವುದಕ್ಕೂ ಹಾಳಿತವಾದ ಕದಗಳಿವೆ. ಕದಗಳನ್ನು ತೆರೆದುಬಿಟ್ಟರೆ ನೀರು ಕೆಳಕ್ಕೆ ಇಳಿದು ಸಣ್ಣ ತೋಡುಗಳಲ್ಲಿ ಹರಿಯುವುದು. ಏರಿಗೆ ತಕ್ಕದಾದ ಗೋಡೆಗಳನ್ನು ಎಬ್ಬಿಸುವುದಕ್ಕೆ ಬದಲಾಗಿ ಕೆಲವೊಂದು ಕಡೆಗಳಲ್ಲಿ ಹದವಾದ ದಿನ್ನೆಗಳೊ ಮೊರಡಿಗಳೊ ಇದ್ದರೆ, ಅವನ್ನೇ ಆ ಏರಿಯ ಭಿತ್ತಿಗಳನ್ನಾಗಿ ಮಾಡಿಕೊಳ್ಳುವುದೂ ಉಂಟು. ಏರಿಗಳು ತಗ್ಗಿನಲ್ಲಿರುವುದರಿಂದ ಅವುಗಳ ಸುತ್ತಲು ಮಲೆಗಳಲ್ಲಿಯೂ ಗುಡ್ಡಗಳಲ್ಲಿಯೂ ಬೀಳುವ ಮಳೆಯ ನೀರು ಕೆಳಕ್ಕೆ ಇಳಿದು ಈ ಏರಿಗಳಲ್ಲಿ ತುಂಬಿಕೊಳ್ಳುತ್ತದೆ. ದಕ್ಷಿಣ ಪೀಠಭೂಮಿಯಲ್ಲಿ ಈ ಬಗೆಯ ಏರಿಗಳು ಅನೇಕವಾಗಿವೆ. ಮದ್ರಾಸ ಸಂಸ್ಥಾನದಲ್ಲಿ ಹೆಚ್ಚುಕಡಮೆ 3,200 ಇವೆ. ಕರ್ನೂಲ ಜಿಲ್ಲೆಯಲ್ಲಿಯ ಕಂಬಂ ಕೆರೆಯನ್ನು ಜಮದಗ್ನಿ ಮಹಾಋಷಿಯು ಮಾಡಿದನೆಂದು ಪ್ರಸಿದ್ಧವಾಗಿದೆ. ಇವುಗಳಲ್ಲಿ ಅತಿ ವಿಸ್ತಾರವಾದದ್ದು ಚಿತ್ತೂರ ಜಿಲ್ಲೆಯೊಳಗಿನ ವೀರಾಣತ್‍ಕೆರೆ. ಇದರ ಸುತ್ತಳತೆ ಸುಮಾರು 12 ಮೈಲು ಇದೆ. ಕೃಷಿಗಾಗಿ ಮಾಡಿದಂಥ ಏರಿಗಳು ದಕ್ಷಿಣ ಕನ್ನಡ ಜಿಲ್ಲೆಯಲ್ಲಿಲ್ಲ. ಇಲ್ಲಿಯ ಮಣ್ಣಿನಲ್ಲಿ ನೀರು ಬಹು ಬೇಗನೇ ಇಂಗಿಹೋಗುತ್ತದೆ. ಪೂರ್ವಭಾಗದಲ್ಲಿರುವ ಮಣ್ಣಿನಲ್ಲಿ ನಿಲ್ಲುವಂತೆ ನೀರು ಬಹು ಕಾಲದ ವರೆಗೆ ಇಲ್ಲಿ ನಿಲ್ಲುವುದಿಲ್ಲ.

ಕಾಲುವೆಗಳಿಗೂ ತೋಡುಗಳಿಗೂ ಏರಿಗಳಿಗೂ ತಗಲುವಷ್ಟು ಖರ್ಚು ಬಾವಿಗಳನ್ನು ತೋಡುವುದಕ್ಕೆ ಮುಟ್ಟುವುದಿಲ್ಲ. ಕೃಷಿಗಾಗಿ ರೈತರು ಬಾವಿಗಳನ್ನು ತೋಡುವುದಾದರೆ ಅದಕ್ಕಾಗಿ ಸರಕಾರದವರು ಮುಂಗಡವಾಗಿ ಸಾಲ ಕೊಟ್ಟು ಸಹಾಯ ಮಾಡುತ್ತಾರೆ. ಅನೇಕ ಕಡೆಗಳಲ್ಲಿ ಹೀಗೆ ಬಾವಿಗಳನ್ನು ತೋಡಿ ಏತಗಳನ್ನು ಹಾಕಿ ಜಮೀನನ್ನು ಸಾಗುಮಾಡಿದ್ದಾರೆ. ಏತದ ಮೂಲಕ ನೀರನ್ನು ಎತ್ತಿಕೊಳ್ಳುವುದು ನೋಡುವುದಕ್ಕೆ ಒಂದು ವಿಚಿತ್ರವಾದ ನೋಟ.

ಉತ್ಪತ್ತಿಗಳು.—ಆಹಾರವು ಮನುಷ್ಯನಿಗೆ ಅತ್ಯಾವಶ್ಯಕ ಎಂದು ಹೇಳಬೇಕಾಗಿಲ್ಲ. ಬಹು ಪುರಾತನ ಕಾಲದಲ್ಲಿ ಜನಗಳು ಮೃಗಬೇಟೆಯಿಂದಲೊ ಮೀನುಬೇಟೆಯಿಂದಲೊ ಜೀವಿಸುತಿದ್ದರು. ಈಗಲೂ ಈ ವೃತ್ತಿಗಳಿಂದಲೇ ಜೀವಿಸುವವರು ಇದ್ದಾರೆ. ಬರಬರುತ್ತಾ ಮನುಷ್ಯನು ಆಡು, ಎತ್ತು, ಕುದುರೆ ಮುಂತಾದ ದನಕರುಗಳ ಪ್ರಯೋಜನಗಳನ್ನು ಕಂಡುಹಿಡಿದು, ಅವನ್ನು ಸಾಕತೊಡಗಿ ಅವುಗಳ ಮೇವಿಗಾಗಿ ಅಲೆಯುತ್ತಾ ಪಶುಪಾಲನದಿಂದ ಜೀವಿಸ

ತೊಡಗಿದರು. ಕ್ರಮೇಣ ಕಂಡಕಡೆ ಅಲೆಯುವುದಕ್ಕೆ ಬದಲಾಗಿ ತಮ್ಮ ಆಹಾರಕ್ಕೆ ಬೇಕಾದ ಗೆಡ್ಡೆಗೆಣಸುಗಳನ್ನೂ ದವಸಧಾನ್ಯಗಳನ್ನೂ ಬಿತ್ತಿ ಬೆಳೆಯಹತ್ತಿದರು. ಸಾಗುವಳಿಗೆ ತಕ್ಕದಾದ ಮಣ್ಣು ತಗ್ಗುಗಳಲ್ಲಿ ಸರ್ವಸಾಧಾರಣವಾಗಿ ಇರುವುದರಿಂದ ಅವರು ಅಲ್ಲಿಯೇ ನೆಲೆನಿಂತರು. ಅವರು ಎಲ್ಲೆಲ್ಲಿ ನಡುತ್ತಾ ಇದ್ದರೊ ಆ ಸ್ಥಳಗಳೆಲ್ಲ ನಾಡುಗಳಾದವು.

ನೀರು, ಮಣ್ಣು, ಗೊಬ್ಬರ. -- ಇವು ಮೂರು ಕೃಷಿಗೆ ಆವಶ್ಯಕವಾಗಿವೆ. ಕೆಲವು ಕಡೆ ಜಮೀನಿನ ಮಣ್ಣು ಫಲವತ್ತಾಗಿದೆ; ಕೆಲವೊಂದು ಕಡೆ ಮಣ್ಣಿನಲ್ಲಿ ಸಾರವಿರುವುದಿಲ್ಲ. ಸಾರವತ್ತಾದ ಮಣ್ಣೂ ನೀರಿನ ಆಶ್ರಯವೂ ಇರುವ ಸ್ಥಳವನ್ನು ತರೀಜಮೀನು ಎನ್ನುವರು. ಜಮೀನು ಹೊಳೆಯ ಹತ್ತಿರವಿದ್ದರೆ ಕೃಷಿಗೆ ಬೇಕಾದ ನೀರು ಸುಲಭವಾಗಿ ದೊರೆಯಬಹುದು. ನೆರೆ ಇಳಿದ ಬಳಿಕ ನಿಂತ ಗೋಡೂ ದನಕರುಗಳ ಸೆಗಣಿಗಂಜಳಗಳೂ ಕೃಷಿಗೆ ಒಳ್ಳೆಯ ಗೊಬ್ಬರಗಳು.

ಎಲ್ಲಾ ತರದ ದವಸಧಾನ್ಯಗಳು ಒಂದೇ ಕಡೆಯಲ್ಲಿ ಬೆಳೆಯುವುದು ಅಪರೂಪವಾಗಿದೆ. ಬತ್ತವು ಎಲ್ಲಾ ಕಡೆಗಳಲ್ಲಿ ಬೆಳೆಯಲಾರದು. ಅದು ಉಷ್ಣಪ್ರದೇಶಗಳಲ್ಲಿ ನೀರಿನ ಸಮೃದ್ಧಿ ಇದ್ದಲ್ಲಿ ಚೆನ್ನಾಗಿ ಬೆಳೆಯುತ್ತದೆ. ಇದರ ಸಾಗುವಳಿಯು ನಮ್ಮ ಸಂಸ್ಥಾನದಲ್ಲಿ ಮಳೆಯ ನೀರು ಇಲ್ಲವೆ ಕೆರೆ ಕಾಲುವೆಗಳ ನೀರು ಬೇಕಾದಷ್ಟು ದೊರೆಯುವ ಸ್ಥಳಗಳಲ್ಲಿ ಮಾತ್ರ ಹೆಚ್ಚಾಗಿ ನಡೆಯುತ್ತದೆ. ಇಂಥಾ ಸ್ಥಳಗಳಲ್ಲಿ ಕಬ್ಬಿನ ಕೃಷಿಯೂ ಅಧಿಕವಾಗಿದೆ. ಕಬ್ಬಿನಿಂದ ಬೆಲ್ಲ, ಸಕ್ಕರೆ, ಕಲ್ಲುಸಕ್ಕರೆ, ಇವನ್ನು ಮಾಡುತ್ತಾರೆಂದು ನಿನಗೆ ಹೇಳಬೇಕೆಂದು ಇಲ್ಲವಷ್ಟೆ.

ಗೋದಿಯು ಶೀತಪ್ರದೇಶಗಳಲ್ಲಿಯೇ ಬೆಳೆಯತಕ್ಕ ಒಂದು ಧಾನ್ಯವು; ಉಷ್ಣ ಸಮಭೂಮಿಗಳಲ್ಲಿ ಅದು ಬೆಳೆಯಲಾರದು. ಕರಾವಳಿಯಿಂದ ದೂರ ಸಾಕಷ್ಟು ಎತ್ತರದ ಪೀಠಭೂಮಿಗಳು ತಣ್ಣಗಿರುವುದರಿಂದ ಅಲ್ಲಿ ಗೋದಿಯನ್ನು ಪೈರು ಮಾಡುತ್ತಾರೆ.

ಕಂಬು, ಜೋಳ, ರಾಗಿ ಮೊದಲಾದುವುಗಳ ಬೆಳೆಗೆ ಬತ್ತದಷ್ಟು ನೀರು ಬೇಕಾಗಿಲ್ಲ. ಅವನ್ನು ಮಳೆಯ ನೀರಿನಿಂದಲೇ ಕೃಷಿ ಮಾಡುವುದು ಬಹು ಕಡಮೆ, ಅಂದರೆ, ಅವನ್ನು ಖುಷ್ಕೀ ಪೈರಾಗಿ ಬೆಳೆಯುತ್ತಾರೆ. ಅಧಿಕವಾದ ಮಳೆಯು ಇವುಗಳ ಬೆಳೆವಣಿಗೆಗೆ ಹಾನಿಕರ. ಆದುದರಿಂದ ಇವನ್ನು ಈ



ಗೋದಿ.



ಕಂಬು.

ಸಂಸ್ಥಾನದಲ್ಲಿ ಮಳೆ ಕಡಮೆಯಾದ ಜಿಲ್ಲೆಗಳಲ್ಲಿಯೇ ವಿಶೇಷವಾಗಿ ಪೈರು ಮಾಡುತ್ತಾರೆ. ಪಶ್ಚಿಮಕರಾವಳಿಯ ಜನಗಳಿಗೆ ಅಕ್ಕಿ ಹೇಗೋ ಹಾಗೆಯೇ ಅಲ್ಲಿಯ ಜನಗಳಿಗೆ ಈ ಧಾನ್ಯಗಳು.



ಚಹಾ.



ಜೋಳ.



ಕಾಫಿ.



ಸೆಣಬು.

ಮೇಲೆ ಹೇಳಿದ ಧಾನ್ಯಗಳಲ್ಲದೆ ಬಗೆಬಗೆಯ ಎಣ್ಣೆಬೀಜಗಳನ್ನೂ ಪೈರು ಮಾಡುವುದುಂಟು. ಆದರೆ ಆ ಬೀಜಗಳನ್ನು ಆಹಾರಕ್ಕಾಗಿ ಉಪಯೋಗಿಸುವುದಿಲ್ಲ. ಅವುಗಳಿಂದ ತೆಗೆದ ಎಣ್ಣೆಯೂ ಎಣ್ಣೆ ತೆಗೆದ ಮೇಲೆ ನಿಂತ

ಹಿಂಡಿಯೂ ನಮಗೆ ಉಪಯೋಗವಾಗಿವೆ. ಇಂಥ ಎಣ್ಣೆಬೀಜಗಳಲ್ಲಿ ಇಲ್ಲಿ ಮುಖ್ಯವಾದ ನೆಲಗಡಲೆಯು ಪೂರ್ವಸಮಭೂಮಿಯ ಜಮೀನುಗಳಲ್ಲಿ ಕುಷ್ಕಿಯ ಪೈರಾಗಿದೆ. ಹೀಗೆ ಪೈದಾಸ್ತು ಆದ ನೆಲಗಡಲೆಯನ್ನು ಅನ್ಯದೇಶಗಳಿಗೂ ಈ ದೇಶದಲ್ಲಿಯ ಬೇರೆಬೇರೆ ಊರುಗಳಿಗೂ ಕಳುಹಿಸುತ್ತಾರೆ. ನೆಲಗಡಲೆಯ ಹೊರತು ಇಲ್ಲಿಯ ಇತರ ಎಣ್ಣೆಯ ಬೀಜಗಳು ಯಾವವೆಂದರೆ—ಎಳ್ಳು ಮತ್ತು ಹರಳು. ಪಶ್ಚಿಮಕರಾವಳಿಯವರು ದಿನಚರ್ಯದಲ್ಲಿ ಉಪಯೋಗಿಸುವ ತೆಂಗಿನ ಎಣ್ಣೆಯು ತೆಂಗಿನ ಕಾಯಿಯಿಂದ ದೊರಕುತ್ತದೆ. ತೆಂಗಿಗೆ ನೀರು ಧಾರಾಳವಾಗಿ ಬೇಕಾಗುವುದರಿಂದಲೂ, ಅದಕ್ಕೆ ಉಪ್ಪು ಒಳ್ಳೆಯ ಗೊಬ್ಬರವಾಗಿರುವುದರಿಂದಲೂ, ಅದು ಕರಾವಳಿಯ ಮರಳುಪ್ರದೇಶಗಳಲ್ಲಿ ಚೆನ್ನಾಗಿ ಬೆಳೆದು ಬೇಗನೆ ಕಾಯಿ ಬಿಡುತ್ತದೆ.

ಈ ಸಂಸ್ಥಾನದಲ್ಲಿ ತಿನ್ನತಕ್ಕ ಹಣ್ಣುಹಂಪಲುಗಳಲ್ಲಿ ಮುಖ್ಯವಾದುವು—ಬಾಳೆ, ಮಾವು, ಹಲಸು. ಇವುಗಳಲ್ಲಿ ಮೊದಲಿನ ಎರಡು ಸರ್ವಸಾಧಾರಣವಾಗಿ ಎಲ್ಲೆಲ್ಲಿಯೂ ಬೆಳೆಯುತ್ತವೆ. ಹಲಸು ಪಶ್ಚಿಮಕರಾವಳಿಯ ಜಿಲ್ಲೆಗಳಲ್ಲಿ ಹುಲುಸಾಗಿ ಬೆಳೆಯುತ್ತದೆ. ವೀಳ್ಯದ ಎಲೆಯೊಂದಿಗೆ ಜಗಿಯುವ ಅಡಕೆಯು ನೀರಿನ ಆಶ್ರಯವಿರುವ ತಗ್ಗುಪ್ರದೇಶಗಳಲ್ಲಿ ಬೆಳೆಯುತ್ತದೆ. ಹಸಿ ಅಡಕೆ, ಹಣ್ಣು ಅಡಕೆ, ಹಸಿ ಕೊಯ್ದು ಬೇಯಿಸಿದ ಚೂರು ಅಡಕೆ, ಒಣಗಿಸಿದ ಗೋಟು ಅಡಕೆ, ನೀರಿನಲ್ಲಿ ಹಾಕಿಟ್ಟ ನೀರು ಅಡಕೆ—ಹೀಗೆ ಅಡಕೆಯನ್ನು ವೀಳ್ಯದೊಂದಿಗೆ ನಾನಾ ರೂಪದಲ್ಲಿ ಜಗಿಯುತ್ತಾರೆ. ವೀಳ್ಯದೊಂದಿಗೆ ಜನರು ಅಗಿಯುವ ಇನ್ನೊಂದು ವಸ್ತುವು ಹೊಗೆಸೊಪ್ಪು. ಇದು ಈ ಸಂಸ್ಥಾನದಲ್ಲಿ ಅಲ್ಲಲ್ಲಿ ಕೃಷಿಯಾಗುತ್ತದೆ.

ಕಾಫಿಗಿಡವೂ ತೇಗಿಡವೂ ಸಮಭೂಮಿಯಲ್ಲಿ ಚೆನ್ನಾಗಿ ಬೆಳೆಯುವುದಿಲ್ಲ. ಅವನ್ನು ಮಲೆನಾಡುಗಳಲ್ಲಿ ಬೆಳಿಸುತ್ತಾರೆ. ಮಲೆನಾಡುಗಳಲ್ಲಿ ಬೆಳೆಯುವ 'ಸಿಂಕೋನಾ' ಎಂಬ ಮರದ ತೊಗಟೆಯಿಂದ ತೆಗೆಯುವ 'ಕ್ವಿನೀನು' ಪುಡಿಯು ಮಲೆಜ್ವರಕ್ಕೆ ಉತ್ತಮ ಔಷಧವಾಗಿದೆ.

ಹುಳಿ, ಸುಂಟಿ, ನೀರುಳ್ಳಿ, ಬೆಳ್ಳುಳ್ಳಿ, ದಾಲಚೀನಿ, ಲವಂಗ, ಸಾಸಿವೆ, ಕರಿಮೆಣಸು ಮೊದಲಾದ ಸಂಬಾರಜೀನಸುಗಳಲ್ಲಿ ಕರಿಮೆಣಸು ಮಾತ್ರವೇ ಈ ಸಂಸ್ಥಾನದಲ್ಲಿ ಬೆಳೆಯುತ್ತದೆ. ಇದನ್ನು ಮಲಬಾರು ಕರಾವಳಿಯಲ್ಲಿ ಪೈರು ಮಾಡುತ್ತಾರೆ.

ಮೇಲೆ ವಿವರಿಸಿದುವಲ್ಲದೆ ಮನುಷ್ಯನಿಗೆ ಆವಶ್ಯಕವಾದ ಇನ್ನೂ ಅನೇಕ ವಸ್ತುಗಳಲ್ಲಿ ಕೆಲವು ಕಾಡುಗಳಲ್ಲಿ ಮಾತ್ರ ದೊರೆಯುತ್ತವೆ. ಪಶ್ಚಿಮಘಟ್ಟಗಳ ಮತ್ತು ಪೂರ್ವಘಟ್ಟಗಳ ಮಲೆಗಳಲ್ಲಿಯ ಹಲವು ಕಾಡುಗಳಲ್ಲಿ ಬೇರೆಬೇರೆ ಜಾತಿಯ ಕಾಡುಮರಗಳು ಇವೆ. ಮಾವು, ಹಲಸು, ತಾಳೆ ಮೊದಲಾದ ನಾಡುಮರಗಳು ಮನೆ ಕಟ್ಟುವುದಕ್ಕೆ ಬರುತ್ತವಾದರೂ ತೇಗ, ಕರಿಮರ, ಬೀಟಿ, ಕಲ್ಬಾಗಿ, ಜೆಂಮರ, ಬೆಂಟೀಕ್, ಮರುವ, ಅಗಿಲುಗಂಧ, ಬೇಂಗ ಮೊದಲಾದ ಕಾಡುಮರಗಳಷ್ಟು ಅವು ಬಾಳಿಕೆಗೆ ಬರುವುದಿಲ್ಲ; ಅವುಗಳಷ್ಟು ಬೆಲೆ ಬಾಳುವುದೂ ಇಲ್ಲ. ಬಿದಿರಹಿಂಡಿಲುಗಳು ಅಲ್ಲಲ್ಲಿ ಕಣ್ಣಿಗೆ ಬೀಳುತ್ತವಾದರೂ ಅವು ದೊಡ್ಡ ಕಾಡುಗಳಲ್ಲಿದ್ದಷ್ಟು ಚೆನ್ನಾಗಿ ಇತರ ಕಡೆಗಳಲ್ಲಿ ಬೆಳೆಯುವುದಿಲ್ಲ. ಕಾಡುಗಳಿಂದ ನಮಗೆ ದೊರಕುವುದು ಮರಮೋಪು ಮಾತ್ರವೇ ಅಲ್ಲ; ಅಣಿಲೆ, ನೆಲ್ಲಿ, ಸೀಗೆ ಮೊದಲಾದ ಕಾಯಿಗಳು, ಔಷಧಕ್ಕೆ ಉಪಯೋಗವಾದ ಬೇರೆಬೇರೆ ಮರಗಳ ತೊಗಟೆ, ಬೀಜ, ಬೇರು, ಎಲೆ ಮೊದಲಾದುವುಗಳು, ಹುಳುಗಳಿಂದ ಸಿಕ್ಕುವ ಜೇನುತುಪ್ಪ, ಜೇನುಮಯಣ; ಅಷ್ಟೇ ಅಲ್ಲ, ಬಣ್ಣಕ್ಕೆ ಬೇಕಾದ ಬೀಜಗಳು, ಕಟ್ಟುವುದಕ್ಕೆ ನಾರುಗಳು, ಇವೆಲ್ಲ ಕಾಡುಗಳಲ್ಲಿ ಸಿಗುತ್ತವೆ. ಕಾಡುಗಳು ಹಬ್ಬಿರುವ ಸ್ಥಳಗಳಲ್ಲಿ ಚೆನ್ನಾಗಿ ಮಳೆ ಹೊಯ್ಯುವುದರಿಂದ ದನಕರುಗಳಿಗೆ ಮೇಯತಕ್ಕ ಹುಲ್ಲುಗಾವಲುಗಳು ಕಾಡುಗಳಿಂದ ದೂರವಾಗಿ ಇರುವುದಿಲ್ಲ. ಇಷ್ಟು ಪ್ರಯೋಜನಕರವಾದ ಕಾಡುಗಳನ್ನು ಜನಗಳು ಮನಸ್ಸು ಬಂದಂತೆ ಕಡಿದುಹಾಕುವುದೂ ಬೋಳಾಗಿ ಕಡಿದಲ್ಲಿ ಮರಗಳನ್ನು ಬೆಳಿಸದೆ ಪಾಳುಬಿಟ್ಟಿರುವುದೂ ಸರಿಯಲ್ಲ. ಕಾಡುಗಳನ್ನು ಸುರಕ್ಷಿತಪಡಿಸುವುದಕ್ಕೂ ಬೆಳಿಸುವುದಕ್ಕೂ ಸರಕಾರದ ಪ್ರತ್ಯೇಕ ಒಂದು ಇಲಾಖೆಯೇ ಇದೆ.

ಈ ಸಂಸ್ಥಾನವು ಕಾಲುನಡೆಗಳಿಗೆ ಪ್ರಖ್ಯಾತಿಪಟ್ಟದ್ದಾಗಿದೆ. ಇಲ್ಲಿಯ ದನಕರುಗಳು ರೂಪ, ನಿಲವು, ಆಕಾರ, ಮೈ, ನಡಿಗೆ ಮೊದಲಾದುವುಗಳಲ್ಲಿ ಅನೇಕ ವ್ಯತ್ಯಾಸಗಳನ್ನು ತೋರಿಸುತ್ತವೆ. ಉತ್ತಮ ಜಾತಿಯ ಎತ್ತುಗಳೂ ಹಸುಗಳೂ ನೆಲ್ಲೂರ ಜಿಲ್ಲೆಯವು. ಇಲ್ಲಿಯ ಗೋಕಾಯಿಗಳು ಮೈ ಪುಷ್ಟಿಯಾಗಿಯೂ ಕೊಂಬುಗಳು ಚಿಕ್ಕವಾಗಿಯೂ ಹಾಲು ಅಧಿಕವಾಗಿಯೂ ಇರುತ್ತವೆ. ಪುಂಗನೂರು ಎತ್ತು ಎಂಬದೊಂದು ಜಾತಿಯು ನೋಟಕ್ಕೆ ಚೆಲುವಾಗಿ ಸಣ್ಣ ತರದ್ದಾಗಿದೆ. ಕೊಯಮುತ್ತೂರು ಜಾತಿಯ ಎತ್ತುಗಳು

ಉದ್ದ ಕೊಂಬಿನ ಚುರುಕು ಸ್ವಭಾವದ ಬಲಿಷ್ಠ ಜಾತಿ. ನೆಲ್ಲೂರು ಎತ್ತುಗಳು ಭಾರವಾದ ಹೊರೆಯನ್ನು ಹೊರುತ್ತವಾದರೂ ನಡೆ ಮೆಲ್ಲಗೆ. ಈ ಸಂಸ್ಥಾನದಲ್ಲಿ ಕೊಡ ಹಾಲನ್ನು ಕೊಡುವ ಎಮ್ಮೆಗಳು ಬಳ್ಳಾರಿ ವಿಶಾಖಪಟ್ಟಣ ಜಿಲ್ಲೆಯವುಗಳು. ಆಡುಗಳಲ್ಲಿ ಮೂರು ಅಡಿ ಎತ್ತರವಾದ ನೆಲ್ಲೂರು ಆಡೇ ಬಹಳ ಪ್ರಸಿದ್ಧವಾಗಿದೆ. ಕೊಯಮುತ್ತೂರು ಮೈಸೂರು ಪ್ರಾಂತಗಳ ಕುರಿಗಳಲ್ಲಿ ರೋಮವು ಉದ್ದವಿದ್ದು ಉಣ್ಣೆಯು ಹೆಚ್ಚಾಗಿದ್ದರೂ ನೂಲಿಗಾಗಿ ಅವನ್ನು ಸಾಕುವುದಿಲ್ಲ; ಮುಖ್ಯವಾಗಿ ಅವುಗಳ ಮಾಂಸಕ್ಕಾಗಿಯೂ ಚರ್ಮಕ್ಕಾಗಿಯೂ ಅವನ್ನು ಸಾಕುತ್ತಾರೆ. ದನಕರುಗಳ ಮಾಂಸ, ಚರ್ಮ, ಎಲುಬು, ಕೊಂಬು ಮೊದಲಾದುವು ಮಾತ್ರವಲ್ಲ, ಅವುಗಳ ಮಲಮೂತ್ರಗಳು ಕೂಡಾ ಮನುಷ್ಯನಿಗೆ ಉಪಯೋಗವಾಗಿವೆ ಎಂದು ಹೇಳಬೇಕಿಲ್ಲವಷ್ಟೆ. ಮೇಲೆ ಹೇಳಿದ ನಾಡುಮೃಗಗಳಲ್ಲದೆ ಈ ಸಂಸ್ಥಾನದಲ್ಲಿ ಆನೆ, ಕಾಡುಹಂದಿ, ಹುಲಿ, ಕರಡಿ, ಕಾಟಿ, ಜಿಂಕೆ, ನರಿ, ನಾಯಿ ಇತ್ಯಾದಿ ಕಾಡುಮೃಗಗಳೂ ಉಂಟು. ಆನೆಗಳು ಮೈಸೂರು, ಮಲೆಯಾಳ, ತಿರುವಾಂಕೂರು ಇಲ್ಲಿಯ ಮಲೆಗಳಲ್ಲಿ ಹಿಂಡುಹಿಂಡಾಗಿ ಅಲೆಯುತ್ತವೆ. ಬಂಡಿಗೂ ಸವಾರಿಗೂ ಬೇಕಾದ ಒಳ್ಳೇ ಕುದುರೆಗಳನ್ನು ಈ ಸಂಸ್ಥಾನದಲ್ಲಿ ಎಲ್ಲಿಯೂ ಹೈನು ಮಾಡುವುದಿಲ್ಲ. ಈ ಸಂಸ್ಥಾನದಲ್ಲಿ ಅಲ್ಲಲ್ಲಿ ನೋಡತಕ್ಕ ಮುಖ್ಯವಾದ ಪಕ್ಷಿಗಳು ಯಾವವೆಂದರೆ:— ಕಾಗೆ, ಡೇಗೆ, ಹದ್ದು, ರಣಹದ್ದು, ಗರುಡಪಕ್ಷಿ, ಗೂಗೆ, ಕೆಂಬೂತ ಮೊದಲಾದ ಮಾಂಸಾಹಾರಿಗಳು; ಗಿಳಿ, ಮೈನ, ಪಾರಿವಾಳ, ಪುರುಲೆ, ಮೊದಲಾದ ಕಾಳು ತಿನ್ನುವ ಹಕ್ಕಿಗಳು; ಮೀನುಕೋಳಿ, ಕೊಕ್ಕರೆ, ಕಡಲುಕಾಗೆ ಮೊದಲಾದ ಇತರ ಜಲಪಕ್ಷಿಗಳು. ನೀವು ಅತ್ತಿತ್ತ ಅಡ್ಡಾಡುವಾಗಲೂ ಬೇರೆ ಊರುಗಳಿಗೆ ಪಯಣಹೋಗುವಾಗಲೂ ಬಗೆಬಗೆಯ ಜಂತುಗಳು ನಿಮ್ಮ ಕಣ್ಣಿಗೆ ಬಿದ್ದರೆ ಅವು ಹೇಗೆ ಹೇಗೆ ಜೀವಿಸುತ್ತವೆ ಎಂಬುದನ್ನು ಲಕ್ಷಿಸಿ ತಿಳಿದುಕೊಳ್ಳತಕ್ಕದ್ದು. ಮದ್ರಾಸ, ಮೈಸೂರು, ಬೆಂಗಳೂರು, ತಿರುವನಂತಪುರ ಮೊದಲಾದ ದೊಡ್ಡ ದೊಡ್ಡ ಪಟ್ಟಣಗಳಿಗೆ ನೀವು ಹೋಗುವ ಸಂದರ್ಭವಿದ್ದಾಗ ಅಲ್ಲಿಯ ಉದ್ಯಾವನಗಳನ್ನೂ 'ಮ್ಯೂಸಿಯಮ್' ಎಂಬ ಜಂತುಶಾಲೆಗಳನ್ನೂ ಸಂದರ್ಶಿಸುವುದಕ್ಕೂ ಅಲ್ಲಿ ಜೀವಂತವಾಗಿರುವ ವಸ್ತುಗಳನ್ನೂ ಸತ್ತರೂ ಕೊಳೆಯದಂತೆ ಮಾಡಿ ಮಡಗಿರುವ ವಸ್ತುಗಳನ್ನೂ ನೋಡುವುದಕ್ಕೆ ಮರೆಯಬೇಡಿರಿ.

ನಮ್ಮ ಸಂಸ್ಥಾನವನ್ನು ಮೂರು ಕಡೆಗಳಲ್ಲಿ ಬಳಸಿರುವ ಸಮುದ್ರದಿಂದ ಅನೇಕ ಸಾವಿರ ಜನಗಳು ಮೀನು ಹಿಡಿದು ಅದನ್ನು ಮಾರಿ ಜೀವನಮಾಡುತ್ತಾರೆ. ಕಡಲುಮೀನುಗಳಲ್ಲಿ ಎಷ್ಟೋ ಸಾವಿರ ಜಾತಿಗಳಿವೆ. ಮೀನುಗಳ ಆಕಾರ, ರೂಪ, ಬಣ್ಣ, ಬೆಳವಣಿಗೆ ಮುಂತಾದವುಗಳಿಗೆ ಸರಿಯಾಗಿ ಅವನ್ನು ಅನೇಕಾನೇಕ ವರ್ಗಗಳನ್ನಾಗಿ ವಿಂಗಡಿಸಿರುತ್ತಾರೆ. ಇವುಗಳಲ್ಲಿ ಅತ್ಯಂತ ಗಾತ್ರವಾದ ತಿಮಿಂಗಿಲವು ನೀರಿನ ಮೇಲೆ ತೇಲುವಾಗ ಸಣ್ಣದೊಂದು ದ್ವೀಪದಂತೆ ತೋರುವುದು. ಅದು ದೊಡ್ಡ ದೋಣಿಗಳನ್ನೂ ಸಣ್ಣ ತರದ ಹಡಗುಗಳನ್ನೂ ತರುಬಿ ಕವಚಿಹಾಕಿಬಿಡುವಷ್ಟು ಬಲಿಷ್ಠವಾಗಿದೆ. ಸುಮಾರು 35 ವರ್ಷಗಳ ಹಿಂದೆ ಪಶ್ಚಿಮ ಕರಾವಳಿಯ ದಡದ ಮೇಲೆ ಸತ್ತು ಬಿದ್ದ ಒಂದು ತಿಮಿಂಗಿಲವು ಸುಮಾರು 66 ಫೀಟು ಉದ್ದವಿತ್ತು.

ಇಂಡಿಯಾದೇಶದಲ್ಲಿ ಅನೇಕ ಜಾತಿಯ ಹಾವುಗಳಿವೆ. ಅವುಗಳಲ್ಲಿ ಹೆಚ್ಚಿನವು ವಿಷವುಳ್ಳವುಗಳು. ಗಾತ್ರದಲ್ಲಿ ಕೆಲವು ದೊಡ್ಡವು, ಕೆಲವು ಚಿಕ್ಕವು. ಕಾಡುಗಳಲ್ಲಿ ಇರುವ ಹೆಬ್ಬಾವು ದೊಡ್ಡ ಜಿಂಕೆಯನ್ನಾದರೂ ತನ್ನ ಸಿಂಬಿಗಳಲ್ಲಿ ಸುತ್ತಿಕೊಂಡು ನುಂಗಿಬಿಡಬಲ್ಲುದು.

ಲೋಹಗಳು.—ಚಿನ್ನ, ಬೆಳ್ಳಿ, ತಾಮ್ರ, ಕಬ್ಬಿಣ, ಸೀಸ, ಪಾದರಸ, ಸತುವು ಮೊದಲಾದುವುಗಳಿಗೆ ಲೋಹಗಳೆಂದು ಹೆಸರು. ಅವನ್ನು ಭೂಮಿಯ ಮೇಲೆ ಆಳವಾದ ಗನಿಗಳನ್ನು ಅಗಿದು ತೆಗೆಯುತ್ತಾರೆ. ಹೀಗೆ ತೆಗೆಯುವಾಗ ಅವು ಶುದ್ಧವಾಗಿ ಇರುವುದಿಲ್ಲ; ಮಣ್ಣು, ಕಲ್ಲು, ಕೆಸರು ಮೊದಲಾದುವುಗಳೊಡನೆ ಬೆರಿಕೆಯಾಗಿರುತ್ತವೆ. ಹೀಗೆ ಲೋಹಗಳು ಮಿಶ್ರವಾಗಿದ್ದು ಗನಿಯಿಂದ ದೊರೆಯುವ ಪದಾರ್ಥಕ್ಕೆ ಅದುರು ಎನ್ನುತ್ತಾರೆ. ಅದುರನ್ನು ಗನಿಗಳಿಂದ ತೆಗೆದ ಬಳಿಕ ಪುಡಿ ಮಾಡಿ ಕೊಳೆಯನ್ನೂ ಲೋಹವನ್ನೂ ಬೇರ್ಪಡಿಸುತ್ತಾರೆ. ಅದುರಿನಲ್ಲಿಯ ಅಶುದ್ಧವಾದ ಅಂಶಕ್ಕೆ ಕಿಟ್ಟ ಎಂದು ಹೆಸರು. ಮದ್ರಾಸ ಸಂಸ್ಥಾನದಲ್ಲಿಯ ಪಶ್ಚಿಮಘಟ್ಟಗಳಲ್ಲಿಯೂ ಪೂರ್ವಘಟ್ಟಗಳಲ್ಲಿಯೂ ಲೋಹದ ಗನಿಗಳು ಅನೇಕವಾಗಿವೆ ಎಂದು ಹೇಳುತ್ತಾರಾದರೂ ಅವನ್ನು ಪರಿಶೋಧಿಸಿ ಕೆಲಸಕ್ಕೆ ಆಗುವಂತೆ ಇದುವರೆಗೆ ಮಾಡಲಿಲ್ಲ. ಮೈಸೂರು ಸೀಮೆಯಲ್ಲಿಯ ಕೋಲಾರು ಎಂಬಲ್ಲಿ ಚಿನ್ನದ ಗನಿಗಳಿವೆ. ಅನಂತಪುರದಲ್ಲಿಯೂ ಕೆಲವು ಚಿನ್ನದ ಗನಿಗಳಿವೆ. ಆದರೆ ಇವುಗಳಲ್ಲಿ ಕೋಲಾರದಲ್ಲಿ ದೊರೆಯುವಷ್ಟು ಸಮೃದ್ಧಿಯಾಗಿ ಚಿನ್ನವು ಸಿಗುವುದಿಲ್ಲ. ವೈನಾಡಿನಲ್ಲಿ ಚಿನ್ನವು ದೊರಕುತ್ತದೆ; ಆದರೆ

ಆ ಗನಿಗಳಿಂದ ಹುಟ್ಟಿಗಿಂತ ವೆಚ್ಚವೇ ಹೆಚ್ಚಾಗುವುದರಿಂದ ಅಲ್ಲಿ ಆ ಕೆಲಸವು ನಡೆಯುವುದಿಲ್ಲ. ಮಲೆಗಳಿಂದ ಕೆಳಕ್ಕೆ ಹರಿದುಬರುವ ನದಿಗಳಲ್ಲಿ ಮಣ್ಣಿನೊಂದಿಗೆ ಚಿನ್ನದ ಪುಡಿಯು ನೀರಿನಲ್ಲಿ ಕೊಚ್ಚಿಕೊಂಡು ಬರುವುದುಂಟು. ಹೀಗೆ ಹೊಯಿಗೆಯೊಡನೆ ಬೆರಸಿರುವ ಚಿನ್ನವನ್ನು ಅರಪುಗಾರ ಎಂಬ ಒಂದು ಜಾತಿಯವರು ಬೇರ್ಪಡಿಸಿ, ಆ ಚಿನ್ನದ ಪುಡಿಯನ್ನು ಮಾರಿ ಜೀವಿಸುತ್ತಾರೆ. ಮಲಬಾರು ಜಿಲ್ಲೆಯ ನೀಲಂಬೂರು ಹೊಳೆಯಲ್ಲಿ ಚಿನ್ನವನ್ನು ಈ ರೀತಿಯಾಗಿ ಸಂಪಾದಿಸಿಕೊಳ್ಳುತ್ತಾರೆ. ಕಬ್ಬಿಣವು ಬಹುಕಾಲದ ಹಿಂದಿನಿಂದ ಈ ಸಂಸ್ಥಾನದಲ್ಲಿ ದೊರೆಯುವ ಲೋಹವು. ಉತ್ತಮ ತರದ ಕಬ್ಬಿಣದ ಗನಿಯು ಸೇಲಂ ಜಿಲ್ಲೆಯಲ್ಲಿದೆ. ಕಬ್ಬಿಣದ ಅದುರನ್ನು ಕರಗಿಸಿ ಶುದ್ಧಮಾಡುವುದಕ್ಕೆ ಬೇಕಾದ ಮಸಿಗೆಂಡ, ಇದ್ದಲು, ಸುಣ್ಣದ ಕಲ್ಲು ಮುಂತಾದುವು ಆ ಗನಿಗಳ ಹತ್ತಿರ ಇಲ್ಲದೆ ಹೋಗಿ, ಕಬ್ಬಿಣವನ್ನು ಒದಗಿಸಿಕೊಳ್ಳುವುದಕ್ಕೆ ಹೆಚ್ಚು ಲಾಗವಡು ಮುಟ್ಟುವುದರಿಂದ, ಗನಿಗಳನ್ನು ಹಾಗೆಯೇ ಬಿಟ್ಟಿರುತ್ತಾರೆ. ಮೆಂಗೆನಿಸ್ ಲೋಹವು ವಿಶಾಖಪಟ್ಟಣ ಜಿಲ್ಲೆಯಲ್ಲಿಯೂ ಸಾಂದೂರು ಎಂಬ ಚಿಕ್ಕ ದೇಶೀಯ ಸಂಸ್ಥಾನದಲ್ಲಿಯೂ ಮೈಸೂರಿನಲ್ಲಿಯೂ ಸಿಗುತ್ತದೆ. ಅದನ್ನು ಗನಿಗಳಿಂದ ಅಗಿದು ತೆಗೆದು ಇಂಗ್ಲೆಂಡಿಗೆ ಕಳುಹಿಸುತ್ತಾರೆ. ಕಾಗೆಬಂಗಾರ ಎಂದು ರೂಢಿಯಾಗಿ ಕರೆಯುವ ಅಭ್ರಕವು ಒಂದು ಬಗೆಯ ಧಾತು; ನೋಡಿದರೆ ಕನ್ನಡಿಯಂತಿದೆ. ಒಂದು ಚೂರು ಅಭ್ರಕವನ್ನು ಕೈಯಲ್ಲಿ ಹಿಡಿದು ಚೆನ್ನಾಗಿ ಪರೀಕ್ಷಿಸಿದರೆ ಅದು ಒಂದನ್ನೊಂದು ಅಂಟಿಕೊಂಡಿರುವ ಸಣ್ಣ ಪದರುಗಳುಳ್ಳದಾಗಿದೆ ಎಂದೂ, ಅದನ್ನು ಹಾಳೆಹಾಳೆಗಳಾಗಿ ತೆಗೆಯಬಹುದೆಂದೂ ಕಂಡುಬರುವುದು. ಅದು ನೋಡುವುದಕ್ಕೆ ಕನ್ನಡಿಯಂತಿದ್ದರೂ ಅದರ ಹಾಗೆ ಸುಲಭವಾಗಿ ಒಡೆದು ಹೋಗುವುದಿಲ್ಲ. ಹೀಗಾದುದರಿಂದಲೇ ಅಭ್ರಕವು ಹಲವು ಬಗೆಯ ಕೈಗಾರಿಕೆಗಳಲ್ಲಿ ಉಪಯೋಗವಾಗಿದೆ. ಅಭ್ರಕವು ನೆಲ್ಲೂರಿನಲ್ಲಿ ಅಪಾರವಾಗಿ ದೊರೆಯುತ್ತದೆ. ಸೇಲಂ ಜಿಲ್ಲೆಯಲ್ಲಿಯೂ ತಕ್ಕಮಟ್ಟಿಗೆ ಕೆಲವು ಗನಿಗಳು ಉಂಟು. ಅಭ್ರಕವನ್ನು ವೈದ್ಯರು ಔಷಧಕ್ಕಾಗಿ ಉಪಯೋಗಿಸುವುದುಂಟು.

ಪುರಾತನ ಕಾಲದಲ್ಲಿ ಈ ನಮ್ಮ ದೇಶವು ನವರತ್ನಗಳಿಗಾಗಿ ಹೆಸರುವಾಸಿ ಪಡೆದಿತ್ತು. ಆ ಕಾಲದಲ್ಲಿ ಬಹು ಪ್ರಖ್ಯಾತವಾಗಿದ್ದ ಗೊಲ್ಕೊಂಡ ರಾಜ್ಯದಲ್ಲಿಯೂ ಕೃಷ್ಣಾ ಜಿಲ್ಲೆಯಲ್ಲಿಯೂ ಉತ್ತಮವಾದ ವಜ್ರಗಳು ದೊರಕುತಿದ್ದವು. ಈಗಲೂ ಕರ್ನೂಲು ಜಿಲ್ಲೆಯಲ್ಲಿಯ ಒಂದು ಗನಿಯಿಂದ ವಜ್ರದ

ಹರಳುಗಳನ್ನು ತೆಗೆಯುವುದುಂಟು. ಪೆನ್ಸಿಲನ್ನು ಮಾಡುವುದರಲ್ಲಿ ಉಪಯೋಗವಾಗುವ ಪೆನ್ಸಿಲ್ ಸೀಸ ಅಥವಾ 'ಗ್ರೆಫಾಯ್ಟು' ಎಂಬ ಧಾತುವು ಗೋದಾವರಿ ಜಿಲ್ಲೆಯ ಭದ್ರಾಚಲದಲ್ಲಿಯೂ ತಿರುನೆಲ್ವೇಲಿ ಜಿಲ್ಲೆಯ ಸಿಂಗಂಪಟ್ಟಣದಲ್ಲಿಯೂ ತಿರುವಾಂಕೂರು ರಾಜ್ಯದ ಕೆಲವು ಸ್ಥಳಗಳಲ್ಲಿಯೂ ದೊರೆಯುತ್ತದೆ. ಕರ್ನೂಲು, ಅನಂತಪುರ ಎಂಬ ಜಿಲ್ಲೆಗಳಲ್ಲಿ ಸಿಗುವ ಗಡಿಗೆಕಲ್ಲು ಅಥವಾ ಕಲ್ಲುಚಪ್ಪಡಿಯನ್ನು ಗನಿಗಳಿಂದ ತೆಗೆದು, ಅದರಿಂದ ಬಗೆಬಗೆಯ ಪಾತ್ರಗಳನ್ನೊ ಚೆಲುವಾದ ವಿಗ್ರಹಗಳನ್ನೊ ಮಾಡುತ್ತಾರೆ. ಧನಿಕನಿಗೆ ಹೇಗೋ ಹಾಗೆಯೇ ದರಿದ್ರನಿಗೆ ಆವಶ್ಯಕವಾದ ಉಪ್ಪನ್ನು ಕಡಲ ನೀರಿನಿಂದಲೂ ಸಮುದ್ರದ ಒರತೆಯಿರುವ ಉಪ್ಪುಮಣ್ಣಿನಿಂದಲೂ ಗನಿಗಳಿಂದಲೂ ಒದಗಿಸಿಕೊಳ್ಳುತ್ತಾರೆ. ಉಪ್ಪು ಮಾಡುವ ಹಕ್ಕನ್ನು ಸರಕಾರದವರು ತಮ್ಮ ವಶದಲ್ಲಿಯೇ ಇಟ್ಟುಕೊಂಡು, ಉಪ್ಪಿನ ಮೇಲೆ ಸುಂಕವನ್ನು ಎತ್ತುತ್ತಾರೆ. ಉಪ್ಪು ಮಾಡುವುದು ಹೇಗೆ? ಸಮುದ್ರದ ಬಳಿಯ ನೆಲವನ್ನು ಕಳಗಳನ್ನಾಗಿ ಸರಿಗೊಳಿಸಿ ಚಿಕ್ಕ ಕಾಲುವೆಗಳ ಮೂಲಕ ಕಡಲ ನೀರನ್ನು ಆ ಕಳಗಳೊಳಗೆ ಕಟ್ಟುತ್ತಾರೆ. ನೀರು ಸೂರ್ಯನ ಕಾವಿನಿಂದ ಕೆಲದಿನಗಳ ತರುವಾಯ ಆವಿಯಾಗಿ ಹೋದನಂತರ ಉಪ್ಪು ಹಿಂದಕ್ಕೆ ನಿಲ್ಲುವುದು. ಇದನ್ನು ಶುದ್ಧಮಾಡಿ ಒಳ್ಳೇ ಉಪ್ಪನ್ನು ಒದಗಿಸಿಕೊಳ್ಳುತ್ತಾರೆ. ಉಪ್ಪುಮಣ್ಣಿನಿಂದ ಕೂಡಿದ ನೆಲವಿರುವ ಕೆಲವು ಸ್ಥಳಗಳಲ್ಲಿ ಆ ಮಣ್ಣನ್ನು ಅಗೆದು ತೆಗೆದು, ನೀರಿನಲ್ಲಿ ಕೆಲವು ದಿನಗಳ ವರೆಗೆ ಇಟ್ಟಿರುತ್ತಾರೆ. ಆಗ ಮಣ್ಣಿನೊಳಗಿನ ಉಪ್ಪು ನೀರಿನಲ್ಲಿ ಕರಗಿಹೋಗುವುದು. ಕರಗದ ಮಣ್ಣೂ, ಮರಳೂ ತಳದಲ್ಲಿ ನಿಲ್ಲುತ್ತವೆ. ತರುವಾಯ ಆ ನೀರನ್ನೂ ಶೋಧಿಸಿ ಬೆಂಕಿಯ ಮೇಲಿಟ್ಟು ಕಾಸಿದರೆ, ನೀರು ಇಂಗಿಹೋಗುವದು. ತಳದಲ್ಲಿ ನಿಂತ ಉಪ್ಪನ್ನು ಮಣ್ಣುಪ್ಪು ಎಂತ ಕರೆಯುವುದುಂಟು. ಭೂಮಿಯಿಂದ ತೋಡಿ ತೆಗೆಯುವ ಉಪ್ಪಿಗೆ ಕಲ್ಲುಪ್ಪು ಎಂತ ಹೆಸರು. ಸರ್ವಸಾಧಾರಣವಾಗಿ ಅಂಗಡಿಯಲ್ಲಿ ಮಾರುವ ಉಪ್ಪು ಇದೇ. ಇದನ್ನು ನೀರಿನಲ್ಲಿ ಕರಗಿಸಿ ಇನ್ನೂ ಶುದ್ಧವಾಗಿ ಮಾಡಿದರೆ ಸಕ್ಕರೆಯಂತೆ ಬೆಳ್ಳಗೆ ಹೊಳೆಯುವುದು. ಈ ಸಂಸ್ಥಾನದಲ್ಲಿ ಕಲ್ಲುಪ್ಪನ್ನು ತೆಗೆಯುವುದು ಬಳ್ಳಾರಿ ಜಿಲ್ಲೆಯಲ್ಲಿ. ಕೊಯಮುತ್ತೂರಿನಲ್ಲಿಯೂ ತಿರುಚಿನಾಪಳ್ಳಿಯಲ್ಲಿಯೂ ಮಣ್ಣುಪ್ಪನ್ನು ತಯಾರಿಸುತ್ತಾರೆ. ತಿರುನೆಲ್ವೇಲಿಯಲ್ಲಿಯೂ ತಿರುವಾಂಕೂರಿನಲ್ಲಿಯೂ ಕಡಲ ಉಪ್ಪನ್ನು ಒದಗಿಸುತ್ತಾರೆ.

ಕಲ್ಲುಗಳು.—ಕಟ್ಟಡಗಳಿಗೆ ಬೇಕಾಗುವ ಹಲವು ವಿಧದ ಕಲ್ಲು ಸಿಗುತ್ತದೆ. ಮಲೆನಾಡು ಮೈಸೂರು ಕೊಯಮುತ್ತೂರು ಮೊದಲಾದ ಸ್ಥಳಗಳಲ್ಲಿಯ ಕಗ್ಗಲ್ಲು, ಮಲೆಯಾಳ ದಕ್ಷಿಣ ಕನ್ನಡದಲ್ಲಿಯ ಕೆಂಗಲ್ಲು, ಇವನ್ನು ಮನೆಕಟ್ಟುವುದರಲ್ಲಿ ಉಪಯೋಗಿಸಿಕೊಳ್ಳುತ್ತಾರೆ. ಕಡಪಾ ಜಿಲ್ಲೆಯಲ್ಲಿ ಪದರು ಪದರಾಗಿರುವ ಒಂದು ಬಗೆಯ ಕರಿಗಲ್ಲಿನಿಂದ ತೆಳ್ಳಗೆ ಹಲಗೆಗಳನ್ನೂ ಸೀಳಿ ತೆಗೆಯುತ್ತಾರೆ, ಇದನ್ನು ಕಡಪಕಲ್ಲು ಎಂತ ಕರೆಯುತ್ತಾರೆ. ಇಟ್ಟಿಗೆಯಂತೆ ಇದು ನೆಲಕ್ಕೆ ಹಾಸುವುದರಲ್ಲಿ ಹೆಚ್ಚಾಗಿ ಉಪಯೋಗವಾಗಿದೆ. ಚೆನ್ನಾಗಿ ತೀಡಿದರೆ ಇದು ಕನ್ನಡಿಯಂತೆ ತಳತಳಿಸುವುದರಿಂದ ಮೇಜಿನ ಹಲಗೆಗಳನ್ನೂ ಕಡಪಕಲ್ಲಿನಿಂದ ಒದಗಿಸಿಕೊಳ್ಳುತ್ತಾರೆ. ಪಶ್ಚಿಮಕರಾವಳಿಯಲ್ಲಿ ತಯಾರಾಗುವ ಇಟ್ಟಿಗೆ, ಹಂಚು ಮೊದಲಾದ ಸಾಮಗ್ರಿಗಳು ಅಲ್ಲಿ ಸಮೃದ್ಧಿಯಾಗಿ ಸಿಗುವ ಒಂದು ಬಗೆಯ ಜಿಗಟು ಜೇಡಿಮಣ್ಣಿನಿಂದ ಆಗುತ್ತವೆ.

ಕೈಗಾರಿಕೆ.—ನಮಗೆ ಉಣ್ಣುವುದಕ್ಕೆ ಆಹಾರ, ಉಡುವುದಕ್ಕೆ ಬಟ್ಟೆ, ಉಳುಕೊಳ್ಳುವುದಕ್ಕೆ ಮನೆ, ಇವು ಬೇಕು. ಅನ್ನಪಾನ, ಬಟ್ಟೆಬರೆ, ಮನೆಮಾರು, ಇವನ್ನು ಒದಗಿಸುವ ಕೆಲಸದವರು ಇದ್ದಾರೆ. ಇಂಥವರ ಕೆಲಸಕ್ಕೆ ಕೈಗಾರಿಕೆ ಎಂದೂ ಆ ಕೆಲಸಗಾರರಿಗೆ ಕೈಗಾರಿಕೆಯವರೆಂದೂ ಹೆಸರು. ಈ ಸಂಸ್ಥಾನದಲ್ಲಿ ಜಮೀನು ಸಾಗುವಳಿಯೇ ಜನಗಳ ಮುಖ್ಯವೃತ್ತಿ. ಇಲ್ಲಿಯ ನಿವಾಸಿಗಳಲ್ಲಿ ನೂರರಲ್ಲಿ ಎಪ್ಪತ್ತು ಮಂದಿ ಬೇಸಾಯಗಾರರು. ಸಾಗುವಳಿಗೆ ದನಕರುಗಳೇ ಹೆಚ್ಚು ಆವಶ್ಯಕವಾಗಿವೆ. ಆದ್ದರಿಂದ ಅನೇಕರು ದನಕರುಗಳನ್ನು ಸಾಕಿ ಜೀವನ ಮಾಡುತ್ತಾರೆ. ನೆಲ್ಲು ಮೊದಲಾದ ಧಾನ್ಯಗಳನ್ನು ತಿನ್ನುವುದಕ್ಕೆ ಮೊದಲು ಅವನ್ನು ಕುಟ್ಟಿ ಅಕ್ಕಿಯಾಗಿ ಮಾಡಬೇಕು. ಬತ್ತ ಕುಟ್ಟಿ ಜೀವಿಸುವವರು ಅನೇಕರು ಇದ್ದಾರೆ. ಈ ಕಾಲದಲ್ಲಿ ಬತ್ತ ಕುಟ್ಟುವ ಹಬೆಯಂತ್ರಗಳನ್ನೂ ಅಲ್ಲಲ್ಲಿ ಹಚ್ಚಿದ್ದಾರೆ. ಮುಖ್ಯವಾಗಿ ಗುಂಟೂರು, ಕೃಷ್ಣ, ನೆಲ್ಲೂರು, ತಂಜಾವೂರು, ಎಂಬ ಜಿಲ್ಲೆಗಳಲ್ಲಿ ಅಕ್ಕಿಯಂತ್ರಗಳು ಉಂಟು. ಈ ಸಂಸ್ಥಾನದಲ್ಲಿ ಬತ್ತ ಕುಟ್ಟಿ ಅಕ್ಕಿ ಮಾಡುವ ಕೈಗಾರಿಕೆಯ 62 ಯಂತ್ರಗಳು ಉಂಟೆಂದು ಎಣಿಸಿರುವರು. ಬೆಲ್ಲ ಮಾಡುವುದರಲ್ಲಿ ಶ್ರಮವು ಕಡಮೆಯಾದುದರಿಂದ ಹಲವು ಕಡೆಗಳಲ್ಲಿ ಬೆಲ್ಲ ಮಾಡುವುದು ರೂಢಿಯಲ್ಲಿದೆ. ಕಬ್ಬಿನ ಹಾಲನ್ನು ಶುದ್ಧಮಾಡಿ ಅದರಿಂದ ಬಿಳಿ ಸಕ್ಕರೆ ಮಾಡುವುದು ಬೆಲ್ಲ ಮಾಡುವಷ್ಟು ಸುಲಭವಲ್ಲ. ಸಕ್ಕರೆ ಕೈಗಾರಿಕೆಯು

ಗಂಜಾಮ್ ಜಿಲ್ಲೆಯ ಆಸ್ಕ ಎಂಬ ಪಟ್ಟಣದಲ್ಲಿ, ಗೋದಾವರಿಯ ಸಮಲ ಕೋಟೆಯಲ್ಲಿ, ದಕ್ಷಿಣ ಆರ್ಕಾಡಿನ ನೆಲ್ಲಿಕುಪ್ಪದಲ್ಲಿ, ಮಾತ್ರ ಮುಖ್ಯವಾಗಿ ನಡೆಯುತ್ತದೆ. ತೆಂಗು, ಎಳ್ಳು, ಹರಳು, ನೆಲಗಡಲೆ ಮೊದಲಾದುವುಗಳಿಂದ ದೊರೆಯುವ ಎಣ್ಣೆಯು ಆಹಾರಸಾಮಗ್ರಿಗಳನ್ನು ತಯಾರಿಸುವುದರಲ್ಲಿಯೂ, ದೀಪ ಉರಿಸುವುದರಲ್ಲಿಯೂ, ಮೈಗೆ ಪೂಸಿಕೊಳ್ಳುವುದರಲ್ಲಿಯೂ, ಸಾಬೂನು ಪರಿಮಳದ್ರವ್ಯ ಔಷಧಗಳನ್ನು ಮಾಡುವುದರಲ್ಲಿಯೂ ಉಪಯೋಗಿಸಲ್ಪಟ್ಟು, ಉಳಿದ ಭಾಗವು ಇಲ್ಲಿಂದ ಪರದೇಶಗಳಿಗೆ ಹೇರಳವಾಗಿ ಹೋಗುತ್ತದೆ. ತೆಂಗಿನ ಎಣ್ಣೆ ಪಶ್ಚಿಮಕರಾವಳಿಯಲ್ಲಿ ವಿಶೇಷವಾಗಿ ಪೈದಾಸ್ತು ಆಗುತ್ತದೆ. ಸಾಬೂನು ಮೇಣದ ಬತ್ತಿ ಇವನ್ನು ತಯಾರಿಸುವುದಕ್ಕೆ ಇದು ದಿವ್ಯವಾದ ಎಣ್ಣೆಯಂತೆ. ತೆಂಗಿನ ಎಣ್ಣೆಯನ್ನು ಗಾಣ ಹಾಕಿ ಗಾಣಿಗರು ತೆಗೆಯುವುದು ಇತ್ತಲಾಗೆ ಕಡಮೆಯಾಗಿದೆ. ಈಗ ಕೈಗಾಣಕ್ಕಿಂತಲೂ ವೇಗವಾಗಿಯೂ ಅಗ್ಗವಾಗಿಯೂ ಯಂತ್ರಗಳಲ್ಲಿ ಎಣ್ಣೆ ತೆಗೆಯುತ್ತಾರೆ.

ಹೊಗೆಸೊಪ್ಪು. — ಇದು ನಮ್ಮ ಸಂಸ್ಥಾನದಲ್ಲಿ ಮುಖ್ಯವಾಗಿ ಕೊಯ ಮುತ್ತೂರು, ಮಧುರೆ, ತಿರುಚಿನಾಪಳ್ಳಿ ಜಿಲ್ಲೆಗಳಲ್ಲಿ ಕೃಷಿ ಆಗುತ್ತದೆ. ಮಧುರೆ ಜಿಲ್ಲೆಯ ಡಿಂಡಿಗಲ್ಲು ಎಂಬಲ್ಲಿ, ತಿರುಚಿನಾಪಳ್ಳಿ ಎಂಬ ಊರಲ್ಲಿ, ತಯಾರಾಗುವ ಚುರುಟುಗಳನ್ನು ವಿಲಾಯತಿಯವರು ಬಹಳ ಒಳ್ಳೆಯವೆಂದು ಸೇದುತ್ತಾರೆ. ಗೋದಾವರಿ ನದಿಯಲ್ಲಿರುವ ಸಣ್ಣ ದ್ವೀಪಗಳಲ್ಲಿ ಬೆಳೆಯುವ ಹೊಗೆಸೊಪ್ಪಿನಿಂದ ಚುರುಟುಗಳನ್ನು ತಯಾರಿಸುವುದಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯ ಕೆಲ ಭಾಗ ಗಳಲ್ಲಿ ಹೊಗೆಸೊಪ್ಪನ್ನು ಬೆಳಿಸುತ್ತಾರೆ. ಇದನ್ನು ವೀಳ್ಯದೆಲೆಯೊಂದಿಗೆ ಬಾಯ ಲ್ಲಿಟ್ಟು ಜಗಿಯುವುದಕ್ಕೂ ನಶ್ಯವಾಗಿ ಮೂಗಿಗೆ ಏರಿಸುವುದಕ್ಕೂ ಅನೇಕರು ಉಪಯೋಗಿಸುತ್ತಾರೆ. ಈ ಸಂಸ್ಥಾನದಿಂದ ಹೊಗೆಸೊಪ್ಪು ಪರರಾಜ್ಯಗಳಿಗೆ ಹೋಗುತ್ತದೆ.

ಕಾಫಿ. — ಈ ಸಂಸ್ಥಾನದ ಕೆಲವು ಭಾಗಗಳಲ್ಲಿ ಮುಂಚೆ ಹೆಚ್ಚಾಗಿ ಇದನ್ನು ಕೃಷಿ ಮಾಡುತ್ತಿದ್ದರು. ಈಗ ಇದು ಕಡಮೆಯಾಗುತ್ತಾ ಬಂದಿದೆ. ಪಶ್ಚಿಮಘಟ್ಟ ಗಳಲ್ಲಿ ಕೆಲವು ಭಾಗಗಳು, ನೀಲಗಿರಿಯ ಪ್ರದೇಶಗಳು, ಕೊಡಗು ಸೇಲಂ ಎಂಬ ಜಿಲ್ಲೆಗಳು, ಕಾಫಿಕೃಷಿಯು ಈಗ ಮುಖ್ಯವಾಗಿ ನಡೆಯತಕ್ಕ ಸ್ಥಳಗಳು. ಕಾಫಿಗಿಡಗಳಲ್ಲಿ ಚೆನ್ನಾಗಿ ಬೆಳೆದು ಹಣ್ಣಾದ ಬೀಜಗಳನ್ನು ಹೆಕ್ಕಿ ತೆಗೆದು, ಅವುಗಳ ಸಿಪ್ಪೆಯನ್ನು ಸುಲಿದು, ಒಳಗಿನ ಬಿಳಿ ಹೊದಿಕೆಯನ್ನು ತೆಗೆದುಬಿಡಲು

ಬೀಳೆಗಳು ಕಾಣಬರುತ್ತವೆ. ಒಣಗಿಸಿದ ಬೀಳೆಗಳನ್ನು ಚೆನ್ನಾಗಿ ಹುರಿದು ಪುಡಿ ಮಾಡಿ ನೀರಲ್ಲಿ ಕಾಯಿಸಿ ಕುಡಿಯುತ್ತಾರೆ. ಕಾಫಿಬೀಜದ ಸಿಪ್ಪೆಯನ್ನು ಸುಲಿದು ಶುದ್ಧಮಾಡುವ ಕೆಲಸವು ಮುಖ್ಯವಾಗಿ ಅದು ಬೆಳೆಯುವ ಸ್ಥಳಗಳಿಗೆ ಸಮಿಾಪವಿರುವ ತಲಚೇರಿ, ಕಲ್ಲಿಕೋಟೆ, ಕೊಯಮುತ್ತೂರು ಮತ್ತು ಮಂಗ ಳೂರು ಎಂಬ ಸ್ಥಳಗಳಲ್ಲಿಯೇ ಆಗುತ್ತದೆ.

ತೇಯೆಲೆ.— ಇದರ ಗಿಡಗಳು ಹೆಚ್ಚಾಗಿ ನೀಲಗಿರಿಯಲ್ಲಿ ಬೆಳೆಯುತ್ತವೆ. ಅಲ್ಲಿಯ ಜನರಿಗೆ ತೇಯೆಲೆಯ ಕೃಷಿಯು ಮುಖ್ಯ ವೃತ್ತಿಯಾಗಿದೆ. ತೇಗಿಡ ಗಳ ಎಲೆಗಳನ್ನು ಹೆಕ್ಕಿ ತಂದು, ಬೆಂಕಿಯ ಮೇಲೊ ಬಿಸಲಿಗೊ ಇಟ್ಟು ಒಣಗಿಸಿ, ಪೊಟ್ಟಣಗಳನ್ನು ಸುತ್ತಿ ಪರರಾಜ್ಯಗಳಿಗೆ ಕಳುಹಿಸುತ್ತಾರೆ.

ತೆಂಗು, ತಾಳೆ, ಈಚಲು.— ಈ ಮರಗಳಿಂದ ಕಳ್ಳನ್ನು ಇಳಿಸುವ ಕೆಲಸವು ಈ ಸಂಸ್ಥಾನದಲ್ಲಿ ಎಲ್ಲಾ ಕಡೆಗಳಲ್ಲಿಯೂ ನಡೆಯುತ್ತದೆ. ತಾಳೆಮರಗಳಿಗೆ ಹೆಸರುವಾಸಿ ಪಡೆದ ತಿರುನೆಲ್ವೇಲಿ ಜಿಲ್ಲೆಯಲ್ಲಿ ಅನೇಕರ ವೃತ್ತಿಯು ಕಳ್ಳು ಮಾಡುವುದಾಗಿದೆ. ಕಳ್ಳನ್ನು ಕುದಿಸಿ, ಬಟ್ಟಿಕಟ್ಟಿ ಸರಾಯಿ ಮಾಡುತ್ತಾರೆ. ನೀಲಗಿರಿಯಲ್ಲಿ ಬಾರ್ಲಿ ಎಂಬ ಒಂದು ಜಾತಿಯ ಧಾನ್ಯದಿಂದ ಒಂದು ತರದ ಸರಾಯಿಯನ್ನು ಯಂತ್ರಮೂಲಕವಾಗಿ ಹಿಳಿಯುತ್ತಾರೆ. ಈ ಸರಾಯಿಗೆ ಇಂಗ್ಲಿಷಿನಿಂದ ಬೀರ್ ಎಂದು ಹೆಸರು.

ಹತ್ತಿ.— ನಮ್ಮ ಉಡಿಗೆಗೆ ಬೇಕಾದ ಹಲವು ವಸ್ತ್ರಗಳು ಹೆಚ್ಚಾಗಿ ಹತ್ತಿಯ ನೂಲಿನಿಂದ ಆಗುತ್ತವೆ. ಹತ್ತಿ ಅಂದರೆ, ಹತ್ತಿಗಿಡದ ಕಾಯಿಯೊಳಗಿನ ಒಂದು ವಿಧದ ನಾರು. ಹತ್ತಿಗಿಡದ ಕಾಯಿಗಳನ್ನು ಚೆನ್ನಾಗಿ ಒಣಗಿದನಂತರ ಒಟ್ಟು ಗೂಡಿಸಿ ಸಿಪ್ಪೆ ಸುಲಿದು ಬೀಜವನ್ನು ಬೇರ್ಪಡಿಸಿ ಒದಗಿಸಿಕೊಳ್ಳುತ್ತಾರೆ. ಹೀಗೆ ದೊರೆತ ಹತ್ತಿಯನ್ನು ನೂತು, ನೂಲಿಗೆ ಬೇಕುಬೇಕಾದ ಬಣ್ಣ ಕಟ್ಟಿ, ಮಗ್ಗಗಳಲ್ಲಿ ಬಗೆಬಗೆಯ ಬಟ್ಟೆಯನ್ನಾಗಿ ನೇಯುತ್ತಾರೆ. ಈ ವೃತ್ತಿಯವರೇ ನೇಯಿಗೆಯವರು, ಸಾಲಿಗರು, ಜೇಡರು. ಈ ಜಾತಿಯವರು ಈ ವೃತ್ತಿ ಯಿಂದಲೇ ಜೀವಿಸುತ್ತಾರೆ. ಇಂಥವರು ನೇಯುವ ಮಗ್ಗಗಳು ಈ ಸಂಸ್ಥಾನ ದಲ್ಲಿ ಎರಡು ಲಕ್ಷದ ಮೇಲೆ ಇವೆ. ಬಟ್ಟೆಯನ್ನು ಬಹು ಬೇಗನೆ ಸುಲಭವಾಗಿ ನೇಯತಕ್ಕ ಯಂತ್ರಗಳನ್ನು ಸರಕಾರದ ಸಹಾಯದಿಂದ ಇತ್ತಿತ್ತಲಾಗೆ ಹಲವೆಡೆ ಗಳಲ್ಲಿ ಹಚ್ಚಿರುವುದರಿಂದ ನಮ್ಮ ಸಂಸ್ಥಾನದಲ್ಲಿ ನೇಯಿಗೆಯು ಧಾರಾಳವಾಗಿದೆ. ಹತ್ತಿಯನ್ನು ಶುದ್ಧಮಾಡುವುದಕ್ಕೂ ಪಿಂಡಿಗಳಾಗಿ ಕಟ್ಟುವುದಕ್ಕೂ ನೂಲಾಗಿ

ನೂಲುವುದಕ್ಕೂ ಬಟ್ಟೆ ನೇಯುವುದಕ್ಕೂ ಪ್ರತ್ಯೇಕ ಪ್ರತ್ಯೇಕವಾದ ಯಂತ್ರಗಳ ಮೂಲಕ ಕೆಲಸಮಾಡುವ ಹಲವುಹಲವು ಕಾರಖಾನೆಗಳು ಈ ಸಂಸ್ಥಾನ



ಹತ್ತಿ.

ದಲ್ಲಿವೆ. ಕೆಲವು ಕಡೆಗಳಲ್ಲಿ ಮುಖ್ಯವಾಗಿ, ಸರಕಾರಿ ಜೈಲುಗಳಲ್ಲಿ, ಈ ನೂಲಿನಿಂದ ಒಳ್ಳೆಯ ಜಮಖಾನೆಗಳನ್ನೂ ಹಾಸುಬಟ್ಟೆಗಳನ್ನೂ ಮಾಡುವರು. ಅದವಾನಿ, ಸೇಲಂ, ತಿರುನೆಲ್ವೇಲಿ, ಎಂಬಿವು ಇಂಥ ಜಮಖಾನೆಗಳಿಗೆ ಬಹಳ ಪ್ರಸಿದ್ಧಿಯಾಗಿವೆ.

ಪಟ್ಟೆ.—ಪಟ್ಟೆಯು ಹುಳಗಳಿಂದ ದೊರೆಯುತ್ತದೆ. ಆ ಹುಳುಗಳು ನೇರಳೆ ಎಲೆಗಳನ್ನು ತಿಂದು ಹೇಗೆ ನೂಲುಬಿಡುತ್ತವೆಂದೂ ನೀನು ಮೂರನೆಯ ಪುಸ್ತಕದಲ್ಲಿ ಓದಿರುವೆಯಷ್ಟೆ. ಕೊಯಮುತ್ತೂರು ಜಿಲ್ಲೆಯಲ್ಲಿ ಕೊಳ್ಳೆಗಾಲದಲ್ಲಿಯೂ ಮೈಸೂರಿನಲ್ಲಿಯೂ ಕೃಷಿ ಕ್ಷೇತ್ರಗಳನ್ನು ಮಾಡಿ ಅವುಗಳಲ್ಲಿ ಸಾಕಿದ ಈ ಪಟ್ಟೆಹುಳುಗಳಿಂದ ಪಟ್ಟೆನೂಲನ್ನು ತೆಗೆಯುತ್ತಾರೆ. ಆ ಹುಳುಗಳು ಗೂಡುಕಟ್ಟುವುದು ಈ ನೂಲಿನಿಂದಲೇ. ಗೂಡಿನೊಳಗೆ ಇರುವ ಹುಳುವು ಚಿಟ್ಟೆಯಾಗಿ ಹೊರಗೆ ಹಾರಿಹೋಗುವ ಮುಂಚೆ ಆ ಗೂಡುಗಳನ್ನು ತೆಗೆದು ಬಿಸಿನೀರಲ್ಲಿ ಹಾಕಿ, ಹುಳುಗಳು ಸತ್ತುಹೋದನಂತರ ನೂಲು ಕಿತ್ತು ಹೋಗದಂತೆ ಅದನ್ನು ಯಂತ್ರಸಹಾಯದಿಂದ ಸುತ್ತಿಕೊಳ್ಳುತ್ತಾರೆ. ಆಗ ನೂಲಿಗೆ ಬಣ್ಣವಿರುವುದಿಲ್ಲ; ಅದನ್ನು ನೇಯುವ

ಮೊದಲು ಅದಕ್ಕೆ ಬಣ್ಣ ಕಟ್ಟುವರು. ಹತ್ತಿಯ ಬಟ್ಟೆಗಳಿಗೆ ಚಂದವಾದ ಅಂಚುಗಳನ್ನು ಪಟ್ಟೆಯ ನೂಲಿನಿಂದಲೇ ನೇಯುತ್ತಾರೆ. ಹೀಗೆ ಪಟ್ಟೆಯ



ಪಟ್ಟೇ ಹುಳ.

ನೂಲನ್ನು ನೂತು ಬಟ್ಟೆನೇದು ಜೀವನ ಮಾಡುವವರು ಈ ಸಂಸ್ಥಾನದಲ್ಲಿ ಇದ್ದಾರೆ. ಕಂಚಿ, ಸೇಲಂ, ತಂಜಾವೂರು ಮೊದಲಾದ ಸ್ಥಳಗಳಲ್ಲಿಯ ಪಟ್ಟೆಯ ದುಪಟಿ, ವೇಷ್ಟಿ, ರುಮಾಲು ಮೊದಲಾದುವುಗಳು ಪ್ರಸಿದ್ಧವಾಗಿವೆ. ಪಟ್ಟೆಯ ವಸ್ತ್ರವು ಹತ್ತಿಯ ವಸ್ತ್ರಕ್ಕಿಂತ ಬಹು ಬೆಲೆಯುಳ್ಳದ್ದಾಗಿದೆ. ಕುರಿಗಳ ಮೇಲಿರುವ ಕೂದಲೇ ಉಣ್ಣೆ. ಉಣ್ಣೆಯನ್ನು ನೂತು ಬಟ್ಟೆಯನ್ನಾಗಿ ಮಾಡುತ್ತಾರೆ. ಈ ಸಂಸ್ಥಾನದಲ್ಲಿ ತಯಾರಾಗುವ ಉಣ್ಣೆಯ ಕಂಬಳಿಗಳು ಒಳ್ಳೆಯವುಗಳಲ್ಲ, ಎಲ್ಲೂರು, ವೆಚ್ಚೂರು, ಬೆಂಗಳೂರು ಮೊದಲಾದ ಸ್ಥಳಗಳಲ್ಲಿ ಜೈಲುಗಳಲ್ಲಿಯ ರತ್ನಕಂಬಳಿಗಳು ತಕ್ಕಮಟ್ಟಿಗೆ ಹೆಸರಾಗಿವೆ.

ಇತರ ವೃತ್ತಿಗಳು.—ಈ ಸಂಸ್ಥಾನದಲ್ಲಿ ಸಣಬಿನ ಕೃಷಿಯು ಬಹು ಕಡಮೆ. ಗಂಜಾಮ್ ವಿಶಾಖಪಟ್ಟಣ ಗೋದಾವರಿ ಜಿಲ್ಲೆಗಳ ಕೆಂಪು ಮಣ್ಣಿನ ನೆಲದಲ್ಲಿ ಸಾಧಾರಣ ತರದ ಒಂದು ವಿಧದ ಸಣಬನ್ನು ಕೃಷಿಮಾಡುತ್ತಾರೆ.

ಸಣಬಿನ ನಾರಿನಿಂದ ಗೋಣಿಚೀಲಗಳನ್ನು ಮಾಡುತ್ತಾರೆ. ವಿಶಾಖಪಟ್ಟಣ ದಲ್ಲಿಯೂ ಎಲ್ಲೂರಿನಲ್ಲಿಯೂ ಗೋಣಿಚೀಲಗಳನ್ನು ಮಾಡುವ ಯಂತ್ರಶಾಲೆ ಗಳಿರುತ್ತವೆ. ಇಲ್ಲಿ ತಯಾರಾಗುವ ಗೋಣಿಚೀಲಗಳೆಲ್ಲಾ ಈ ಸಂಸ್ಥಾನ ದಲ್ಲಿಯೇ ಖರ್ಚಾಗುತ್ತವೆ. ಬೇರೆ ಸಂಸ್ಥಾನಗಳಿಂದಲೂ ಆ ಚೀಲಗಳು ಇಲ್ಲಿಗೆ ಬರುತ್ತವೆ.

ತೆಂಗಿನ ನಾರು.— ಮಲೆಯಾಳ ಜಿಲ್ಲೆಯಲ್ಲಿ ತೆಂಗನ್ನು ಚೆನ್ನಾಗಿ ಬೆಳಿಸು ತ್ತಾರೆ. ತೆಂಗಿನ ನಾರನ್ನು ಸುಲಿದು ಹಗ್ಗಗಳನ್ನು ಹೊಸೆದು ನಾರಿನಿಂದ ಕಾಲು ಒರಸುವ ಚಾಪೆಗಳನ್ನು ಮಾಡುತ್ತಾರೆ.

ತೊಗಲು.— ನಮ್ಮ ಸಂಸ್ಥಾನವು ಸಮಗಾರನ ಕೆಲಸಕ್ಕೆ ಹೆಸರುವಾಸಿ ಯಾಗಿದೆ. ಇಲ್ಲಿ ದನಕರುಗಳು ಹೆಚ್ಚಾಗಿ ಇವೆ. ತೊಗಲು ಹದಮಾಡು ವುದಕ್ಕೆ ಬೇಕಾದ ಸುಣ್ಣ, ಅಣಿಲೆಕಾಯಿ, ಎಳ್ಳೆಣ್ಣೆ ಮೊದಲಾದುವು ಇಲ್ಲಿ ಅಗ್ಗವಾಗಿ ಸಿಗುತ್ತವೆ. ಜೀವನೋಪಾಯವೂ ಬಹು ಸುಲಭ. ಹಾಗಿದ್ದರೂ ಊರವರು ತೊಗಲನ್ನು ಹದಮಾಡುವ ಕ್ರಮವು ಒರಟಾಗಿದೆ. ಊರ ಸಮಗಾರರು ಮಾಡಿದ ಚರ್ಮವು ನಯವಾಗಿಯೂ ಗಟ್ಟಿಯಾಗಿಯೂ ಇರುವುದಿಲ್ಲ. ಸರಕಾರವೇ ತೊಗಲು ಹದಮಾಡುವ ಕೆಲಸದ ಪ್ರಯತ್ನವನ್ನು ನಡಿಸುತ್ತದೆ. ಅದಕ್ಕೆ ಕ್ರೋಮ್ ಟೆನ್ನಿಂಗ್ ಎಂದು ಹೆಸರು. ತೊಗಲಿನಿಂದ ಗವಸಣಿಗೆ, ಚೀಲ, ಮೆಟ್ಟು, ಮುಂತಾದವನ್ನು ತಯಾರಿಸುತ್ತಾರೆ. ಹುಲಿ, ಜಿಂಕೆ, ಮೊಸಳೆ, ಹಾವು ಇವುಗಳ ತೊಗಲನ್ನು ಹದಮಾಡಿ, ಹಲವು ಬಗೆಯ ಚೆಲು ವಸ್ತುಗಳನ್ನು ಮಾಡುತ್ತಾರೆ.

ಎಲ್ಯೂಮಿನಿಯಮ್.— ಕೆಲವು ವರ್ಷಗಳಿಂದ ಮದ್ರಾಸಿನಲ್ಲಿ ಎಲ್ಯೂಮಿ ನಿಯ ಎಂಬ ಹೆಸರಿನ ಲೋಹದಿಂದ ಹಲವು ವಿಧದ ಪಾತ್ರೆಗಳನ್ನು ತಯಾರಿಸು ತಿದ್ದಾರೆ. ಈ ಪಾತ್ರೆಗಳು ಕಲಾಯಿ ಹಾಕಿದ ತಾಮ್ರದಂತೆ ಬೆಳ್ಳಗಿದ್ದರೂ ತಾಮ್ರದ ಪಾತ್ರೆಯಷ್ಟು ಭಾರವಾಗಿರುವುದಿಲ್ಲ. ಹಿತ್ತಾಳೆಯಂತೆ ಕಿಲುಬುವುದಿಲ್ಲ. ಇತ್ತಿತ್ತ ಲಾಗೆ ಎಲ್ಯೂಮಿನಿಯಮ್ ಪಾತ್ರೆಗಳು ಕೆಲವು ಕಡೆ ರೂಢಿಯಲ್ಲಿವೆ. ಮದ್ರಾಸ ಸಂಸ್ಥಾನವು ಲೋಹಪಾತ್ರೆಗಳಿಗೂ ವಿಧವಿಧ ಆಭರಣಗಳಿಗೂ ಪ್ರಖ್ಯಾತ ವಾಗಿದೆ. ತಂಜಾವೂರಿನ ಬೆಳ್ಳಿಯ ಸಾಮಾನುಗಳೂ, ತಿರುಚಿನಾಪಳ್ಳಿಯ ಚಿನ್ನದ ಒಡವೆಗಳೂ, ಕುಂಭಕೋಣದ ಹಿತ್ತಾಳಿಯ ಮತ್ತು ಸೀಸದ ಪಾತ್ರೆ ಗಳೂ, ಡಿಂಡಿಗಲ್ಲು ಪಾಲಕಾಡಿನಲ್ಲಿಯ ಕಂಚಿನ ಪಾತ್ರೆಗಳೂ ಪ್ರಸಿದ್ಧವಾಗಿವೆ.

ವ್ಯಾಪಾರ.—ನಮ್ಮ ಅನ್ನ ಬಟ್ಟೆಗೆ ಬೇಕಾದ ವಸ್ತುಗಳೆಲ್ಲ ಒಂದೇ ರಾಜ್ಯದಲ್ಲಿ ಒಂದೇ ದೇಶದಲ್ಲಿ ಪ್ರಾಯಶಃ ದೊರೆಯುವುದಿಲ್ಲವೆಂಬುದನ್ನು ಹೇಳಬೇಕಾಗಿದೆ. ಅಕ್ಕಿಯ ಅನುಕೂಲತೆ ಇಲ್ಲದ ಕಡೆಗಳಲ್ಲಿಯ ಜನರಿಗೆ ಅಕ್ಕಿ ಬೇರೆ ದೇಶಗಳಿಂದ ಬರಬೇಕಾಗಿದೆ. ಹತ್ತಿ ಬೆಳೆಯಲಾರದ ಒಂದು ದೇಶದ ಜನರು ಬಟ್ಟೆಯಾಗುವ ದೇಶಗಳ ಮೇಲೆ ಆಶ್ರಯಿಸಿರಬೇಕಾಗಿದೆ. ಹೀಗೆ ಒಂದು ರಾಜ್ಯದ ಪೈದಾಸ್ತಾಗುವ ದವಸಧಾನ್ಯಗಳಲ್ಲಿ ಅಲ್ಲಿಯ ಖರ್ಚು ಕಳೆದು ಉಳಿದದ್ದನ್ನು ಇತರ ದೇಶಗಳಿಗೆ ಕಳುಹಿಸುತ್ತಾ ತಮ್ಮಲ್ಲಿ ಇಲ್ಲದ ಅಥವಾ ತಮಗೆ ಬೇಕಾದ ವಸ್ತು ಒಡವೆಗಳನ್ನು ಆ ದೇಶಗಳಿಂದ ತರಿಸುತ್ತಾರೆ. ಹಾಗೆ ಒಬ್ಬರು ಒಂದು ವಸ್ತುವನ್ನು ಕೊಟ್ಟು ಪ್ರತಿಯಾಗಿ ಬೇರೆ ವಸ್ತುವನ್ನು ತೆಗೆದುಕೊಳ್ಳುವುದಕ್ಕೆ ವ್ಯಾಪಾರ ಮಾಡುವುದು ಎಂತ ಹೆಸರು. ಒಂದು ದೇಶದವರು ಪರದೇಶಗಳಿಗೆ ಕಳುಹಿಸುವ ಸಾಮಗ್ರಿಗಳಿಗೆ ರಫ್ತು ಎಂತಲೂ, ಅನ್ಯದೇಶಗಳಿಂದ ಬರುವ ವಸ್ತುಗಳಿಗೆ ಆಮದು ಎಂತಲೂ ಹೆಸರು. ದೇಶಗಳು ಸಮುದ್ರದ ಕರಾವಳಿಯಲ್ಲಿರುವ ಹಡಗುಗಳ ಚಲಾವಣೆಗೆ ಅನುಕೂಲವಾದ ರೇವುಗಳಿಂದ ಕೂಡಿದ್ದರೆ ವ್ಯಾಪಾರವು ವಿಪುಲವಾಗಿ ನಡೆಯುತ್ತದೆ. ಈ ಕಾಲದಲ್ಲಿ ವ್ಯಾಪಾರವು ನಮ್ಮ ದೇಶದಲ್ಲಿ ಹರಿಯತಕ್ಕ ಮಾರ್ಗಗಳು ಎರಡು—ರೈಲು ದಾರಿ, ಹಡಗು ದಾರಿ. ನೀವು ನೋಡುವ ಸ್ಥಳಗಳಲ್ಲಿರುವ ರೈಲು ಆಫೀಸುಗಳಲ್ಲಾಗಲಿ ಬಂದರುಗಳಲ್ಲಾಗಲಿ ಹೋಗಿ ವಿಚಾರಿಸಿದರೆ ಅಲ್ಲಿಂದ ಯಾವಯಾವ ದೇಶಗಳಿಗೆ ಯಾವಯಾವ ದವಸವನ್ನು ಸಾಗಿಸುತ್ತಾರೆಂದು ಗೊತ್ತಾಗುವುದು.

ರಫ್ತು.—ದನಕರುಗಳು ಈ ಸಂಸ್ಥಾನದಲ್ಲಿ ಹೇರಳವಾಗಿವೆ ಎಂದು ಈ ಮೊದಲೇ ಹೇಳಿದೆ. ಅದುಕಾರಣದಿಂದ ತೊಗಲು ಹದಮಾಡಿದ ಚರ್ಮವು ಹೆಚ್ಚಾಗಿ ರಫ್ತು ಆಗುತ್ತದೆ. ಹತ್ತಿ, ಎಣ್ಣೆಬೀಜಗಳು, ಬತ್ತ, ಕಾಫಿಬೀಜ, ತೇಯೆಲೆ, ಕೊಬರಿ, ಚಗರೆ, ಹಗ್ಗ, ಸೂಡಿಹಗ್ಗ, ತೆಂಗಿನ ಕತ್ತದಿಂದ ಮಾಡಿದ ವಿವಿಧ ಸಾಮಾನುಗಳು, ಇವೇ ಮೊದಲಾದುವುಗಳು ಅವವು ತಯಾರಾಗುವ ಸ್ಥಳಗಳಿಂದ ಪರವೂರುಗಳಿಗೆ ಹೋಗುತ್ತವೆ. ಜೋಳ, ಕಬ್ಬು, ರಾಗಿ, ಮೊದಲಾದ ಕೆಲವು ಧಾನ್ಯಗಳಲ್ಲಿ ಅವಶ್ಯವಾಗಿರುವಷ್ಟನ್ನು ಮಾತ್ರ ಇಲ್ಲಿ ಇಟ್ಟುಕೊಂಡು ಉಳಿದದ್ದನ್ನು ಬೇರೆ ರಾಜ್ಯಗಳಿಗೆ ಕಳುಹಿಸುತ್ತಾರೆ.

ಆಮದುಗಳು.—ಈ ಸಂಸ್ಥಾನಕ್ಕೆ ಅನ್ಯರಾಜ್ಯಗಳಿಂದ ಬರುವ ಮುಖ್ಯ ಸಾಮಾನುಗಳಲ್ಲಿ ಹತ್ತಿನೂಲಿನ ಬಟ್ಟೆಯೇ ಮುಖ್ಯವಾದುದು. 100 ರೂಪಾಯಿ

ಬೆಲೆಯುಳ್ಳ ಸಾಮಾನುಗಳು ಬರುವುದಾದರೆ ಅವುಗಳಲ್ಲಿ ಸುಮಾರು 25 ರೂಪಾಯಿ ಬೆಲೆಯ ಸಾಮಾನು ಬಟ್ಟೆ ಎನ್ನಬಹುದು. ಇಂಗ್ಲಂಡಿನಿಂದ ಹೆಚ್ಚಾಗಿ ಬಟ್ಟೆಯೇ ಬರುತ್ತದೆ. ಈ ರಾಜ್ಯದಲ್ಲಿ ದೊರೆಯದ ಹಲವು ವಿಧದ ಲೋಹಗಳು ಅನ್ಯರಾಜ್ಯಗಳಿಂದ ಇಲ್ಲಿಗೆ ಬರುತ್ತವೆ. ಬಟ್ಟೆಗಾಗಿ ಪ್ರಸಿದ್ಧವಾದ, ಕಂಜೀವರ, ಸೇಲಂ, ಮಚಲಿಪಟ್ಣ, ಡಿಂಡಿಗಲ್ ಮೊದಲಾದ ಸ್ಥಳಗಳಲ್ಲಿ ಆ ಬಟ್ಟೆಗಳಿಗೆ ಬೇಕಾದ ನೂಲನ್ನು ಇಂಗ್ಲಂಡದಿಂದ ತರಿಸಿಕೊಳ್ಳುತ್ತಾರೆ. ಇದಲ್ಲದೆ ಈ ದೇಶಕ್ಕೆ ಬರತಕ್ಕ ವಿಶೇಷ ಸಾಮಾನುಗಳು ಅಲ್ಪಸ್ವಲ್ಪವಲ್ಲ. ಅವುಗಳಲ್ಲಿ ಕೆಲವು ಮಾತ್ರ ಈಗಿನ ನಾಗರಿಕತೆಗೆ ಹೇಳಿದಂಥವುಗಳು. ಹಲವು ನಮ್ಮಲ್ಲಿ ಅನೇಕರಿಗೆ ಅಗತ್ಯವಾದವುಗಳು. ಬಿಸ್ಕೀಟು, ಪೆಪ್ಪರ್‌ಮೆಂಟು, ಜೆಮ್, ಜಲ್ಲಿ, ಚೀಸ್, ಕಂಡೆನ್ಸ್ ಮಿಲ್ಕ್, ಆಟದ ಸಾಮಾನುಗಳು, ಸಾರಾಯಿ, ಮುಂತಾದವು ತುಂಬಾ ಮಾರಾಟವಾಗಿ ಹೋಗುತ್ತವೆ. ಕನ್ನಡಿ, ಗಾಜಿನ ಸಾಮಾನುಗಳು, ಪಿಂಗಾಣಿ, ಕೆರೊಸಿನ್ ಎಣ್ಣೆ, ಕೆರೊಸಿನ್ ದೀಪಗಳು, ಹಲವು ವಿಧದ ಕಾಗದ, ಲೋಹಗಳು, ಕಬ್ಬಿಣ, ಉಕ್ಕು, ಚೂರಿ ಕತ್ತಿ ಮುಂತಾದ ಕಟ್ಲರಿ ಸಾಮಾನುಗಳು, ಯಂತ್ರಗಳು, ಔಷಧಗಳು, ಬೆಂಕಿಪೆಟ್ಟಿಗೆ, ಬತ್ತಿ, ಕಂಬಳಿ, ಸಕಲಾತಿಗಳು, ಜರಿಸಾಮಾನು, ಬೆಳ್ಳಿಜರಿ, ಮರದ ಸಾಮಗ್ರಿಗಳು ಇತ್ಯಾದಿ ಹಲವು ವಿಧದ ಸಾಮಾನುಗಳು ಪರರಾಜ್ಯಗಳಿಂದ ಬರಬೇಕಾಗಿವೆ. ಅವುಗಳಲ್ಲಿ ಹೆಚ್ಚಾದವು ಈಗ ನಮಗೆ ಅಗತ್ಯವಾದವುಗಳೆಂದು ಹೇಳಬೇಕಾಗಿದೆ. ಆದುದರಿಂದ ಯಾವ ಯಾವ ದೇಶಗಳಿಂದ ಅವು ಬರುತ್ತವೆಂದು ನಾವರಿತುಕೊಳ್ಳತಕ್ಕದ್ದು.

ಹೆದ್ದಾರಿಗಳು. —೧. ರಾಜಮಾರ್ಗ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಹೋಗುವಾಗ ಕಾಡುಗಳನ್ನೂ, ಘಟ್ಟಗಳನ್ನೂ ದಾಟಿ ಹೋಗಬೇಕಾಗುವುದು. ದಾರಿಗಳು ಇಕ್ಕಟ್ಟಾಗಿರುತ್ತವೆ. ಪ್ರಯಾಣಕ್ಕೆ ಅನೇಕ ಕಡೆಗಳಲ್ಲಿ ಅನುಕೂಲತೆ ಕಡಮೆ. ಹೊಳೆಗಳ ಮೇಲೆ ಸೇತುವೆಗಳಿಲ್ಲದಿದ್ದರೆ, ಪ್ರಯಾಣವು ಕಷ್ಟವಾಗಿರುವುದು, ಸಮಯವೂ ಹೆಚ್ಚು ತಗಲುವುದು. ಅಗಲವಾದ ರಸ್ತೆಗಳಿದ್ದರೆ ಜನಗಳು ತೊಂದರೆ ಇಲ್ಲದೆ ಒಂದು ಕಡೆಯಿಂದ ಇನ್ನೊಂದು ಕಡೆಗೆ ಪ್ರಯಾಣ ಮಾಡಬಹುದು; ಸರಕು ತುಂಬಿದ ಬಂಡಿಗಳು ಚಲಾವಣೆಯಾಗಬಹುದು. ಆದುದರಿಂದ ಸರಕಾರದವರು ರಾಜಮಾರ್ಗಗಳನ್ನು ಅನೇಕವಾಗಿ ಕಡಿಸಿ

ದ್ದಾರೆ; ಇನ್ನೂ ಕಡಿಸುತ್ತಲೇ ಇದ್ದಾರೆ. ರಸ್ತೆಗಳನ್ನು ಮಾಡಿಸುವುದಕ್ಕೆ ಆಳುಗಳು ಕೆಲಸಮಾಡಬೇಕಾಗುತ್ತದೆ, ಖರ್ಚೂ ಇದೆ; ವನಾಂತರಗಳಲ್ಲಿ ಕಾಡು ಕಡಿದು ಸರಿಗೊಳಿಸಬೇಕಾಗುತ್ತದೆ; ಎತ್ತರವಾದ ಗುಡ್ಡನೆಲವನ್ನು ಇಳಿಸಬೇಕಾಗುತ್ತದೆ; ಮಲೆಗಳಲ್ಲಿ ಮದ್ದು ಹಾಕಿ ಕಲ್ಲುಗಳನ್ನು ಒಡೆಯಬೇಕಾಗುತ್ತದೆ; ತಗ್ಗುಗಳಲ್ಲಿ ಕಲ್ಲು ಮಣ್ಣು ತುಂಬಿಸಿ ಏರಿಸಬೇಕಾಗುತ್ತದೆ; ಹೀಗೆ ಮಾಡಿದ ರಸ್ತೆಗಳ ಮೂಲಕ ಈಗ ಈ ಸಂಸ್ಥಾನದಲ್ಲಿಯ ಎಲ್ಲಾ ಪಟ್ಟಣಗಳಿಗೆ ಹೋಗಲಿಕ್ಕೆ ಅನುಕೂಲವಿದೆ. ಹಾಗೆ ಏರ್ಪಡಿಸಿದ ರಸ್ತೆಗಳಲ್ಲಿ ಮದ್ರಾಸಿನಿಂದ ಕಲ್ಕತ್ತೆಗೆ ಹೋಗುವ ರಸ್ತೆಯೊಂದು, ತೆಂಕು ದಿಕ್ಕಿನಲ್ಲಿ ತಿರುವಾಂಕೂರು ಸಂಸ್ಥಾನಕ್ಕೆ ಹೋಗುವ ರಸ್ತೆ ಇನ್ನೊಂದು, ಮಂಗಳೂರಿಗೆ ಹೋಗುವ ರಸ್ತೆ ಮತ್ತೊಂದು. ಇವು ಮೂರು ಬಲು ಉದ್ದವಾಗಿವೆ; ಇವೇ ಮುಖ್ಯವಾದವುಗಳು. ಈ ರಸ್ತೆಗಳಿಂದ ಅನೇಕ ಶಾಖೆಗಳು ಹೊರಟು ಬೇರೆ ಪಟ್ಟಣಗಳಿಗೆ ತಾಗಿ ಹೋಗುತ್ತವೆ. ಕೆಲವು ಮಲೆನಾಡುಗಳಲ್ಲಿ ಸರಾಗವಾಗಿ ಹೋಗುವುದಕ್ಕೆ ಹಾದಿಗಳಿಲ್ಲದೆ ಇಕ್ಕಟ್ಟಾಗಿರುವುದರಿಂದ, ಸರಕುಸಾಮಾನುಗಳು ತಲೆಹೊರೆಯಲ್ಲಿ ಇಲ್ಲವೆ ಹೇರಾಟದಲ್ಲಿ ಇನ್ನೂ ಹೋಗುವುದುಂಟು. ಇಂಥಾ ಹೇರಾಟಕ್ಕೆ ಎತ್ತು, ಕುದುರೆ, ಕತ್ತೆ ಮೊದಲಾದ ದನಕರುಗಳು ಉಪಯೋಗವಾಗುತ್ತವೆ.

ಕಾಲಿವೆಗಳು. – ಹೊಳೆ, ತೋಡು, ಸಣ್ಣ ಕಾಲಿವೆ, ಇವು ವ್ಯಾಪಾರದ ಸರಕಿನ ಚಲಾವಣೆಗೆ ಅನೇಕ ದೇಶಗಳಲ್ಲಿ ಬಹಳ ಸಹಾಯಕವಾಗಿವೆ. ಅವು ಸಾಕಷ್ಟು ಆಳವಾಗಿದ್ದರೆ ದೋಣಿಗಳು ತಡೆಯದೆ ಅಡ್ಡಾಡಬಹುದು. ಬಕ್ಕಿಂಗ್ಹಾಮ ಕಾಲಿವೆ ಎಂಬುದು ಇಂಥ ಕಾಲಿವೆಗಳಲ್ಲಿ ಒಂದಾಗಿದ್ದು ಹೆಸರುವಾಸಿಯಾಗಿದೆ. ಹೆಚ್ಚು ಕಡಮೆ 40 ವರ್ಷಗಳ ಹಿಂದೆ ಈ ಸಂಸ್ಥಾನದಲ್ಲಿ ಬರ ಬಿದ್ದು ಜನರು ಅನ್ನ ನೀರಿಲ್ಲದೆ ಕಂಗಾಲಾಗಿ ಸತ್ತುಹೋದರು. ಪೂರ್ವತೀರದ ಕಲ್ಕತ್ತಾ ವರೆಗೆ ಈಗ ಓಡಾಡುವ ರೈಲುರಸ್ತೆ ಆಗ ಇರಲಿಲ್ಲ. ಮದ್ರಾಸಿನ ಬಡಗು ದಿಕ್ಕಿನಲ್ಲಿ ಇರುವ ಜಿಲ್ಲೆಗಳಲ್ಲಿ ಬೇಕಾದಷ್ಟು ದವಸಧಾನ್ಯವನ್ನು ತರಿಸಿ ಕೊಡುವುದಕ್ಕೆ ಪ್ರಯಾಸವಾಗಿದ್ದದರಿಂದ ಈ ಜಿಲ್ಲೆಗಳನ್ನು ದಾಟಿಹೋಗುವ ಕಾಲಿವೆಯನ್ನು ತೋಡಿದರೆ, ಕ್ಷಾಮಕಾಲದಲ್ಲಿ ದಿಕ್ಕುಕಾಣದ ಜನಗಳಿಗೆ ಆಹಾರ ಸಂಪಾದನೆಗೆ ತಕ್ಕ ಒಂದು ಮಾರ್ಗವಾಗುವುದೆಂದು ಆ ಕಾಲದಲ್ಲಿ ಇಲ್ಲಿ ಗವರ್ನರಾಗಿದ್ದ ಬಕ್ಕಿಂಗ್ಹಾಮ್ ಪ್ರಭುವು ನಿಶ್ಚಯಿಸಿದರು. ಸರಕಿನ ಆಮದು ರಫ್ತಿಗೆ ರೈಲು ಸಹಾಯಕವೆಂದು ಆ ಗವರ್ನರರು ತಿಳಿದು ಸರಕಾರದ

ಹಣದಿಂದ ಆ ಕಾಲಿವೆ ತೋಡಿಸಿ ಅನೇಕ ಸಾವಿರ ಜನಗಳ ಜೀವನಕ್ಕೆ ಉಪಾಯ ಮಾಡಿದರು. ಅದಕ್ಕಾಗಿಯೇ ಈ ಕಾಲಿವೆಗೆ ಆತನ ಹೆಸರನ್ನು ಕೊಟ್ಟಿರುವರು. ಈ ತೋಡು ಮದ್ರಾಸಿನ ಕಡಲುತೀರದಿಂದ ಬಡಗು ಗುಂಟೂರು ವರೆಗೆ 200 ಮೈಲು, ತೆಂಕು ಕಡೆ ದಕ್ಷಿಣ ಆರ್ಕಾಡು ವರೆಗೆ 66 ಮೈಲು ಉದ್ದವಾಗಿರುತ್ತದೆ. ಪೂರ್ವತೀರದಲ್ಲಿ ರೈಲುಮಾರ್ಗ ಹಾಕಿ ಸುವ ಮುಂಚೆ ಜನಗಳು ಈ ಕಾಲಿವೆಯ ಮಾರ್ಗವಾಗಿ ಪ್ರಯಾಣ



ಬೆಜವಾಡದ ಮೂರು ಕಾಲಿವೆಗಳು.

ಮಾಡುತಿದ್ದರೂ ಈಗ ಇದು ವ್ಯಾಪಾರಸರಕಿಗೆ ಅಗ್ಗದ ಹಾದಿಯಾಗಿದೆ. ತೆಂಗಿನಕಾಯಿ, ಚಿಪ್ಪು, ಅಕ್ಕಿ, ಕಟ್ಟಿಗೆ ಮೊದಲಾದ ಭಾರವಾದ ಸರಕುಗಳನ್ನು ರೈಲುಬಂಡಿಗಳಲ್ಲಿ ಕಳುಹಿಸುವುದಕ್ಕಿಂತ ದೋಣಿಯಲ್ಲಿ ತುಂಬಿ ಕಳುಹಿಸು ವುದು ಅಗ್ಗವಾದುದರಿಂದ, ವ್ಯಾಪಾರಕ್ಕೆ ಈ ತೋಡು ಬಹಳ ಉಪಯುಕ್ತ ವಾಗಿದೆ. ಈ ತೋಡು ಮದ್ರಾಸಿನಿಂದ ಬಡಗು 37 ಮೈಲು ವರೆಗೆ ಹೋದನಂತರ ಪಳವೇರ್ಕಾಡು ಸರೋವರಕ್ಕೆ ಅಲ್ಲಿಂದ ಗುಂಟೂರು ಜಿಲ್ಲೆಯ ವರೆಗೆ ವಿಸ್ತರಿಸಿ, ಕೃಷ್ಣಾನದಿಯ ಒಂದು ಶಾಖೆಯೊಡನೆ ಬೆರೆತು, ಅಲ್ಲಿಂದ ಉಳಿದ ಭಾಗವು ಗೋದಾವರಿನದಿಯ ಒಂದು ತೋಡಿನೊಡನೆ ಸಂಗಮ

ವಾಗುತ್ತದೆ. ಹೀಗೆ ಈ ತೋಡು ಮದ್ರಾಸಿನಿಂದ ಗೋದಾವರಿನದಿಯ ಶಾಖೆಯ ವರೆಗೆ ಕಡಲು ಕರಾವಳಿಯನ್ನು ಸಮೀಪಿಸಿ ಒಂದೇಯಾಗಿ ಹರಿದರೂ, ಅಲ್ಲಲ್ಲಿ ಇದರಿಂದ ಸಣ್ಣ ಸಣ್ಣ ಕಾಲಿವೆಗಳನ್ನು ತೋಡಿ ಒಳನಾಡುಗಳಲ್ಲಿ ಹೋಗುವಂತೆ ಮಾಡಿರುವುದರಿಂದ, ಕಡಲು ತೀರದಿಂದ ಬಲು ದೂರ ಒಳನಾಡಿನಲ್ಲಿರುವ ಅನೇಕ ದೊಡ್ಡ ದೊಡ್ಡ ಪಟ್ಟಣಗಳೊಡನೆ ವ್ಯಾಪಾರವು ಚೆನ್ನಾಗಿ ನಡೆಯುತ್ತದೆ.

ಕಡಪ ಕರ್ನೂಲ್ಲು ಕಾಲಿವೆ.— ಈ ಕಾಲಿವೆಯು ತುಂಗಭದ್ರಾ ನದಿಯಿಂದ ಕರ್ನೂಲು ಪಟ್ಟಣದ ವಾಯವ್ಯಕ್ಕೆ 17 ಮೈಲು ದೂರದಲ್ಲಿ ಪ್ರಾರಂಭಿಸಿ, ಪಟ್ಟಣವನ್ನು ದಾಟಿ, ಅಲ್ಲಿಂದ ಆಗ್ನೇಯಕ್ಕೆ ತಿರುಗಿ, ಕರ್ನೂಲು ಕಡಪಾ ಎಂಬ ಜಿಲ್ಲೆಗಳು ಕೂಡುವಲ್ಲಿ ಪಿನಾಕಿನಿ ನದಿಯೊಡನೆ ಸೇರುತ್ತದೆ. ಈ ಕಾಲಿವೆಯು ಹಲವೆಡೆ ಆಳವಿಲ್ಲ; ವ್ಯಾಪಾರವು ನಡೆಯುವುದು ಕಡಮೆ. ವ್ಯಾಪಾರಕ್ಕೆ ಅನುಕೂಲತೆ ಇಲ್ಲ.

ಪಶ್ಚಿಮ ಜಿಲ್ಲೆಗಳಲ್ಲಿರುವ ಕಾಲಿವೆಗಳು.— ಪಶ್ಚಿಮಕರಾವಳಿಯಲ್ಲಿ ಸಮುದ್ರಕ್ಕೆ ಹತ್ತರವಾಗಿ ಅನೇಕ ಕಾಲಿವೆಗಳು ಇವೆ. ಇವುಗಳಲ್ಲಿ ಬಡಗೆರೆಯಿಂದ ಬಲಿಯಾಪಟ್ಣದ ವರೆಗೆ ಇರುವ ಖಾರಿವೆ ಬಲು ಅಗಲ ಕಿರಿದಾಗಿದೆ. ಈ ತೀರದಲ್ಲಿ ನೆಲವು ಕಡಲನ್ನೂ ಹಲವು ಕಡೆ ಕಡಲು ನೆಲವನ್ನೂ ದೂಡಿಕೊಂಡು ಹೋದುದರಿಂದ ಖಾರಿವೆಗಳು ಉಂಟಾಗಿವೆ. ನೆಲವು ಕಡಲಿನೊಳಗೆ ಹೊರಟುಹೋದಂತಿದ್ದ ಅಲ್ಲಲ್ಲಿ ಬೇಕಾದುದ್ದನ್ನು ಅಗೆದು ತೆಗೆದು, ಎರಡು ಕಡೆಯಿರುವ ಖಾರಿವೆಗಳನ್ನು ಸರಕಾರದವರು ಜೋಡಿಸಿರುವರು. ತಿರುವಾಂಕೂರಿನ ಒಂದು ಸ್ಥಳದಲ್ಲಿ 2500 ಅಡಿಗಿಂತ ಉದ್ದವಾದ ಒಂದು ಮಲೆಯನ್ನು ಕಡಿದು, ಕಾಲಿವೆಯನ್ನು ತೋಡಿದ್ದಾರೆ. ಅನೇಕ ಸ್ಥಳಗಳಲ್ಲಿ ಸಮುದ್ರಕ್ಕೆ ಸೇರಿರುವ ಈ ಕಾಲಿವೆಗಳನ್ನು ನೋಡುವಾಗ ಅವು ಸಮುದ್ರ ಭಾಗದಂತೆ ತೋರುತ್ತವೆ. ಕಾಲಿವೆಗೂ ಕಡಲಿಗೂ ಮಧ್ಯದಲ್ಲಿರುವ ಮಳಲ ದಂಡೆಯು ಕಾಲು ಮೈಲಿಗಿಂತ ಅಗಲವಿರುವುದಿಲ್ಲ. ಇಂಥಾ ಉಸುಬಿನ ದಂಡೆಗಳಲ್ಲಿ ತೆಂಗನ್ನು ಸಮೃದ್ಧಿಯಾಗಿ ಬೆಳಿಸುತ್ತಾರೆ. ಕಾಲಿವೆಗಳ ಮೂಲಕ ಒಳನಾಡುಗಳಿಂದ ರೇವುಪಟ್ಟಣಗಳಿಗೆ ತೆಂಗಿನಕಾಯಿ, ಹಗ್ಗ, ಕರಿಮೆಣಸು, ಕಾಫಿ, ಏಲಕ್ಕಿ, ಮೊದಲಾದ ಸರಕನ್ನು ಸಾಗಿಸುವುದಕ್ಕೆ ಅನುಕೂಲವಾಗಿದೆ.

ರೇವುಗಳು.—ಪೂರ್ವ ಪಶ್ಚಿಮ ತೀರಗಳ ಮೇಲೆ, ಅನೇಕ ರೇವುಗಳಿದ್ದರೂ, ಅವುಗಳಲ್ಲಿ ಒಂದಾದರೂ ಹಡಗುಗಳು ತಂಗತಕ್ಕ ಬಂದರು ಎಂದು ಹೇಳುವುದು ಕಷ್ಟ. ಪೂರ್ವತೀರದ ಹತ್ತಿರ ಸಮುದ್ರವು ಆಳವಾಗಿದ್ದರೂ ಹೊಗೆಹಡಗುಗಳು ಕರೆಯಿಂದ 4 ಯಾ 3 ಮೈಲು ದೂರಕ್ಕೆ ನಿಲ್ಲಬೇಕಾಗುತ್ತದೆ. ಮದ್ರಾಸಿನಲ್ಲಿ ಮಾತ್ರವೇ ಅನೇಕ ಲಕ್ಷ ರೂಪಾಯಿ



ಸರಕಿನ ಹಡಗು.


ಖರ್ಚು ಮುಟ್ಟಿಸಿ, ಒಂದು ಬಂದರು ಕಟ್ಟಿಸಿ, ಅದರೊಳಗೆ ಹಡಗುಗಳಿಗೆ ಬಂದು ನಿಲ್ಲುವಷ್ಟು ಅನುಕೂಲವನ್ನು ಒದಗಿಸಿರುತ್ತಾರೆ. ಆದರೆ ಇದು ಕೂಡ ಸುರಕ್ಷಿತವಾದ ಪ್ರಾಮುಖ್ಯವಾದ ಬಂದರು ಎಂದು ಹೇಳಲಿಕ್ಕೂ ಸಾಧ್ಯವಿಲ್ಲ. ಪೂರ್ವದಂಡೆಯ ಮೇಲೆ ಬಡಿಯುವ ದೊಡ್ಡ ತೆರೆಗಳು ಅಪ್ಪಳಿಸುವಾಗ ಮರಳನ್ನು ತಂದುಹಾಕುವುದರಿಂದ ಸಮುದ್ರವು ದಡದ ಹತ್ತಿರ ಅಷ್ಟು ಆಳವಿರುವುದಿಲ್ಲ. ಪೂರ್ವಘಟ್ಟಗಳ ಒಂದು ಶಾಖೆಯು ವಿಶಾಖಪಟ್ಟಣದ ಹತ್ತಿರ ಸಮುದ್ರದಲ್ಲಿ ಚಾಚಿಕೊಂಡಿದೆ. ಅಲ್ಲಿ ಹಡಗುಗಳು ದಡವನ್ನು ಸಮೀಪಿಸುತ್ತವೆ. ಬಂದರುಗಳು ಎನ್ನಿಸಬೇಕಾದರೆ ಹಡಗುಗಳು ತೀರದ ಬಳಿ

ಸೇರಿ ನಿಲ್ಲುವಷ್ಟು ಕಡಲು ಆಳವಿರಬೇಕು; ವ್ಯಾಪಾರವು ಸರಿಯಾಗಿ ನಡಿಯುವಂತೆ ದವಸಧಾನ್ಯಗಳು ಬೆಳೆಯತಕ್ಕ ಪ್ರದೇಶವಾಗಲಿ ಅಥವಾ ಲೋಹಗಳು ಸಿಗುವ ಗನಿಗಳಾಗಲಿ ಬಂದರುಗಳ ಸಮೀಪ ಇರಬೇಕು; ಹಡಗುಗಳಿಂದ ಅನೇಕ ವಿಧವಾದ ಸರಕುಗಳನ್ನು ಇಳಿಸಿ ಅವನ್ನು ಊರೂರುಗಳಿಗೆ ಸಾಗಿಸುವುದಕ್ಕೆ ದೊಡ್ಡ ರಸ್ತೆಗಳೂ ರೈಲುರಸ್ತೆಗಳೂ ಕಾಲಿವೆಗಳೂ ಇರಬೇಕು.

ರೈಲು.—ನಮ್ಮಲ್ಲಿ ಯಾರಾದರೂ ರೈಲುರಸ್ತೆಯನ್ನಾಗಲಿ, ಉಗಿಬಂಡಿಯನ್ನಾಗಲಿ ನೋಡದವರು ಇದ್ದರೆ ಅದನ್ನು ಹೋಗಿ ನೋಡುವುದು ಒಳ್ಳೆಯದು. ಸಾಧಾರಣ ದಾರಿಗಳಲ್ಲಿ ಎತ್ತರತಗ್ಗುಗಳು ಕಾಣುವ ಹಾಗೆ ರೈಲುರಸ್ತೆಯಲ್ಲಿ ಕಾಣುವುದಿಲ್ಲ. ಏರು ತಗ್ಗು ಇರುವ ಸ್ಥಳಗಳನ್ನು, ತಗ್ಗುಪ್ರದೇಶಗಳಲ್ಲಿ ಈ ರಸ್ತೆಯನ್ನು ಬಹಳ ಎತ್ತರವಾಗಿಯೂ ಗುಡ್ಡ ಮಲೆಪ್ರದೇಶಗಳಲ್ಲಿ ನೆಲವನ್ನು ಕೊರೆದು ತಗ್ಗಾಗಿಯೂ ಸಮತಟ್ಟು ಮಾಡಿದನಂತರ ಅವುಗಳ ಮೇಲೆ ಉದ್ದವಾದ ಕಬ್ಬಿಣದ ಕಂಬಿಗಳನ್ನು ಹಾಸುತ್ತಾರೆ. ಬಂಡಿಯ ಬಲವಾದ ಚಕ್ರಗಳು ಈ ಹಾದಿಯ ಮೇಲೆ ಉರುಳಿಕೊಂಡು ಹೋಗುತ್ತವೆ. ಆವಿಯಂತ್ರ ಉಳ್ಳ ಬಂಡಿಯೇ ಅತಿ ದೊಡ್ಡದಾಗಿದೆ. ಅದಕ್ಕೆ ಒಂದರ ಹಿಂದೆ ಹಲವು ಬಂಡಿಗಳು ಕಟ್ಟಿರುತ್ತವೆ. ಸಾಧಾರಣ ನೆಲದಲ್ಲಿ ಅಂಥ ಬಂಡಿಗಳು ಹೆಚ್ಚು ಭಾರ ಇರುವುದರಿಂದ ಓಡಲಾರವು. ಆದಕಾರಣ ಚಕ್ರಗಳು ಉರುಳಿ ಹೋಗುವುದಕ್ಕೆ ಕಬ್ಬಿಣದ ಕಂಬಿಗಳು ಅವಶ್ಯ. ಈ ಕಂಬಿಗಳು ನಯವಾಗಿರುವುದರಿಂದ ಚಕ್ರಗಳು ಬೇಗನೆ ಉರುಳುತ್ತಾ ವೇಗವಾಗಿ ಬಂಡಿಯು ಹೋಗುತ್ತದೆ. ಈ ಸಂಸ್ಥಾನದಲ್ಲಿ ಎರಡು ವಿಧದ ರೈಲುಮಾರ್ಗಗಳಿವೆ. ಒಂದು ಅಗಲ ಕಿರಿದಾಗಿ ಈ ಕಂಬಿಗಳ ನಡುವೆ 3½ ಫೀಟು ಅಂತರವುಳ್ಳದ್ದಾಗಿದೆ. ಇನ್ನೊಂದರಲ್ಲಿ 5½ ಅಡಿ ಅಂತರವಿದೆ. ಈ ಕಂಬಿಗಳ ಮೇಲೆ ಓಡುವ ಬಂಡಿಗಳಲ್ಲಿಯೂ ಪರಿಮಾಣದಲ್ಲಿ ವ್ಯತ್ಯಾಸವಿದೆ. ಈ ಸಂಸ್ಥಾನದಲ್ಲಿ ಕಬ್ಬಿಣದ ಪಟ್ಟಿಯ ಹಾದಿಯು ಹೆಚ್ಚು ಕಡಮೆ 4000 ಮೈಲು ಇದೆ.

ಮದ್ರಾಸಿನಿಂದ ಕಲ್ಕತ್ತೆಗೆ ಹೋಗುವ ರಸ್ತೆ ನಮ್ಮ ಸಂಸ್ಥಾನದಲ್ಲಿ ಮದ್ರಾಸಿನಿಂದ ಗಂಜಾಮ್ ಜಿಲ್ಲೆಯ ಉತ್ತರ ಗಡಿಯ ವರೆಗೆ ಚಾಚಿಕೊಂಡಿದೆ. ಮದ್ರಾಸಿನಿಂದ ತೆಂಕುದಿಕ್ಕಿಗೆ ಹೋಗುವ ರಸ್ತೆಯು ರಾಮೇಶ್ವರದ ವರೆಗೆ ಹೋಗಿ ಲಂಕಾದ್ವೀಪದ ಕೊಲೊಂಬೊ ಎಂಬ ಸ್ಥಳಕ್ಕೆ ಹೋಗುವ ರೈಲುರಸ್ತೆಗೆ ಸೇರುತ್ತದೆ. ಇನ್ನೊಂದು ರಸ್ತೆಯು ಪಶ್ಚಿಮದಲ್ಲಿ ಕಲ್ಲಿಕೋಟೆ ವರೆಗೆ ಹೋಗಿ

ಅಲ್ಲಿಂದ ಉತ್ತರಕ್ಕೆ ಮಂಗಳೂರು ವರೆಗೆ ಹೋಗುತ್ತದೆ. ಮತ್ತೊಂದು ಪೀಠ ಭೂಮಿಯನ್ನು ದಾಟಿ ಕಡಪ ಕರ್ನೂಲು ದಾರಿಯಾಗಿ ರೈಚೂರು ವರೆಗೆ ಹೋಗಿ, ಅಲ್ಲಿಂದ ಬೊಂಬಾಯಿಗೆ ಹೋಗುವ ರಸ್ತೆಗೆ ಕೂಡುತ್ತದೆ. ಬೇರೊಂದು ರಸ್ತೆಯು ಮೈಸೂರಿನಲ್ಲಿರುವ ಬೆಂಗಳೂರಿಗೆ ಹೋಗಿ ನಿಲ್ಲುತ್ತದೆ. ಇದಕ್ಕೆಲ್ಲ



ಕಬ್ಬಿಣದ ಪಟ್ಟಿಯ ಹಾದಿ.

ಅಲ್ಲಲ್ಲಿ ಶಾಖೋಪಶಾಖೆಗಳಿವೆ. ಈ ಸಂಸ್ಥಾನದ ರೈಲುರಸ್ತೆಗಳು ಮುಖ್ಯ ವಾಗಿ ದಕ್ಷಿಣ ಇಂಡಿಯ ರೇಲ್ವೆ ಮತ್ತು ಮದ್ರಾಸ ಮಹಾರಾಷ್ಟ್ರ ರೇಲ್ವೆ ಎಂಬ ಎರಡು ಕಂಪೆನಿಯವರ ಆಡಳಿತೆಯಲ್ಲಿವೆ.

ರೈಲುರಸ್ತೆಯ ಪ್ರಯೋಜನಗಳು.—ರೈಲುರಸ್ತೆಗಳಾದರೆ ಪ್ರಯಾಣವು ವೇಗವಾಗಿಯೂ ಅಗ್ಗವಾಗಿಯೂ ನಿರಪಾಯವಾಗಿಯೂ ಸಾಗುತ್ತದೆ. ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಅಗತ್ಯ ಬಿದ್ದಹಾಗೆ, ಸರಕುಸಾಮಾನು ಗಳನ್ನು ಮುಟ್ಟಿಸಲಿಕ್ಕೆ ಅನುಕೂಲವಾಗುತ್ತದೆ. ಕ್ಷಾಮಕಾಲದಲ್ಲಿ ಉಗಿಬಂಡಿ ಯು ಅತ್ಯಗತ್ಯವೆಂದು ತೋರುವುದು. ಕಾಳುಕಡಿಯು ಸಮೃದ್ಧಿಯಾಗಿ ದೊರೆ ಯುವ ಸ್ಥಳಗಳಿಂದ ಬರಬಿದ್ದ ದೇಶಗಳಿಗೆ ಅವಸರದಿಂದ ಮುಟ್ಟಿಸಲಿಕ್ಕೆ ಪೂರ್ವ ಕಾಲದಲ್ಲಿ ಅಸಾಧ್ಯವಾಗಿತ್ತು ಎಂದು ಈ ಮೊದಲೇ ಹೇಳಿರುವೆವಷ್ಟೆ! ದೂರ ದೇಶಗಳಲ್ಲಿ ವಾಸಿಸುವವರಿಗೆ ಕಾಗದಪತ್ರಗಳ ಮೂಲಕ ಪರಸ್ಪರ ಯೋಗ

ಕ್ಷೇಮವನ್ನು ತಿಳಿಸುವುದಕ್ಕೆ ಅನುಕೂಲವಾಗುತ್ತದೆ. ಹೊಗೆಹಡಗುಗಳು ಬಂದರುಗಳಲ್ಲಿ ಇಳಿಸುವ ವಿದೇಶಿ ವಸ್ತುಗಳನ್ನು ಒಳನಾಡುಗಳಿಗೆ ಸಾಗಿಸುವುದಕ್ಕೂ ಒಳನಾಡುಗಳಿಂದ ಪರರಾಜ್ಯಗಳಿಗೆ ಸಾಗಿಸುವ ಸರಕುಗಳನ್ನು ಬಂದರುಸ್ಥಳಗಳಿಗೆ ಒಯ್ಯುವುದಕ್ಕೂ ರೈಲ್‌ಬಂಡಿಗಳು ಸಹಾಯಕವಾಗಿವೆ.

ಜನಸಂಖ್ಯೆ.—ಜನಗಳ ಸಂಖ್ಯೆ ಎಲ್ಲಾ ಕಡೆಗಳಲ್ಲಿಯೂ ಒಂದೇ ರೀತಿಯಾಗಿರುವುದಿಲ್ಲ. ಹಾಗೆ ಹೆಚ್ಚುಕಡಮೆ ಇರುವುದಕ್ಕೆ ಕಾರಣವೇನು? ಮಲೆನಾಡುಗಳು, ಕಾಡುಪ್ರದೇಶಗಳು, ಮಳೆ ಇಲ್ಲದ ಪ್ರದೇಶಗಳು ಸಾಗುವಳಿಗೆ ಬಾರದ ಜಮೀನುಗಳು—ಇಂಥ ಕಡೆಗಳಲ್ಲಿ ಜನಗಳು ಸುಖವಾಗಿ ಉಳುಕೊಳ್ಳಲಾರರು. ಫಲವತ್ತಾದ ಜಮೀನು, ನೀರಿನ ಪೂರೈಕೆ, ವ್ಯಾಪಾರದ ಅನುಕೂಲತೆ, ಇವೆಲ್ಲ ಇರುವ ಸ್ಥಳಗಳಲ್ಲಿಯೂ ಲೋಹಗಸಿಗಳಾಗಲಿ ಕೈಗಾರಿಕೆ ನಡೆಯುವ ಕಾರಖಾನೆಗಳಾಗಲಿ ಇರುವ ಊರುಗಳಲ್ಲಿಯೂ ಜನಗಳು ಕೆಲಸಕ್ಕಾಗಲಿ ಕೂಲಿಗಾಗಲಿ ನೆಲಸುತ್ತಾರೆ. ಈ ಸಂಸ್ಥಾನದಲ್ಲಿ ಮಲೆನಾಡು ಹೆಚ್ಚಾಗಿರುವ ಉತ್ತರ ಸರಕಾರ ಜಿಲ್ಲೆಯಲ್ಲಿ ಚದರಮೈಲಿಗೆ 80ರಂತೆಯೂ, ಪೂರ್ವತೀರದ ತೆಂಕು ಜಿಲ್ಲೆಗಳಲ್ಲಿ ಫಲವತ್ತಾದ ಪ್ರದೇಶಗಳು ಇರುವುದರಿಂದ ಚದರಮೈಲಿಗೆ 429ರಂತೆಯೂ, ಪಶ್ಚಿಮತೀರದಲ್ಲಿ 400ರಂತೆಯೂ, ನಿವಾಸಿಗಳು ಇರುವರು. ದಕ್ಷಿಣ ಪೀಠಭೂಮಿಯಲ್ಲಿ ಮಳೆ ಕಡಮೆಯಾಗಿರುವುದರಿಂದ 147 ಮಂದಿ ಮಾತ್ರವೇ ಇರುವರು. ಎಲ್ಲಾ ಜಿಲ್ಲೆಗಳಲ್ಲಿಯೂ ನಿವಾಸಿಗಳ ಸಂಖ್ಯೆಯನ್ನು ಸರಿಹೋಲಿಸಿ ನೋಡಿದರೆ ಕಾವೇರಿ ನದಿಯ ಶಾಖೆಗಳಿಂದ ಫಲವತ್ತಾಗಿ ಮಾಡಲ್ಪಟ್ಟ ತಂಜಾವೂರು ಜಿಲ್ಲೆಯಲ್ಲಿ ಚದರ ಮೈಲಿಗೆ 634 ಮಂದಿ, ಗೋದಾವರಿನದಿಯ ಶಾಖೆಗಳು ಹರಿಯುವ ಗೋದಾವರಿ ಜಿಲ್ಲೆಯಲ್ಲಿ ಚದರಮೈಲಿಗೆ 568 ಮಂದಿ ಜನರು ಇರುವರೆಂದು ಲೆಕ್ಕ ಮಾಡಿದ್ದಾರೆ. ಇಡೀ ಸಂಸ್ಥಾನದ ಜನಸಂಖ್ಯೆ 420 ಲಕ್ಷ. ಇದರಲ್ಲಿ ಗಂಡಸರು 1000ವಾದರೆ ಹೆಂಗಸರು 832ರ ಲೆಕ್ಕದಲ್ಲಿ ಇರುತ್ತಾರೆ. ಈ ಜನಗಳಲ್ಲಿ ಹಲವು ಜಾತಿಗಳೂ ಅನೇಕ ಧರ್ಮಗಳೂ ಇವೆ. ಕಾಡುಗಳಲ್ಲಿ ವಾಸಿಸುವ ಕಾಡುಜನರು ನಾಡುಗಳಲ್ಲಿ ಕೃಷಿ ಮೊದಲಾದ ವೃತ್ತಿಗಳಿಂದ ಜೀವಿಸುವವರಷ್ಟು ನಾಗರಿಕರಲ್ಲ. ನಾಡುಗಳಲ್ಲಿ ಇರುವವರು ನಗರದಲ್ಲಿ ವಾಸ ಮಾಡುವವರಷ್ಟು ಸುಶಿಕ್ಷಿತರಲ್ಲ. ಈ ಸಂಸ್ಥಾನದಲ್ಲಿ ಮುಖ್ಯವಾಗಿ ಇರುವ ಧರ್ಮಗಳೂ ಆ ಮತದವರ ಜನಸಂಖ್ಯೆಯೂ ಈ ಕೆಳಗೆ ಕೊಟ್ಟಿದೆ.

ಹಿಂದುಗಳು	10,000ಕ್ಕೆ	8,892ರ	ಮೇರೆಗೆ
ಮಹಮ್ಮದೀಯರು	,,	660	,,
ಕ್ರೈಸ್ತರು	,,	289	,,
ಇತರರು	,,	159	,,

ಅವರು ಆಡುವ ಭಾಷೆಯಲ್ಲಿಯೂ ವ್ಯತ್ಯಾಸವಿದೆ. ತಮಿಳು, ತೆಲುಗು, ಮಲೆಯಾಳ, ಕನ್ನಡ, ಹಿಂದುಸ್ಥಾನಿ, ಉರಿಯಾ ಮೊದಲಾದ ಅನೇಕ ಭಾಷೆಗಳು ವಾಡಿಕೆಯಲ್ಲಿವೆ. ಮದ್ರಾಸಿನ ಉತ್ತರದಲ್ಲಿ ಸ್ವಲ್ಪ ಮೈಲು ದೂರದ ವರೆಗೆ ತೆಂಕು ಕನ್ಯಾಕುಮಾರಿ ವರೆಗೆ ಎಲ್ಲಾ ಜಿಲ್ಲೆಗಳಲ್ಲಿಯೂ ತಮಿಳನ್ನು ಆಡುತ್ತಾರೆ. ಉಳಿದ ಬಡಗು ಜಿಲ್ಲೆಗಳಲ್ಲಿಯ ಮುಖ್ಯ ಭಾಷೆಯು ತೆಲುಗು. ಬಳ್ಳಾರಿ ಅನಂತಪುರ ಜಿಲ್ಲೆಗಳಲ್ಲಿಯೂ ಕೊಯಮುತ್ತೂರು ಜಿಲ್ಲೆಯ ಕೆಲ ಭಾಗದಲ್ಲಿಯೂ ಮೈಸೂರಿನಲ್ಲಿಯೂ ದಕ್ಷಿಣ ಕನ್ನಡದಲ್ಲಿಯೂ ಕನ್ನಡ ಭಾಷೆಯೇ ವಾಡಿಕೆ. ಮಲೆಯಾಳ ಕೊಚ್ಚಿ ತಿರುವಾಂಕೂರು ಈ ಸ್ಥಳಗಳಲ್ಲಿ ಮಲೆಯಾಳವನ್ನು ಆಡುತ್ತಾರೆ. ಗಂಜಾಮ್ ಜಿಲ್ಲೆಯಲ್ಲಿ ಮುಖ್ಯವಾಗಿ ಅದರ ಬಡಗು ದಿಕ್ಕಿನಲ್ಲಿ ಉರಿಯಾ ಭಾಷೆ ಆಡುತ್ತಾರೆ. ಮಹಮ್ಮದೀಯರು ಹೆಚ್ಚಾಗಿ ಆಡುವ ಮಾತು ಹಿಂದುಸ್ಥಾನಿ.

ಜಿಲ್ಲೆಗಳು.—1 ಗಂಜಾಮ್, 2 ವಿಶಾಖಪಟ್ಣ, 3 ಗೋದಾವರಿ, ಇವು ಮದ್ರಾಸ ಸಂಸ್ಥಾನದ ಬಡಗು ಭಾಗದಲ್ಲಿ ಪೂರ್ವ ಕರಾವಳಿಯಲ್ಲಿರುವ ಜಿಲ್ಲೆಗಳು. ಇವಕ್ಕೆ ಉತ್ತರ ಸರಕಾರದ ಜಿಲ್ಲೆಗಳೆಂದು ಹೆಸರುಂಟು. ಉತ್ತರ ದಿಕ್ಕಿನಲ್ಲಿ ನಮ್ಮ ಸಂಸ್ಥಾನದ ಬಡಗು ಕಡೆ ಇರುವ ಜಿಲ್ಲೆಯೇ ಗಂಜಾಮ್. ಇದರ ವಾಯವ್ಯದಿಕ್ಕಿನಲ್ಲಿ ಬಿಹಾರ ಒರಿಸ್ಸಾ ಸಂಸ್ಥಾನವಿದೆ. ಇದರ ತೆಂಕು ದಿಕ್ಕಿಗೆ ಕ್ರಮವಾಗಿ ವಿಶಾಖಪಟ್ಣ, ಗೋದಾವರಿ ಕೃಷ್ಣಾ ಗುಂಟೂರು ಎಂಬ ಜಿಲ್ಲೆಗಳು ಇವೆ. ಪಟವನ್ನು ನೋಡಿ ಅವನ್ನು ಗುರುತಿಸಿಕೊಳ್ಳಬೇಕು.

ಏಜನ್ಸಿ ಟ್ರಾಕ್ಟು.—ಗಂಜಾಮ್, ವಿಶಾಖಪಟ್ಣ, ಗೋದಾವರಿ ಎಂಬ ಜಿಲ್ಲೆಗಳ ಸ್ಥಿತಿಯು ಹೇಗಿದೆ ಎಂದು ಪಟವನ್ನು ನೋಡಿ ತಿಳುಕೊಳ್ಳಬೇಕು. ಈ ಮೂರು ಜಿಲ್ಲೆಗಳಲ್ಲಿಯೂ ಬಡಗು ದಿಕ್ಕಿನಿಂದ ತೆಂಕಿನ ವರೆಗೆ ಪೂರ್ವಘಟ್ಟಗಳು ವಿಸ್ತರಿಸಿವೆ. ಈ ಗಟ್ಟಗಳ ಪೂರ್ವ ಮತ್ತು ಪಶ್ಚಿಮದಲ್ಲಿರುವ ಉನ್ನತ ಭೂಮಿಯನ್ನು ಮಲೆನಾಡು ಎಂತಲೂ, ಪೂರ್ವ ಪೀಠಭೂಮಿಯಿಂದ

ಸಮುದ್ರದ ವರೆಗೆ ಚಾಚಿಕೊಂಡಿರುವ ತಗ್ಗುಭೂಮಿಯನ್ನು ಸಮಭೂಮಿ ಯೆಂತಲೂ ಕರೆಯುತ್ತಾರೆ. ಈ ಮಲೆನಾಡಿಗೆ ಏಜನ್ಸಿ ಟ್ರಾಕ್ಟು ಎಂದು ಹೇಳು ತ್ತಾರೆ. ಗಂಜಾಮ್ ಜಿಲ್ಲೆಯ ಮಲೆನಾಡುಗಳಿಗೆ ಮಲಯ ಮಲೆ ಎಂದು ಹೆಸರು. ಇದು ಒಂದರ ಹಿಂದೆ ಒಂದಾಗಿ ಹಲವು ಮಲೆಯ ಸಾಲುಗಳಿಂದಲೂ, ಎಡೆ ಎಡೆಯಲ್ಲಿ ತಗ್ಗುಭೂಮಿಗಳಿಂದಲೂ ಕೂಡಿದ್ದು, ನೋಟಕ್ಕೆ ಬಹಳ ಮನೋಹರ ವಾದ ಪೀಠಭೂಮಿಯಾಗಿದೆ. ಈ ಪೀಠಭೂಮಿಯು ಸುಮಾರು ಎರಡರಿಂದ ಮೂರು ಸಾವಿರ ಫೀಟು ಎತ್ತರವಿದೆ. ಬಡಗು ಕಡೆ ಈ ಜಿಲ್ಲೆಯ ಮಲೆನಾಡುಗಳು ಸುಮಾರು ಐದು ಸಾವಿರ ಫೀಟು ಎತ್ತರವಿವೆ. ಇವುಗಳಲ್ಲಿ ಮುಖ್ಯವಾದವು ಸಿಂಹಾಚಾಲನ್, ಮಹೇಂದ್ರಗಿರಿ, ಎಂಬ ಎರಡು ಮಲೆಗಳು. ವಿಶಾಖಪಟ್ಣ ದಲ್ಲಿ ನಿಯಮಗಿರಿ ಎಂಬ ಶಿಖರವು ಐದು ಸಾವಿರ ಫೀಟು ಎತ್ತರವಿದೆ. ಗೋದಾವರಿ ಜಿಲ್ಲೆಯಲ್ಲಿ 4500 ಫೀಟಿಗೆ ಮಿಕ್ಕಿರುವ ಶಿಖರಗಳಿಲ್ಲ. ಈ ಮಲೆ ನಾಡುಗಳು ಭಯಂಕರವಾದ ಕಾಡುಪ್ರದೇಶಗಳಾಗಿವೆ. ಅಲ್ಲಿರುವ ಜನರು ಮಲೆಯ ಬದಿಗಳಲ್ಲಿಯ ಕಾಡನ್ನು ಕಡಿದು, ಬೆಂಕಿ ಕೊಟ್ಟು, ಸುಟ್ಟ ಬೂದಿಯಲ್ಲಿ ಬೀಜ ಬಿತ್ತಿ ಕೃಷಿ ಮಾಡುತ್ತಾರೆ. ಈ ಕುಮರಿಗಳಲ್ಲಿ ಹುಲಿ, ಕರಡಿ, ಕಾಡು ಹೋತು, ಕಡವೆ, ಕಾಟಿ ಮೊದಲಾದ ಮೃಗಗಳು ವಿಶೇಷವಾಗಿವೆ. ಬೇಂಗ, ಕರಿಮರ ಮೊದಲಾದ ಬಹಳ ಬೆಲೆಯುಳ್ಳ ಮರಗಳೂ ಬಿದಿರೂ, ಈ ಕಾಡುಗಳಲ್ಲಿ ಮುಖ್ಯವಾಗಿ ಬೆಳೆಯುತ್ತವೆ. ತೇಗಿನ ಮರವು ಈ ಕಾಡು ಗಳಲ್ಲಿ ಚೆನ್ನಾಗಿ ಬೆಳೆಯುವುದಿಲ್ಲ; ವಿಶಾಖಪಟ್ಣ ಜಿಲ್ಲೆಯ ಜಯಪುರವೆಂಬಲ್ಲಿ ಮಾತ್ರ ಸ್ವಲ್ಪ ಬೆಳೆಯುತ್ತದೆ. ಕೆಲವು ಸ್ಥಳಗಳಲ್ಲಿ ಚಬುಕಿನ ಗಿಡ ಎಂಬ ಗಾಳಿ ಮರವು ಹೆಚ್ಚಾಗಿ ಬೆಳೆಯುತ್ತದೆ. ಅದರ ಬೆಳೆಗೆ ಅಲ್ಲಿಯ ಮಣ್ಣು ಒಳ್ಳೆಯ ದಾಗಿದೆ. ಇದು ಅಲ್ಲದೆ ಈ ಕಾಡುಗಳಲ್ಲಿ ತೊಗಲು ಹದಮಾಡುವುದಕ್ಕೆ ಬೇಕಾದ ಅಣಿಲೆ ಮೊದಲಾದ ಕೆಲವು ಕಾಯಿಗಳು, ಜೇನುತುಪ್ಪ, ಜೇನು ಮಯಣ, ಅರಗು, ಗೋಂದು ಮೊದಲಾದುವು ಸಿಗುತ್ತವೆ. ಹುಳಿಯೂ, ಹಳದಿಯೂ ಧಾರಾಳವಾಗಿ ಇವೆ.

ಶೀತೋಷ್ಣಸ್ಥಿತಿ, ಮಳೆ.—ಮಲೆನಾಡುಗಳು ಮನುಷ್ಯ ನಿವಾಸಕ್ಕೆ ಯೋಗ್ಯವಾದವುಗಳಲ್ಲ. ಚಳಿಕಾಲದಲ್ಲಿ ಚಳಿಯೂ, ಶೀತವೂ ಹೆಚ್ಚು. ಅಲ್ಲಿ ರುವವರಿಗೆ ಜ್ವರವೆಂಬುದು ಒಂದು ಸಾಮಾನ್ಯ ರೋಗವಾಗಿದೆ. ಮಳೆಯು ಬೇಸಿಗೆಕಾಲದಲ್ಲಿ ಚೆನ್ನಾಗಿ ಹೊಯ್ಯುತ್ತದೆ. ಕೆಲವು ಸ್ಥಳಗಳಲ್ಲಿ ಹೆಚ್ಚು

ಕಡಮೆ 75 ಇಂಚು, ಇನ್ನು ಕೆಲವು ಪ್ರದೇಶಗಳಲ್ಲಿ 55 ಇಂಚು ವರೆಗೆ ಮಳೆ ಬೀಳುತ್ತದೆ. ಮಲೆಗಳಲ್ಲಿ ಸುರಿಯುವ ಮಳೆಯಿಂದ ಉಂಟಾದ ಸಣ್ಣ ತೋಡುಗಳು ಕೆಲವು ಪೂರ್ವಕ್ಕೂ ಕೆಲವು ಆಗ್ನೇಯಕ್ಕೂ ಹರಿದು ಬಂಗಾಳ ಕೊಲ್ಲಿಗೆ ಸೇರುತ್ತವೆ. ಇವುಗಳಲ್ಲಿ ಮುಖ್ಯವಾದುವು ಋಷ್ಯಕುಲ್ಯ, ವಂಶಧಾರಾ, ರಂಕೂಲ್ಯ ಎಂಬ ಮೂರು ಹೊಳೆಗಳು; ಋಷ್ಯಕುಲ್ಯವು ಗಂಜಾಮಿಗೆ ಬಡಗು ದಿಕ್ಕಿನಲ್ಲಿದೆ. ಈ ತೊರೆಗಳಿಗೆ ಅಣೆಕಟ್ಟನ್ನು ಕಟ್ಟಿ ನೀರನ್ನು ಹಲವು ಭಾಗಗಳಿಗೆ ತಿರುಗಿಸಿಕೊಂಡು ಹೋಗಿ ಕೃಷಿಗೆ ಉಪಯೋಗಿಸುತ್ತಾರೆ. ಈ ಪ್ರದೇಶಗಳಲ್ಲಿ ಬೈಲುಗಳು ಸಮತಟ್ಟಾಗಿರದೆ ಏರುತಗ್ಗಾಗಿರುವುದರಿಂದ ನೀರು ಬಿಡುವುದು ಪ್ರಯಾಸವಾಗಿದೆ. ಆದ್ದರಿಂದ ಕೆಲವು ಕಡೆಗಳಲ್ಲಿ ಜನಗಳು ಕಷ್ಟಪಟ್ಟು, ನೆಲವನ್ನು ಸಮತಟ್ಟಾಗಿ ಮಾಡಿರುವರು. ನೀರು ಹರಿಯುವುದಕ್ಕಾಗಿ ಮಾಡಿದ್ದ ತೋಡುಗಳಿಂದಲೂ ಹಲವು ಏರಿಗಳಿಂದಲೂ ನೀರು ಹರಿದು ಹೋಗಿ ಬಯಲುಗಳಿಗೆ ಬೀಳುತ್ತದೆ. ಮಲೆಪ್ರದೇಶಗಳಿಗೆ ಒತ್ತಾಗಿರುವ ಈ ತಗ್ಗುಭೂಮಿಗಳಲ್ಲಿ ಮುಖ್ಯವಾಗಿ ಬೆಳೆಯುವ ನೆಲ್ಲು, ರಾಗಿ, ಹೆಸರು, ಹಳದಿ, ಇವನ್ನೂ ಕಾಡುಗಳಲ್ಲಿ ಬೆಳೆಯುವ ಕಾಡು ಉತ್ಪತ್ತಿಗಳನ್ನೂ ಸಾಗಿಸಿ ತರುವುದಕ್ಕೆ ಸರಿಯಾದ ಹೆದ್ದಾರಿಗಳು ಇಲ್ಲದ್ದರಿಂದ ತಲೆಹೊರೆಯಾಗಿ ಇಲ್ಲವೆ ಹೇರಾಟವಾಗಿ ಸಮುದ್ರತೀರಕ್ಕೆ ಸಾಗಿಸಿ, ಅಲ್ಲಿ ವಿಕ್ರಯಿಸಿ, ಪ್ರತಿಯಾಗಿ ಬಟ್ಟೆ, ಉಪ್ಪು ಮೊದಲಾದುದನ್ನು ತೆಗದುಕೊಂಡು ಹೋಗುತ್ತಾರೆ. ಸಮತಟ್ಟಾದ ರಸ್ತೆ ಇಲ್ಲದ್ದರಿಂದ ಪ್ರಯಾಣವು ಪ್ರಯಾಸಕರವಾಗಿದೆ. ಮದ್ರಾಸ ಸಂಸ್ಥಾನದಿಂದ ವಿಶಾಖಪಟ್ಣಕ್ಕೆ ಈ ದಾರಿಯಾಗಿ ರೈಲುರಸ್ತೆ ಹಾಕಿಸುವುದಕ್ಕೆ ಹಲವು ಕಾಲದಿಂದ ಆಲೋಚನೆ ನಡೆಯುತ್ತಿದೆ. ಜಿಲ್ಲೆಯ ವಿಸ್ತೀರ್ಣ ಹೆಚ್ಚುಕಡಮೆ 2000 ಚದರಮೈಲು; ಇಷ್ಟು ವಿಸ್ತಾರಕ್ಕೆ ಇಲ್ಲಿಯ ಜನಸಂಖ್ಯೆ ಕಡಮೆ ಎನ್ನಬೇಕು.

ಏಜನ್ಸಿ ಟ್ರಾಕ್ಟು.	ವಿಸ್ತೀರ್ಣ (ಚದರಮೈಲು).	ಜನಸಂಖ್ಯೆ.
ಗಂಜಾಮ್	3,484	350,466
ವಿಶಾಖಪಟ್ಣ	12,621	1,020,154
ಗೋದಾವರಿ	3,676	206,902

ಗೋದಾವರಿ ಏಜನ್ಸಿಯಲ್ಲಿ ಜನಸಂಖ್ಯೆ ತೀರ ಕಡಮೆ. ಅಲ್ಲಿ ಚದರಮೈಲಿಗೆ ಒಲೇ 56 ಮಂದಿ ಜನ ಉಂಟು. ಇವರು ಹೆಚ್ಚಾಗಿ ಕಾಡುಜನರು.

ಇವರಲ್ಲಿ ಕ್ಹೊಂಡ, ಶವರ ಎಂಬ ಎರಡು ಜಾತಿಗಳುಂಟು. ಕಾಡುಜನ ರಾದರೂ ಚೆನ್ನಾಗಿ ದೇಹಪುಷ್ಟಿಯುಳ್ಳವರು. ಒಡ್ಡರೆಂಬ ಜಾತಿಯವರೂ ಇಲ್ಲಿಯೇ ವಾಸಮಾಡುತ್ತಾರೆ. ಇವರು ನಾಗರೀಕರಲ್ಲವಾದರೂ ಬಲು ಸತ್ಯವಂತರು, ವಿಶ್ವಾಸಿಗಳು. ಬಿಲ್ಲು, ಬಾಣ, ಕೊಡಲಿ ಮೊದಲಾದುವು ಇವರ ಮುಖ್ಯ ಆಯುಧಗಳು. ಮೇಲೆ ಹೇಳಿದ ಸೀಮೆಗಳಲ್ಲಿ ಜವಿಾನು ಉಳ್ಳ ಅನೇಕ ವರ್ಗದಾರರಿರುವರು. ಜವಿಾನುದಾರನ ಹಿಡುವಳಿಯೊಳಗಿದ್ದ ಯಾವತ್ತು ಜವಿಾನಿಗೆ ಜವಿಾನುದಾರಿ ಎಂದು ಹೆಸರು. ವಿಶಾಖಪಟ್ಣದಲ್ಲಿ ವಿಜಯನಗರಂ, ಗಂಜಾಮ್ ಜಿಲ್ಲೆಯಲ್ಲಿ ಪರ್ಲಾಕಿಮಿಡಿ, ವೆದ್ದಮಿಡಿ, ಜನ್ನಕ್ಕಿ ಮಿಡಿ, ಹೀಗೆ ಅನೇಕ ಜವಿಾನುದಾರಿಗಳುಂಟು. ಪರ್ಲಾಕಿಮಿಡಿಗೆ ನವವಾಡ ದಿಂದ ರೈಲುಮಾರ್ಗವಿದೆ. ಅಲ್ಲಿಯ ಜವಿಾನುದಾರರು ಸ್ವಂತವಾಗಿ ಒಂದು ಕೋಲೇಜನ್ನೂ ಸಂಸ್ಕೃತ ಪಾಠಶಾಲೆಯನ್ನೂ ವೈದ್ಯಶಾಲೆಯನ್ನೂ ನಡಿಸಿ ಕೊಂಡು ಬರುತ್ತಾರೆ. ಗೋದಾವರಿ ಜಿಲ್ಲೆಯಲ್ಲಿ ಭದ್ರಾಚಲಂ ಜವಿಾನು ದಾರಿಯ ಪ್ರಸಿದ್ಧವಾದ ಒಂದು ಕ್ಷೇತ್ರವಿದೆ. ಅಲ್ಲಿಯ ಜನರು ನಾಗರೀಕತೆ ಯಿಲ್ಲದವರು, ಸುಧಾರಣೆ ಹೊಂದಿದ ಜನಗಳ ರೀತಿ, ನೀತಿಗಳನ್ನು ತಿಳಿಯ ದವರು. ಏಜನ್ಸಿ ಟ್ರಾಕ್ಟು ಎಂದು ಹೆಸರು ಸಲ್ಲುವ ಈ ಸೀಮೆಯೊಳಗೆ ಯಾವತ್ತು ಸಿವಿಲ್ ಕ್ರಿಮಿನಾಲ್ ಅಧಿಕಾರವು ಮದ್ರಾಸ ಗವರ್ನರವರ ಕೈಯಲ್ಲಿದ್ದು ಅವರ ಏಜಂಟರೇ ನಡಿಸುತ್ತಾರೆ.

ಸಮಭೂಮಿ.—ಮೇಲೆ ಹೇಳಿದ ಮೂರು ಜಿಲ್ಲೆಗಳ ಒಳಗಿನ ಕರಾ ವಳಿಯ ಭೂಮಿಯಲ್ಲಿ ಮೇಲಿನ ಭೂಮಿ ಬಹಳ ಫಲವತ್ತಾಗಿರುವುದರಿಂದ ಈ ಸಮಭೂಮಿಯಲ್ಲಿ ಮಲೆನಾಡಿಗಿಂತಲೂ ಹೆಚ್ಚು ನಿವಾಸಿಗಳಿದ್ದಾರೆ.

ಏಜನ್ಸಿ ಟ್ರಾಕ್ಟು.	ವಿಸ್ತೀರ್ಣ (ಚದರವೈಲು).	ಜನಸಂಖ್ಯೆ.
ಗಂಜಾಮ್	4,896	2,221,000
ವಿಶಾಖಪಟ್ಣ	4,600	2,171,000
ಗೋದಾವರಿ	2,245	1,446,000

ಈ ಜಿಲ್ಲೆಗಳೊಳಗಿನ ಏಜನ್ಸಿ ಟ್ರಾಕ್ಟಿನಲ್ಲಿಯೂ ಸಮಭೂಮಿಯಲ್ಲಿಯೂ ಚದರವೈಲು ಒಂದಕ್ಕೆ ಜನಸಂಖ್ಯೆಯ ವ್ಯತ್ಯಾಸವು ಹೇಗುಂಟು ಎಂಬುದನ್ನು ಹಿಂದಿನ ಪಟ್ಟಿಯನ್ನೂ ಈ ಪಟ್ಟಿಯನ್ನೂ ಸರಿಹೋಲಿಸಿದರೆ ಗೊತ್ತಾಗು ವುದು.

ಮುಖ್ಯ ನದಿಗಳು.—ಸುಮಾರು ನೂರು ಮೈಲು ಉದ್ದವಾದ ಋಷಿಕುಲ್ಯವೆಂಬ ನದಿಯಿಂದಲೂ, ಇದು ಸಂಗಮವಾಗುವ ಮಹಾನದಿಯಿಂದಲೂ ತೋಡಿದ ಕಾಲಿವೆಗಳ ನೀರಿನಿಂದ ಸುಮಾರು 142,000 ಎಕ್ರೆ ಭೂಮಿಯನ್ನು ಕೃಷಿ ಮಾಡುತ್ತಾರೆ. ವಂಶಧಾರಾ ನದಿಯು ವಿಶಾಖಪಟ್ಣ ಜಿಲ್ಲೆಯ ಮಲೆಗಳಿಂದ ಹೊರಟು ಅಲ್ಲಿಂದ ಗಂಜಾಮ್ ಜಿಲ್ಲೆಯನ್ನು ಪ್ರವೇಶಿಸಿ ಅದರ ಕೂಡಿ, ಪ್ರವಾಹವಾಗಿ ಸೇರಿ, ಬಂಗಾಳ ಕೊಲ್ಲಿಗೆ ಹೋಗಿ ಬೀಳುತ್ತದೆ. ಇದರ ಮುಖದಲ್ಲಿ ಕಲಿಂಗಪಟ್ಣವೆಂಬ ರೇವು ಇದೆ. ಈ ನದಿಯ ಉದ್ದವು 145 ಮೈಲು. **ನಾಗಾವಲಿ** ಅಥವಾ **ಅಂಕುಲ್ಯ** ಎಂಬ ನದಿಯು ವಿಶಾಖಪಟ್ಣದ ಮಲೆಗಳಲ್ಲಿ ಉದ್ಭವಿಸಿ, ಆಗ್ನೇಯ ದಿಕ್ಕಿಗೆ ಹರಿದು, ಗಂಜಾಮ್ ವಿಶಾಖಪಟ್ಣ ಜಿಲ್ಲೆಗಳ ಗಡಿಯಾಗಿ ಹೋಗಿ, ಬಂಗಾಳ ಕೊಲ್ಲಿಗೆ ಕೂಡುತ್ತದೆ. ಇದರ ಮುಖದಲ್ಲಿ ಶ್ರೀಕಾಕುಳಂ ಎಂಬ ರೇವು ಇದೆ. ಈ ನದಿಯ ಉದ್ದ 45 ಮೈಲು. ಗೋದಾವರಿನದಿಯ ವಿಷಯವನ್ನು ಈ ಮೊದಲೇ ಹೇಳಿರುವೆವಷ್ಟೆ. ಈ ನದಿಯ ಶಾಖೆಗಳ ಮಧ್ಯದಲ್ಲಿ ಲಂಕೆಗಳೆಂಬ ಅನೇಕ ಸಣ್ಣ ಕುದುರುಗಳು ಇವೆ. ಅವುಗಳಲ್ಲಿ ಮುಖ್ಯವಾದ್ದಕ್ಕೆ ನಗರವೆಂದು ಹೆಸರು. ಅದು ಬಹಳ ಫಲವತ್ತಾಗಿದೆ. ತೆಂಗು, ಬಾಳೆ, ಇವೇ ಅಲ್ಲಿಯ ಮುಖ್ಯ ಬೆಳೆಗಳು. ಗಂಜಾಮ್ ಜಿಲ್ಲೆಯ ಬಡಗು ದಿಕ್ಕಿಗೆ ಇರುವ ಸರೋವರಕ್ಕೆ **ಚಿಲುಕ**ವೆಂದು ಹೆಸರು.

ಹವೆ.—ಇಲ್ಲಿಯ ಸಮಭೂಮಿಯು ಕರಾವಳಿಗೆ ಸಮೀಪವಾದ್ದರಿಂದ ಜನವಾಸಕ್ಕೆ ಯೋಗ್ಯವಾಗಿದೆ. ಆದುದರಿಂದ ದೊಡ್ಡ ಪಟ್ಟಣಗಳು ಆ ಸಮಭೂಮಿಯಲ್ಲಿ ಕಾಣುತ್ತವೆ. ವಿಶಾಖಪಟ್ಣದಲ್ಲಿ ಸುಮಾರು 50 ಇಂಚು, ಕೋಕನಾಡಿನಲ್ಲಿ 40 ಇಂಚು ಮಳೆ ಬೀಳುತ್ತದೆ. ಅಲ್ಲಲ್ಲಿ ಮಳೆಯ ಜತೆಯಲ್ಲಿ ಬೀಸುವ ಬಿರುಗಾಳಿಯಿಂದ ಹಾವಳಿಯಾಗುವುದುಂಟು. ನೆಲದಲ್ಲಿ ಧಾರಾಳವಾದ ಗೊಬ್ಬರವಿರುವುದರಿಂದಲೂ ತೊರೆತೋಡುಗಳು ಹೆಚ್ಚಾಗಿರುವುದರಿಂದಲೂ ಜಮೀನನ್ನು ನನೆಯಿಸುವುದಕ್ಕೆ ಬೇಕಾದಷ್ಟು ನೀರನ್ನು ಕಾಲಿವೆಗಳನ್ನು ತೋಡಿ ತಿದ್ದಿಕೊಟ್ಟದ್ದರಿಂದಲೂ, ಇಲ್ಲಿ ಕೃಷಿಯು ವಿಶೇಷವಾಗಿ ನಡೆಯುತ್ತದೆ.

ಉತ್ಪನ್ನಗಳು.—ಬತ್ತವೇ ಮುಖ್ಯವಾದ ಉತ್ಪತ್ತಿ. ರಾಗಿ, ಕಬ್ಬು, ಹೆಸರು ಮೊದಲಾದ ಧಾನ್ಯಗಳೂ ಧಾರಾಳವಾಗಿ ಬೆಳೆಯುತ್ತವೆ. ಗೋದಾವರಿ

ಜಿಲ್ಲೆಯಲ್ಲಿ ಸಾಮಲಕೋಟೆ ಎಂಬಲ್ಲಿ ಕಬ್ಬಿನ ಕೃಷಿಯನ್ನು ಅಭಿವೃದ್ಧಿ ಮಾಡುವುದಕ್ಕಾಗಿ ಒಂದು ಸರಕಾರಿ ವ್ಯವಸಾಯಕ್ಷೇತ್ರ ಇದೆ. ಅಲ್ಲಿ ತರ ತರದ ಕಬ್ಬು ಪೈದಾಸ್ತು ಆಗುತ್ತದೆ. ಗೋದಾವರಿ ಜಿಲ್ಲೆಯು ಹೊಗೆ ಸೊಪ್ಪಿನ ಕೃಷಿಗೆ ಹೆಸರುಗೊಂಡಿದೆ. ತೋಟಗಳಲ್ಲಿ ತರಕಾರಿಯನ್ನೂ ಒಂದು ವಿಧದ ಲಿಂಬೆಹುಳಿಯನ್ನೂ ಬೆಳಿಸುತ್ತಾರೆ. ಈ ಜಿಲ್ಲೆಯಲ್ಲಿ ಮೆಂಗೆನಿಸ್ ಎಂಬ ಒಂದು ಬಗೆಯ ಖನಿಜವು ದೊರೆಯುತ್ತದೆ.

ವೃತ್ತಿಗಳು.—ಕೃಷಿಯನ್ನು ಬಿಟ್ಟು ಉಳಿದ ವೃತ್ತಿಗಳಲ್ಲಿ ಮುಖ್ಯ ವಾದದ್ದು ನೇಯಿಗೆಯೇ. ಗಂಜಾಮ್ ಜಿಲ್ಲೆಯಲ್ಲಿ ಬರಹಂಪುರವು ಪಟ್ಟೆನೇಯಿ ಗೆಗೆ ಹೆಸರುವಾಸಿಯಾಗಿದೆ. ಶ್ರೀಕಾಕುಳವು ಅತೀ ತೆಳ್ಳಗಾದ ಮಸ್ಲೀನ ಬಟ್ಟೆಗೆ ಹೆಸರುಗೊಂಡಿದೆ. ಈ ವಸ್ತ್ರದ ನೂಲಿನ ಎಳೆಗಳು ಬಹು ನಯವಾಗಿವೆ. ಆಸ್ಕ ಎಂಬುದು ಸಕ್ಕರೆಗೆ ಪ್ರಖ್ಯಾತಿಗೊಂಡಿದೆ. ಕಡಲುಕರಾವಳಿಯಲ್ಲಿ ಹೆಚ್ಚಾಗಿ ನವಪಾಡ ಎಂಬ ಸ್ಥಳದಲ್ಲಿ ಉಪ್ಪನ್ನು ತಯಾರಿಸುತ್ತಾರೆ. ವಿಶಾಖಪಟ್ಣದಲ್ಲಿ ಜಂತ, ಗಂಧ, ಚೆಮ್ಮರ, ಇವುಗಳಿಂದ ಅತಿ ವಿಚಿತ್ರವಾದ ಹಲವು ವಿಧದ ಪೆಟ್ಟಿಗೆಗಳನ್ನು ತಯಾರಿಸುತ್ತಾರೆ. ಚಿಟ್ಟಿವಾತ್ಸಾ ಎಂಬ ಸ್ಥಳ ದಲ್ಲಿ ಸಣಬಿನ ನೂಲು, ಕೋಕನಾಡದಲ್ಲಿ ಬಟ್ಟೆನೇಯಿಗೆ ವಿಶೇಷವಾಗಿವೆ. ಹಿತ್ತಾಳಿಪಾತ್ರೆಗಳು, ತಾಮ್ರದ ಪಾತ್ರೆಗಳು, ಚಿನ್ನದ ವಸ್ತುಗಳು, ಬೆಳ್ಳಿಯ ಒಡವೆಗಳು, ಇವನ್ನು ಎಲ್ಲಾ ಸ್ಥಳಗಳಲ್ಲಿಯೂ ಮಾಡುತ್ತಾರೆ.


ಮಾರ್ಗಗಳು.—ಕಡಲುತೀರಕ್ಕೆ ಸಮೀಪವಾಗಿ ಮದ್ರಾಸಿನಿಂದ ಕಲ್ಕತ್ತೆಗೆ ಹೋಗುವ ರೈಲುರಸ್ತೆಯು ಪಶ್ಚಿಮೋತ್ತರವಾಗಿ ಚಾಚಿಕೊಂಡಿದೆ. ಗೋದಾವರಿ ನದಿಯ ಮಾರ್ಗವಾಗಿ ಕಾಲಿವೆಗಳ ಮೂಲಕವಾಗಿ 500 ಮೈಲು ದೂರದ ವರೆಗೆ ಅತ್ತಿತ್ತ ಹೋಗಲಿಕ್ಕೆ ಸಾಧ್ಯವಿದೆ.

ಭಾಷೆ.—ಈ ಜಿಲ್ಲೆಗಳಲ್ಲಿ ಆಡುವ ಭಾಷೆ ತೆಲುಗು. ಗಂಜಾಮಿನ ಉತ್ತರದಿಕ್ಕಿನ ಉರಿಯಾ ಭಾಷೆಯೂ ಇದೆ.

ಪಟ್ಟಣಗಳು.—ಗಂಜಾಮ್ ಜಿಲ್ಲೆ—ಒಂದು ಕಾಲದಲ್ಲಿ ಗಂಜಾಮು ಈ ಜಿಲ್ಲೆಯ ಮುಖ್ಯ ಪಟ್ಟಣವಾಗಿತ್ತು. ಇಲ್ಲಿ ಮಲೆಜ್ವರವು ತಪ್ಪದೆ ಇದ್ದದ ರಿಂದ ಬರಹಂಪುರವನ್ನು ಮುಖ್ಯ ಪಟ್ಟಣವಾಗಿ ಮಾಡಿದರು. ಅಲ್ಲಿಂದ ಇತ್ತ ಗಂಜಾಮು ಕಳೆಗುಂದುತ್ತಾ ಬಂದು, ಈಗ ಉಪ್ಪನ್ನು ಮಾಡುವುದಕ್ಕಾಗಿರುವ ಒಂದು ಸಣ್ಣ ಗ್ರಾಮವಾಗಿ ಹೋಗಿದೆ. ಬರಹಂಪುರವು ಋಷಿಕುಲ್ಯನದಿಯ

ಬಾಯಿಯಲ್ಲಿದೆ. ಇಲ್ಲಿ ಜಿಲ್ಲಾ ಜಡ್ಜ್, ಕಲೆಕ್ಟರ್, ಮೊದಲಾದ ಮುಖ್ಯ ಉದ್ಯೋಗಸ್ಥರ ಆಫೀಸುಗಳು ಇವೆ. ಇದು ಈ ಜಿಲ್ಲೆಯ ಇತರ ಪಟ್ಟಣಗಳಿಗಿಂತ ದೊಡ್ಡದಾಗಿದ್ದು ಕಡಲಕರಾವಳಿಯಲ್ಲಿರುವುದರಿಂದ ಆರೋಗ್ಯಕ್ಕೆ ಬಹಳ ಒಳ್ಳೇದಾಗಿದೆ. ಶ್ರೀಕಾಕುಳವು ಸಮುದ್ರತೀರದಲ್ಲಿದೆ. ಇದು ಒಂದು ಕಾಲದಲ್ಲಿ ವಿಶೇಷವಾದ ಮಸ್ಲಿನ್ ನೇಯಿಗೆಗೆ ಹೆಸರುವಾಸಿಯಾಗಿತ್ತು. ಇದು ಮದ್ರಾಸಿನಿಂದ ಕಲ್ಕತ್ತೆಗೆ ಹೋಗುವ ರೈಲುರಸ್ತೆಯಿಂದ ಸುಮಾರು ಒಂಭತ್ತು ಮೈಲು ದೂರವಿದ್ದು, ಇತ್ತಿತ್ತಲಾಗೆ ಕ್ಷೀಣವಾಗುತ್ತಾ ಬಂದಿದೆ. ಗೋಪಾಲಪುರವು ಈ ಜಿಲ್ಲೆಯ ಮುಖ್ಯ ರೇವಾಗಿದ್ದರೂ ಹೊಗೆಹಡಗುಗಳೂ ಸಮೀಪಿಸುವುದಕ್ಕೆ ಅನುಕೂಲವಿಲ್ಲದ್ದರಿಂದಲೂ ರೈಲುರಸ್ತೆಯಿಂದ ಬಹಳ ದೂರವಿದ್ದುದರಿಂದಲೂ ಜೀರ್ಣವಾಗುತ್ತಾ ಬಂದಿದೆ. ಕಲಿಂಗಪಟ್ಟಣವು ಶ್ರೀಕಾಕುಳದಿಂದ 16 ಮೈಲು ಉತ್ತರಕ್ಕೆ ವಂಶಧಾರಾ ನದಿಯ ಮುಖದಲ್ಲಿದ್ದು, ಹಡಗುಗಳು ತಂಗುವುದಕ್ಕೆ ಸ್ವಲ್ಪ ಅನುಕೂಲವಾದ ವ್ಯಾಪಾರಸ್ಥಳವಾಗಿದೆ. ಇಲ್ಲಿ ಒಂದು ಉಪ್ಪಿನ ಅಗರು ಇದೆ. ಒಂದು ಕಾಲದಲ್ಲಿ ಇದು ಮಹಮ್ಮದಿಯರ ಆಳಿಕೆಯಲ್ಲಿತ್ತು. ಅಳಿದುಳಿದ ಕೆಲವು ಕಟ್ಟಡಗಳೂ ಮಸೀದಿಗಳೂ ಇಲ್ಲಿ ಈಗಲೂ ಕಾಣಬರುತ್ತವೆ. ಆಸ್ಕ ಇದು ಋಷಿಕುಲ್ಯ, ಮಹಾನದಿ ಎಂಬ ನದಿಗಳು ಸಂಗಮವಾಗುವಲ್ಲಿದೆ. ಇಲ್ಲಿ ಕಬ್ಬಿನ ಕೃಷಿಯು ವಿಶೇಷವಾಗಿ ನಡೆಯುವುದರಿಂದ ಸಕ್ಕರೆಯ ಕಾರಖಾನೆಯೊಂದು ಸ್ಥಾಪನೆಯಾಗಿ, ಕೆಲಸವು ನಡೆಯುತ್ತದೆ. ಶ್ರೀಕಾಕುಳದಿಂದ 9 ಮೈಲು ದೂರದಲ್ಲಿಯ ಶ್ರೀಕೂರ್ಮವು ಪ್ರಸಿದ್ಧವಾದ ಕ್ಷೇತ್ರ.

ವಿಶಾಖಪಟ್ಣ ಜಿಲ್ಲೆ.—ವಿಶಾಖಪಟ್ಣವು ಮುಖ್ಯ ಪಟ್ಣವಾಗಿಯೂ ಪೂರ್ವತೀರದ ರೇವುಗಳಲ್ಲಿ ಮುಖ್ಯವಾಗಿಯೂ ದೊಡ್ಡ ಉಗಿಹಡಗುಗಳು ತಂಗುವುದಕ್ಕೆ ಅನುಕೂಲವಾದ ಬಂದರಾಗಿಯೂ ಇದೆ. ಪೂರ್ವಘಟ್ಟಗಳ ಒಂದು ಶಾಖೆಯು ಸಮುದ್ರದಲ್ಲಿ ಚಾಚಿಕೊಂಡು ಹೋಗಿರುವುದರಿಂದ ಈ ಪಟ್ಣದ ಪಡುವಲ ಕಡೆಯು ಬಿರುಗಾಳಿ ಬೀಸುವಾಗ ಹಬೆಹಡಗುಗಳಿಗೆ ನಿರಪಾಯವಾಗಿ ಇದ್ದುಕೊಳ್ಳುವುದಕ್ಕೆ ತಕ್ಕ ಸ್ಥಳವಾಗಿದೆ. ಇಲ್ಲಿ ಇಷ್ಟು ಅನುಕೂಲತೆ ಇರುವುದರಿಂದ ಸರಕು ಏರಿಸುವುದಕ್ಕೂ ಇಳಿಸುವುದಕ್ಕೂ ಸಹಾಯವಾಗುವಂತೆ ಒಂದು ರೇವನ್ನು (ಹಾರ್ಬರು) ಕಟ್ಟಿಸುವುದಕ್ಕಾಗಿ ಸರಕಾರದವರು ನಿಶ್ಚಯಿಸಿರು



THE SEASHORE AT VIZAGAPATAM ವಿಶಾಖಪಟ್ಟದ ಸಮುದ್ರತೀರ.

ತ್ತಾರೆ; ಇಲ್ಲಿ ಒಂದು ವೇಧಶಾಲೆಯೂ ಇದೆ. ಇದಕ್ಕೆ ಮೂರು ಮೈಲು ಬಡಗುಕಡೆ ಇರುವ ವಾಲ್ತೇರು ಶೀತಲವಾದ ಸ್ಥಳವಾದುದರಿಂದ ಉದ್ಯೋಗಸ್ಥರಾದ ವಿಲಾಯತಿಯವರು ಅಲ್ಲಿ ವಾಸಮಾಡುತ್ತಾರೆ. ಇಲ್ಲಿಂದ ಆರು ಮೈಲು ವಾಯವ್ಯಕ್ಕೆ ಮಲೆಯ ಮೇಲೆ ಸಿಂಹಾಚಲವೆಂಬ ಪಟ್ಟಣವು ಹೆಸರುವಾಸಿಯಾದ ವಿಷ್ಣುಕ್ಷೇತ್ರವು. ಇಲ್ಲಿಗೆ ವರ್ಷಂಪ್ರತಿ ಅನೇಕ ಯಾತ್ರಿಕರು ಹೋಗುತ್ತಾರೆ. ಈ ಮಲೆಯ ಬದಿಯಲ್ಲಿಯ ಮಣ್ಣು ಹಲಸು, ಬಾಳೆ, ಮಾವು, ಮೊದಲಾದವುಗಳ ಬೆಳೆಗೆ ಹೇಳಿದ್ದಾಗಿದೆ. ಒಂದು ಕಾಲದಲ್ಲಿ ಈ ಜಿಲ್ಲೆಯ ಮುಖ್ಯ ರೇವುಪಟ್ಟಣವಾದ ಮಚಲಿಪಟ್ಟಣವು ಹಬೆಗಾಡಿಯು ಪ್ರಚಾರವಾದಂದಿನಿಂದ ಕ್ಷೀಣಸ್ಥಿತಿಗೆ ಬಂದಿದೆ. ಇಂಡಿಯದಲ್ಲಿ ದೊಡ್ಡ ಜಮೀನುದಾರಿಗಳಲ್ಲಿ ಒಂದಾದ ವಿಜಯನಗರ ಜಮೀನುದಾರಿಯು ಈ ಜಿಲ್ಲೆಯಲ್ಲಿದೆ. ಅದು ಮೂರು ಸಾವಿರ ಚದರಮೈಲು ವಿಸ್ತಾರವಾಗಿದೆ. ಅದರ ಮುಖ್ಯ ಪಟ್ಟಣವೂ ರಾಜನ ವಾಸಸ್ಥಳವೂ ಆಗಿರುವ ವಿಜಯನಗರದಲ್ಲಿ ಸೆಕೆಂಡ್ ಗ್ರೇಡ್ ಕೊಲೇಜೂ ಆಸ್ಪತ್ರೆಗಳೂ ದೊಡ್ಡ ಮಾರ್ಗಗಳೂ ಇವೆ. ಬೊಬ್ಬಿಲಿ ಎಂಬ ಪಟ್ಟಣವು ಇನ್ನೊಂದು ಜಮೀನುದಾರಿಯ ಮುಖ್ಯ ಪಟ್ಟಣವು. ಜಯಪುರವೆಂಬುದು 9400 ಚದರಮೈಲು ವಿಸ್ತಾರವಾದ ಮತ್ತೊಂದು ಜಮೀನುದಾರಿಯ ಮುಖ್ಯ ಪಟ್ಟಣವಾಗಿದೆ. ಇಲ್ಲಿ ಏರುತಗ್ಗುಗಳು ವಿಶೇಷವಾಗಿವೆ.

ಗೋದಾವರಿ ಜಿಲ್ಲೆ.—ಕೋಕನಾಡ ಎಂಬುದೇ ಈ ಜಿಲ್ಲೆಯ ಮುಖ್ಯ ಪಟ್ಟಣವೂ ರೇವೂ ಆಗಿದೆ. ದಡದ ಹತ್ತಿರ ನೀರು ಕಡಮೆ ಇರುವುದರಿಂದ, ಹಡಗುಗಳು ಬಹು ದೂರ ನಿಲ್ಲುತ್ತವೆ. ಸಾಮಲಕೋಟೆಯಿಂದ ಇಲ್ಲಿಗೆ ರೈಲು ರಸ್ತೆ ಇದೆ. ಕಾಲಿವೆಗಳ ಮೂಲಕ ಇತರ ಹಲವು ಸಣ್ಣ ಪಟ್ಟಣಗಳಿಗೆ ವ್ಯಾಪಾರ ನಡೆಯುತ್ತದೆ. ಇಲ್ಲಿಂದ ಹೇರಳವಾಗಿ ರಫ್ತಾಗುವ ಸಾಮಾನು ಹತ್ತಿ. ಪಿಟ್ಠಾಪುರವು ಅದೇ ಹೆಸರಿನ ಜಮೀನುದಾರಿಗೆ ಸೇರಿದ ಪಟ್ಟಣವಾಗಿ ಒಂದು ಸೆಕೆಂಡರಿ ಗ್ರೇಡ ಕೊಲೇಜು ಉಳ್ಳದ್ದಾಗಿದೆ. ಡಿಸ್ಟ್ರಿಕ್ಟ ಕೋರ್ಟೂ ಸಬ್ ಕಲ್ಲೆಕ್ಟರ ಕಚೇರಿಯೂ ಉಳ್ಳ ರಾಜಮಹೇಂದ್ರಿಯು ಕಡಲುದಡದಿಂದ 30 ಮೈಲು ಒಳಗಡೆ ಗೋದಾವರಿನದಿಯ ಮೇಲಿದೆ. ಇಲ್ಲಿ ಗವರ್ನ್ಮೆಂಟು ಫಸ್ಟ್ ಗ್ರೇಡ್ ಕೊಲೇಜೂ, ಒಂದು ಟ್ರೇನಿಂಗ್ ಸ್ಕೂಲೂ ಇದೆ. ಅತ್ತಿತ್ತ ಓಡಾಡುವ ರೈಲುಗಳ ಮೂಲಕವಾಗಿ ಸರಕು ಹಲವು ಹಳ್ಳಿಗಳಿಂದ ಇಲ್ಲಿಗೆ ಬರುತ್ತದೆ.



COCANADA ಕೋಕನಾಡು.


ಇಲ್ಲಿಯ ಜೈಲಿನಲ್ಲಿ ಅಂದವಾದ ಜಮುಖಾನಗಳನ್ನು ನೇಯುತ್ತಾರೆ. ಗೋದಾವರಿನದಿಯ ಮೇಲಿನ ಕೊರಿಂಗ ಎಂಬುದು ಒಂದು ಕಾಲದಲ್ಲಿ ದೊಡ್ಡ ರೇವಾಗಿದ್ದು, ನದಿಯು ವರ್ಷವರ್ಷ ತಂದೊಡ್ಡಿದ್ದ ಮಣ್ಣಿನಿಂದ ಮುಚ್ಚಿಹೋಗಿ, ಈಗ ಹಡಗುಗಳ ಚಲಾವಣೆಗೆ ಸಾಕಷ್ಟು ನೀರಿಲ್ಲದೆ ಹಾಳುಬಿದ್ದಿದೆ. ಈಗ ಇದರ ಸಮೀಪ ಸಣ್ಣ ಪತ್ತೆಮಾರಿಗಳನ್ನೂ ಹಡಗುಗಳನ್ನೂ ಕಟ್ಟುತ್ತಾರೆ.

ಕೃಷ್ಣಾ ಜಿಲ್ಲೆ.— ಇದರ ವಿಸ್ತೀರ್ಣ—5900 ಚದರಮೈಲು. ಜನಸಂಖ್ಯೆ 20,000,000. ಆದ್ದರಿಂದ ಇದು ಫಲವತ್ತಾಗಿದ್ದು ನಿವಾಸಕ್ಕೆ ಯೋಗ್ಯವಾದದ್ದು ಎಂದು ಊಹಿಸಬಹುದು. ಪಟವನ್ನು ನೋಡಿ ಇದರ ಪಶ್ಚಿಮದ ಗಡಿಯು ಯಾವುದೆಂದು ತಿಳಿದುಕೊಳ್ಳಿರಿ. ಈ ಜಿಲ್ಲೆಯ ಪಶ್ಚಿಮದಲ್ಲಿ ಪೂರ್ವಗಟ್ಟವು ಇಳಿಯುತ್ತಾ ಇಳಿಯುತ್ತಾ ಸಣ್ಣಸಣ್ಣ ಗುಡ್ಡಗಳಾಗಿ ಪರಿಣಮಿಸಿದೆ. ಇಲ್ಲಿ ನೆಲವು ಏರಾಗಿಯೂ ಇಲ್ಲಿಂದ ಪೂರ್ವಕ್ಕೆ ಜಮೀನು ಫಲಪ್ರದವಾದ ಭೂಮಿಯಾಗಿಯೂ ಇದೆ. ಈ ತಗ್ಗುಪ್ರದೇಶದಲ್ಲಿ ಯಾವಾಗಲೂ ನೀರು ಒಣಗಲು ಇರುವುದಿಲ್ಲ. ಆದ್ದರಿಂದ ಇಲ್ಲಿ ಹೆಚ್ಚು ಮಳೆಯ ಅಗತ್ಯವಿಲ್ಲ. ಇದಲ್ಲದೆ ನೆಲದೊಳಗಿನ ನೀರು ಬತ್ತಿಹೋಗುವುದು ಕಡಮೆ. ಕೃಷ್ಣಾನದಿಯು ಈ ಜಿಲ್ಲೆಯ ತೆಂಕುಗಡಿಯಲ್ಲಿ ಹರಿಯುತ್ತದೆ. ತೆಂಕುಕಡೆ ಕೃಷ್ಣಾನದಿಯಿಂದಲೂ, ಬಡಗುಕಡೆ ಗೋದಾವರಿನದಿಯಿಂದಲೂ ಹೊರಡುವ ಕಾಲಿವೆಗಳು ಈ ಜಿಲ್ಲೆಯಲ್ಲಿಯೂ ಹರಿಯುತ್ತವೆ. ಅಲ್ಲಲ್ಲಿ ಅನೇಕ ಕುದುರುಗಳು ಉಂಟಾಗಿವೆ. ಪಟದಲ್ಲಿ ಬೆಜವಾಡ ಎಂಬ ಸ್ಥಳವನ್ನು ನೋಡಿ ಗೊತ್ತುಮಾಡಿರಿ. ಅಲ್ಲಿ ಒಂದು ಅಣೆಕಟ್ಟು ಇದೆ. ಅಲ್ಲಿಂದಲೇ ಒಂದು ಡೆಲ್ಟಾ ಪ್ರಾರಂಭಿಸುತ್ತದೆ. ಕೊಲೇರು ಎಂಬ ಒಂದು ಸರೋವರವು ಈ ಜಿಲ್ಲೆಯಲ್ಲಿ ಇದೆ.

ಹವೆ.— ಇಲ್ಲಿಯ ಬೇಸಿಗೆಯ ಉಷ್ಣವು ಭಯಂಕರವಾದರೂ ಅಸೌಖ್ಯವನ್ನು ಉಂಟುಮಾಡುವದಲ್ಲ. ಮಳೆಯು ಇಲ್ಲಿ ಬಹಳ ಕಡಮೆ. ವರ್ಷಂಪ್ರತಿ 33 ಇಂಚು ಕೂಡಾ ಬೀಳುವುದಿಲ್ಲ. ಮಳೆಯು ಹೆಚ್ಚಾಗಿ ಬೇಸಿಗೆಯಲ್ಲಿ ಬೀಳುತ್ತದೆ. ಮಳೆಗಾಲದ ಬಿರುಗಾಳಿಯು ಕಠಿಣವಾಗಿದೆ.

ಈ ಜಿಲ್ಲೆಯ ಮಣ್ಣು ಸಾರವತ್ತಾಗಿದ್ದುದರಿಂದಲೂ ಗೋದಾವರಿ, ಕೃಷ್ಣಾ ನದಿಗಳು ಬೇಕಾದಷ್ಟು ನೀರನ್ನು ಒದಗಿಸುವುದರಿಂದಲೂ ಬತ್ತದ ಸಾಗು ಚೆನ್ನಾಗಿ ನಡೆಯುತ್ತದೆ. ಜೋಳ, ಕಬ್ಬು, ಇವನ್ನು ಎಲ್ಲಾ ಭಾಗಗಳಲ್ಲಿಯೂ ಹತ್ತಿಯನ್ನು ಪಶ್ಚಿಮಭಾಗಗಳಲ್ಲಿಯೂ ಬೆಳೆಸುತ್ತಾರೆ. ಇಲ್ಲಿಯ ಹತ್ತಿ ಒಳ್ಳೇದಲ್ಲ. ಹೊಗೆ

ಸೊಪ್ಪು, ಹರಳು, ನೀಲಿ, ಮೊದಲಾದವನ್ನು ಅಲ್ಲಲ್ಲಿ ಬೆಳಿಸುತ್ತಾರೆ. ಈ ಜಿಲ್ಲೆಯಲ್ಲಿ ದನಕರುಗಳು ಹೇರಳವಾಗಿವೆ. ಪುರಾತನ ಕಾಲದಲ್ಲಿ ಅಮೂಲ್ಯವಾದ ವಜ್ರಗಳನ್ನು ಅಗೆದು ತೆಗೆಯುವ ಗನಿಗಳು ಈ ಜಿಲ್ಲೆಯಲ್ಲಿದ್ದವು. ಆ ಕಾಲದಲ್ಲಿ ಆ ವಜ್ರಗಳಿಗೆ ಗೋಲ್ಕೊಂಡ ವಜ್ರಗಳೆಂದು ಹೆಸರಿತ್ತು. ಗೋಲ್ಕೊಂಡ ಎಂಬುದು ಮಹಮ್ಮದಿ ರಾಜ್ಯದ ಒಂದು ಅಂಶವಾಗಿದ್ದು ಅದರೊಳಗೆ ಕೃಷ್ಣಾ ಜಿಲ್ಲೆಯೂ ಕೂಡಿತ್ತು. ಮಹಾರಾಣಿಯವರ ಕಿರೀಟದಲ್ಲಿರುವ ಕೋಹಿನೂರು ಎಂಬ ವಜ್ರವು ಇಲ್ಲಿಯೇ ದೊರೆಯಿತು. ಇಲ್ಲಿಯ ಮುಖ್ಯ ಕೈಗಾರಿಕೆ ನೇಯಿಗೆ; ಕಂಬಳಿಯ ನೇಯಿಗೆ ವಿಶೇಷವಾಗಿದೆ. ಹಿಂದೆ ಮಚಲಿಪಟ್ಟಣದಲ್ಲಿ ಆಗುತ್ತಿದ್ದ ಚೀಟಿಬಟ್ಟೆಯು ಬಹಳ ಹೆಸರುವಾಸಿಯಾಗಿತ್ತು. ಎಲ್ಲೂರಲ್ಲಿ ಈಗಲೂ ಒಂದು ಬಗೆಯ ರತ್ನಕಂಬಳಿಗಳನ್ನು ಮಾಡುತ್ತಾರೆ.



ಮಾರ್ಗಗಳು.— ಈ ಜಿಲ್ಲೆಯಲ್ಲಿ ಬೆಜವಾಡ ಎಂಬ ಪಟ್ಟಣವು ಮುಖ್ಯವಾದ ರೈಲುಸ್ಥಳ. ಇಲ್ಲಿ ಹಲವು ರೈಲುದಾರಿಗಳು ಕೂಡುತ್ತವೆ. ಇಲ್ಲಿಂದ ದಕ್ಷಿಣಕ್ಕೆ ಮಚಲಿಪಟ್ಟಣಕ್ಕೂ ಮದ್ರಾಸಿಗೂ, ಆಗ್ನೇಯಕ್ಕೆ ಗುಂಟುಕಲ್ಲಿಗೂ, ಪಶ್ಚಿಮಕ್ಕೆ ಹೈದರಾಬಾದಿಗೂ, ಉತ್ತರಕ್ಕೆ ಕಲ್ಕತ್ತೆಗೂ, ರೈಲುರಸ್ತೆ ಹೋಗುತ್ತದೆ. ಇದು ಅಲ್ಲದೆ ಈ ಜಿಲ್ಲೆಯಲ್ಲಿ ಅನೇಕ ತೋಡುಗಳೂ, ರಸ್ತೆಗಳೂ ಇರುವುದ

ರಿಂದ ವ್ಯಾಪಾರವು ಸುಲಭವಾಗಿ ನಡೆಯುತ್ತದೆ. ಬೆಜವಾಡದಿಂದ ಹೇರಳ ವಾಗಿ ತೊಗಲು ರಫ್ತು ಆಗುತ್ತದೆ.

ಭಾಷೆ.—ಇಲ್ಲಿಯ ಭಾಷೆ ತೆಲುಗು. ಇದಕ್ಕೆ ಆಂಧ್ರ ಭಾಷೆ ಎಂತಲೂ ಹೇಳುತ್ತಾರೆ. ಇದನ್ನು ಆಡುವ ಜನರಿಗೆ ಆಂಧ್ರರು ಎಂತ ಹೆಸರು.




ಕೃಷ್ಣಾನದಿಯ ಸೇತುವೆ.

ಮುಖ್ಯ ಪಟ್ಟಣಗಳು.—ಮಚಲಿಪಟ್ಟಣ (ಮತ್ಸ್ಯನಗರ) ಕಲೆಕ್ಟರರ ನಿವಾಸಸ್ಥಳವೂ ದೊಡ್ಡ ರೇವುಸ್ಥಳವೂ ಆಗಿದೆ. ಇದಕ್ಕೆ ಬಂದರು ಎಂದು ಹೆಸರು. ಇದು ಇತಿಹಾಸಪ್ರಸಿದ್ಧವಾದ ಒಂದು ನಗರ. ಒಂದು ಕಾಲದಲ್ಲಿ ಬಹಳ ಹೆಸರುವಾಸಿಯಾಗಿದ್ದ ಬಂದರವಾಗಿತ್ತು. 1864ರಲ್ಲಿ ಒಂದು ಸುಂಟರ ಗಾಳಿ ಬೀಸಿ, ಕಡಲಲ್ಲಿ ತೆರೆ ಎದ್ದು, ಒಳಕ್ಕೆ ನೀರು ಹಾಯಿದು ಜನಜಾನು ವಾರೂ ಮನೆಮಾರೂ ನಾಶವಾಗಿ ಹೋಯಿತು. ಇಲ್ಲಿ ಒಂದು ಫಸ್ಟ್ ಗ್ರೇಡ್ ಕೊಲೇಜು ಇದೆ. ಚೀಟಿಬಟ್ಟೆಯನ್ನೂ ರತ್ನಕಂಬಳಿಯನ್ನೂ ಮಾಡುವ ದೊಡ್ಡ ವ್ಯಾಪಾರಸ್ಥಳವಾದ ಬೆಜವಾಡವೇ ಮುಖ್ಯ ಬಂದರು. ಎಲ್ಲೂರು—ಇಲ್ಲಿ ಯಂತ್ರಗಳ ಮೂಲಕವಾಗಿ ಬತ್ತ ಕುಟ್ಟಿ ಅಕ್ಕಿ ಮಾಡುತ್ತಾರೆ. ಸಣಬು

ಸಾರಿನ ಕೆಲಸವು ನಡೆಯುತ್ತದೆ. ವ್ಯಾಪಾರಸ್ಥಳವಾದ ನರಸಾಪುರವು ಗೋದಾವರಿಯ ನದೀಮುಖದಲ್ಲಿದೆ.

ಗುಂಟೂರು ಜಿಲ್ಲೆ.—ಇದು ಕೃಷ್ಣಾ ಜಿಲ್ಲೆಗೆ ತೆಂಕುಕಡೆ ಇದೆ. ವಿಸ್ತೀರ್ಣ 735 ಚದರಮೈಲು. ದೇಶವು ಸಾಧಾರಣವಾಗಿ ಸಮತಟ್ಟಾಗಿದೆ. ಪಶ್ಚಿಮದಲ್ಲಿ ಮಾತ್ರ ಕೆಲವು ಗುಡ್ಡಗಳಿವೆ. ಗುಡ್ಡಗಳು ಪೂರ್ವಗಟ್ಟಕ್ಕೆ ಸೇರಿದವುಗಳು. ಜಿಲ್ಲೆಯ ಬಡಗುಕಡೆ ಕೃಷ್ಣಾನದಿಯು ಹರಿದುಹೋಗುವುದರಿಂದ, ಅಲ್ಲಲ್ಲಿ ದೊಡ್ಡ ಕಾಲಿವೆಗಳನ್ನು ತೋಡಿರುತ್ತಾರೆ. ಇದರಿಂದ ಈ ಜಿಲ್ಲೆಯಲ್ಲಿ ಕೃಷಿಗೆ ನೀರಿನ ಆಶ್ರಯವು ದೊರಕುತ್ತದೆ. ಗುಂಡಲಕಾಮ ಎಂಬ ಸಣ್ಣ ಹೊಳೆಯು ಕರ್ನೂಲಿನಲ್ಲಿ ನಲ್ಲಮಲೆ ಎಂಬಲ್ಲಿ ಹುಟ್ಟಿ, ಈ ಜಿಲ್ಲೆಯ ದಕ್ಷಿಣ ಭಾಗವನ್ನು ದಾಟಿ, ನೆಲ್ಲೂರಿಗೆ ಹೋಗುತ್ತದೆ. ಈ ನದಿಯಲ್ಲಿ ಒಕ್ಟೋಬರ್, ನವಂಬರ್, ಡಿಸೆಂಬರ್ ಮಾಸಗಳಲ್ಲಿ ನೆರೆ ತುಂಬುತ್ತದೆ. ಕಡಲುತೀರಕ್ಕೆ ಸಮೀಪವಿರುವ ಪ್ರದೇಶಗಳಲ್ಲಿ ಹೊರತು, ಇತರ ಕಡೆಗಳಲ್ಲಿ ಬೇಸಿಗೆಕಾಲದಲ್ಲಿ ಅತಿ ಉಷ್ಣವೂ, ಚಳಿಗಾಲದಲ್ಲಿ ಅತಿ ಶೀತವೂ ಚಳಿಯೂ ಇವೆ. ಕಡಲುತೀರ ಪ್ರದೇಶದಲ್ಲಿ ಮಳೆ ಹೆಚ್ಚು. ಒಳಭಾಗಗಳಲ್ಲಿ ಕಡಮೆ.

ಈ ಜಿಲ್ಲೆಯ ಕೆಲವು ಸ್ಥಳಗಳಲ್ಲಿ ಮಣ್ಣು ಬಹಳ ಫಲವತ್ತಾದದ್ದು. ಅಲ್ಲಿ ಬತ್ತ, ಜೋಳ, ಹತ್ತಿ, ಹರಳು ಇವು ಸುಲಭವಾಗಿ ಬೆಳೆಯುತ್ತವೆ. ತೆನ್ನಾಲಿ ತಾಲೂಕು ಅಕ್ಕಿಗೆ ಪ್ರಸಿದ್ಧಿಪಟ್ಟದೆ. ಈ ತಾಲೂಕು ಉಳಿದವುಗಳಿಗಿಂತ ಹೆಚ್ಚು ಫಲವತ್ತಾಗಿದ್ದು ಧನಿಕರಿಂದ ತುಂಬಿದೆ. ಇದರ ಪಶ್ಚಿಮಕ್ಕಿರುವ ಪೂರ್ವಗಟ್ಟಗಳ ಬದಿಗಳಲ್ಲಿಯೂ ಅವುಗಳ ಬುಡದ ಪ್ರದೇಶಗಳಲ್ಲಿಯೂ ಕಾಡುಗಳು ದಟ್ಟವಾಗಿಯೂ ಬಹು ವಿಸ್ತಾರವಾಗಿಯೂ ಇವೆ. ಕೃಷ್ಣಾನದಿಯ ಡೆಲ್ಟದಲ್ಲಿರುವ ದನಕರಗಳು ಮೇವಿಗಾಗಿ ಈ ಜಿಲ್ಲೆಯ ಫಲನಾಡು ತಾಲೂಕಿಗೆ ಬಂದು, ಈ ಕಾಡುಗಳಲ್ಲಿ ಮೇಯುವುದರಿಂದ ಪುಷ್ಟಿಯಾಗಿಯೂ ದೊಡ್ಡವಾಗಿಯೂ ಇವೆ. ಈ ಜಿಲ್ಲೆಯ ತೆಂಕುಪಾರ್ಶ್ವದಲ್ಲಿರುವ ಒಂಗೋಲು ಎತ್ತುಗಳಿಗೆ ಪ್ರಸಿದ್ಧವಾದ ಊರು. ಈ ಎತ್ತುಗಳನ್ನು ಸಾಧಾರಣವಾಗಿ ನೆಲ್ಲೂರು ಎತ್ತುಗಳೆಂದು ಕರೆಯುತ್ತಾರೆ. ಕೆಲವು ವರುಷಗಳಿಗೆ ಹಿಂದೆ ಕೃಷ್ಣಾಜಿಲ್ಲೆಯ ಕೆಲವು ತೆಂಕು ತಾಲೂಕುಗಳನ್ನೂ ನೆಲ್ಲೂರು ಜಿಲ್ಲೆಯ ಒಂಗೋಲು ತಾಲೂಕನ್ನೂ ಕೂಡಿ ಗುಂಟೂರು ಎಂಬ ಹೊಸ ಜಿಲ್ಲೆಯನ್ನು ಮಾಡಿದರು. ಒಂಗೋಲು ನೆಲ್ಲೂರು ಜಿಲ್ಲೆಗೆ ಸೇರಿದ ಒಂದು ದೊಡ್ಡ ಊರಾಗಿತ್ತು.



TEMPLE AT ONGOLE ಒಂಗೋಲಿನ ದೇವಸ್ಥಾನ.

ವೃತ್ತಿ.—ಇಲ್ಲಿಯ ಮುಖ್ಯವಾದ ವೃತ್ತಿ ನೇಯಿಗೆ. ಗುಂಟೂರಿನಲ್ಲಿ ಬತ್ತಿ ಕುಟ್ಟುವ ಕಾರಖಾನೆಗಳೂ ನೂಲು ಸೂಲುವ ಕಾರಖಾನೆಗಳೂ ಏರ್ಪಟ್ಟವೆ. ಜನಸಂಖ್ಯೆ 17 ಲಕ್ಷ, ಆಡುವ ಭಾಷೆ ತೆಲುಗು.

ಪ್ರಧಾನ ಊರುಗಳು.—ಗುಂಟೂರು ಜಿಲ್ಲೆಯ ಮುಖ್ಯ ಪಟ್ಟಣವಾದ ಗುಂಟೂರು ಆ ಜಿಲ್ಲೆಗೆ ಬಡಗು ದಿಕ್ಕಿನಲ್ಲಿದೆ. ಕಲೆಕ್ಟರರ ಕಚೇರಿಯೂ ಇತರ ಮುಖ್ಯ ಆಫೀಸುಗಳೂ ಇಲ್ಲಿವೆ. ಇಲ್ಲಿ ಹತ್ತಿವ್ಯಾಪಾರ ಹೆಚ್ಚಾಗಿ ನಡೆಯುತ್ತದೆ. ಹತ್ತಿನೂಲಿನ ಕಾರಖಾನೆಗಳು ಇಲ್ಲಿ ಅನೇಕ ಇರುತ್ತವೆ. ಗುಂಟೂರಿನ ಸಮೀಪ ಮಂಗಲಗಿರಿ ಎಂಬ ಪುಣ್ಯಕ್ಷೇತ್ರವಿದೆ. ಒಂಗೋಲಿನಲ್ಲಿ ವರ್ಷಂಪ್ರತಿ ಎತ್ತುಗಳ ಸಂತೆ ಕೂಡುತ್ತದೆ. ಈ ಸಂತೆಯಲ್ಲಿ ಕೆಲವು ಎತ್ತುಗಳಿಗೆ 700ರಿಂದ 800 ರೂಪಾಯಿ ಮೇಲೆ ಬೆಲೆ ಬರುವುದುಂಟು. ಮೇಡಪಾಳಯಂ, ಜೀರಾಳ, ಎಂಬ ಎರಡು ಪಟ್ಟಣಗಳು ಬಟ್ಟೆಗೆ ಪ್ರಖ್ಯಾತವಾದವುಗಳು. ಅಮರಾವತಿ ಎಂಬ ಇತಿಹಾಸಪ್ರಸಿದ್ಧವಾದ ಊರು ಅಲ್ಲಿಯ ಬೌದ್ಧಮತದವರ ಸ್ತೂಪಗಳಿಗಾಗಿ ಪ್ರಖ್ಯಾತಿಪಟ್ಟದೆ. ಅವುಗಳಲ್ಲಿ ಕೆಲವನ್ನು ಮದ್ರಾಸಿನ ವಸ್ತುಪ್ರದರ್ಶನಶಾಲೆಯಲ್ಲಿ ಪ್ರದರ್ಶನಕ್ಕಾಗಿ ಇಟ್ಟಿರುತ್ತಾರೆ.

1. ಪೂರ್ವಸಮುದ್ರತೀರದ ಜಿಲ್ಲೆಗಳು.

ಬಡಗು ಕರ್ನಾಟಕದ ಮಧ್ಯ ಜಿಲ್ಲೆಗಳು.

೧. ನೆಲ್ಲೂರು ಜಿಲ್ಲೆ.

ಮೇಲೆ ಹೇಳಿದ ಪೂರ್ವಸಮುದ್ರತೀರದ ಏಳು ಜಿಲ್ಲೆಗಳಲ್ಲಿ ಬಡಗು ದಿಕ್ಕಿನ ನಾಲ್ಕು ಬಡಗು ಕರ್ನಾಟಕವೆಂದೂ ಉಳಿದವು ತೆಂಕು ಕರ್ನಾಟಕವೆಂದೂ ಹೆಸರುಗೊಂಡವೆ. ಬಡಗು ಕರ್ನಾಟಕ ಜಿಲ್ಲೆಗಳು ಉತ್ತರ ಸರಕಾರಕ್ಕೂ ತೆಂಕು ಕರ್ನಾಟಕಕ್ಕೂ ನಡುವೆ ಇರುವುದರಿಂದ ಅವನ್ನು ಸಮುದ್ರತೀರದ ಮಧ್ಯ ಜಿಲ್ಲೆಗಳೆಂದು ಮೇಲೆ ಹೇಳಲಾಯಿತು. ಇವುಗಳಲ್ಲಿ ಮೊದಲನೆಯದು ನೆಲ್ಲೂರು. ಇದು ಗುಂಟೂರಿಗೆ ದಕ್ಷಿಣದಲ್ಲಿವೆ. ಇದರ ವಿಸ್ತೀರ್ಣ 8000 ಚದರಮೈಲು. ಈ ಜಿಲ್ಲೆಯು ಪೂರ್ವಗಟ್ಟಗಳಿಗೂ ಸಮುದ್ರಕ್ಕೂ ಮಧ್ಯದಲ್ಲಿ ಒಂದು ಸಮಭೂಮಿಯಾಗಿ ಚಾಚಿಕೊಂಡದೆ. ಇದರ ಪಡುವಲಲ್ಲಿರುವ


ಪೂರ್ವಗಟ್ಟದ ಅಂಶಕ್ಕೆ ವೆಳ್ಳಿಕೊಂಡ ಎಂದು ಹೆಸರು. ಇದರ ಅತ್ಯುನ್ನತವಾದ ಶಿಖರವು ಉದಯಗಿರಿ. ಇಲ್ಲಿಯ ಮುಖ್ಯ ನದಿ ಪೆಣ್ಣಾರು. ಇದಕ್ಕೆ ಸಂಗಂಪಕ್ಷ ಎಂಬ ಎರಡು ಸ್ಥಳಗಳಲ್ಲಿ ಅಣೆಕಟ್ಟು ಕಟ್ಟಿ, ಕಾಲಿವೆಗಳ ಮೂಲಕ ನೀರಾವರಿ ಕೆಲಸವು ನಡೆಯುತ್ತದೆ. ನದಿಯ ಡೆಲ್ಟಗಳಲ್ಲಿಯ ಮಣ್ಣು ಬಹಳ ಫಲವತ್ತಾಗಿದ್ದುದರಿಂದ ನೆಲ್ಲು ಚೆನ್ನಾಗಿ ಬೆಳೆಯುತ್ತದೆ. ಇಲ್ಲಿಂದ ಮದ್ರಾಸಿಗೂ ಅದರ ಸಮೀಪವಿರುವ ಇತರ ಸ್ಥಳಗಳಿಗೂ ಹೆಚ್ಚು ಅಕ್ಕಿ ಹೋಗುತ್ತದೆ. ಒಳನಾಡಿನಲ್ಲಿ ಮಳೆ ಕಡಮೆಯಾಗಿದ್ದು, ಕುಪ್ಪಿಯ ಪೈರು ಮಾತ್ರವೇ ಹೆಚ್ಚಾಗಿ ಬೆಳೆಯುತ್ತದೆ. ಹಿಂದಿನ ಕಾಲದಿಂದಲೂ ನೆಲ್ಲೂರು ಜಿಲ್ಲೆಯು ಹೈನಕ್ಕೆ ಹೆಸರುವಾಸಿಯಾಗಿದೆ. ಒಳ್ಳೇ ದನಕರುಗಳನ್ನು ಸಾಕಿ ಅನ್ಯದೇಶಗಳಿಗೆ ಕೊಂಡುಹೋಗಿ ಮಾರುವುದು ಇಲ್ಲಿಯ ಜನರ ಮುಖ್ಯ ವೃತ್ತಿ. ನೇಯಿಗೆಯು ಜನರ ಇನ್ನೊಂದು ವೃತ್ತಿ. ವೆಂಕಟಗಿರಿ ಎಂಬ ಊರಲ್ಲಿ ಒಳ್ಳೇ ಜರಿಯ ಅಂಚಿನ ಬಟ್ಟೆಗಳನ್ನು ನೇಯುತ್ತಾರೆ. ಇಲ್ಲಿ ಅಭ್ರಕವನ್ನು ಧಾರಾಳವಾಗಿ ಅಗೆದು ತೆಗೆಯುತ್ತಾರೆಂದು ಈ ಮೊದಲೇ ಹೇಳಿದೆ. ಮದ್ರಾಸಿನಿಂದ ಕಲ್ಕತ್ತೆಗೆ ಹೋಗುವ ರೈಲುರಸ್ತೆಯು ತೆಂಕು ಬಡಗಾಗಿ ಇಲ್ಲಿಂದ ಹೋಗುತ್ತದೆ. ಗುಂಟೂರಿನಿಂದ ಚಿತ್ತೂರಿಗೆ ಹೋಗುವ ದಕ್ಷಿಣ ಇಂಡಿಯ ರೇಲ್ವೆಯ ಒಂದು ಕೈಯೂ ಇಲ್ಲಿದೆ. ಮೂಡು ಕರಾವಳಿಯಲ್ಲಿ ತೋಡಿದ ಒಂದು ಕಾಲಿವೆಯನ್ನು ಕುರಿತು ಈ ಮೊದಲೇ ಹೇಳಿದೆ.

ಜನಸಂಖ್ಯೆ.—13,28,000; ಶ್ರೀಹರಿಕೊಂಡ ಎಂಬ ದ್ವೀಪದಲ್ಲಿ ಏನಡಿ ಎಂಬ ಹೆಸರಿನ ನಾಗರಿಕರಲ್ಲದ ಒಂದು ಕಾಡುಜಾತಿಯವರು ಇದ್ದಾರೆ. ಇವರ ರೀತಿನೀತಿಗಳು ಅಪೂರ್ವವಾಗಿವೆ. ಇವರು ಇತರ ನಿವಾಸಿಗಳಂತೆ ತೆಲುಗು ಭಾಷೆಯನ್ನಾಡುತ್ತಾರೆ.

ಪ್ರಧಾನ ಪಟ್ಟಣಗಳು.—ಪೆಣ್ಣಾರು ನದಿಯ ಮೇಲೆ ಇದ್ದು, ಬಹು ಪುರಾತನವಾದ ನೆಲ್ಲೂರು ಜಿಲ್ಲೆಯ ಮುಖ್ಯ ಪಟ್ಟಣ. ಇದು ಹಿಂದೆ ತೆಲುಗು ಕವಿಗಳ ವಾಸಸ್ಥಾನವಾಗಿದ್ದು, ಇತಿಹಾಸಪ್ರಸಿದ್ಧವಾಗಿದೆ. ವೆಂಕಟಗಿರಿಯು ವೆಂಕಟಗಿರಿ ರಾಜರ ವಾಸಸ್ಥಾನವಾಗಿದೆ. ಉದಯಗಿರಿ ಚರಿತ್ರೆಯಲ್ಲಿ ಪ್ರಸಿದ್ಧವಾದ ಇನ್ನೊಂದು ಪಟ್ಟಣ. ಇಲ್ಲಿ ಹಳೆ ಕಟ್ಟಡಗಳೂ, ದೇವಾಲಯಗಳೂ, ಮಂಟಪಗಳೂ, ಕೆರೆಗಳೂ ಅನೇಕವಿವೆ.


೨. ಮದ್ರಾಸ (ಚೆನ್ನಪಟ್ಟಣ ಜಿಲ್ಲೆ).

ಈ ಸಂಸ್ಥಾನದ ಮುಖ್ಯ ಪಟ್ಟಣವಾದ ಮದ್ರಾಸ (ಚೆನ್ನಪಟ್ಟಣವು) ಕಡಲ ತೀರದಿಂದ 9 ಮೈಲು ಉದ್ದವೂ 3½ ಮೈಲು ಅಗಲವೂ ಆದಕಾರಣ ಇದನ್ನು ಒಂದು ಸಣ್ಣ ಜಿಲ್ಲೆಯೆಂದು ಭಾವಿಸುತ್ತಾರೆ. ಇದರ ಪೂರ್ವಕ್ಕೆ ಸಮುದ್ರವೂ ಉಳಿದ ಮೂರು ಕಡೆ ಚೆಂಗಲ್ಪಟ್ಟು ಜಿಲ್ಲೆಯೂ ಗಡಿಗಳಾಗಿವೆ. ಇದು 1639ನೇ ವರುಷದಲ್ಲಿ ಶ್ರೀರಂಗನಾಯಕರೆಂಬ ಚಂದ್ರಗಿರಿಯ ಅರಸರು ಇಂಗ್ಲಿಷ್ ವರ್ತಕರಿಗೆ ಮೊದಲು ವ್ಯಾಪಾರಕ್ಕಾಗಿ ಕೊಟ್ಟ ಸ್ಥಳ. ಸೆಂಟ್ ಜೋರ್ಜ್ ಕೋಟೆಯು ಇದರ ಮಧ್ಯದಲ್ಲಿದೆ. ಇಲ್ಲಿ ಇಂಗ್ಲಿಷ್ ಲಷ್ಕರಿ ಇದೆ. ಇದರ ಬಡಗು ದಿಕ್ಕಿನಲ್ಲಿ ಜನರು ಗುಂಪುಗುಂಪಾಗಿ ವಾಸಿಸುವ ಭಾಗಕ್ಕೆ ಜೋರ್ಜ್ ಟೌನ್ ಎಂದು ಹೆಸರು. ದೇಶೀಯರು ಇದನ್ನು ಪಟ್ಟಣವೆಂದು ಕರೆಯುತ್ತಾರೆ. ನಮ್ಮ ಈಗಿನ ಚಕ್ರವರ್ತಿಯವರು ಪ್ರಿನ್ಸ್ ಒಫ್ ವೇಲ್ಸರಾಗಿದ್ದ ವೇಳೆ 1906ರಲ್ಲಿ ಇಲ್ಲಿಗೆ ಚಿತ್ತೈಸಿದ್ದಾಗ ಈ ಪಟ್ಟಣಕ್ಕೆ ತನ್ನ ಹೆಸರನ್ನು ಕೊಟ್ಟರು. ಇಲ್ಲಿ ಹಲವು ಬೇಂಕುಗಳೂ, ಹೈಕೋರ್ಟು ಮೊದಲಾದ ಆಫೀಸುಗಳೂ, ದೊಡ್ಡ ಕೊಲೇಜುಗಳೂ, ವರ್ತಕಶಾಲೆಗಳೂ, ಸುಂಕದ ಕಟ್ಟೆ, ಹಾರ್ಬರು, ಹಲವು ದೊಡ್ಡದೊಡ್ಡ ಬೀದಿಗಳೂ, ಕಟ್ಟಡಗಳೂ ಇವೆ. ಕೂವಂ, ಅಡ್ಯಾರು ಎಂಬ ಎರಡು ಚಿಕ್ಕ ಹೊಳೆಗಳು ಈ ನಗರದಲ್ಲಿ ಕೂಡಿ ಸಮುದ್ರಕ್ಕೆ ಬೀಳುತ್ತವೆ. ಇವೆರಡರಲ್ಲಿಯೂ ಬೇಸಿಗೆಯಲ್ಲಿ ನೀರು ಬಹಳ ಕಡಮೆ. ಪಟ್ಟಣದಿಂದ ವಾಯವ್ಯದಲ್ಲಿರುವ ಮಾತವರಂ ಎಂಬ ಸರೋವರದಿಂದ ಏಳು ಮೈಲು ದೂರದಿಂದ ಕಾಲಿವೆಯ ಮೂಲಕ ಶುದ್ಧ ನೀರನ್ನು ತಂದು, ನಳಿಗೆಗಳ ಮೂಲಕ ಮನೆಮನೆಗೂ ಒದಗಿಸಿಕೊಡುವುದಕ್ಕೆ ಬಹಳ ಹಣವನ್ನು ವೆಚ್ಚಮಾಡಿರುತ್ತಾರೆ. ಇದು ಗವರ್ನಮೆಂಟ್ ಇರುವ ಸ್ಥಾನ, ಸೈನ್ಯದ ಮುಖ್ಯ ಠಾಣೆ. ಸಕಲ ಡಿಪಾರ್ಟ್‌ಮೆಂಟುಗಳ ಮೇಲಧಿಕಾರಿಗಳ ನಿಲಯ, ಅವರ ಆಫೀಸುಗಳ ನೆಲೆ. ಒಂದೊಂದು ಡಿಪಾರ್ಟ್‌ಮೆಂಟಿನ ಯೂರೋಪಿಯನ್ ಮೇಲಾಫೀಸರರು ಬೇಸಿಗೆ ಕಾಲದಲ್ಲಿ ಉಟಕಮಂಡಿಗೆ ಹೋಗುತ್ತಾರೆ. ನಮ್ಮ ಗವರ್ನರವರ ವಾಸಸ್ಥಳವೂ ಗವರ್ನರ್ ಆಫೀಸೂ ಕಸ್ಟಮ್ ಆಫೀಸೂ ಈ ನಗರದಲ್ಲಿದೆ. ಒಂದೊಂದು ಜಿಲ್ಲೆಯ ಮುಖ್ಯ ಕೋರ್ಟುಗಳಿಗೂ ಕಚೇರಿಗಳಿಗೂ ಮೇಲ್ವಿಚಾರಕ್ಕಿರುವ ಹೈಕೋರ್ಟು ಇಲ್ಲಿದೆ. ಈ ಕೋರ್ಟಿನಲ್ಲಿ ಹನ್ನೆರಡು ಮಂದಿ



MADRAS BEACH ಮದ್ರಾಸಿನ ಸಮುದ್ರತೀರ.

ನ್ಯಾಯಾಧೀಶರು (ಜಡ್ಜರು) ಇದ್ದಾರೆ. ಲಷ್ಕರಿನ ಸೈನ್ಯವು ಕೋಟೆಯ ಒಳಗಿದೆ. ಈ ಪಟ್ಟಣದಲ್ಲಿ ಕಾಣತಕ್ಕ ಹಲವು ಸ್ಥಳಗಳಿವೆ. ಇವುಗಳಲ್ಲಿ ಮುಖ್ಯವಾದದ್ದು ಪೀಪಲ್ಸ್ ಪಾರ್ಕ್, ಮ್ಯೂಜಿಯಮ್, ಎಕ್ವೇರಿಯಂ, ಎಂಬಿವು. ಕೋಟೆಗೆ ತೆಂಕು ಭಾಗದಲ್ಲಿ ತಿರುವಲ್‌ಕೇಣಿ, ಮೈಲಾಪುರವೆಂಬ ಸ್ಥಳಗಳಲ್ಲಿ ಅತಿ ಪ್ರಸಿದ್ಧವಾದ ಎರಡು ದೊಡ್ಡ ಹಳೆ ಕ್ಷೇತ್ರಗಳಿವೆ. ಈ ನಗರದಲ್ಲಿ ಹಲವು ವಿಧದ ಕಲಾಶಾಲೆಗಳೂ ಇವೆ. ಸಂಸ್ಥಾನದಲ್ಲಿರುವ ಎಲ್ಲಾ ಕೊಲೇಜುಗಳ



ಮದ್ರಾಸಿನಲ್ಲಿರುವ ಹೈಕೋರ್ಟು.

ಮೇಲ್ವಿಚಾರ ನಡಿಸಿ, ವಿದ್ಯಾಭಿವೃದ್ಧಿಯ ಏರ್ಪಾಡು ಮಾಡುವ ಸರ್ವಕಲಾಲಯವು ಇಲ್ಲಿ ಇದೆ. ಇಂಡಿಯಾ ರಾಜ್ಯದಲ್ಲಿ ಕ್ರೈಸ್ತಮತಪ್ರಸರಣೆಗಾಗಿ ಮೊದಲು ಬಂದ ಥೋಮಸ್ ಎಂಬ ಅಪೊಸ್ತಲನ ದೇಹದ ಸಮಾಧಿಸ್ಥಳವಾದ ಸೆಂಟ್ ಥೋಮಸ್ ಎಂಬ ಹೆಸರುಳ್ಳ ದೊಡ್ಡ ಇಗರ್ಜಿಯು ಇಲ್ಲಿಯೇ ಇದೆ. ಇದು ಮೈಲಾಪುರಕ್ಕೆ ಸಮೀಪವಿದೆ. ಈ ನಗರದಲ್ಲಿ ಒಂದೊಂದು ಸ್ಥಳದಲ್ಲಿ ಒಬ್ಬೊಬ್ಬ ಪುರುಷರ ಪ್ರತಿಮೆಯನ್ನು ಇರಿಸಿದ್ದಾರೆ. ಇವುಗಳಲ್ಲಿ ಎಡ್ವರ್ಡ ಮಹಾರಾಜ, ಜೋರ್ಜ್ ಚಕ್ರವರ್ತಿ, ಸರ್ ಥೋಮಸ್ ಮನ್ರು,

ನೀಲ್ ಸೇನಾಧಿಪತಿ, ಡಾ. ಮಿಲ್ಲರ್, ಜಡ್ಜ್ ಸರ್ ಟಿ. ಮುತ್ತುಸ್ವಾಮಿ ಅಯ್ಯರ್, ಸರ್ವಕಲಾಲಯದ ಆಫೀಸಿನ ತೋಟದಲ್ಲಿ ವಿಕ್ಟೋರಿಯಾ ಮಹಾರಾಜ್ಞಿ ಎಂಬಿವರ ಏಳು ಪ್ರತಿಮೆಗಳು ಮುಖ್ಯವು.

ಆಮದು ರಫ್ತು ಆಗುವ ಸರಕುಗಳ ಬೆಲೆಯ ಮಾನದಿಂದ ನೋಡಿದರೆ ಮದ್ರಾಸು ಇಂಡಿಯದ ರೇವುಗಳಲ್ಲಿ ಮೂರನೆಯದಾಗಿದೆ. ಬೇರೆ ಬೇರೆ ದೇಶಗಳ ವ್ಯಾಪಾರ ಮಾಡುವ ವರ್ತಕರು ಈ ಪಟ್ಟಣದಲ್ಲಿದ್ದಾರೆ. ಹಡಗುಗಳು ಲಂಗರ ಹಾಕಿ ನಿಲ್ಲಲಿಕ್ಕೆ ಮಾಡಿದ ಹಾರ್ಬರ್ ಬಹಳ ಚಲೋದಾಗಿದೆ. ಈ ಪಟ್ಟಣದ ನಿವಾಸಿಗಳ ಸಂಖ್ಯೆ 5,18,000. ಇದರಲ್ಲಿ ಸೇಕಡಾ 78 ಹಿಂದು, 12 ಮಹಮ್ಮದೀಯರು, 10 ಕ್ರೈಸ್ತರು. ಮುಖ್ಯ ಭಾಷೆ ತಮಿಳು, ಆದರೂ ತೆಲುಗು ಆಡುವವರು ಅನೇಕರಿದ್ದಾರೆ. ಹಿಂದುಸ್ಥಾನಿಯೂ ಇಂಗ್ಲಿಷೂ ಕೆಲವು ಭಾಗಗಳಲ್ಲಿ ತಕ್ಕಮಟ್ಟಿಗೆ ಇವೆ. ಇಲ್ಲಿಗೆ ಎಲ್ಲಾ ರೈಲುರಸ್ತೆಗಳು ಬಂದು ಕೂಡುತ್ತವೆಂದೂ ಬಕ್ಕಿಂಗ್ಹಾಮ ಕಾಲಿವೆಯು ಇಲ್ಲಿಗೆ ಬರುತ್ತದೆಂದೂ ಹಿಂದೆ ಹೇಳಿರುವೆವು.

---


೩. ಚೆಂಗಲ್ಪಟ್ಟು ಜಿಲ್ಲೆ.

ಇದು ನೆಲ್ಲೂರು ಮತ್ತು ದಕ್ಷಿಣ ಆರ್ಕಾಡು ಜಿಲ್ಲೆಗಳ ನಡುವೆ ಮದ್ರಾಸ ಜಿಲ್ಲೆಯ ಸುತ್ತಲೂ ಇದೆ. ವಿಸ್ತೀರ್ಣ 3070 ಚದರಮೈಲು. ಇದು ಹೆಚ್ಚಾಗಿ ಸಮಭೂಮಿಯಾಗಿದೆ. ಮಲೆಗಳೂ ಗುಡ್ಡಗಳೂ ಹೇಳುವಷ್ಟು ವಿಶೇಷವಾಗಿಲ್ಲ; ಸಣ್ಣ ಹೊಳೆಗಳಲ್ಲಿ ಮುಖ್ಯವಾದವು ಪಾಲಾರು, ಕೂವಂ, ಅಡ್ಯಾರು ಎಂಬಿವೇ. ಇವು ಬೇಸಿಗೆಕಾಲದಲ್ಲಿ ಬತ್ತಿಹೋಗುತ್ತವೆ. ಹಿಂದೆ ಹೇಳಿದ ಮಾತವರಂ ಸರೋವರ ಒಂದು, ಪಳವೇರ್ಕಾಡು ಒಂದು, ಹೀಗೆ ಇಲ್ಲಿ ಎರಡು ಸರೋವರಗಳು ಇವೆ. ಸಮುದ್ರತೀರಕ್ಕೆ ಸೇರಿದ ಜಿಲ್ಲೆಯ ಭಾಗದಲ್ಲಿ ಮಳೆಯು ಅಧಿಕವಾಗಿಯೂ ಒಳಪ್ರದೇಶಗಳಲ್ಲಿ ಕಡಮೆಯಾಗಿಯೂ ಇದೆ. ಉಷ್ಣಕಾಲದಲ್ಲಿ ಮಳೆ ಬೀಳುವುದೇ ಇಲ್ಲವೆನ್ನಬಹುದು.

ಕೃಷಿಗೆ ಬೇಕಾದ ನೀರನ್ನು ನಿಲ್ಲಿಸುವುದಕ್ಕೆ ಅನೇಕ ಏರಿಗಳು ಇವೆ. ಇವುಗಳಲ್ಲಿ ಚಂಪರಂಪಾಕಂ ಎಂಬುದೇ ದೊಡ್ಡದು. ಈ ಜಿಲ್ಲೆಯಲ್ಲಿ ತೆಂಕು

ಭಾಗವು ಬಹಳ ಸಾರವತ್ತಾದ್ದರಿಂದ, ಬತ್ತ, ರಾಗಿ, ನೆಲಗಡಲೆ, ಎಳ್ಳು ಮೊದಲಾದ ಧಾನ್ಯಗಳು ಹುಲುಸಾಗಿ ಬೆಳೆಯುತ್ತವೆ. ಸವುದೆಗೆ ಬೇಕಾದ ಚಬುಕಿನ ಮರವು ಸಮುದ್ರದ ತೀರದಲ್ಲಿ ಅನೇಕ ದೊಡ್ಡ ತೋಟಗಳಲ್ಲಿ ಬೆಳೆಯುತ್ತದೆ. ಹತ್ತಿಯನ್ನೂ ಪಟ್ಟೆಯನ್ನೂ ನೂಲುವುದು ಈ ಜಿಲ್ಲೆಯಲ್ಲಿ ಒಂದು ಮುಖ್ಯ ವೃತ್ತಿಯಾಗಿದೆ. ಕಂಚೀಪುರದ ಪಟ್ಟೆನೂಲು ಬಹಳ ಹೆಸರುವಾಸಿಯಾಗಿದೆ. ಜನ ಸಂಖ್ಯೆ 14 ಲಕ್ಷ, ಹೆಚ್ಚಿನವರು ಹಿಂದುಗಳು. ಸಾಧಾರಣವಾಗಿ ತಮಿಳು ಭಾಷೆಯನ್ನೇ ಆಡುತಿದ್ದರೂ ತೆಲುಗು ಸಹ ರೂಢಿಯಲ್ಲಿದೆ.

ಕಂಚೀಪುರಂ.—ಇಂಡಿಯಾದಲ್ಲಿ ಹೆಸರುವಾಸಿಯಾದ ಏಳು ಪುಣ್ಯಕ್ಷೇತ್ರಗಳಲ್ಲಿ ಕಂಚೀಪುರವು ಒಂದಾಗಿದೆ ಎಂದು ಹಿಂದುಗಳು ಭಾವಿಸುತ್ತಾರೆ. ಇಲ್ಲಿರುವ ಅನೇಕ ಕ್ಷೇತ್ರಗಳಲ್ಲಿ ಇದು ಬಹಳ ಪುರಾತನದಾಗಿದೆ. ವಿಚಿತ್ರವಾದ ಕಗ್ಗಲ್ಲಿನ ಕೆತ್ತನೆಯು ಇಲ್ಲಿ ಕಾಣುತ್ತದೆ. ಕಂಚೀಪುರವು ಬಹಳ ಚರಿತ್ರಪ್ರಸಿದ್ಧವಾದ ಪಟ್ಟಣವಾಗಿದೆ. ಇಲ್ಲಿಯ ಪಟ್ಟೆವೇಷ್ಟಿಗಳೂ ಪಟ್ಟೆಹುಳಗಳೂ ಬಹಳ ಹೆಸರುವಾಸಿಯಾಗಿವೆ. ಕಂಚೀಪುರವಲ್ಲದೆ ಇತರ ಪುಣ್ಯಕ್ಷೇತ್ರಗಳೂ ಈ ಜಿಲ್ಲೆಯಲ್ಲಿವೆ. ಅವುಗಳಲ್ಲಿ ಒಂದಾದ ಶ್ರಿಪೆರಂಪುಳ್ಳಿ ಎಂಬುದು ರಾಮಾನುಜಾಚಾರ್ಯರ ಜನ್ಮಭೂಮಿ. ಚೆಂಗಲ್ಪಟ್ಟು ಪಟ್ಟಣದ ಸಮೀಪದಲ್ಲಿ ಪಕ್ಷಿತೀರ್ಥವೆಂದು ಹೇಳುವ ತಿರುಕಳಕುನ್ನು ಎಂಬ ಸ್ಥಳದಲ್ಲಿ ಒಂದು ಶಿವಕ್ಷೇತ್ರವಿದೆ. ಇದರ ಸಮೀಪ ಕಡಲುತೀರದ ಬಳಿಯ ಮಹಾಬಲಿಪುರಂ ಎಂಬುದು ಚರಿತ್ರಪ್ರಸಿದ್ಧಿಯುಳ್ಳ ಸ್ಥಳವು. ಇಲ್ಲಿಯ ದೇವಸ್ಥಾನದ ಶಿಲ್ಪಿಕೆಲಸವು ಅತ್ಯಾಶ್ಚರ್ಯಕರವಾಗಿದೆ. ಇದು ಪುರಾತನ ಕಾಲದಲ್ಲಿ ಕೀರ್ತಿಪಟ್ಟ ಒಂದು ಬಂದರಾಗಿತ್ತು. ಈ ಜಿಲ್ಲೆಯ ಮುಖ್ಯ ಪಟ್ಟಣವು ಮದ್ರಾಸಿಗೆ ಸಮೀಪವಾದ ಸೈದಾಪೇಟೆಯು; ಎರಡನೇ ಊರು ಚೆಂಗಲ್ಪಟ್ಟು. ಜಿಲ್ಲಾ ಕೋರ್ಟು ಚೆಂಗಲ್ಪಟ್ಟಿನಲ್ಲಿದೆ. ಮಧುರಾಂತಕಂ, ತಿರುವಲ್ಲೂರು, ಪೂವಿರುಂದಲ್ಲಿ, ಇವು ಮೂರು ಪುಣ್ಯಸ್ಥಳಗಳು. ಸೈದಾಪೇಟೆಗೆ ಸಮೀಪವಾದ ಸೆಂತ ಥೋಮಸ್ ಮೌಂಟ್ ಅಥವಾ ಪರಂಗಿಮಲೆಯಲ್ಲಿ ಲಷ್ಕರಿ ಸೈನ್ಯವಿದೆ.




CONJEEVARAM TEMPLE ಕಂಜೀವರ ದೇವಸ್ಥಾನ.

೪. ದಕ್ಷಿಣ ಆರ್ಕಾಡು ಜಿಲ್ಲೆ.

ಇದು ಚೆಂಗಲ್ಪಟ್ಟಿಗೆ ದಕ್ಷಿಣದಲ್ಲಿ 4200 ಚದರಮೈಲು ವಿಸ್ತಾರವಾಗಿದ್ದು ಚೆಂಗಲ್ಪಟ್ಟಿನಂತೆ ಸಮಭೂಮಿಯಾಗಿದೆ. ಇದಕ್ಕೆ ಪಶ್ಚಿಮದಲ್ಲಿಯೂ ವಾಯವ್ಯದಲ್ಲಿಯೂ ಗುಡ್ಡಗಳಿವೆ. ಇಲ್ಲಿ ಇರುವ ಜಿಂಜಿ ಎಂಬಲ್ಲಿಯ ಕೋಟೆಯು ಹಿಂದೆ ಸೈನ್ಯದ ಮುಖ್ಯ ಸ್ಥಳವಾಗಿತ್ತು. ತೆಂಕು ಪೆಣ್ಣೆಯಾರು ಮುಖ್ಯ ನದಿ. ಇದು ಅಲ್ಲದೆ ವೆಳ್ಳಾರು ಎಂಬ ನದಿಯು ಈ ಜಿಲ್ಲೆಯ ತೆಂಕುಭಾಗದಲ್ಲಿ ಹರಿದು ಪರಂಗಿಪೇಟೆಯ ಹತ್ತಿರ ಕಡಲಿಗೆ ಕೂಡುತ್ತದೆ. ಕೃಷಿಗೋಸ್ಕರ ಅಲ್ಲಲ್ಲಿ ಬಾವಿಗಳೂ ಕೆರೆಗಳೂ ಕಾಲಿವೆಗಳೂ ಇವೆ. ಕೊಳ್ಳಡಂ ಮತ್ತು ವೆಳ್ಳಾರು ಎಂಬ ನದಿಗಳ ನೀರು ಚಿದಂಬರದಲ್ಲಿ ಕೃಷಿಗೆ ಉಪಯೋಗವಾಗುತ್ತದೆ. ಈ ಜಿಲ್ಲೆಯ ನಡುವೆ ಒಂದು ದೊಡ್ಡದಾದ ಏರಿಯೂ ಇದೆ. ಈ ಜಿಲ್ಲೆಯಲ್ಲಿ ನೆಲಗಡಲೆ ಹುಲುಸಾಗಿ ಬೆಳೆಯುತ್ತದೆ. ಚಿದಂಬರ ತಾಲೂಕಿನಲ್ಲಿ ತೆಂಗಿನ ಕೃಷಿ ವಿಶೇಷವಾಗಿದೆ. ಇತರ ಸ್ಥಳಗಳಲ್ಲಿ ಎಳ್ಳು ಕಬ್ಬು ಮುಖ್ಯ ಕೃಷಿಯಾಗಿದೆ. ನೆಲ್ಲಿಕುಪ್ಪಂ ಎಂಬಲ್ಲಿ ಸಕ್ಕರೆಯನ್ನು ಮಾಡುತ್ತಾರೆ. ಪನ್ರುತಿ ಎಂಬ ಸ್ಥಳವು ಆವೆಮಣ್ಣು ಪ್ರತಿಮೆಗಳಿಗೂ ಪಾತ್ರೆಗಳಿಗೂ ಹೆಸರುಗೊಂಡದೆ. ಮದ್ರಾಸಿನಿಂದ ತಿರುನೆಲ್ವೇಲಿಗೆ ಹೋಗುವ ರೈಲುರಸ್ತೆಯು ಈ ಜಿಲ್ಲೆಯನ್ನು ದಕ್ಷಿಣೋತ್ತರವಾಗಿ ದಾಟಿಹೋಗುತ್ತದೆ. ವೆಲ್ಲಿಪುರಂ ಎಂಬ ಸ್ಥಳದಲ್ಲಿ ಈ ರೈಲುರಸ್ತೆಯ ಒಂದು ಶಾಖೆ ಪೂರ್ವಕ್ಕೆ ಪುದುಚೇರಿಗೂ ಇನ್ನೊಂದು ಈಶಾನ್ಯಕ್ಕೆ ವೇಲೂರಿಗೂ ಹೋಗುತ್ತದೆ. ಜನಸಂಖ್ಯೆ 24,00,000. ಹೆಚ್ಚಿನವರು ಹಿಂದುಗಳು. ಮುಖ್ಯ ಭಾಷೆ ತಮಿಳು.

ಪ್ರಧಾನ ಪಟ್ಟಣಗಳು.— ಕಡಲೂರು (ಕುಡಲೂರು) ಮುಖ್ಯ ಪಟ್ಟಣವು. ತೆಂಕು ಪೆಣ್ಣಾರು ಮತ್ತು ಕಡಿಲಂ ಎಂಬ ಎರಡು ನದಿಗಳ ಸಂಗಮದಲ್ಲಿರುವುದರಿಂದ ಕಡಲೂರು ಎಂಬ ಹೆಸರಾಯಿತು ಎಂತ ಜನರು ಹೇಳುತ್ತಾರೆ. ಇದು ಕಡಲುತೀರದ ಮೇಲಿನ ಒಂದು ಸ್ಥಳವಾಗಿದೆ. ಇಲ್ಲಿಂದ ನೆಲಗಡಲೆ ವಿಶೇಷವಾಗಿ ರಫ್ತು ಆಗುತ್ತದೆ. ಚೆಂಗಲ್ಪಟ್ಟು ಜಿಲ್ಲೆಯಲ್ಲಿದ್ದ ಹಾಗೆ ಇಲ್ಲಿಯೂ ಹಲವು ಮುಖ್ಯ ಕ್ಷೇತ್ರಗಳಿವೆ. ಚಿದಂಬರವು ಇಂಡಿಯದಲ್ಲಿ ಪ್ರಖ್ಯಾತವಾದ ನಾಟರಾಜದೇವಸ್ಥಾನಕ್ಕೆ ಹೆಸರು ಪಡೆದದೆ. ಚರಿತ್ರಪ್ರಸಿದ್ಧವಾದ ಜಿಂಜಿಯಲ್ಲಿ ಬಹಳ ಆಶ್ಚರ್ಯಕರವಾದ ರೀತಿಯಲ್ಲಿ ಕಟ್ಟಿದ ಕೋಟೆ

ಇದೆ. ದೇರೆಂಗರಾಜನ ಕಥೆಯು ಈ ಕೋಟೆಗೆ ಸಂಬಂಧಪಟ್ಟಿದೆ. ಫರಂಗಿ ಪೇಟೆಯು ಪೊರ್ಟನೋವೊ, ಇವು ವ್ಯಾಪಾರದ ಸ್ಥಳಗಳು. ಪುದುಚೇರಿಯು



PONDICHERRY ಪುದುಚೇರಿ.

ಸಮುದ್ರತೀರದಲ್ಲಿದ್ದು ಇಂಡಿಯದಲ್ಲಿ ಫ್ರೆಂಚರಿಗೆ ಸೇರಿದ ಪ್ರಧಾನ ರೇವು ಸ್ಥಳವಾಗಿದೆ. ಇಲ್ಲಿಂದ ಫ್ರೆಂಚ ರಾಜ್ಯಕ್ಕೆ ನೆಲಗಡಲೆ ಹೆಚ್ಚಾಗಿ ಹೋಗುತ್ತದೆ. ಇದು ನೋಡುವುದಕ್ಕೆ ಒಂದು ಸುಂದರ ನಗರ. ಇಲ್ಲಿ ಒಂದು ವಿಧವಾದ

ತೂಬುಬಾವಿಗಳು ಇವೆ. ಇಂಥ ಬಾವಿಗಳು ಕಾರೆಕಲಿನಲ್ಲಿ ಅಲ್ಲದೆ ಈ ಸಂಸ್ಥಾನದ ಬೇರೆ ಕಡೆಗಳಲ್ಲಿ ಇಲ್ಲ.

2. ದಕ್ಷಿಣ ಕರ್ನಾಟಕ.


೧. ತಂಜಾವೂರು ಜಿಲ್ಲೆ.

ಇದು ದಕ್ಷಿಣ ಆರ್ಕಾಡಿನ ದಕ್ಷಿಣ ಭಾಗದಲ್ಲಿದೆ. ವಿಸ್ತೀರ್ಣ ಹೆಚ್ಚು ಕಡಿಮೆ 3725 ಚದರಮೈಲು. ಈ ಜಿಲ್ಲೆಯು ಪೂರ್ಣ ಸಮಭೂಮಿಯಾಗಿದೆ. ಇದಕ್ಕೆ ದಕ್ಷಿಣ ಇಂಡಿಯದ ತೋಟವೆಂದೂ ನೆಲ್ಲುಭೂಮಿಯೆಂದೂ ಹೆಸರುಂಟು. ಕಾವೇರಿನದಿಯೂ ಅದರ ಹಲವು ಶಾಖೆಗಳೂ ಹರಿಯುವ ಸ್ಥಳಗಳಲ್ಲೆಲ್ಲ ತೆಂಗೂ ಬಾಳೆಯೂ ಸಮೃದ್ಧಿಯಾಗಿ ಬೆಳೆಯುತ್ತವೆ. ಅವಶ್ಯವಾದಷ್ಟು ಮಳೆಯು ವರ್ಷಂಪ್ರತಿ ಬೀಳುತ್ತದೆ. ಈ ಜಿಲ್ಲೆಯಲ್ಲಿ ಉಷ್ಣವು ಕಡಮೆಯಾಗಿಲ್ಲವಾದರೂ ಅದರಿಂದ ದೇಹಸೌಖ್ಯಕ್ಕೆ ಬಾಧೆ ಇಲ್ಲವೆಂದು ಹೇಳಬಹುದು. ಮುಖ್ಯ ನದಿಯೇ ಕಾವೇರಿ. ಇದರ ಮುಖ್ಯ ಶಾಖೆಯಾದ ಕೊಲ್ಲಡಂ ಎಂಬುದು ಈ ಜಿಲ್ಲೆಗೂ ದಕ್ಷಿಣ ಆರ್ಕಾಡಿಗೂ ಮಧ್ಯದಲ್ಲಿ ಮೇರೆಯಾಗಿ ಹರಿದು, ಬಂಗಾಳ ಕೊಲ್ಲಿಯಲ್ಲಿ ಫರಂಗಿಪೇಟೆಗೆ ಸಮೀಪ ಬೀಳುತ್ತದೆ. ಕಾವೇರಿಯಲ್ಲಿಯೂ ಕೊಳ್ಳಡದಲ್ಲಿಯೂ ಹಲವು ಸ್ಥಳಗಳಲ್ಲಿ ಅಣೆಕಟ್ಟೆ, ನೀರಸ್ನು ಕಾಲಿವೆಗಳ ಮೂಲಕ ವಿಧವಿಧದ ಧಾನ್ಯಗಳು ಪೈರಾಗುವ ಭೂಮಿಗೆ ತಿರುಗಿಸುವುದರಿಂದ, ಉಪಯೋಗವಾಗದೆ ಇದ್ದ ನೀರು ಮಾತ್ರ ಸಮುದ್ರಕ್ಕೆ ಹೋಗಿ ಬೀಳುತ್ತದೆ. ಕಾವೇರಿಯೂ ಅದರ ಶಾಖೆಗಳೂ ಹರಿಯುವ ಪ್ರಾಂತದಲ್ಲೆಲ್ಲ ವರ್ಷವರ್ಷವೂ ನೆರೆನೀರಿನ ಒಂಡು ಬಂದು ಸೇರುವುದರಿಂದ ಆ ನೆಲವು ಸಾರವತ್ತಾಗಿದ್ದು, ಜಮೀನಿಗೆ ಹೆಚ್ಚಿನ ಗೊಬ್ಬರ ಅಗತ್ಯವಿಲ್ಲ. ಅಲ್ಲಿ ನೆಲ್ಲು ಸಮೃದ್ಧಿಯಾಗಿ ಬೆಳೆಯುತ್ತದೆ. ರಾಗಿ, ತೊಗರಿ, ಬರಗು, ಕಂಬು, ಮೊದಲಾದ ಧಾನ್ಯಗಳನ್ನು ಬಹು ಚೆನ್ನಾಗಿ ಕೃಷಿಮಾಡುತ್ತಾರೆ. ಕೃಷಿಯ ಜಮೀನೇ ಅಧಿಕವಾಗಿರುವುದರಿಂದ ಜಾನುವಾರುಗಳ ಮೇವಿಗೆ ಸ್ಥಳವು ಬಹಳ ಕಡಮೆ. ಹೀಗಾಗಿ ಈ ಜಿಲ್ಲೆಯಲ್ಲಿ ಒಳ್ಳೇ ಜಾತಿಯ ಕಾಲ್ನಡೆಗಳೇ ಇಲ್ಲ. ಉಳುಮೆಗೆ ಬೇಕಾದ ಜಾನುವಾರುಗಳನ್ನು ಬೇರೆ ಕಡೆಗಳಿಂದ ತರಿಸಿ

ಕೊಳ್ಳಬೇಕಾಗುತ್ತದೆ. ಈ ಜಿಲ್ಲೆಯಲ್ಲಿ ತಯಾರಾಗುವ ಹಿತ್ತಾಳೆಸಾಮಾನು, ಕಂಚಿನ ಪಾತ್ರೆ, ಪಟ್ಟೆಸೀರೆ, ಉಣ್ಣೆ, ಕಂಬಳಿ, ಇವು ಹೆಸರು ಪಡೆದಿವೆ. ಮುಖ್ಯವಾಗಿ ರಫ್ತಾಗುವುದು ಅಕ್ಕಿಯೇ.

ಜನಸಂಖ್ಯೆ.—2,360,000. ಈ ಜಿಲ್ಲೆಯಲ್ಲಿ ಕೆಲವು ಮುಹಮ್ಮದಿಯರು ಇದ್ದಾರೆ. ತಮಿಳು ಅವರ ಭಾಷೆ. ವ್ಯಾಪಾರವು ಅವರ ಮುಖ್ಯ ವೃತ್ತಿ.

ಮುಖ್ಯ ಪಟ್ಟಣ.—ತಂಜಾವೂರು ಇತಿಹಾಸದಲ್ಲಿ ಪ್ರಸಿದ್ಧವಾಗಿದೆ. ಇದೇ ಪುರಾತನಕಾಲದ ಚೋಳ ರಾಜ್ಯದ ರಾಜಧಾನಿಯಾಗಿತ್ತು. ಒಳ್ಳೇ ಅಂದವಾದ ಹಲವು ದೇವಸ್ಥಾನಗಳು ಇದ್ದು ಈಗ ಪುಣ್ಯಕ್ಷೇತ್ರವೆನಿಸಿಕೊಳ್ಳುತ್ತದೆ. ಅವುಗಳಲ್ಲಿ ಒಂದಾದ ಜಗದೀಶ್ವರಂ ಕೋವಿಲ್ ಎಂಬ ದೇವಸ್ಥಾನದಲ್ಲಿ ದೊಡ್ಡ ನಂದಿಯ ಪ್ರತಿಮೆಯು ಇದೆ. ಇದರ ಗೋಪುರವು ಆಶ್ಚರ್ಯಕರವಾಗಿದೆ. ತಂಜಾವೂರು ಪಟ್ಟಣವು ಹಿಂದೆ ಹಲವು ವಿಧದ ಶಿಲ್ಪಿಕೆಲಸಕ್ಕೆ ಹೆಸರುವಾಸಿಪಡೆದಿತ್ತು. ಈಗಲೂ ಪಟ್ಟೆಸೀರೆಗಳಿಗೆ ಪ್ರಖ್ಯಾತಿ ಪಟ್ಟಿರುತ್ತದೆ. ತಾಮ್ರ, ಹಿತ್ತಾಳೆ, ಕಂಚು, ಇವುಗಳಿಂದ ಈಗಲೂ ನಾನಾ ತರದ ಪಾತ್ರೆಗಳೂ ಆಯುಧಗಳೂ ಇಲ್ಲಿ ತಯಾರಾಗುತ್ತವೆ. ಇಂಥ ಪಾತ್ರೆಗಳನ್ನು ಅಲ್ಲಿಯ ಹಳೆಯ ಅರಮನೆಯಲ್ಲಿಯೂ ಮದ್ರಾಸಿನ ಮ್ಯುಸಿಯಮಿನಲ್ಲಿಯೂ ಈಗಲೂ ಕಾಣಬಹುದು. ತಂಜಾವೂರ ಅರಮನೆಯ ಗ್ರಂಥಭಂಡಾರದಲ್ಲಿ ಅನೇಕ ಹಳೆ ಗ್ರಂಥಗಳನ್ನೂ ಪುಸ್ತಕಗಳನ್ನೂ ಹುಡುಕಿ ತಂದು ಭದ್ರವಾಗಿ ಇಟ್ಟಿರುತ್ತಾರೆ. ಇದಕ್ಕೆ ಸರಸ್ವತಿ ಮಹಾಲ್ ಎಂದು ಹೆಸರು. ಕುಂಭಕೋಣವು ಕಾವೇರಿ ನದಿಯ ಮೇಲೆ ಜಿಲ್ಲೆಯ ಅತ್ಯಂತ ಫಲಭರಿತವಾದ ಭಾಗದಲ್ಲಿದ್ದು, ಬಹು ಪುರಾತನ ನಗರಗಳಲ್ಲಿ ಒಂದಾಗಿದ್ದು ಅನೇಕ ದೇವಸ್ಥಾನಗಳಿಂದ ಕೂಡಿರುತ್ತದೆ. ಹಿತ್ತಾಳೆ, ಸೀಸ, ಇವುಗಳಿಂದ ಇಲ್ಲಿ ತಯಾರಾದ ಪಾತ್ರೆಗಳು ಬಹಳ ಹೆಸರುವಾಸಿಯಾದವುಗಳು. ಇಲ್ಲಿ ಒಂದು ಫಸ್ಟ್ ಗ್ರೇಡ್ ಕೊಲೇಜು ಇದೆ. ಹನ್ನೆರಡು ವರ್ಷಕ್ಕೊಮ್ಮೆ ಇಲ್ಲಿ ನಡೆಯುವ ಮಹಾಮಘಂ ಎಂಬ ಮಹೋತ್ಸವಕ್ಕೆ ಇಂಡಿಯದ ನಾನಾ ಭಾಗಗಳಿಂದ ಲಕ್ಷೋಪಲಕ್ಷ ಜನಗಳು ತೀರ್ಥಸ್ನಾನಕ್ಕಾಗಿ ಇಲ್ಲಿಗೆ ಬರುವುದುಂಟು. ನಾಗಪಟ್ಟಣವು ಈ ಜಿಲ್ಲೆಯ ಮುಖ್ಯ ರೇವು. ಇಲ್ಲಿಂದ ಅಕ್ಕಿ, ಹೊಗೆಸೊಪ್ಪು, ಚುರುಟು, ಹಳದಿ, ತೊಗಲು, ಮೊದಲಾದ ಸರಕುಗಳು ರಫ್ತಾಗುತ್ತವೆ. ಇದರ ಉತ್ತರಕ್ಕೆ ಇರುವ ತರಂಕಂಬಾಡಿ ಎಂಬುದು ಹಿಂದೆ ಡಚ್ಚರು ಸ್ಥಾಪಿಸಿದ್ದ ಒಂದು ರೇವು. ಅದನ್ನು ಇಂಗ್ಲಿಷರು



TANJORE TEMPLE ತಂಜಾವೂರ ದೇವಸ್ಥಾನ.

ಅವರೊಡನೆ ಬೆಲೆಗೆ ಪಡೆದರು; ಬಹು ಕಾಲದ ವರೆಗೆ ಇದು ಈ ಜಿಲ್ಲೆಯ ಮುಖ್ಯ ಸ್ಥಾನವಾಗಿತ್ತು. ಮನ್ನಾರಗುಡಿಯಲ್ಲಿ ಒಂದು ವಿಷ್ಣುಕ್ಷೇತ್ರವಿದೆ. ಮಾಯಪುರಂ (ಅಥವಾ ಮಾಯಾವರಂ) ಕಾವೇರಿನದಿಯ ಮೇಲಿನ ಒಂದು ಪುಣ್ಯಕ್ಷೇತ್ರವಾಗಿದೆ. ಇದರ ಹತ್ತಿರ ಕೂರನಾಡು ಎಂಬ ಪಟ್ಟಣವಿದೆ. ಇಲ್ಲಿ ನೆಯಿದು ಬರುವ ಪಟ್ಟೆಸೀರೆಗಳಿಗೆ ಕೂರನಾಡುಸೀರೆ ಎಂದು ಹೆಸರು. ಹಿಂದು ಸ್ತ್ರೀಯರು ಹೆಚ್ಚಾಗಿ ಈ ಸೀರೆಗಳನ್ನು ಉಡುವುದುಂಟು. ಶ್ರೀಕಾಳಿ ಈ ಜಿಲ್ಲೆಯಲ್ಲಿ ಪ್ರಸಿದ್ಧವಾದ ಇನ್ನೊಂದು ಪುರಾತನ ನಗರ. ಅಪತ್ತಮೂರ ಎಂಬುದು ಹೆಸರುವಾಸಿಯಾದ ನಾಯಕರಲ್ಲಿ ಸೇರಿದವನೊಬ್ಬನಾದ ತಿರುಜ್ಞಾನ ಸಂಬಂಧರ್ ಎಂಬ ಮಹಾಪುರುಷನ ಜನನಸ್ಥಳ. ಇಲ್ಲಿ ಈಗಲೂ ಹುಲ್ಲಿನ ಚಾಪೆಗಳನ್ನು ಹೆಣೆಯುತ್ತಾರೆ. ತಂಜಾವೂರಿನಿಂದ ಐದು ಮೈಲು ಬಡಗಿಗೆ ತಿರುವಾಯೂರು ಎಂಬ ಪುಣ್ಯಕ್ಷೇತ್ರವಿದೆ. ಇದಕ್ಕೆ ಸಮೀಪವಾಗಿ ಕೊಳ್ಳಡಂ, ಕಾವೇರಿ, ಕುಡಮುರಟಿ, ವೆಟ್ಟಾರು, ವೆಣ್ಣಾರು ಎಂಬ ಪಂಚನದಿಗಳು ಹರಿಯುವುದರಿಂದ ಇದಕ್ಕೆ ಅಯ್ಯ್ಯಾರ್ (ಪಂಚನದಿ) ಎಂಬ ಹೆಸರು ಇದೆ. ತಿರುವಾಂಕೂರು ಇನ್ನೊಂದು ಪ್ರಖ್ಯಾತವಾದ ಪುಣ್ಯಸ್ಥಳ. ಇಲ್ಲಿರುವ ಕಮಲಾಲಯ ಎಂದು ಹೆಸರುಳ್ಳ ಕೆರೆಯೂ, ಅದರ ದಡದಲ್ಲಿರುವ ದೇವಸ್ಥಾನವೂ, ಆ ದೇವಸ್ಥಾನದ ರಥವೂ ಬಹಳ ಹೆಸರುವಾಸಿಯಾಗಿವೆ.

---

೬. ರಾಮನಾಥಪುರಂ ಜಿಲ್ಲೆ.

ಈ ಜಿಲ್ಲೆ ತಂಜಾವೂರಿನ ತೆಂಕುಭಾಗದಲ್ಲಿದ್ದು 4800 ಚದರಮೈಲು ವಿಸ್ತೀರ್ಣವಾಗಿದೆ. ಈ ಜಿಲ್ಲೆಯು ಪೂರ್ಣ ಸಮಭೂಮಿಯಾಗಿದೆ. ಇದರಲ್ಲಿ ಹರಿಯುವ ವೈಗೈ ಎಂಬ ನದಿಯು ತಿರುವಾಂಕೂರಿಗೂ ಮಧುರೆಗೂ ಮಧ್ಯದಲ್ಲಿರುವ ಮಲೆಗಳಲ್ಲಿ ಉದ್ಭವಿಸಿ, ಅಲ್ಲಿಂದ ಈಶಾನ್ಯಕ್ಕಾಗಿ ಮಧುರೆ ಜಿಲ್ಲೆಯಲ್ಲಿ ಹರಿದು, ಅಲ್ಲಿಂದ ಆಗ್ನೇಯಕ್ಕೆ ಹೋಗಿ ಈ ಜಿಲ್ಲೆಯ ಮಧ್ಯದಲ್ಲಿ ಪ್ರವಹಿಸಿ ಸಮುದ್ರಕ್ಕೆ ಸೇರುತ್ತದೆ. ಈ ಹೊಳೆಯ ನೀರು ಈ ಜಿಲ್ಲೆಯ ಕೃಷಿಗೆ ಎಷ್ಟೋ ಸಹಾಯಕರವಾಗಿದೆ. ಹೊಳೆಯು ಕಡಲಿಗೆ ಬೀಳುವ ಸ್ಥಳಕ್ಕೆ ಆಟಿನ್‌ಕರೆ ಎಂದು ಹೆಸರು. ಆ ಸ್ಥಳವು ರಾಮನಾಥಪುರಕ್ಕೆ ಮೂಡುಗಡೆಯಲ್ಲಿದೆ. ಈ ನದಿಯಲ್ಲಿ ವರ್ಷದಲ್ಲಿ ಹೆಚ್ಚು ಕಡಮೆ ಒಂದು

ತಿಂಗಳಲ್ಲದೆ ಇತರ ಸಮಯದಲ್ಲಿ ನೀರು ಬಹಳ ಕೊಂಚ. ಈ ಜಿಲ್ಲೆಯ ಆಗ್ನೇಯದಿಕ್ಕಿಗೂ ಮೂಡುದಿಕ್ಕಿಗೂ ಸಮುದ್ರವೂ ಮನ್ನಾರ್ ಕೊಲ್ಲಿಯೂ ಮೇರೆಗಳಾಗಿವೆ. ಇದರ ಸಮೀಪವಿರುವ ರಾಮೇಶ್ವರವನ್ನು ಕುರಿತು ಈ ಮೊದಲು ಹೇಳಿದೆ. ಮನ್ನಾರ್ ಕೊಲ್ಲಿಯು ಈ ಜಿಲ್ಲೆಗೂ ಲಂಕಾದ್ವೀಪಕ್ಕೂ ನಡುವೆ ಇದೆ. ಈಗ ರಾಮೇಶ್ವರದಿಂದ ಲಂಕಾದ್ವೀಪಕ್ಕೆ ರೈಲುರಸ್ತೆ ಮಾಡಿಸಲಿಕ್ಕೆ ಪ್ರಯತ್ನಗಳು ನಡೆಯುತ್ತವೆ. ಈ ಜಿಲ್ಲೆಯ ಕಡಲುತೀರದ ಪ್ರದೇಶಗಳಲ್ಲಿ ಮಾತ್ರ ಮಳೆ ಸುರಿಯುತ್ತದೆ. ಮಳೆ ಬೀಳುವುದು ಚಳಿಗಾಲದಲ್ಲಿಯೇ. ಇದು ತಂಜಾವೂರು ಜಿಲ್ಲೆಯಷ್ಟು ಸಮೃದ್ಧಿಯಾದದ್ದಲ್ಲ. ವೈಗೈ ನದಿಯ ಎರಡೂ ದಡಗಳಲ್ಲಿ ನೆಲ್ಲು, ರಾಗಿ, ಹತ್ತಿ, ಇವನ್ನು ಮುಖ್ಯವಾಗಿ ಬೆಳಿಸುತ್ತಾರೆ. ಜನಸಂಖ್ಯೆ 1,600,500. ಈ ಜಿಲ್ಲೆಯ ಕಲೆಕ್ಟರ್, ಜಡ್ಜ್ ಮೊದಲಾದ ಪ್ರಧಾನ ಉದ್ಯೋಗಸ್ಥರು ಮಧುರೆಯಲ್ಲಿ ಇರುತ್ತಾರೆ. ಆದರೂ ರಾಮನಾಥಪುರವು (ರಾಮನಾಡು) ಒಂದು ಮುಖ್ಯ ಪಟ್ಟಣ. ಅದು ಜಮೀನದಾರನ ವಾಸಸ್ಥಳ. ಈ ರಾಮನಾಥಪುರದ ಜಮೀನುದಾರನಿಗೆ ಸೇತುಪತಿರಾಜ ಎಂಬ ಹೆಸರಿದೆ. ಇವನು ಈ ನಾಡಿನಲ್ಲಿ ವಾಸಿಸುವ ಮರಸರು ಎಂಬ ಜಾತಿಗೆ ಮುಖಂಡನು. ಈ ಪಟ್ಟಣಕ್ಕೆ ಸಮೀಪವಿರುವ ರಾಮೇಶ್ವರವು ಹಿಂದು ಯಾತ್ರಿಕರು ಸಂದರ್ಶಿಸುವ ಒಂದು ಪುಣ್ಯಸ್ಥಳ. ತ್ರಿವೆಲ್ಲಿಪೆತ್ತೂರು ಎಂಬ ಪುಣ್ಯಸ್ಥಳವೂ ಈ ಜಿಲ್ಲೆಯುಲ್ಲಿದೆ. ವೈಗೈ ನದಿಯ ದಡದಲ್ಲಿರುವ ಪರಮಗುಡಿ ಎಂಬ ಪಟ್ಟಣವು ಜರಿಬಟ್ಟೆಗೆ ಹೆಸರುವಾಸಿಯಾಗಿದೆ. ದೇವಕೋಟಿ ಎಂಬುದು ನಾಟುಕೋಟಿ ಚಟ್ಟಿಗಳೆಂಬ ಧನಿಕ ವರ್ತಕರ ಮುಖ್ಯ ವಾಸಸ್ಥಳ. ಇವರು ಬಹಳ ಹಣ ವೆಚ್ಚಮಾಡಿ ಅನೇಕ ಹಳೆ ದೇವಸ್ಥಾನಗಳನ್ನು ಜೀರ್ಣೋದ್ಧಾರಮಾಡಿ ದಕ್ಷಿಣ ಇಂಡಿಯದಲ್ಲಿ ರಾಮೇಶ್ವರಕ್ಕೆ ಹೋಗುವ ದಾರಿಯಲ್ಲೆಲ್ಲಾ ಛತ್ರಗಳನ್ನು ಹಾಕಿಸಿ, ಅವು ಶಾಶ್ವತವಾಗಿ ನಡೆಯುವಂತೆ ಧರ್ಮಮಾಡುತಿದ್ದಾರೆ. ಇನ್ನು ಹಲವು ವಿಧವಾದ ಧರ್ಮಕಾರ್ಯಗಳನ್ನು ಮಾಡುತಿದ್ದಾರೆ. ದೇವಗಂಗಾ ಜಮೀನುದಾರರ ನಿವಾಸವು ದೇವಕೋಟೆಯಲ್ಲಿಯೇ. ಇಲ್ಲಿ ಹಿತ್ತಾಳೆ ಮತ್ತು ಕಂಚಿನ ವಿಶೇಷ ತರವಾದ ಪ್ರತಿಮೆಗಳನ್ನು ಮಾಡುತ್ತಾರೆ. ಈ ಸ್ಥಳವು ಕೃಷಿಗೆ ಯೋಗ್ಯವಾದ ಮಣ್ಣುಳ್ಳದ್ದಾಗಿದೆ.

೩. ತಿರುನೆಲ್ವೇಲಿ ಜಿಲ್ಲೆ.

ರಾಮನಾಥಪುರದ ತೆಂಕುಕಡೆ ಇರುವ ಈ ಜಿಲ್ಲೆಯು ಮದ್ರಾಸ್ ಸಂಸ್ಥಾನದ ತೆಂಕು ಮೇರೆಯಾಗಿದೆ. ವಿಸ್ತೀರ್ಣವು 4354 ಚದರಮೈಲು. ಪಶ್ಚಿಮಘಟ್ಟದ ತೆಂಕುಭಾಗದ ಕೊನೆಯನ್ನು ಮುಟ್ಟುವ ಈ ಜಿಲ್ಲೆಯು ಮಲೆ ಪ್ರದೇಶದಿಂದ ಸಮುದ್ರದ ವರೆಗೆ ಒಂದೇ ಸಮತಟ್ಟಾದ ಭೂಮಿ. ಮೂಡು ಗಡಿಯಾಗಿರುವ ಮಲೆಪ್ರಾಂತವು 3000ದಿಂದ 5000 ಅಡಿ ವರೆಗೆ ಎತ್ತರ ವಿದೆ. ಇದರ ಮುಖ್ಯ ಶಿಖರಕ್ಕೆ ಅಗಸ್ತ್ಯಮಲೆ ಎಂದು ಹೆಸರು. ಈ ಜಿಲ್ಲೆಯ ನದಿಗಳೆಲ್ಲಾ ಪಶ್ಚಿಮಘಟ್ಟದಿಂದ ಹೊರಟು, ಜಿಲ್ಲೆಯಲ್ಲಿ ಹರಿದು, ಸಮುದ್ರಕ್ಕೆ ಸೇರುತ್ತವೆ. ಇವುಗಳಲ್ಲಿ ಮುಖ್ಯವಾದ ತಾಮ್ರಪರ್ಣಿ ಎಂಬ ನದಿಯು ಪಾಪನಾಶ ಎಂಬಲ್ಲಿ ಹುಟ್ಟಿ, ಜೋಗಾಗಿ ಬೀಳುತ್ತದೆ. ಕುತ್ತಾಲಂ ಎಂಬ ಸ್ಥಳದಲ್ಲಿಯೂ ಈ ನದಿಯು ಮನೋಹರವಾದ ಜೋಗಾಗಿ ದುಮುಕುತ್ತದೆ. ಒಟ್ಟಾರೆ ನೋಡಿದರೆ ಆರೋಗ್ಯಕ್ಕೆ ಈ ಜಿಲ್ಲೆಯು ಅನುಕೂಲವಾದದ್ದು ಎಂದು ಹೇಳಬಹುದು. ಮಳೆಯು ಕರಾವಳಿಯಲ್ಲಿ ಕಡಮೆಯಾಗಿಯೂ ಮಲೆಪ್ರಾಂತದಲ್ಲಿ ಹೆಚ್ಚಾಗಿಯೂ ಬೀಳುತ್ತದೆ. ತಾಮ್ರಪರ್ಣಿಯ ನೀರು ಕೃಷಿಗೆ ಬಹಳ ಆಧಾರವಾಗಿದೆ. ಪೈಯಾರು ಎಂಬ ಇನ್ನೊಂದು ಹೊಳೆಯೂ ಕೃಷಿಗೆ ಸಹಾಯಕವಾಗಿದೆ. ಬೆಳೆಗಳಲ್ಲಿ ಮುಖ್ಯವಾದದ್ದು ನೆಲ್ಲು. ಹತ್ತಿಯು ಜಿಲ್ಲೆಯ ಬಡಗು ಭೂಮಿಯ ಕಪ್ಪುಮಣ್ಣಿನಲ್ಲಿ ವಿಶೇಷವಾಗಿ ಬೆಳೆಯುತ್ತದೆ. ಜಿಲ್ಲೆಯ ತೆಂಕುಕಡೆಯು ತಾಳೆಯು ಬೆಳೆಯತಕ್ಕ ಕೆಂಪು ಮಣ್ಣಿನ ಜಮೀನಾಗಿದೆ. ಆದುದರಿಂದ ಜಿಲ್ಲೆಯ ತೆಂಕುಭಾಗಕ್ಕೆ 'ತಾಳೆಕಾಡು' ಎಂಬ ಹೆಸರು ಚೆನ್ನಾಗಿ ಒಪ್ಪುತ್ತದೆ. ಗಟ್ಟದ ಕಾಡುಗಳಲ್ಲಿ ತೇಗು, ಕರಿಮರ, ಜೇಂಗ ಎಂಬೀ ಅಮೂಲ್ಯವಾದ ಮರಗಳು ಬೆಳೆಯುತ್ತವೆ. ಈ ಜಿಲ್ಲೆಯ ಸಮೀಪದಲ್ಲಿ ಕಡಲಿನಿಂದ ಮುತ್ತಿನ ಚಿಪ್ಪನ್ನೂ ತೆಗೆಯುತ್ತಾರೆ. ಶರ್ಮಾದೇವಿ ಪತ್ತಮತಾ ಎಂಬ ಗ್ರಾಮಗಳಲ್ಲಿ ಹುಲ್ಲುಚಾಪೆಯನ್ನು ಹೆಣೆಯುತ್ತಾರೆ. ಅಂಬಾಸಮುದ್ರ ಎಂಬ ಗ್ರಾಮದ ಬಳಿಯಲ್ಲಿ ಉಡುವ ಬಟ್ಟೆಗಳನ್ನು ತಯಾರಿಸುತ್ತಾರೆ. ಈ ಜಿಲ್ಲೆಯ ಎತ್ತಿನ ಜಾತಿ ಬಹಳ ಆಶ್ಚರ್ಯಕರವಾಗಿದೆ. ಈ ಜಿಲ್ಲೆಯಿಂದ ಸೀಲೋನಿಗೆ ನೆಲ್ಲೂ ಕರಿಮೆಣಸೂ ಬಹಳವಾಗಿ ರಫ್ತಾಗುತ್ತವೆ. ಜನಸಂಖ್ಯೆ 1,800,000. ಇವರಲ್ಲಿ ಅಧಿಕ ಮಂದಿ ಹಿಂದುಗಳೇ.

ಇಲ್ಲಿ ಕ್ರೈಸ್ತರೂ ಇದ್ದಾರೆ. ಇಲ್ಲಿಯ ಮಹಮ್ಮದೀಯರು ತಮಿಳು ಭಾಷೆ ಆಡುತ್ತಿರುವ ಲಬ್ಬೆಗಳು.

ಪ್ರಧಾನ ಪಟ್ಟಣಗಳು.—ತಾಮ್ರಪರ್ಣಿಯ ತೀರದಲ್ಲಿರುವ ತಿರುನೆಲ್ವೇಲಿಯು ಈ ಜಿಲ್ಲೆಯ ಮುಖ್ಯ ಪಟ್ಟಣವು. ನದಿಯ ಪೂರ್ವತೀರದಿಂದ ಎರಡು ಮೈಲು ದೂರವಿರುವ ಪಾಳೆಯಂಕೋಟೆಯೂ ಒಂದು ಮುಖ್ಯ ನಗರವು. ಈ ಎರಡೂ ನಗರಗಳ ಮಧ್ಯೆ ಹರಿಯುವ ಹೊಳೆಯ ಮೇಲೆ ಒಂದು ದೊಡ್ಡ ಸೇತುವೆ ಕಟ್ಟಿ ಈ ಎರಡು ಊರುಗಳನ್ನು ಒಂದಾಗಿ ಮಾಡಿರುವರು. ಈ ಜಿಲ್ಲೆಯ ಮುಖ್ಯವಾದ ಆಫೀಸುಗಳು ಪಾಳೆಯಂಕೋಟೆಯಲ್ಲಿವೆ. ಮಿಶನೆರಿಯವರು ಕಿವುಡರಿಗೂ ಮೂಗರಿಗೂ ಏರ್ಪಡಿಸಿದ ಒಂದು ಶಾಲೆಯು ಇಲ್ಲಿಯೇ ಇದೆ. ತೂತುಕುಡಿ ಮುಖ್ಯ ರೇವುಪಟ್ಟಣ. ಪರರಾಜ್ಯಗಳೊಡನೆ ವ್ಯಾಪಾರ ಮಾಡುವ ಈ ಸಂಸ್ಥಾನದ ರೇವುಸ್ಥಳಗಳಲ್ಲಿ ಇದು ಎರಡನೆಯದಾಗಿದೆ. ಇಲ್ಲಿಂದ ಸೀಲೋನಿಗೂ, ಅಲ್ಲಿಂದ ಇಲ್ಲಿಗೂ ದಿನವಹಿ ಹಡಗುಗಳು ಓಡಾಡುತ್ತವೆ. ತೆಂಕಾಶಿಗೆ ಹತ್ತಿರದ ಶ್ರೀಕುತ್ತಾಲಂ ಎಂಬುದೂ ಅಂಜಾಸಮುದ್ರಕ್ಕೆ ಹತ್ತಿರದ ಪಾಪನಾಶಂ ಎಂಬುದೂ ಪ್ರಖ್ಯಾತವಾದ ಶಿವಕ್ಷೇತ್ರಗಳಾಗಿವೆ.

3. ಪಶ್ಚಿಮತೀರದ ಜಿಲ್ಲೆಗಳು.

೧. ಮಲೆಯಾಳ ಜಿಲ್ಲೆ.

ಚೋಳಮಂಡಲ ಕರಾವಳಿಯ ಜಿಲ್ಲೆಗಳಿಗೆ ಸಮುದ್ರತೀರವು ಒತ್ತಾಗಿರುವ ಹಾಗೆಯೇ ಪಶ್ಚಿಮತೀರದ ಜಿಲ್ಲೆಗಳಿಗೆ ಪಶ್ಚಿಮ ಸಮುದ್ರವು ಮೇರೆಯಾಗಿದೆ. ಮಲೆಯಾಳ ಜಿಲ್ಲೆಯ ಉತ್ತರಕ್ಕೆ ದಕ್ಷಿಣ ಕನ್ನಡ ಜಿಲ್ಲೆಯೂ ಪಶ್ಚಿಮಕ್ಕೆ ಸಮುದ್ರವೂ ಇವೆ. ಈ ಸಮುದ್ರವನ್ನು ಅರಬಿ ಸಮುದ್ರವೆಂದು ಕರೆಯುತ್ತಾರೆ. ಪಟವನ್ನು ನೋಡಿ ಆಗ್ನೇಯಕ್ಕೆ ಏನಿದೆ ಎಂದು ಗುರುತಿಸಿರಿ. ಜಿಲ್ಲೆಯ ವಿಸ್ತೀರ್ಣವು 5800 ಚದರಮೈಲು. ಸಮುದ್ರದಿಂದ ಪಶ್ಚಿಮಘಟ್ಟದವರೆಗೆ ಈ ಜಿಲ್ಲೆಯ ಅಗಲವು ಬಡಗು 20 ಮೈಲು, ತೆಂಕು ಹೋಗುತ್ತಾ ಹೋಗುತ್ತಾ 60 ಮೈಲು ವರೆಗೆ ವಿಸ್ತಾರವಾಗುತ್ತದೆ. ಅರಬಿ ಸಮುದ್ರದಲ್ಲಿಯ ಲಕ್ಷದ್ವೀಪಗಳೆಂಬ ಹೆಸರಿನ ಅನೇಕ ಚಿಕ್ಕ ಚಿಕ್ಕ ದ್ವೀಪಗಳು ಈ ಜಿಲ್ಲೆಗೆ

ಸೇರಿವೆ. ಜಿಲ್ಲೆಯ ಮೂಡುಕಡೆ ಸಹ್ಯಾದ್ರಿ ಎಂಬ ಪಶ್ಚಿಮಘಟ್ಟಗಳು ದಕ್ಷಿಣೋತ್ತರವಾಗಿ ಚಾಚಿದ್ದು ಕೆಲವು ಕಡೆ 3000 ಅಡಿ, ಕೆಲವು ಕಡೆ ಇನ್ನೂ ಎತ್ತರ, ಅಂದರೆ, ಸುಮಾರು 8000 ಅಡಿ ಉನ್ನತವಾಗಿವೆ. ಈ ಜಿಲ್ಲೆಯ ಪೂರ್ವಕ್ಕೆ ನೀಲಗಿರಿ ಜಿಲ್ಲೆ ಇದೆ. ನೀಲಗಿರಿಗೆ ತೆಂಕುಕಡೆ ಇರುವ ಪಾಲ್ಘಾಟು ಎಂಬ ಹೆಸರಿನ ಸಂದುಭೂಮಿಯು ಈ ಜಿಲ್ಲೆಗೆ ಸೇರಿದೆ. ಪಶ್ಚಿಮಘಟ್ಟದ ಮೇಲಿನ ವೈನಾಡು ಎಂಬ ಪೀಠಭೂಮಿಯು ಹೆಚ್ಚುಕಡಮೆ 3000 ಅಡಿ ಎತ್ತರವಿದೆ. ಪಟವನ್ನು ಚೆನ್ನಾಗಿ ನೋಡಿದರೆ ಇದು ಮೈಸೂರು ಪೀಠಭೂಮಿಯ ಒಂದು ಭಾಗವಾಗಿದೆ ಎಂದು ತಿಳಿಯುತ್ತದೆ. ಈ ಜಿಲ್ಲೆಯಲ್ಲಿ ಪೊನ್ನಾನಿಯೇ ದೊಡ್ಡ ಹೊಳೆ. ಇದು ಮೂಡುಕಡೆ ಆನೆಮಲೆಗಳಲ್ಲಿ ಹುಟ್ಟಿ, ಪಾಲ್ಘಾಟು ಸಂದಿನಿಂದ ಹರಿದು ಬಂದು, ಈ ಜಿಲ್ಲೆಯನ್ನು ದಾಟಿ, ಪೊನ್ನಾನಿ ಎಂಬ ರೇವುಸ್ಥಳದ ಹತ್ತಿರ ಸಮುದ್ರಕ್ಕೆ ಕೂಡುತ್ತದೆ. ಪೊನ್ನಾನಿ ಬಲು ಉದ್ದವಿದ್ದರೂ, ಬೇಪೂರು ಹೊಳೆಯು ಶ್ರೇಷ್ಠವಾದದ್ದು ಎಂದು ಜನಗಳು ಭಾವಿಸುತ್ತಾರೆ. ಇನ್ನು ಅನೇಕ ಚಿಕ್ಕ ಹೊಳೆಗಳು ಪಶ್ಚಿಮಘಟ್ಟದಿಂದ ಇಳಿದು, ಹಲವು ಭಾಗಗಳಲ್ಲಿ ಹರಿದು, ಸಮುದ್ರಕ್ಕೆ ಸೇರುತ್ತವೆ. ಇವುಗಳಲ್ಲಿ ಅನೇಕ ನದಿಗಳು ಸಮುದ್ರವನ್ನು ಮುಟ್ಟುವ ಮೊದಲು ಶಾಖೆಗಳಾಗಿ ಒಡೆದು ಸಮುದ್ರದ ಸಮೀಪ ಖಾರಿವೆಗಳಾಗುತ್ತವೆ. ಇವಕ್ಕೂ ಕಡಲುಕರೆಗೂ ಮಧ್ಯೆ ಇರುವ ನೆಲವು ಕಾಲು ಮೈಲೂ ಅಗಲವಿರುವುದಿಲ್ಲ. ಈ ಜಿಲ್ಲೆಯಲ್ಲಿ ಹವೆಯು ಹೆಚ್ಚಾಗಿ ತೇವವುಳ್ಳದ್ದಾಗಿದ್ದರೂ, ದೇಹಸೌಖ್ಯಕ್ಕೆ ಅಷ್ಟೊಂದು ಬಾಧಕಕರವಾಗಿಲ್ಲ. ವೈನಾಡಿನಲ್ಲಿಯೂ ಮಲೆಭೂಮಿಗಳಲ್ಲಿಯೂ ಫೆಬ್ರವರಿಯಿಂದ ಜೂನು ವರೆಗೆ ಮಲೆಜ್ವರವು ಹರಡಿರುತ್ತದೆ. ಈ ಜಿಲ್ಲೆಯಲ್ಲಿ ಜೂನಿನಿಂದ ಸಪ್ಟಂಬರ್ ಅಂತ್ಯದ ವರೆಗೆ ಮಳೆಯು ಧಾರಾಳ ಬೀಳುತ್ತದೆ. ಇಷ್ಟು ಮಳೆಯು ಪೂರ್ವಕರಾವಳಿಯಲ್ಲಿ ಜೇರೆ ಎಲ್ಲಿಯೂ ಬೀಳುವುದಿಲ್ಲ; ಇಲ್ಲಿಯ ಕೆಲವು ಸ್ಥಳಗಳಲ್ಲಿ 150 ಇಂಚು ವರೆಗೆ ಮಳೆ ಬೀಳುವುದುಂಟು. ಪಶ್ಚಿಮಘಟ್ಟಕ್ಕೆ ಒತ್ತಾಗಿರುವ ಪೂರ್ವಭಾಗದ ಜಿಲ್ಲೆಗಳಲ್ಲಿ 20 ಇಂಚು ಮಳೆ ಕೂಡ ಬೀಳುವುದಿಲ್ಲ. ಪಾಲ್ಘಾಟುಸಂದಿಗೆ ಸಮೀಪ ಮಲೆಗಳ ಸಾಲು ಬಹಳ ಕುಗ್ಗಿದ್ದರೂ ಮಳೆ ಬಲು ಕಡಮೆ. ಆದರೂ ಈ ಜಿಲ್ಲೆಯಲ್ಲಿ ಸರಾಸರಿ 110 ಇಂಚು ಮಳೆ ವರ್ಷಂಪ್ರತಿ ಬೀಳುತ್ತದೆಂದು ಹೇಳಬಹುದು. ಆದುದರಿಂದಲೇ ಮಲೆಯಾಳದಲ್ಲಿ ಕ್ಷಾಮವಿಲ್ಲವೆಂದು ಹೇಳುವರು.

ಕೃಷಿಯೂ ವೃತ್ತಿಯೂ.—ಇಲ್ಲಿಯ ಮುಖ್ಯ ಬೆಳೆಯೇ ಬತ್ತ. ಕಾಫಿಯನ್ನು ವೈನಾಡು ತಾಲೂಕಿನಲ್ಲಿಯೂ ಕರಿಮೆಣಸನ್ನು ಎಲ್ಲಾ ತಾಲೂಕುಗಳಲ್ಲಿಯೂ ಬೆಳಿಸುತ್ತಾರೆ. ಹಸಿ ಸುಂಟಿಯು ಕೂಡ ಇಲ್ಲಿಯ ಒಂದು ಮುಖ್ಯವಾದ ಕೃಷಿ. ಕಡಲುತೀರದ ಪ್ರದೇಶವು ಮಳಲುಪ್ರದೇಶವಾದ್ದರಿಂದ ಅಲ್ಲಿ ಲೆಕ್ಕವಿಲ್ಲದಷ್ಟು ತೆಂಗಿನ ತೋಪುಗಳು ಕಂಗೊಳಿಸುತ್ತವೆ. ಈ ಜಿಲ್ಲೆಯ ಕಾಡುಗಳು ಬಹಳ ವಿಸ್ತಾರವಾಗಿದ್ದು, ಅಮೂಲ್ಯವಾದ ತರತರದ ಮರಗಳಿಂದ ಕೂಡಿವೆ. ಇವುಗಳಲ್ಲಿ ಮುಖ್ಯವಾದವು—ತೇಗು, ಹಲಸು, ಬೀಟಿ. ಕಲ್ಲಿಕೋಟೆಯು ಒಂದು ಕಾಲದಲ್ಲಿ ಕೆಲಿಕೊ ಎಂಬ ಹೆಸರಿನ ಬಟ್ಟೆಯ ಕೈಗಾರಿಕೆಗೆ ಹೆಸರುಗೊಂಡಿದ್ದು, ಕೆಲಿಕಟ್ ಎಂಬದಾಗಿ ಕರೆಯಲ್ಪಟ್ಟಿತು. ಈಗ ಕಲ್ಲಿಕೋಟೆಯಲ್ಲಿಯೂ, ಕನ್ನಾನೂರಿನಲ್ಲಿಯೂ, ಅವಕ್ಕೆ ಸಮೀಪ ಇರುವ ಇತರ ಸ್ಥಳಗಳಲ್ಲಿಯೂ, ಮಿಶನ್ ಬಟ್ಟೆಯ ನೇಯಿಗೆಯು ವಿಶೇಷವಾಗಿದೆ. ಕಲ್ಲಿಕೋಟೆಗೂ ಪಾಲ್ಘಾಟಿಗೂ ಸಮೀಪದ ಎರಡು ಮೂರು ಸ್ಥಳಗಳಲ್ಲಿ ಆ ಮಿಶನ್ ಸಂಘದವರ ಒಳ್ಳೇ ಹೆಂಚು ಕಾರಖಾನೆಗಳಿವೆ. ಜನಸಂಖ್ಯೆ 3,000,000. ಇದರಲ್ಲಿ ಹೆಚ್ಚುಕಡಮೆ ಮುಕ್ಕಾಲು ಅಂಶವು ಹಿಂದುಗಳು. ಉಳಿದವರು ಮಹಮ್ಮದೀಯರು ಮತ್ತು ಕ್ರೈಸ್ತರು. ಇಲ್ಲಿಯ ಮಹಮ್ಮದೀಯರನ್ನು ಮಾಪಿಳ್ಳೆಯವರು ಎಂದು ಕರೆಯುವುದು ವಾಡಿಕೆ. ಬ್ರಾಹ್ಮಣರಿಗೆ ನಂಬೂದಿರಿ ಎಂದು ಹೆಸರಿದೆ. ಉಡಿಗೆತೊಡಿಗೆ ಆಚಾರವಿಚಾರ ಮೊದಲಾದವುಗಳಲ್ಲಿ ಮಲೆಯಾಳದ ಹಿಂದುಗಳಿಗೂ ಇತರ ಕಡೆಯ ಹಿಂದುಗಳಿಗೂ ಬಹಳ ವ್ಯತ್ಯಾಸವಿದೆ. ಇತರ ಕಡೆಯಲ್ಲಿರುವವರಿಗೆ ತಲೆಯ ಜುಟ್ಟು ಹಿಂದುಗಡೆ ಇದೆ; ಮಲೆಯಾಳಿಗಳಿಗೆ ಜುಟ್ಟು ತಲೆಯ ಮುಂದುಗಡೆ ಇರುತ್ತದೆ. ಇಲ್ಲಿ ಕೀಳುಜಾತಿಯವರಲ್ಲದೆ ಇತರರು ಗಂಡಸರಾಗಲಿ ಹೆಂಗಸರಾಗಲಿ ಬಿಳಿ ಬಟ್ಟೆಯನ್ನು ಉಟ್ಟುಕೊಳ್ಳುತ್ತಾರೆ. ಕೀಳು ಜಾತಿಯ ಹೆಂಗಸರು ಮಾತ್ರ ಕಪ್ಪೊ ಕೆಂಪೊ ಬಣ್ಣದ ಬಟ್ಟೆಯನ್ನು ಧರಿಸಿಕೊಳ್ಳುತ್ತಾರೆ. ಇಲ್ಲಯ ನಂಬೂದಿರಿ ಬ್ರಾಹ್ಮಣರಲ್ಲಿ ಸಂತಾನದಲ್ಲಿ ಹಿರಿಯಮಸು ಮಾತ್ರ ಮದುವೆ ಮಾಡಿಕೊಳ್ಳುತ್ತಾನೆ; ಮನೆಯ ಆಸ್ತಿಪಾಸ್ತಿಗೆ ಆತನೇ ಹಕ್ಕುದಾರನು. ಬೇರೆ ಕಡೆಯ ಬ್ರಾಹ್ಮಣರಲ್ಲಿ ಹೆಣ್ಣುಮಕ್ಕಳಿಗೆ ವಿವಾಹವು ನಿರ್ಬಂಧವಾಗಿದೆ; ಹೆಣ್ಣುಮಕ್ಕಳಿಗೆ 12 ವರ್ಷದೊಳಗೆ ಮದುವೆ ಆಗಲೇ ಬೇಕು ಎಂಬ ಕಟ್ಟು ಇದೆ. ನಂಬೂದಿರಿ ಸ್ತ್ರೀಯರು ದೊಡ್ಡವರಾದನಂತರ ಮದುವೆ ಮಾಡಿಕೊಳ್ಳುವುದೂ ಉಂಟು; ಲಗ್ನವಾಗದೆ ನಿಲ್ಲುವುದೂ ಉಂಟು.

ಈ ಜಿಲ್ಲೆಯಲ್ಲಿ ಬ್ರಾಹ್ಮಣರಲ್ಲಿ ಮಾತ್ರವೇ ಮಕ್ಕಳಕಟ್ಟು; ಇತರರಲ್ಲಿ ಅಳಿಯ ಕಟ್ಟು ವಾಡಿಕೆಯಾಗಿದೆ. ಆದ್ದರಿಂದ ಒಬ್ಬನ ಸೊತ್ತಿಗೆ ಅವನ ಸೋದರ ಅಳಿಯಂದಿರು ಹೊರತು ಅವನ ಸ್ವಂತ ಮಕ್ಕಳಲ್ಲಿ ಯಾರೂ ವಾರಿಸುದಾರ ರಾಗುವುದಿಲ್ಲ. ಇಲ್ಲಿಯ ಭಾಷೆ ಮಲೆಯಾಳ.


ಮುಖ್ಯ ಪಟ್ಟಣಗಳು.— ಇಲ್ಲಿರುವ ಅನೇಕ ಬಂದರುಗಳಲ್ಲಿ ಮುಖ್ಯ ವಾದ ಕಲ್ಲಿಕೋಟೆಯು ಹಿಂದಿನ ಸಾಮೂದಿರಿ ರಾಜರ ಆಳಿಕೆಯಲ್ಲಿ ರಾಜ್ಯದ ರಾಜಧಾನಿಯಾಗಿತ್ತು. ಈಗ ಇದು ಮಲೆಯಾಳ ಜಿಲ್ಲೆಯ ಮುಖ್ಯ ಪಟ್ಟ ಣವೂ ಕಲೆಕ್ಟರರ ವಾಸಸ್ಥಳವೂ ಆಗಿದೆ. ಇದರ ಸಮೀಪ ಕಲ್ಲಾಯಿ ಎಂಬಲ್ಲಿ ಮರ ಸಿಗಿಯುವ ಒಂದು ಕಾರಖಾನೆ ಇದೆ. ಇಲ್ಲಿಂದ ಕಡಲು ದಾರಿಯಾಗಿ ಸಾಗಿಸುವ ಸರಕುಗಳಲ್ಲಿ ಮುಖ್ಯವಾದವು—ಕಾಫಿ, ಕೊಬರಿ, ಒಣ ಸುಂಠಿ. ಇಲ್ಲಿಂದ 42 ಮೈಲು ದೂರ ಬಡಗುದಿಕ್ಕಿನಲ್ಲಿರುವ ತಲಚೇರಿ ಉತ್ತರ ಮಲೆಯಾಳಕ್ಕೆ ಮುಖ್ಯ ಸ್ಥಾನವಾಗಿದೆ. ಕಲ್ಲಿಕೋಟೆಯಲ್ಲಿದ್ದಂತೆ ಇಲ್ಲಿಯೂ ಒಂದು ಜಿಲ್ಲಾ ಕೋರ್ಟು ಇದೆ. ಕರಿಮೆಣಸು, ಕಾಫಿ, ಶುಂಠಿ, ಏಲಕ್ಕಿ, ಕೊಬರಿ, ಮೊದಲಾದ ಸರಕುಗಳು ಈ ಬಂದರದಿಂದ ಬಹಳವಾಗಿ ಸಾಗುತ್ತಿವೆ. ತಲಚೇರಿಗೆ ಬಡಗಿಗೆ ಇರುವ ಕಣ್ಣಾನೂರು ಒಂದು ಕಾಲದಲ್ಲಿ ದೊಡ್ಡ ಸೈನ್ಯವಿದ್ದ ಠಾಣೆಯಾಗಿತ್ತು. ಇದು ಸಹ ಒಂದು ಬಂದರುಸ್ಥಳ ವಾಗಿದೆ. ಪಾಲ್ಘಾಟು ಎಂಬುದು ಒಳನಾಡು ಪ್ರಾಂತ್ಯದಲ್ಲಿ ಮುಖ್ಯವಾದ ಒಂದು ವ್ಯಾಪಾರಸ್ಥಳ. ಇಲ್ಲಿ ಒಂದು ತರದ ಹುಲ್ಲಿನ ಚಾಪೆಗಳನ್ನು ಹೆಣೆಯುತ್ತಾರೆ.

---

೨. ದಕ್ಷಿಣ ಕನ್ನಡ ಜಿಲ್ಲೆ.

ಇದು ಪಶ್ಚಿಮತೀರದಲ್ಲಿ ಮದ್ರಾಸ ಸಂಸ್ಥಾನಕ್ಕೆ ಸೇರಿದ ಜಿಲ್ಲೆಗಳಲ್ಲಿ ಅತೀ ಉತ್ತರದಿಕ್ಕಿನಲ್ಲಿದೆ. ಇದರ ಬಡಗುದಿಕ್ಕಿನಲ್ಲಿರುವ ಉತ್ತರ ಕನ್ನಡ ಜಿಲ್ಲೆಯು ಮುಂಬಾಯಿ ಸಂಸ್ಥಾನಕ್ಕೆ ಸೇರಿದೆ. ಪಟವನ್ನು ನೋಡಿ ಇದರ ಮೇರೆಗಳನ್ನು ಗೊತ್ತು ಹಚ್ಚಿರಿ. ಇದರ ವಿಸ್ತೀರ್ಣ 4021 ಚದರಮೈಲು. ಪಶ್ಚಿಮಘಟ್ಟಗಳೇ ಈ ಜಿಲ್ಲೆಯ ಪೂರ್ವಗಡಿ. ಇಲ್ಲಿ ಇವು 3000ದಿಂದ 6000ದ ವರೆಗೆ ಎತ್ತರವಾಗಿವೆ. ಅತ್ಯುನ್ನತ ಶಿಖರವೇ ಕುದುರೆಮುಖ;

ಇದರ ಎತ್ತರವು 6215 ಫೀಟು. ಈ ಜಿಲ್ಲೆಯಲ್ಲಿ ಅನೇಕ ಹೊಳೆಗಳಿದ್ದರೂ ಅವುಗಳಲ್ಲಿ 100 ಮೈಲಿಗಿಂತ ಉದ್ದವಾದದ್ದು ಒಂದೂ ಇಲ್ಲ. ನೇತ್ರಾವತಿಯೇ ಮುಖ್ಯವಾದ ನದಿ. ಮಲೆಯಾಳ ಜಿಲ್ಲೆಯಲ್ಲಿದ್ದಂತೆ ಇಲ್ಲಿಯೂ ಹೊಳೆಗಳ



JAIN STATUE OF GUMMATARAJ ಜೈನರ ಗುಮ್ಮಟರಾಜನ ಶಿಲಾಪ್ರತಿಮೆ.

ಅಳಿವೆಯ ಹತ್ತಿರ ಖಾರಿವೆಗಳು ಇರುತ್ತವೆ. ಶೀತೋಷ್ಣಸ್ಥಿತಿಯು ಮಲೆಯಾಳ ಜಿಲ್ಲೆಯ ಹವೆಯಂತೆಯೇ ಇದೆ. ಒಳನಾಡುಗಳಲ್ಲಿ ಮಾರ್ಚಿ ಎಪ್ರಿಲ್ ತಿಂಗಳುಗಳಲ್ಲಿ ಉಷ್ಣವು ಅಧಿಕವಾಗಿದೆ. ವರ್ಷಾಕಾಲದಲ್ಲಿ ಎಂದರೆ, ಜೂನಿನಿಂದ ಸೆಪ್ಟೆಂಬರದ ವರೆಗೆ ಮಳೆಯು ಮಲೆಯಾಳದಲ್ಲಿ ಬೀಳುವಂತೆ ಚೆನ್ನಾಗಿ ಹೊಯ್ಯುತ್ತದೆ. ಮಲೆಗಳ ಸಮೀಪ ಇರುವ ತಗ್ಗುಭೂಮಿಗಳು ಬಹಳ ಫಲವತ್ತಾಗಿವೆ. ಕೃಷಿಗೆ ಬೇಕಾದ ಸೌಕರ್ಯವಿರುವುದರಿಂದ ಇಲ್ಲಿ ಕೃಷಿಯು

ಚೆನ್ನಾಗಿ ನಡೆಯುತ್ತದೆ. ಸಮೃದ್ಧಿಯಾಗಿ ಬೆಳೆಯುವಂಥಾದ್ದು ಬತ್ತ. ಕಡಲು ತೀರದ ಮಳಲುಭೂಮಿಯಲ್ಲಿ ತೆಂಗು ಹುಲುಸಾಗಿ ಬೆಳೆಯುತ್ತದೆ. ಒಳ ಪ್ರದೇಶಗಳಲ್ಲಿ ಅಡಕೆ ವಿಶೇಷವಾಗಿ ಬೆಳೆಯುತ್ತದೆ. ಈ ನಾಡಿನಲ್ಲಿ ಜಾನುವಾರುಗಳು ಬಹಳ ಕಡಮೆ. ಕಾಡುಗಳಲ್ಲಿ ತೇಗು, ಕರಿಮರ ಮೊದಲಾದವು ಬೆಳೆಯುತ್ತವೆ. ನೇತ್ರಾವತಿಯ ಮತ್ತು ಇತರ ನದಿಗಳ ದಡಗಳಲ್ಲಿ ನಿಂತ ಜೇಡುಮಣ್ಣಿನಿಂದ ಮಂಗಳೂರಿನಲ್ಲಿಯೂ ಉಡುಪಿಯಲ್ಲಿಯೂ ಹೆಂಚು ಮಾಡುತ್ತಾರೆ. ಅಮೀನದೀವಿ ಲಕ್ಷದ್ವೀಪಗಳಲ್ಲಿ ತೆಂಗಿನ ನಾರಿನಿಂದ ಹಲವು ಬಗೆಯ ಕೈಗಾರಿಕೆಗಳನ್ನು ಮಾಡುತ್ತಾರೆ. ಈ ಜಿಲ್ಲೆಯಿಂದ ರಫ್ತಾಗುವ ಸಾಮಾನುಗಳು ಕಾಫಿ, ಕೊಬರಿ, ಅಕ್ಕಿ, ಅಡಕೆ, ಗೇರುಬೀಜ, ದಾಲಚೀನಿ, ಏಲಕ್ಕಿ, ಗಂಧದ ಎಣ್ಣೆ ಮೊದಲಾದವು. ಮುಖ್ಯವಾದ ರೇವುಸ್ಥಳವು ಮಂಗಳೂರು. ಇಲ್ಲಿ ನೇತ್ರಾವತಿ ಮತ್ತು ಗುರುಪುರ ಹೊಳೆಗಳು ಕೂಡಿ, ಸಮುದ್ರಕ್ಕೆ ಒಂದಾಗಿ ಬೀಳುತ್ತವೆ. ಇಲ್ಲಿಯ ಮುಖ್ಯ ವೃತ್ತಿಗಳು ಹೆಂಚು ಮಾಡುವುದು ಮತ್ತು ಬಟ್ಟೆ ನೇಯುವುದು. ಕನ್ನಡ ಮಿಶ್ಯನಿಸವರ ಒಂದು ಹೈಸ್ಕೂಲು, ಗವರ್ನಮೆಂಟ ಸೆಕೆಂಡ್ ಗ್ರೇಡ ಕೊಲೇಜು, ಕೆಥೊಲಿಕ ಮಿಶ್ಯನಿನವರ ಫಸ್ಟ್ ಗ್ರೇಡ ಕೊಲೇಜು ಇಲ್ಲಿವೆ. ಮದ್ರಾಸಿನಿಂದ ಪಶ್ಚಿಮಕ್ಕೆ ಬರುವ ರೈಲುರಸ್ತೆಯು ಇಲ್ಲಿ ಅಂತ್ಯವಾಗುತ್ತದೆ. ಈ ಪಟ್ಟಣದಿಂದ ಸುಮಾರು 37 ಮೈಲು ಬಡಗುಕಡೆಗೆ ಇರುವ ಉಡುಪಿಯು ಶ್ರೀಕೃಷ್ಣದೇವಸ್ಥಾನಕ್ಕೆ ಪ್ರಖ್ಯಾತವಾಗಿದೆ. ಈ ಕೃಷ್ಣಮೂರ್ತಿಯು ಮಧ್ವಾಚಾರ್ಯರ ಪ್ರತಿಷ್ಠೆಯಂತೆ. ಕುಂದಾಪುರವು ಜಿಲ್ಲೆಯ ಅತಿ ಬಡಗುದಿಕ್ಕಿಗೆ ಇರುವ ಪಟ್ಟಣವಾಗಿದ್ದು, ಸಬ್‌ಕಲೆಕ್ಟರರ ವಾಸಸ್ಥಾನವಾಗಿದೆ. ಕಾರ್ಕಳವೆಂಬ ಪಟ್ಟಣದಲ್ಲಿ ಗುಮ್ಮಟರಾಯನ ಜೈನ ವಿಗ್ರಹವಿದೆ. ಇದು 42 ಫೀಟು ಎತ್ತರವಿದ್ದು, ಒಂದೇ ಬಂಡೆಕಲ್ಲಿನಿಂದ ಕೆತ್ತಿ ನಿಲ್ಲಿಸಲ್ಪಟ್ಟಿದೆ. ಈ ಸಣ್ಣ ಪಟ್ಟಣದ ಸುತ್ತಲು ಜೀರ್ಣವಾದ ಹಲವು ಜೈನ ಬಸ್ತಿಗಳಿವೆ. ಈ ಪಟ್ಟಣದಿಂದ ಮೈಸೂರಿಗೆ ಹೋಗತಕ್ಕ ರಸ್ತೆ ಇರುವುದರಿಂದ ವ್ಯಾಪಾರವು ಚೆನ್ನಾಗಿ ನಡೆಯುತ್ತಿದೆ. ಅಕ್ಕಿ ಮತ್ತು ಅಡಕೆ, ಇವೇ ಹೆಚ್ಚಾಗಿ ರಫ್ತಾಗುತ್ತವೆ.

4. ಒಳಪ್ರದೇಶದ ಜಿಲ್ಲೆಗಳು.


ಈ ವರೆಗೆ ಪ್ರಸ್ತಾಪಿಸಿದ ಜಿಲ್ಲೆಗಳು ಸಮುದ್ರಕರಾವಳಿಯ ಜಿಲ್ಲೆಗಳು. ಈಗ ಸಮುದ್ರತೀರದಿಂದ ದೂರವಿದ್ದು, ಮೈಸೂರು ಪೀಠಭೂಮಿಯನ್ನು ಸುತ್ತಿಕೊಂಡಿರುವ ಜಿಲ್ಲೆಗಳನ್ನು ವಿವರಿಸಲಾಗುವುದು. ಕಡಲುತೀರದ ಜಿಲ್ಲೆಗಳಿಗೂ ಒಳನಾಡು ಜಿಲ್ಲೆಗಳಿಗೂ ಹಲವು ವ್ಯತ್ಯಾಸಗಳಿವೆ. ಒಳನಾಡಿನ ಪೀಠಭೂಮಿಗಳು ಸಮುದ್ರಮಟ್ಟಕ್ಕಿಂತ ಬಲು ಎತ್ತರವಾಗಿವೆ; ಅಲ್ಲಲ್ಲಿ ಅವು ಗಳ ನಡುವೆ ತಗ್ಗುಪ್ರದೇಶಗಳೂ ಇವೆ. ಮೈಸೂರು ಪೀಠಭೂಮಿಗೆ ತೆಂಕು ದಿಕ್ಕಿನಲ್ಲಿ ನೀಲಗಿರಿ ಜಿಲ್ಲೆ; ಆಗ್ನೇಯದಲ್ಲಿ ಸೇಲಂ ಮತ್ತು ಕೊಯಮುತ್ತೂರು ಎಂಬ ಎರಡು ಜಿಲ್ಲೆಗಳು. ಈ ಎರಡು ಜಿಲ್ಲೆಗಳಿಗೂ ರಾಮನಾಥಪುರ ತಂಜಾವೂರು ಎಂಬ ಎರಡು ಜಿಲ್ಲೆಗಳಿಗೂ ಮಧ್ಯದಲ್ಲಿ ತಿರುಚಿನಾಪಳ್ಳಿ ಮತ್ತು ಮಧುರೆ ಎಂಬ ಎರಡು ಜಿಲ್ಲೆಗಳಿವೆ. ಕೊಯಮುತ್ತೂರು ಜಿಲ್ಲೆಯಲ್ಲಿಯೂ ಸೇಲಂ ಜಿಲ್ಲೆಯಲ್ಲಿಯೂ ಪೀಠಭೂಮಿಗಳು ಅನೇಕವಾಗಿವೆ. ತಿರುಚಿನಾಪಳ್ಳಿ ಮಧುರೆ ಜಿಲ್ಲೆಗಳಲ್ಲಿ ನೆಲವು ಹೆಚ್ಚಾಗಿ ಸಮತಟ್ಟಾಗಿದೆ. ಮೈಸೂರು ಪೀಠ ಭೂಮಿಗೆ ನೇರಾಗಿ ಪೂರ್ವಕ್ಕಿರುವ ಎರಡು ಜಿಲ್ಲೆಗಳು ಯಾವವೆಂದರೆ– ಚಿತ್ತೂರು ಮತ್ತು ಉತ್ತರ ಆರ್ಕಾಡು. ಉತ್ತರ ಆರ್ಕಾಡಿನ ಪೂರ್ವಕ್ಕೂ ತೆಂಕಿಗೂ ಚೆಂಗಲ್ಪಟ್ಟು ಮತ್ತು ದಕ್ಷಿಣ ಆರ್ಕಾಡು ಎಂಬ ಜಿಲ್ಲೆಗಳು ಇವೆ. ಬಳ್ಳಾರಿ ಮತ್ತು ಅನಂತಪುರ ಜಿಲ್ಲೆಗಳೆರಡು ಮೈಸೂರು ಪೀಠಭೂಮಿಯ ಉತ್ತರಕ್ಕೂ ಈಶಾನ್ಯಕ್ಕೂ ಇವೆ. ಇವಕ್ಕೂ ಸಮುದ್ರತೀರದ ಜಿಲ್ಲೆಯಾದ ನೆಲ್ಲೂರಿಗೂ ನಡುವೆ ಕಡಪೆ ಮತ್ತು ಕರ್ನೂಲು ಎಂಬ ಎರಡು ಜಿಲ್ಲೆಗಳಿವೆ. ಈ ನಾಲ್ಕು ಜಿಲ್ಲೆಗಳೂ ಮೈಸೂರಿನ ಹಾಗೆ ಪೀಠಭೂಮಿಯಾಗಿವೆ. ಇವು ನಾಲ್ಕಕ್ಕೆ 'ಸೀಡೆಡ್' ಜಿಲ್ಲೆಗಳು ಎಂದು ಹೆಸರು; 'ಸೀಡೆಡ್' ಎಂದರೆ ಇಂಗ್ಲಿಷ್ ಮಾತಿನಲ್ಲಿ ಕೊಡಲ್ಪಟ್ಟ ಎಂದರ್ಥ. ಇವು ಬ್ರಿಟಿಷರಿಗೆ ಪೂರ್ವಕಾಲದ ರಾಜರು ಕೊಟ್ಟ ಜಿಲ್ಲೆಗಳು.

೧. ನೀಲಗಿರಿ ಜಿಲ್ಲೆ.

ನೀಲಗಿರಿಯು ಮಲೆಯಿಂದ ತುಂಬಿದ ಜಿಲ್ಲೆ. ಈ ಸಂಸ್ಥಾನದಲ್ಲಿ ಇದೇ ಬಲು ಸಣ್ಣ ಜಿಲ್ಲೆ. ಇದರ ವಿಸ್ತಾರವು 1009 ಚದರಮೈಲು. ಈ ಜಿಲ್ಲೆ

ಯಲ್ಲಿಯೇ ಪೂರ್ವಘಟ್ಟಗಳೂ ಪಶ್ಚಿಮಘಟ್ಟಗಳೂ ಬೆರಿಸಿಹೋಗಿವೆ. ಇದರ ಮೇಲ್ಭಾಗವು ಸಮುದ್ರಮಟ್ಟಕ್ಕಿಂತ ಸರಾಸರಿ 6500 ಅಡಿ ಎತ್ತರವಾದ ಸಣ್ಣ ಪೀಠಭೂಮಿಯಾಗಿದೆ. ಈ ಜಿಲ್ಲೆಯ ಪರ್ವತಶಿಖರಗಳಲ್ಲಿ ಅತಿ ಉನ್ನತ ವಾದ ದೊಡ್ಡಬೆಟ್ಟ ಎಂಬುದು 8642 ಅಡಿ ಎತ್ತರವಿದೆ. ವೈನಾಡು ಎಂಬ ಪೀಠಭೂಮಿ 3000 ಅಡಿ ಎತ್ತರವಿದ್ದು, ಈ ಪೀಠಭೂಮಿಗಿಂತ ಬಹಳ ತಗ್ಗಾ ಗಿದೆ. ಈ ಜಿಲ್ಲೆಗೆ ನೈಋತ್ಯದಲ್ಲಿರುವ ಮಲೆಗಳ ಸಾಲಿಗೆ ಕಂಡಾನಿರಾ ಎಂದು ಹೆಸರು. ಇದರ ಎತ್ತರವಾದ ಮಗುರ್ತಿ ಎಂಬ ಶಿಖರವು 8400 ಅಡಿ ಎತ್ತರವಾಗಿದೆ. ಈ ಮಲೆಯಿಂದ ಮಾಯೂರು ಎಂಬ ಹೊಳೆಯು ಹುಟ್ಟಿ, ಬಡಗುಕಡೆ ಹರಿದುಹೋಗಿ, ಕಾವೇರಿಯ ಉಪನದಿಯಾದ ಭವಾನಿ ಹೊಳೆಗೆ ಸೇರುತ್ತದೆ.

ಈ ಜಿಲ್ಲೆಯು ವಿಲಾಯತಿಯವರಿಗೆ ಒಂದು ಆರಾಮಸ್ಥಳವಾಗಿದೆ. ಇಲ್ಲಿಯ ಹವೆಯು ವಿಲಾಯತಿಯ ಹವೆಯ ಹಾಗೆ ಶೀತವಾಗಿರುವುದರಿಂದ ಈ ಸ್ಥಳವು ವಿಲಾಯತಿಯವರ ವಾಸಕ್ಕೆ ತಕ್ಕದ್ದಾಗಿದೆ. ಉಟಕಮಂಡು, ಕುನ್ನೂರು, ವೆಲ್ಲಿಂಗಟನ್, ಕೋಟಗಿರಿ, ಮೊದಲಾದ ಸ್ಥಳಗಳಲ್ಲಿ ವಿಲಾಯತಿ ಯವರು ಉಳುಕೊಳ್ಳುವ ಬಂಗ್ಲೆಗಳು ಇವೆ. ಬಯಲುಸೀಮೆಯಲ್ಲಿ ಇರ ತಕ್ಕವರಲ್ಲಿ ಹಲವರು ಬೇಸಿಗೆಕಾಲದಲ್ಲಿ ಹವೆಗಾಗಿ ಇಲ್ಲಿ ಬಂದು, ಕೆಲವು ಸಮಯ ಇಲ್ಲಿ ವಾಸಮಾಡುತ್ತಾರೆ. ನಮ್ಮ ಗವರ್ನಮೆಂಟಿನ ಮುಖ್ಯಾಧಿ ಕಾರಿಯಾದ ಗವರ್ನರರೂ ಇತರ ದೊಡ್ಡ ದೊಡ್ಡ ಉದ್ಯೋಗಸ್ಥರೂ ವರ್ಷ ದಲ್ಲಿ ಆರು ತಿಂಗಳು ಉಟಕಮಂಡದಲ್ಲಿಯೇ ಇದ್ದು ಕೆಲಸ ಮಾಡುತ್ತಾರೆ. ಚಳಿಕಾಲದಲ್ಲಿ ಇಲ್ಲಿ ನೀರು ಗಡ್ಡೆಗಟ್ಟುತ್ತದೆ. ಮಳೆಗಾಲದಲ್ಲಿ ಬೀಳುವ ಮಳೆಯು ಸಾಧಾರಣ 65 ಇಂಚು ಇದೆ. ವೈನಾಡಿನ ಹತ್ತಿರದ ಪೀಠಭೂಮಿ ಯಲ್ಲಿ ಮಳೆಯು 160 ಇಂಚಿಗಿಂತ ಕಡಮೆಯಾಗುವುದಿಲ್ಲ. ಈ ಮಲೆನಾಡಿ ನಲ್ಲಿ ಕಾಫಿಯನ್ನು ಅಧಿಕವಾಗಿ ಪೈರು ಮಾಡುತ್ತಾರೆ. ತೇಎಲೆ ಸಿಂಕೊನಾ ಮೊದಲಾದ್ದನ್ನೂ ಬೆಳಿಸುತ್ತಾರೆ. ಸಿಂಕೊನಾ ಮರದ ತೊಗಟೆಯಿಂದ ಅತಿ ಪ್ರಶಸ್ತವಾದ ಕ್ವಿನೀನು ಎಂಬ ಮಲೆಜ್ವರದ ಔಷಧವನ್ನು ತಯಾರಿಸುತ್ತಾರೆ. ಗೋದಿ, ಬಾರ್ಲಿ, ರಾಗಿ, ಮೊದಲಾದ ಕೆಲವು ಧಾನ್ಯಗಳನ್ನು ಅಲ್ಪ ಸ್ವಲ್ಪ ಬೆಳಿಸುತ್ತಾರೆ. ಬತ್ತದ ಕೃಷಿ ಬಹಳ ಕಡಮೆ. ಇಲ್ಲಿ ಸಮೃದ್ಧಿ ಯಾಗಿ ಬೆಳೆಯುವ ವೃಕ್ಷಗಳು ಸಮಭೂಮಿಯಲ್ಲಿ ಬೆಳೆಯುವ ವೃಕ್ಷಗಳ



ELK HILL AT OOTACAMUND ಉಟಕಮಂಡಿನ 'ಕಡವೆ'ಗುಡ್ಡ.

ಹಾಗಿಲ್ಲ. ಯುಕೆಲಿಪ್ಟಸ್, ಕ್ವಿನೀನನ್ನು ತಯಾರಿಸುವ ಸಿಂಕೊನಾ, ಇವೇ ಮುಖ್ಯ ಮರಗಳು. ನಡುವಟ್ಟಲ ಎಂಬ ಗ್ರಾಮದಲ್ಲಿ ಕ್ವಿನೀನು ಮಾಡ ತಕ್ಕ ಏರ್ಪಾಡುಗಳು ಇವೆ. ಮಲೆಜ್ವರದ ನಿವಾರಣೆಗಾಗಿ ಈ ಔಷಧವು

ಸರಕಾರದವರಿಂದ ತಯಾರಿಸಲ್ಪಟ್ಟು ಬಲು ಕಡಮೆ ಬೆಲೆಗೆ ವಿಕ್ರಯಿಸಲ್ಪಡು ತ್ತದೆ. ಯುಕೆಲಿಪ್ಟಸ್ ಎಣ್ಣೆಯು ಈ ಜಿಲ್ಲೆಯಲ್ಲಿ ಹಲವು ಸ್ಥಳಗಳಲ್ಲಿ ತಯಾ ರಾಗುತ್ತದೆ. ಅದು ಉಬ್ಬಸ, ಕೆಮ್ಮು, ಮುಂತಾದ ಶ್ವಾಸಕೋಶದ ರೋಗ ಗಳಿಗೆ ದಿವ್ಯವಾದ ಔಷಧವು. ಬಟಾಟೆಯು ಈ ಜಿಲ್ಲೆಯಲ್ಲಿ ಒಂದು ವಿಶೇಷ ಕೃಷಿಯಾಗಿದೆ. ಇಲ್ಲಿ ಜಾನುವಾರುಗಳು ಅಧಿಕವಾಗಿಲ್ಲ. ಇಲ್ಲಿಯ ಎಮ್ಮೆಗಳು ತುಂಬಾ ಹಾಲುಳ್ಳ ಜಾತಿಯವುಗಳು, ಇವುಗಳ ಕೊಂಬುಗಳು ಬಲು ಉದ್ದ ವಿವೆ. ಇವನ್ನು ತೋಡರೆಂಬ ಕಾಡುಜನರು ಸಾಕುತ್ತಾರೆ. ಈ ತೋಡರು



ತೋಡರು.

ಪೂರ್ವ ನಿವಾಸಿಗಳ ಸಂತತಿಯವರು. ಈ ಜಿಲ್ಲೆಯಲ್ಲಿ ದಟ್ಟವಾಗಿ ತುಂಬಿರುವ ಕಾಡುಗಳಲ್ಲಿ ತೇಗ, ಬಿದಿರು, ಚಂದನ, ಇವೇ ಮುಖ್ಯವಾಗಿ ಬೆಳೆಯುತ್ತವೆ. ಲೋಹಗಳು ವಿಶೇಷವಾಗಿದ್ದರೂ ಅವನ್ನು ಅಗೆದು ತೆಗೆಯುವ ಪ್ರಯತ್ನವನ್ನು ಇದುವರೆಗೆ ಯಾರೂ ಮಾಡಿಲ್ಲ. ನಾಲ್ಕೈದು ಕಡೆಗಳಲ್ಲಿ ಬೀರ್ ಎಂಬ ಒಂದು ಬಗೆ ಸಾರಾಯಿಯನ್ನು ಇಳಿಸುತ್ತಾರೆ. ತಗ್ಗುಪ್ರದೇಶದಲ್ಲಿ ಮೆಟ್ಟು ಪಾಳೆಯಂ ಎಂಬ ಸ್ಥಳದಿಂದ ಉಟಕಮಂಡಿನ ವರೆಗೆ ಇರುವ ರೈಲುರಸ್ತೆಯು ಅಲ್ಲಲ್ಲಿ ಮಲೆಗಳನ್ನು ಕಡಿದು ಮಾಡಲ್ಪಟ್ಟು, ಸುರಂಗಗಳನ್ನು ದಾಟಿ, ಕೆಲವು

ಸ್ಥಳಗಳಲ್ಲಿ ಮಲೆಗಳನ್ನು ಸುತ್ತಿಸುತ್ತಿಕೊಂಡು ಹೋಗುತ್ತದೆ. ಅಗಾಧವಾದ ಪ್ರಪಾತಗಳೂ ಹಳ್ಳಗಳೂ ಇದ್ದಲ್ಲಿ ಇಕ್ಕಡೆಗಳಲ್ಲಿಯ ಎತ್ತರವಾದ ಸ್ಥಳಗಳನ್ನು ಸೇತುವೆಗಳಿಂದ ಗಟ್ಟಿಯಾಗಿ ಜೋಡಿಸಿದ್ದಾರೆ. ಇಲ್ಲಿಯ ಜನಸಂಖ್ಯೆ 1,18,000; ಇದರಲ್ಲಿ ಹೆಚ್ಚಾಗಿ ಹಿಂದುಗಳೇ ಆದರೂ, ಬ್ರಾಹ್ಮಣರು ಬಹಳ ಕಡಮೆ. ತೋಡರು, ಬಡಗರು, ಎಂಬ ಎರಡು ಬಣಗಳ ಜನರು ಈ ಜಿಲ್ಲೆಯಲ್ಲಿ ಅಲ್ಲದೆ ಬೇರೆ ಎಲ್ಲಿಯೂ ನೋಡ ಸಿಗುವುದಿಲ್ಲ. ಇವರ ಮತಾಚಾರಗಳೂ ಸಾಂಪ್ರದಾಯಗಳೂ ಇತರ ಹಿಂದುಗಳ ರೀತಿನೀತಿಗಳ ಹಾಗಿರುವುದಿಲ್ಲ. ಇವರು ಇಲ್ಲಿಯ ಪೂರ್ವ ನಿವಾಸಿಗಳಾಗಿದ್ದು, ಈ ಮಲೆನಾಡನ್ನು ಒಂದು ಕಾಲದಲ್ಲಿ ಆಳಿದವರಾಗಿರಬಹುದು.

ಪ್ರಧಾನ ಪುರಗಳು. — ಉಟಕಮಂಡು ಇದು ಮದ್ರಾಸ ಸಂಸ್ಥಾನದಲ್ಲಿ ಅತ್ಯಂತ್ಯ ಆರೋಗ್ಯಕರವಾದ ಸ್ಥಳವಾಗಿಯೂ ಹಿಂದೆ ಹೇಳಿದಂತೆ ಮದ್ರಾಸ ಸರಕಾರವು ಬೇಸಿಗೆಯಲ್ಲಿ ಉಳುಕೊಳ್ಳತಕ್ಕ ಸ್ಥಳವಾಗಿಯೂ ಇದೆ. ಇದು ಸಮುದ್ರಮಟ್ಟದಿಂದ 7200 ಅಡಿ ಎತ್ತರವಾಗಿದೆ; ಇದನ್ನು ಸುತ್ತಿಕೊಂಡಿರುವ ನಾಲ್ಕು ಮಲೆಗಳು ಮೆಟ್ಟುಪಾಳೆಯದಿಂದ 32 ಮೈಲು ದೂರವಾಗಿವೆ. ಇಲ್ಲಿ ಒಂದು ಸಣ್ಣ ತಟಾಕವಿದೆ. ನೀಲಗಿರಿಯ ತಪ್ಪಲಿನ ಆಗ್ನೇಯ ಮೂಲೆಯಲ್ಲಿರುವ ಕುನ್ನೂರು 6000 ಅಡಿ ಎತ್ತರವಾದ ಒಂದು ಮನೋಹರ ಸ್ಥಳವೂ ರೈಲುಬಂಡಿ ತಂಗುವ ಸ್ಥಾನವೂ ಆಗಿದೆ. ಉಟಕಮಂಡಿನಂತೆ ಇದು ಸಹ ಪರದೇಶದವರಿಗೆ ಸುಖಕರವಾದ ವಾಸಸ್ಥಳವಾಗಿದೆ; ಬೇಸಿಗೆಕಾಲದಲ್ಲಿ ಹಲವು ಜಿಲ್ಲೆಗಳಿಂದ ಉದ್ಯೋಗಸ್ಥರು ದೇಹಾರೋಗ್ಯಕ್ಕಾಗಿ ಇಲ್ಲಿ ಬಂದು ಉಳುಕೊಳ್ಳುತ್ತಾರೆ. ಕೋಟಗಿರಿಯು ಸಹ ಆರೋಗ್ಯಕರವಾದ ಊರು.

---

೨. ಕೊಯಮುತ್ತೂರು ಜಿಲ್ಲೆ.

ಈ ಜಿಲ್ಲೆಯು ನೀಲಗಿರಿ ಮತ್ತು ಮಲೆಯಾಳ ಜಿಲ್ಲೆಗಳಿಗೆ ಪೂರ್ವದಲ್ಲಿದ್ದು, 7196 ಚದರಮೈಲು ವಿಸ್ತಾರವಾಗಿದೆ. ನೀಲಗಿರಿ ಮಲೆಯು ಇದಕ್ಕೂ ಮಲೆಯಾಳ ಜಿಲ್ಲೆಗೂ ಮಧ್ಯದಲ್ಲಿದೆ. ಈ ಜಿಲ್ಲೆಯ ನೈಋತ್ಯದ ಮೇರೆಯಾಗಿರುವ ಮಲೆಗೆ ಆನೆಮಲೆ ಎಂಬ ಹೆಸರು. ಕೊಯಮುತ್ತೂರಿಗೂ ಮೈಸೂರಿಗೂ ನಡುವೆ 11 ಮೈಲು ಉದ್ದಕ್ಕೆ ಬಿಳಿಗಿರಂಗನಬೆಟ್ಟ ಎಂಬ ಮಲೆ ಇದೆ.


ಈ ಬೆಟ್ಟವೇ ಪೂರ್ವಘಟ್ಟದ ತೆಂಕು ಕೊನೆ ಎನ್ನಬಹುದು. ಈ ಮಲೆಯ ಸಮೀಪದ ಪ್ರದೇಶವು ಪೀಠಭೂಮಿಯಾಗಿದ್ದರೂ ಸಮತಟ್ಟಾಗಿಲ್ಲ. ಜಿಲ್ಲೆಯ ಮಧ್ಯಪ್ರದೇಶವು ಮಾತ್ರ ಪೀಠಭೂಮಿಯಾಗಿಯೂ ಸಮತಟ್ಟಾಗಿಯೂ ಇದೆ. ಪೀಠಭೂಮಿಯಲ್ಲಿ ಅತ್ಯಂತ ಉನ್ನತವಾದ ಕೊಳ್ಳೆಗಾಲ ಎಂಬ ಸ್ಥಳವು ಕಾವೇರಿ ನದಿಯ ತೀರದಲ್ಲಿದೆ.

ಈ ಜಿಲ್ಲೆಯ ಉತ್ತರಕ್ಕೂ ಪೂರ್ವಕ್ಕೂ ಕಾವೇರಿನದಿಯು ಸುತ್ತಿಸುತ್ತಿ ಹರಿದು ಈ ಜಿಲ್ಲೆಯನ್ನು ಮೈಸೂರು ಜಿಲ್ಲೆಯಿಂದಲೂ ಸೇಲಂ ಜಿಲ್ಲೆಯಿಂದಲೂ ವಿಂಗಡಿಸುತ್ತದೆ. ಶಿವಸಮುದ್ರವೆಂಬುದು ಈ ಜಿಲ್ಲೆಗೆ ಸೇರಿದೆ. ಈ ಜಿಲ್ಲೆಯಲ್ಲಿ ಹರಿಯುವ ಭವಾನಿ, ನಯ್ಯಿಲ್, ಅಮರಾವತಿ ಎಂಬ ಮೂರು ಹೊಳೆಗಳು ಕಾವೇರಿಯ ಉಪನದಿಗಳಾಗಿವೆ. ಮಲೆಯಾಳ ಜಿಲ್ಲೆಯಿಂದ ಉದ್ಭವಿಸಿ ಹರಿಯುವ ಭವಾನಿನದಿಯು ಪಶ್ಚಿಮದಿಂದ ಪೂರ್ವಕ್ಕೆ ಹರಿದು, ಭವಾನಿ ಎಂಬ ಪಟ್ಟಣದ ಹತ್ತಿರ ಕಾವೇರಿನದಿಯೊಂದಿಗೆ ಸಂಗಮವಾಗುತ್ತದೆ. ಈ ಹೊಳೆಯಲ್ಲಿ ನೀರು ತಪ್ಪುವುದಿಲ್ಲ. ನಯ್ಯಿಲ್ ಎಂಬುದು ಸಣ್ಣ ಹೊಳೆ, ವರ್ಷದಲ್ಲಿ ಕೆಲವು ತಿಂಗಳು ಬತ್ತಿಹೋಗುತ್ತದೆ. ಇದರ ಉಗಮಸ್ಥಾನವು ನೀಲಗಿರಿ ಜಿಲ್ಲೆಯಾಗಿದೆ. ಈ ಹೊಳೆಯು ಕೊಯಮುತ್ತೂರು ವರೆಗೆ ಹರಿದು, ಕಾವೇರಿಯೊಡನೆ ಸಂಗಮವಾಗುತ್ತದೆ. ಅಮರಾವತಿಯು ಆನೆಮಲೆಗಳಲ್ಲಿ ಹುಟ್ಟಿ, ಅಲ್ಲಿಂದ ಹರಿಯುವಾಗ ಪಲನಿಮಲೆಯಲ್ಲಿ ಬೀಳುವ ಮಳೆಯ ನೀರನ್ನು ಹಿಡಿದುಕೊಂಡು ಹೋಗಿ, ತಿರುಚಿನಾಪಳ್ಳಿ ಜಿಲ್ಲೆಯಲ್ಲಿ ಕಾವೇರಿಗೆ ಕೂಡುತ್ತದೆ. ಈ ಜಿಲ್ಲೆಯ ಮಲೆಗೆ ಒತ್ತಾಗಿರುವ ಪ್ರದೇಶದಲ್ಲಿ ಜ್ವರವು ಹರಡಿರುತ್ತದೆ. ಇನ್ನುಳಿದ ಪ್ರದೇಶಗಳೆಲ್ಲಾ ಹೆಚ್ಚಾಗಿ ಆರೋಗ್ಯಕ್ಕೆ ಚೆನ್ನಾಗಿವೆ. ಆನೆಮಲೆಯಲ್ಲಿ ಚಳಿ ಹೆಚ್ಚು. ಇದ್ದ ಸ್ಥಳಗಳಲ್ಲಿ ಕೊಳ್ಳೆಗಾಲವೇ ಆರೋಗ್ಯಕ್ಕೆ ತಕ್ಕಷ್ಟು ಹಿತಕರವಾದ ಸ್ಥಳ. ಈ ಜಿಲ್ಲೆಯಲ್ಲಿ ಮಳೆಯು ಬಹು ಕಡಮೆ; ವರ್ಷಕ್ಕೆ 26 ಇಂಚಿಗಿಂತ ಹೆಚ್ಚಿಗೆ ಸುರಿಯುವುದಿಲ್ಲ. ಕೊಳ್ಳೆಗಾಲ ಎತ್ತರ ಭೂಮಿಯಾಗಿದ್ದರೂ ಬೇಸಿಗೆಯಲ್ಲಿ ತಕ್ಕಷ್ಟು ಮಳೆಯನ್ನು ಪಡೆಯುತ್ತದೆ. ಕಾವೇರಿನದಿಯ ನೀರು ಈ ಜಿಲ್ಲೆಯ ಕೆಲವು ಸ್ಥಳಗಳಲ್ಲಿ ಕೃಷಿಗೆ ಉಪಯೋಗವಾಗಿದೆ. ಅಮರಾವತಿಯಲ್ಲಿ ವರ್ಷಂಪ್ರತಿ ಅಣೆಕಟ್ಟೆ ನೀರನ್ನು ಹಲವು ಕಾಲುವೆಗಳ ಮೂಲಕ ಕೃಷಿಭೂಮಿಗೆ ಒಯ್ಯುತ್ತಾರೆ. ಭವಾನಿ ಹೊಳೆಗೆ ಎರಡು ಅಣೆಕಟ್ಟುಗಳಿವೆ. ಈ ಹೊಳೆಯಲ್ಲಿ ಯಾವಾಗಲೂ ನೀರೇರಿರುವುದ

ರಿಂದ ಈ ಅಣೆಗಳನ್ನು ಕಟ್ಟಿರುತ್ತಾರೆ; ಹೀಗೆ ತಿರುಗುವ ನೀರು ಸಮೀಪ ಪ್ರದೇಶ ಗಳಲ್ಲಿ ಕೃಷಿಗೆ ಅವಶ್ಯಬಿದ್ದ ಹಾಗೆ ಒದಗುತ್ತದೆ. ಇಷ್ಟು ಕಡಮೆ ಮಳೆ ಬೀಳುವ ಈ ಜಿಲ್ಲೆಯಲ್ಲಿ ಹೊಳೆಗಳಿಂದ ತಿರುಗಿಸಿದ ನೀರಿನ ಸಹಾಯದಿಂದ ಕಾಲಿವೆಗಳಿಲ್ಲದ ಪ್ರದೇಶಗಳಲ್ಲೆಲ್ಲಾ ಕೃಷಿಯನ್ನು ನಡಿಸುವುದು ಕಷ್ಟಸಾಧ್ಯ ವಾಗಿದೆ. ಈ ಜಿಲ್ಲೆಯಲ್ಲಿ ಅನೇಕ ಏರಿಗಳೂ ಬಾವಿಗಳೂ ಇವೆ ಎಂದು ಹಿಂದೆ ಹೇಳಿದೆಯಲ್ಲವೇ?

ಈ ಜಿಲ್ಲೆಯ ಮುಖ್ಯ ಬೆಳೆಗಳು ಕಂಬು ಮತ್ತು ಜೋಳ. ಇವನ್ನು ಬಿಟ್ಟರೆ ಹೆಚ್ಚಾಗಿ ಬೆಳೆಯುವುದು ತೊಗರಿ ಮತ್ತು ರಾಗಿ. ಬತ್ತದ ಕೃಷಿಯು ಕಷ್ಟಸಾಧ್ಯವಾಗಿದೆ. ಒಳ್ಳೇ ಮಣ್ಣು ಇರುವಲ್ಲಿ ಕಬ್ಬನ್ನೂ ಹತ್ತಿಯನ್ನೂ ಕೃಷಿಮಾಡುತ್ತಾರೆ. ಹೊಗೆಸೊಪ್ಪನ್ನು ಜಿಲ್ಲೆಯ ಅನೇಕ ಸ್ಥಳಗಳಲ್ಲಿ ನೆಡು ತ್ತಾರೆ. ಮಲೆನಾಡುಗಳಲ್ಲಿ ಕಾಫಿಯ ಕೃಷಿಯೇ ಮುಖ್ಯವಾಗಿದೆ. ಕೊಳ್ಳೆ ಗಾಲು ಪಟ್ಟೆನೂಲಿಗೂ ಬಟ್ಟೆಗೂ ಪ್ರಸಿದ್ಧವಾದ ಸ್ಥಳವು. ಪಟ್ಟೆಹುಳುವು ತಿನ್ನುವ ಉಪ್ಪುನೇರಳೆಯ ಗಿಡವು ಈ ಸ್ಥಳದಲ್ಲಿ ವಿಪುಲವಾಗಿ ಬೆಳೆಯುತ್ತದೆ. ಈ ಜಿಲ್ಲೆಯಲ್ಲಿಯ ಕಾಡುಗಳಲ್ಲಿ ದೊಡ್ಡ ಆನೆಗಳು ಅನೇಕವಾಗಿವೆ. ಅಲ್ಲಿಯ ಈ ಕಾಡುಗಳು ಕಾಲ್ನಡೆಗಳಿಗೆ ಒಳ್ಳೇ ಮೇವು ಕೊಡುವ ಹುಲ್ಲುಗಾವಲು ಗಳು. ಅವುಗಳಲ್ಲಿ ತೇಗು, ಗಂಧ, ಚೆನ್ಮರ ಮೊದಲಾದ ಹೆಚ್ಚು ಬೆಲೆ ಯುಳ್ಳ ಮರಗಳು ಸಮೃದ್ಧಿಯಾಗಿ ಬೆಳೆಯುತ್ತವೆ. ಅಣಿಲೆಕಾಯಿ, ಜೇನು, ಮಯಣ ಮೊದಲಾದವುಗಳು ಧಾರಾಳವಾಗಿ ಸಿಗುತ್ತವೆ. ಕೊಯಮುತ್ತೂರಿ ನಲ್ಲಿ ಅರಣ್ಯಸಂರಕ್ಷಣೆಯನ್ನೂ ಅಭಿವೃದ್ಧಿಯನ್ನೂ ಕುರಿತು ಪಾಠ ಹೇಳಿಕೊಡ ತಕ್ಕ ಒಂದು ಕೊಲೇಜನ್ನೂ, ಕೃಷಿಶಾಸ್ತ್ರವನ್ನು ಕಲಿಸತಕ್ಕ ಒಂದು ಕೊಲೇ ಜನ್ನೂ ಸರಕಾರದವರು ಇಟ್ಟಿರುತ್ತಾರೆ.

ಈ ಜಿಲ್ಲೆಯು ಜಾನುವಾರುಗಳಿಗೆ ಪ್ರಸಿದ್ಧಪಟ್ಟಿದೆ. ಕಾಂಗಾಯಂ ಎಂಬ ಜಾತಿಯ ದನಗಳನ್ನು ಕುರಿತು ಹಿಂದೆ ಹೇಳಿದೆವಷ್ಟೆ. ತಿರುಪುರ ಎಂಬ ಸ್ಥಳ ದಲ್ಲಿಯೂ ಅದರ ಸುತ್ತಮುತ್ತಲಿನ ಪ್ರದೇಶಗಳಲ್ಲಿಯೂ ಕುದುರೆಗಳನ್ನು ಸಾಕುತ್ತಾರೆ. ತಿರುಪುರಿನಲ್ಲಿ ವರ್ಷಂಪ್ರತಿ ಕುದುರೆಸಂತೆ ನಡೆಯುತ್ತದೆ. ಕುರುಂಬ ಆಡು ಮತ್ತು ಚಮರಿ ಆಡು ಎಂಬ ಎರಡು ಜಾತಿಯ ಆಡುಗಳು ಈ ಜಿಲ್ಲೆಯ ಎಲ್ಲಾ ಕಡೆಗಳಲ್ಲಿಯೂ ಗುಂಪುಗುಂಪಾಗಿ ಅಲೆಯುವುದನ್ನು ನೋಡಬಹುದು. ಕುರುಂಬ ಆಡಿನ ಮುಖವು ಕಪ್ಪಾಗಿದೆ. ಚಮರಿ ಆಡನ್ನು



RIVER BHAVANI, METTUPALAIYAM ಭವಾನಿನದಿ, ಮೆಟ್ಟುಪ್ಪಾಳೆಯಂ.

ಅದರ ಉಣ್ಣೆಗಾಗಿ ಅಲ್ಲದಿದ್ದರೂ ಮಾಂಸಕ್ಕಾಗಿ ಸಾಕುತ್ತಾರೆ ಎಂದು ಹಿಂದೆ ಹೇಳಿರುತ್ತದೆ. ಈ ಜಿಲ್ಲೆಯಲ್ಲಿ ಅಲ್ಲಲ್ಲಿ ಅಲ್ಪಸ್ವಲ್ಪ ಕಬ್ಬಿಣವೂ ಕೆಲ ಸ್ಥಳಗಳಲ್ಲಿ ಉಪ್ಪೂ ದೊರೆಯುತ್ತವೆ. ಈ ಉಪ್ಪನ್ನು ಹೆಚ್ಚಾಗಿ ಗೊಬ್ಬರವಾಗಿ ಉಪಯೋಗಿಸುತ್ತಾರೆ.

ಈ ಜಿಲ್ಲೆಯಲ್ಲಿ ಮುಖ್ಯವಾದ ಕೈಗಾರಿಕೆಯು ನೇಯಿಗೆ. ಕೊಳ್ಳೆಗಾಲದಲ್ಲಿ ಪಟ್ಟೆನೂಲನ್ನೂ, ಭವಾನಿಯಲ್ಲಿ ಜಮಖಾನಗಳನ್ನೂ ನೇಯುತ್ತಾರೆ. ಕೊಯಮುತ್ತೂರಿನಲ್ಲಿ ಬಟ್ಟೆನೇಯಿಗೆ ಕಾರಖಾನೆಗಳು ಇವೆ. ಈ ಜಿಲ್ಲೆಯಲ್ಲಿ ತೊಗಲಿನ ವ್ಯಾಪಾರವು ಚೆನ್ನಾಗಿ ನಡೆಯುತ್ತದೆ. ಈ ವ್ಯಾಪಾರವು ಕೊಯಮುತ್ತೂರಿನಲ್ಲಿಯೂ ಮೆಟ್ಟುಪಾಳೆಯದಲ್ಲಿಯೂ ಹೇರಳವಾಗಿದೆ. ಜನಸಂಖ್ಯೆ 2,100,000. ಜಿಲ್ಲೆಯ ಬಡಗು ದಿಕ್ಕಿನಲ್ಲಿ ಕನ್ನಡ, ಇತರ ಎಲ್ಲಾ ಭಾಗಗಳಲ್ಲಿ ತಮಿಳು, ಇವನ್ನು ಆಡುತ್ತಾರೆ. ಅನೇಕ ಗ್ರಾಮಗಳಲ್ಲಿ ತೆಲುಗನ್ನೂ ಆಡುವುದುಂಟು.

ಪ್ರಧಾನ ಪುರಗಳು.—ಜಿಲ್ಲೆಯ ಮುಖ್ಯ ಪಟ್ಟಣವೇ ಕೊಯಮುತ್ತೂರು. ಇದು ಆರೋಗ್ಯಕ್ಕೆ ಒಳ್ಳೇ ಊರು. ಇದರ ಒಂದು ಭಾಗದಲ್ಲಿ ನೀಲಗಿರಿಯೂ ಇನ್ನೊಂದು ಭಾಗದಲ್ಲಿ ಆನೆಮಲೆಯೂ ಇದ್ದು, ನೋಟಕ್ಕೆ ಕೊಯಮುತ್ತೂರು ರಮಣೀಯವಾಗಿದೆ. ಇಲ್ಲಿಯೇ ತೊಗಲು ಹದಮಾಡುವ ವೃತ್ತಿಯು ವಿಶೇಷವಾಗಿ ನಡೆಯುವುದಲ್ಲದೆ ಹದಮಾಡಿದ ತೊಗಲಿನಿಂದ ಹಲವು ವಿಧದ ಸಾಮಾನುಗಳನ್ನು ಮಾಡುತ್ತಾರೆ. ಮಲೆಗಳಲ್ಲಿ ಪೈದಾಸ್ತು ಆಗುವ ಕಾಫಿಬೀಜವನ್ನು ಇಲ್ಲಿ ತಂದು, ಸಿಪ್ಪೆ ಸುಲಿದು ಹೋಳುಮಾಡಿಯೂ, ಹುರಿದು ಹುಡಿಮಾಡಿಯೂ ಪರದೇಶಗಳಿಗೆ ಕಳುಹಿಸುತ್ತಾರೆ. ಅದಕ್ಕಾಗಿಯೇ ಇಲ್ಲಿ ಒಂದು ಕಾರಖಾನೆ ಇದೆ. ಈರೋಡು ಕಾವೇರಿನದಿಗೆ ಸಮೀಪವಾದ ಒಂದು ಊರು. ತಿರುಚಿನಾಪಳ್ಳಿಯಿಂದ ಬರುವ ಸಣ್ಣ ರೈಲುರಸ್ತೆಯೂ ಮದ್ರಾಸಿನಿಂದ ಮಂಗಳೂರಿಗೆ ಹೋಗುವ ದೊಡ್ಡ ರೈಲುರಸ್ತೆಯೂ ಇಲ್ಲಿ ಕೂಡುತ್ತವೆ. **ಮೆಟ್ಟುಪಾಳೆಯಂ**—ಮದ್ರಾಸಿನಿಂದ ಮಂಗಳೂರಿಗೆ ಹೋಗುವ ರೈಲುರಸ್ತೆಯ ಒಂದು ಶಾಖೆಯು ಪೊದನೂರಿನಿಂದ ಕೊಯಮುತ್ತೂರು ದಾರಿಯಾಗಿ ಇಲ್ಲಿಗೆ ಬರುತ್ತದೆ. ಈ ಪಟ್ಟಣವು ನೀಲಗಿರಿಯ ಬುಡದಲ್ಲಿರುವುದರಿಂದ, ಮೊದಲು ನೀಲಗಿರಿಗೆ ಹೋಗುವವರು ಇಲ್ಲಿ ಇಳಿದು ಬಂಡಿಯಲ್ಲಾಗಲಿ, ಕಾಲುನಡೆಯಾಗಿ ಆಗಲಿ ಅಲ್ಲಿಗೆ ಹತ್ತಿ ಹೋಗಬೇಕಾಗುತಿತ್ತು.

ಈಚೆಗೆ ಕೆಲವು ವರುಷಗಳಿಂದ ಇಲ್ಲಿಂದ ಉಟಕಮಂಡು ವರೆಗೆ ಅಗಲ ಕಡಮೆಯಾದ ಒಂದು ರೈಲುರಸ್ತೆಯನ್ನು ಆಶ್ಚರ್ಯಕರವಾದ ರೀತಿಯಲ್ಲಿ ಮಾಡಿರುವರು. ಉದಮಲಪೇಟೆ ಎಂಬುದು ಹತ್ತಿಬಟ್ಟೆಯ ವ್ಯಾಪಾರಕ್ಕೆ ಹೆಸರುವಾಸಿಯಾದ ಸ್ಥಳ. ಇಲ್ಲಿ ಕಾವೇರಿಯೂ ಭವಾನಿಯೂ ಸಂಗಮವಾಗುವ ಸ್ಥಳದಲ್ಲಿರುವ ಸಂಗಮೇಶ್ವರ ಕೋವಿಲು ಎಂಬ ದೇವಸ್ಥಾನವು ಬಹಳ ಪ್ರಖ್ಯಾತವಾಗಿದೆ.

---

೩. ಸೇಲಂ ಜಿಲ್ಲೆ.

ಸೇಲಂ ಜಿಲ್ಲೆಗೆ ಮೈಸೂರು ರಾಜ್ಯವೂ ಉತ್ತರ ಆರ್ಕಾಡು, ದಕ್ಷಿಣ ಆರ್ಕಾಡು, ತಿರುಚಿನಾಪಳ್ಳಿ, ಕೊಯಮುತ್ತೂರು ಎಂಬ ಜಿಲ್ಲೆಗಳೂ ನಾಲ್ಕು ಕಡೆಗಳಲ್ಲಿ ಮೇರೆಯಾಗಿವೆ. ಇದರ ವಿಸ್ತಾರವು 6,300 ಚದರಮೈಲು. ಈ ಜಿಲ್ಲೆಯ ಬಡಗುಭಾಗದ ಒಂದು ತುಂಡು ಮೈಸೂರು ಪೀಠಭೂಮಿಗೆ ಸೇರಿದೆ. ತೆಂಕುಭಾಗವು ಕರ್ನಾಟಕ ಸಮಭೂಮಿಗೆ ಸೇರಿದೆ. ಬಡಗು ಭಾಗದಲ್ಲಿ ಅತ್ಯಂತ ಎತ್ತರವಾದ ಪಾಲಕಾಡು ಎಂಬ ಪೀಠಭೂಮಿಯು ಸಮುದ್ರಮಟ್ಟದಿಂದ 3,000 ಅಡಿ ಎತ್ತರವಿದೆ. ಅದರ ಕೆಳಗೆ ಇರುವ ಪಾರಾಮುಕಲ್ಲು ಎಂಬ ಪ್ರದೇಶದಲ್ಲಿ ಅನೇಕ ತಗ್ಗುಗಳಿವೆ. ಈ ಜಿಲ್ಲೆಯ ಮಧ್ಯದಲ್ಲಿ ಅದರ ಆಗ್ನೇಯ ದಿಕ್ಕಿನಿಂದ ವಾಯವ್ಯಕ್ಕಾಗಿ ಒಂದು ಪರ್ವತ ಶ್ರೇಣಿಯು ಚಾಚಿಕೊಂಡಿದೆ. ಅದರ ಕೆಳಗೆ ಪಾಲಕಾಡು ಎಂಬ ಪೀಠ ಭೂಮಿ ಇದೆ. ಈ ಪೀಠಭೂಮಿಯಲ್ಲಿ ನಾಮಕಲ್ಲು, ತಿರುಚೆಂಗೋಡು, ಸಂಗದುರ್ಗ ಎಂಬ ಹೆಸರುಳ್ಳ ಮೂರು ಎತ್ತರವಾದ ಶಿಖರಗಳು ಇವೆ. ಜಿಲ್ಲೆಯ ಮಧ್ಯಭಾಗದಲ್ಲಿರುವ ಮಲೆಗೆ ಶಿವರಾಯಮಲೆ ಎಂದು ಹೆಸರು. ಇದರ ಅತ್ಯುನ್ನತವಾದ ಶಿಖರವು 5,400 ಅಡಿ ಎತ್ತರವಿದೆ. ಈ ಮಲೆಯ ಮೇಲೆ ಯಾರ್ಕಾಡು ಎಂಬುದು ವಿಲಾಯತಿಯವರು ದೇಹಾರೋಗ್ಯಕ್ಕಾಗಿ ವಾಸಮಾಡುವ ತಂಪಾದ ಸ್ಥಳವು. ಮೇಲೆ ಹೇಳಿದ ಶಿವರಾಯಮಲೆಯಲ್ಲದೆ ಕಲ್‍ರಾಯಿನ್, ಪಚ್ಚಮಲೆ, ಯಾವಡಿ ಎಂಬ ಮೂರು ಮಲೆಗಳೂ, ಜಿಲ್ಲೆಯ ಈಶಾನ್ಯಕ್ಕೆ ಇರುವ ಜವ್ವಾತ್‍ಮಲೆ ಎಂಬ ಮಲೆಯೂ ಈ ಜಿಲ್ಲೆಯಲ್ಲಿ ಹೆಸರುಗೊಂಡುವುಗಳು. ಈ ಜಿಲ್ಲೆಯ ನೈಋತ್ಯಮಾರ್ಗವಾಗಿ ಹರಿದು

ಹೋಗುವ ಕಾವೇರಿನದಿಯೇ ಇಲ್ಲಿಯ ಮುಖ್ಯ ನದಿ. ಮೈಸೂರಲ್ಲಿ ಉದ್ಭವಿಸುವ ತೆಂಕು ಪೆಣ್ಣಾರು ಈ ಜಿಲ್ಲೆಯ ಬಡಗುಭಾಗದಲ್ಲಿ ಹರಿದು, ದಕ್ಷಿಣ ಆರ್ಕಾಡನ್ನು ಪ್ರವೇಶಿಸುತ್ತದೆ. ಪೆಳ್ಳಾರು ಎಂಬ ಒಂದು ನದಿಯೂ ಈ ಜಿಲ್ಲೆಯಲ್ಲಿದೆ.

ಹವೆ.—ಮೈಸೂರು ಪೀಠಭೂಮಿಗೆ ಸೇರಿದ ಭಾಗಗಳು ಆರೋಗ್ಯಕ್ಕೆ ಅನುಕೂಲವಾಗಿದ್ದರೂ ತಗ್ಗುಪ್ರದೇಶದಲ್ಲಿ ಉಷ್ಣವು ಅಧಿಕವಾಗಿದೆ. ಮಳೆಯು ಈ ಜಿಲ್ಲೆಯಲ್ಲಿ ಬಹಳ ಕಡಮೆ. ತಗ್ಗಾದ ಪರ್ವತಪ್ರದೇಶಗಳಲ್ಲಿ ಮಲೆ ಜ್ವರವು ಸಾಧಾರಣವಾಗಿದೆ. ಮೇಲೆ ಹೇಳಿದ ಯಾವಡಿ ಎಂಬಲ್ಲಿ ಮಲೆಜ್ವರವು ಇರುವುದರಿಂದ ಅಲ್ಲಿ ಜನವಾಸವು ಕಡಮೆ.

ಕೃಷಿಯೂ ಕೈಗಾರಿಕೆಯೂ.—ಈ ಜಿಲ್ಲೆಯಲ್ಲಿ ಕೃಷಿಗೆ ಆಧಾರವಾಗಿ ಏರಿಗಳೂ ಬಾವಿಗಳೂ ಮಾತ್ರ ಇವೆ. ಪೆಣ್ಣಾರು ಹೊಳೆಯು ಹರಿಯುವ ಭಾಗಗಳಲ್ಲಿ ಅದರ ನೀರನ್ನು ಅಲ್ಪಸ್ವಲ್ಪವಾಗಿ ಕೃಷಿಗೆ ಉಪಯೋಗಿಸುತ್ತಾರೆ. ಶಿವರಾಯಮಲೆಯಲ್ಲಿ ಕಾಫಿಯು ಸಮೃದ್ಧಿಯಾಗಿ ಬೆಳೆಯುತ್ತದೆ. ರಾಗಿ ಮತ್ತು ಕಂಬು ಇವೇ ಈ ಜಿಲ್ಲೆಯಲ್ಲಿ ಮುಖ್ಯವಾದ ಪೈರುಗಳು. ಕಾಡುಗಳು ಕಿಕ್ಕಿರುವುದರಿಂದ, ನೆಲವು ಕೃಷಿಗೆ ಒದಗದೆ ಹೆಚ್ಚಾಗಿ ಬಂಜರು ಬಿದ್ದಿರುತ್ತದೆ. ಜಾನುವಾರುಗಳು ಅನೇಕವಾಗಿವೆ. ಪೀಠಭೂಮಿಗೆ ಸೇರಿದ ಹೊಸೂರು ತಾಲೂಕಿನಲ್ಲಿ ಮೇಯಲಿಕ್ಕೆ ತಕ್ಕ ಹುಲ್ಲು ವಿಪುಲವಾಗಿ ದೊರೆಯುವುದರಿಂದ ಅಲ್ಲಿಯ ದನಕರುಗಳು ಒಳ್ಳೆಯವಾಗಿವೆ; ಅಲ್ಲಿ ಕುದುರೆಗಳನ್ನೂ ಸಾಕುತ್ತಾರೆ. ಕಾಡುಗಳಲ್ಲಿ ಚಂದನಮರವು ಅತಿವಿಶೇಷವಾಗಿ ಬೆಳೆಯುತ್ತದೆ. ಈ ಮರವು ಮುಖ್ಯವಾಗಿ ಬೆಳೆಯುವುದು ಜವಾತ್‌ಮಲೆಯಲ್ಲಿ. ತಗ್ಗುಪ್ರದೇಶಗಳಲ್ಲಿಯ ಮಣ್ಣು ಫಲವತ್ತಾಗಿ ಇರುವುದರಿಂದ ಇಲ್ಲಿಯ ಹುಳಿಮರಗಳು ಬಹಳ ದೊಡ್ಡವಾಗಿದ್ದು, ಬೇಕಾದಷ್ಟು ಬೆಳೆಯುತ್ತವೆ. ಸೇಲಂ ಜಿಲ್ಲೆಯು ಕಶಿ ಮಾವಿನಹಣ್ಣಿಗೆ ಪ್ರಖ್ಯಾತಿಪಟ್ಟಿದೆ. ಇಲ್ಲಿ ಕಬ್ಬಿಣವು ಧಾರಾಳವಾಗಿದ್ದರೂ ಅದನ್ನು ಶುದ್ಧಮಾಡಿ ತೆಗೆಯಲಿಕ್ಕೆ ಬೇಕಾದ ಕಟ್ಟಿಗೆ ಇಲ್ಲದ್ದರಿಂದ, ಅದರ ಕೈಗಾರಿಕೆಯೇ ಇಲ್ಲ. ಪ್ರತಿಯೊಂದು ಮುಖ್ಯ ಪಟ್ಟಣದಲ್ಲಿಯೂ ಗ್ರಾಮದಲ್ಲಿಯೂ ನೇಯಿಗೆಯೇ ಮುಖ್ಯವಾದ ಕೈಗಾರಿಕೆ. ಸೇಲಂ ಪಟ್ಟಣದ ಜೈಲಿನಲ್ಲಿ ಒಳ್ಳೇ ತರದ ಜಮಖಾನುಗಳೂ ತಯಾರಾಗುತ್ತವೆ. ಈ ಪಟ್ಟಣದಲ್ಲಿ ಆಗುವ ಕಬ್ಬಿಣದ ಸಾಮಾನುಗಳು ದಕ್ಷಿಣ ಇಂಡಿಯದಲ್ಲೆಲ್ಲಾ ಹೆಸರುವಾಸಿಯಾಗಿವೆ.

ಜನಸಂಖ್ಯೆ.—1,700,000. ಮುಖ್ಯ ಭಾಷೆ ತಮಿಳು ಆಗಿದ್ದರೂ ಹೊಸೂರು ತಾಲೂಕಿನಲ್ಲಿ ಕನ್ನಡವು ರೂಢಿಯಲ್ಲಿದೆ.

ಮುಖ್ಯ ಪಟ್ಟಣಗಳು.—ಮುಖ್ಯ ಪಟ್ಟಣವು ಶಿವರಾಯಮಲೆಯ ಬುಡದಲ್ಲಿರುವ ಸೇಲಂ ಎಂಬುದು. ಇಲ್ಲಿ ಮತ್ತು ಇದರ ಸಮೀಪದಲ್ಲಿ ಜಿಲ್ಲೆಯ ಮುಖ್ಯ ಉದ್ಯೋಗಸ್ಥರೆಲ್ಲರೂ ಇರುತ್ತಾರೆ. ಇಲ್ಲಿಯ ಮುಖ್ಯ ವೃತ್ತಿ ನೇಯಿಗೆ. **ಹೊಸೂರು**—ಇದು ಒಂದು ಕಾಲದಲ್ಲಿ ಮುಖ್ಯ ಪಟ್ಟಣವಾಗಿತ್ತು. ಇಲ್ಲಿ ಒಂದು ಹಳೆ ಕೋಟೆ ಇದೆ. ಬೆಂಗಳೂರಿನಿಂದ ಇಲ್ಲಿಗೆ 24 ಮೈಲು ದೂರವಿದ್ದು, ಇದು ವಿಲಾಯತಿಯವರು ಆರೋಗ್ಯಕ್ಕಾಗಿ ಬರುವ ಒಂದು ಸ್ಥಳವಾಗಿದೆ.

---

೪. ಮಧುರೆ ಜಿಲ್ಲೆ.


ಈ ಜಿಲ್ಲೆಗೆ ಬಡಗು ತಿರುಚಿನಾಪಳ್ಳಿ, ತೆಂಕು ರಾಮನಾಥಪುರ, ಪಶ್ಚಿಮದಲ್ಲಿ ತಿರುವಾಂಕೂರು, ಇವು ಮೇರೆಗಳಾಗಿವೆ. ಇದರ ವಿಸ್ತಾರವು 4500 ಚ. ಮೈಲು. ಈ ಜಿಲ್ಲೆಯು ಹೆಚ್ಚಾಗಿ ಸಮನೆಲವಾದ ಒಂದು ಮೈದಾನವಾಗಿದ್ದರೂ ಪಶ್ಚಿಮದಲ್ಲಿ ಈ ಸಮಭೂಮಿಗೆ ಒತ್ತಾಗಿ ಕೆಲವು ಮಲೆಗಳು ಇವೆ. ಇವುಗಳಲ್ಲಿ ಮುಖ್ಯವಾದದ್ದು ಪಳನಿಮಲೆ. ಇದರ ಎತ್ತರದ ಶಿಖರವು 7,700 ಅಡಿ. ಪಳನಿಮಲೆಯ ಕೊಡಿಯಕೆನಲ್ ಎಂಬ ಒಂದು ಭಾಗವು ವಿಲಾಯತಿಯವರು ಆರೋಗ್ಯಕ್ಕಾಗಿ ಹೋಗುವ ಸ್ಥಳವಾಗಿದೆ. ಇಲ್ಲಿಂದ ಪೂರ್ವಕ್ಕೆ 3,500 ಅಡಿ ಎತ್ತರವಾದ ಸಿರಿಮಲೆ ಎಂಬ ಹೆಸರುಳ್ಳ ಒಂದು ಮಲೆಯು ಇದೆ. ಈ ಜಿಲ್ಲೆಯ ಪ್ರಧಾನ ನದಿಯಾದ ವೈಗೈಯನ್ನು ಕುರಿತು ರಾಮನಾಥಪುರದ ವಿವರಣೆಯಲ್ಲಿ ಹೇಳಿದೆಯಷ್ಟೆ. ಈ ನದಿಯು ಈ ಜಿಲ್ಲೆಯಲ್ಲಿ ಹರಿದುಹೋಗುವಲ್ಲಲ್ಲಿ ಎರಡೂ ದಡಗಳೂ ಬಲು ಎತ್ತರವಾಗಿವೆ. ಪಳನಿಮಲೆಯಲ್ಲಿ ಬೀಳುವ ಮಳೆಯ ನೀರೆಲ್ಲಾ ಆ ಹೊಳೆಗೆ ಬಂದು ಸೇರುವುದರಿಂದ ಅದು ಮಳೆಗಾಲದಲ್ಲಿ ಉಕ್ಕುತ್ತದೆ. ಆದರೆ ಬೇಸಿಗೆಯಲ್ಲಿ ಬತ್ತಿಹೋಗುತ್ತದೆ. ಮಧುರಾಪಟ್ಟಣದ ಸಮೀಪ ಈ ನದಿಗೆ ಕಟ್ಟಿದ್ದ ಅಣೆಯ ನೀರನ್ನು ಎರಡು ಕಡೆಗಳಿಗೂ ತಿರುಗಿಸಿ, ಅನೇಕ ತೋಡು ಕಾಲಿವೆಗಳ ಮೂಲಕ ಒಯ್ದು, ನೆಲವನ್ನು ಹೊಲವನ್ನಾಗಿ ಮಾಡಿರುತ್ತಾರೆ.

ಪಶ್ಚಿಮಘಟ್ಟದಲ್ಲಿ ಉದ್ಭವಿಸಿ ಪಶ್ಚಿಮಕ್ಕೆ ಹರಿದು ಅರಬಿಸಮುದ್ರಕ್ಕೆ ಬೀಳುವ ಪೆರಿಯಾರ್ ಎಂಬ ಹೊಳೆಯು ಈ ಜಿಲ್ಲೆಯಲ್ಲಿ ಕೃಷಿಗೆ ಉಪಕಾರಿಯಾಗಿದೆ. ಅದಕ್ಕಾಗಿ ಸರಕಾರದವರು ಘಟ್ಟದ ಬದಿಯಲ್ಲಿ ಈ ಜಿಲ್ಲೆಯ ಭಾಗದ ಇಳಿಜಾರಿನಲ್ಲಿ ಒಂದು ದೊಡ್ಡ ಏರಿಯನ್ನು ಕಟ್ಟಿಸಿ, ಆ ಹೊಳೆಗೆ ಒಂದು ಅಣೆಯನ್ನು ಕಟ್ಟಿ, ಆ ನೀರನ್ನು ದೊಡ್ಡ ನಳಿಗೆಗಳ ಮೂಲಕ ಈ ಏರಿಯಲ್ಲಿ ಹೊಗಿಸುವಂತೆ ಮಾಡಿದ್ದಾರೆ. ನೀರಿಲ್ಲದ ಕಾಲದಲ್ಲಿ ಈ ಏರಿಯಿಂದ ವೈಗೈನದಿಗೆ ನೀರನ್ನು ಬಿಟ್ಟು ಕೊಡುತ್ತಾರೆ. ಹಿಂದೆ ಬಹುಕಾಲದಿಂದ ಪಾಳು ಬಿದ್ದ ಸ್ಥಳಗಳು ಈ ಜಲಮಾರ್ಗಗಳನ್ನು ಕಟ್ಟಿಸಿದಂದಿನಿಂದ ಎಷ್ಟೋ ಫಲವತ್ತಾದ ಕೃಷಿಭೂಮಿಗಳಾಗಿವೆ. ಈ ಜಿಲ್ಲೆಯಲ್ಲಿ ಮಳೆಯು ಅಧಿಕವಿಲ್ಲದ್ದರಿಂದ ಈ ಏರಿಯ ನೀರಿನಿಂದಲೇ ಮುಖ್ಯವಾಗಿ ಕೃಷಿಯು ನಡೆಯುತ್ತದೆ. ಈ ಜಿಲ್ಲೆಯಲ್ಲಿ ಸಮತಟ್ಟಾದ ಸ್ಥಳಗಳು ಅತ್ಯುಷ್ಣವೂ ಅನಾರೋಗ್ಯಕರವೂ ಆಗಿವೆ.

ಕೃಷಿಯೂ ಕೈಗಾರಿಕೆಯೂ.—ಮುಖ್ಯ ಬೆಳೆಗಳು ನೆಲ್ಲು ಮತ್ತು ಜೋಳ. ಹತ್ತಿ, ಹುರುಳಿ, ಹರಳು, ಇವನ್ನೂ ಬೆಳಿಸುತ್ತಾರೆ. ಡಿಂಡಿಗಲ್ಲು ಎಂಬ ಸ್ಥಳದಲ್ಲಿ ಒಳ್ಳೆಯ ಹೊಗೆಸೊಪ್ಪನ್ನು ತಯಾರಿಸುತ್ತಾರೆ. ಪಳನಿಮಲೆಯಲ್ಲಿ ಕಾಫಿಯೂ ಏಲಕ್ಕಿಯೂ ಸಮೃದ್ಧಿಯಾಗಿ ಬೆಳೆಯುತ್ತವೆ. ಮೇಯುಲಿಕ್ಕೆ ಸೌಕರ್ಯಗಳು ಧಾರಾಳವಾಗಿ ಇರುವುದರಿಂದ ಜಾನುವಾರುಗಳನ್ನು ಇಲ್ಲಿ ಧಾರಾಳವಾಗಿ ಸಾಕುತ್ತಾರೆ. ಚೆರುಮಲೆಯಲ್ಲಿ ಸಿಗುವ ಒಂದು ಬಗೆಯ ಬಾಳೆಹಣ್ಣು ಬಹಳ ಹೆಸರುವಾಸಿಯಾಗಿದೆ. ಈ ಜಿಲ್ಲೆಯಲ್ಲಿ ಹೆಚ್ಚಿನ ಸ್ಥಳಗಳಲ್ಲಿ ಕಬ್ಬಿಣದ ಗನಿಗಳು ಇವೆ. ಜರಿ ಅಂಚಿನ ರುಮಾಲುಗಳೂ, ಅಂಗವಸ್ತ್ರಗಳೂ, ಪಟ್ಟೆ ಜರಿ ಅಂಚಿನ ಸೀರೆಗಳೂ ಮಧುರೆ, ಡಿಂಡಿಗಲ್ಲು ಎಂಬ ಸ್ಥಳಗಳಲ್ಲಿಂದ ಸಂಸ್ಥಾನದ ಇತರ ಜಿಲ್ಲೆಗಳಿಗೆ ಕಳುಹಿಸಲ್ಪಡುತ್ತವೆ. ಇದು ವಿನಾ ಅತಿವಿಶೇಷವಾದ ಚುರುಟುಗಳೂ ಕಂಚಿನ ಸಾಮಾನುಗಳೂ ಹಿತ್ತಾಳೆಯ ಪಾತ್ರೆಗಳೂ ತಯಾರಾಗುತ್ತವೆ.

ಜನಸಂಖ್ಯೆ.—1,930,000. ಭಾಷೆ ಮುಖ್ಯವಾಗಿ ತಮಿಳು.

ಪ್ರಧಾನ ಪಟ್ಟಣಗಳು.—ಈ ಜಿಲ್ಲೆಯ ಮುಖ್ಯ ಪಟ್ಟಣವಾದ ಮಧುರೆಯು ದಕ್ಷಿಣ ಇಂಡಿಯದ ದೊಡ್ಡ ಪಟ್ಟಣಗಳಲ್ಲಿ ಒಂದಾಗಿದೆ. ಪುರಾತನ ಕಾಲದಲ್ಲಿ ಇದು ಒಂದು ಪ್ರಖ್ಯಾತವಾದ ನಗರವೂ ನೂರಾರು ವರುಷಗಳಿಂದ



DINDIGUL ROCK ಡಿಂಡಿಗಲ್ಲಿನಲ್ಲಿರುವ ಬಂಡೆಕಲ್ಲು.

ಪಾಂಡ್ಯ ರಾಜರುಗಳ ರಾಜಧಾನಿಯೂ ಆಗಿತ್ತು. ಕಂಚಿ ಕಾಮಾಕ್ಷಿ, ಮಧುರೆಯ ಮೀನಾಕ್ಷಿ, ಕಾಶಿಯ ವಿಶಾಲಾಕ್ಷಿ ಎಂಬುದಾಗಿ ತಮಿಳದಲ್ಲಿ ಒಂದು ನಾಣ್ಣುಡಿಯದೆ. ಇದರಿಂದ ಮಧುರೆಯಲ್ಲಿಯ ಮೀನಾಕ್ಷಿ ದೇವಸ್ಥಾನವು ದಕ್ಷಿಣ ಇಂಡಿಯದಲ್ಲಿ ಪ್ರಸಿದ್ಧಿಯಾದ ಒಂದು ದೇವಾಲಯವೆಂಬುದು ಸ್ಪಷ್ಟವಾಗುತ್ತದೆ. ಮೀನಾಕ್ಷಿ ದೇವಸ್ಥಾನವು 750 ಅಡಿ ಉದ್ದವೂ, 350 ಅಡಿ ಅಗಲವೂ ಇದೆ. ಇದರ ನಾಲ್ಕು ಗೋಪುರಗಳಲ್ಲಿ ಒಂದೊಂದು 150 ಅಡಿ ಉನ್ನತವಾಗಿದೆ. ದೇವಸ್ಥಾನದ ಒಳಗಿನ ಸಾವಿರ ಕಾಲಿನ ಮಂಟಪದಲ್ಲಿ ಕೆತ್ತಿದ ಕೆತ್ತನೆಯ ಕೆಲಸವು ಬಹು ನೂತನವಾಗಿದೆ. ಈ ನಗರದಲ್ಲಿ ಆಶ್ಚರ್ಯಕರವಾದ ಇನ್ನೊಂದು ಕಟ್ಟಡಕ್ಕೆ ತಿರುಮಲನಾಯಕ ಮಹಾಲ್ ಎಂದು ಹೆಸರು. ಕಣ್ಣಿನಿಂದ ನೋಡಿದ ಹೊರತು ಬಾಯಿಯಿಂದ ಹೇಳಿದರೆ ಈ ಕಟ್ಟಡದ ಸರಿಯಾದ ಅಭಿಪ್ರಾಯವಾಗಲಾರದು. ಇದಲ್ಲದೆ ಇಲ್ಲಿಯ ಮನೋಹರವಾದ ದೇವಸ್ಥಾನ, ಕೆರೆ, ಅದರಲ್ಲಿರುವ ಮಂಟಪ, ಆ ಮಂಟಪದ ಸುತ್ತಲಿನ ತೋಟ, ಇವು ಎಷ್ಟೋ ಚೆಲುವಾಗಿವೆ. ವರ್ಷಕ್ಕೊಮ್ಮೆ ಜರಗುವ ಲಕ್ಷದೀಪಾವಳಿಯ ಉತ್ಸವಕ್ಕೆ ಸಾವಿರಾರು ಜನರು ಕೂಡುತ್ತಾರೆ. ಡಿಂಡಿಗಲ್ಲು ದೊಡ್ಡ ವ್ಯಾಪಾರದ ಸ್ಥಳ. ಹೊಗೆಸೊಪ್ಪು, ಕಾಫಿಬೀಜ, ತೊಗಲು, ಇವನ್ನು ಇಲ್ಲಿಂದ ಪರರಾಜ್ಯಗಳಿಗೆ ಹೆಚ್ಚಾಗಿ ಕಳುಹಿಸುತ್ತಾರೆ. ಇಲ್ಲಿಯೇ 1223 ಅಡಿ ಎತ್ತರವಾದ ಒಂದು ಬಂಡೆಕಲ್ಲಿನ ಮೇಲೆ ಕಟ್ಟಿಸಿದ ಒಂದು ಕೋಟೆ ಇದೆ. ಕೊಡಿಯಕೆನಲ್ ಎಂಬುದು ಮಲೆಯ ಮೇಲಿರುವ ಪಟ್ಟಣ. ನೀಲಗಿರಿಯಿಂದ ಕೆಳಗಡೆ ಮೆಟ್ಟುಪಾಳೆಯಂ ಇರುವಂತೆ ಈ ಮಲೆಯ ಬುಡದಲ್ಲಿ ಪೆರಿಯಾಕೊಳಂ ಎಂಬ ಒಂದು ಪಟ್ಟಣವಿದೆ. ಇಲ್ಲಿ ನೀಲಗಿರಿಯಲ್ಲಿದ್ದಷ್ಟು ಕಠಿನವಾದ ಚಳಿಯು ಇಲ್ಲದ್ದರಿಂದ ಉಟಕಮಂಡಿಗಿಂತ ಕೊಡಿಯಕೆನಲಿನ ಹವೆಯು ಹಿತಕರವೆಂದು ಕೆಲವರು ತಿಳಿದು ಇಲ್ಲಿ ವಾಸಮಾಡುತ್ತಾರೆ.

---


೫. ತಿರುಚಿನಾಪಳ್ಳಿ ಜಿಲ್ಲೆ.

ಇದು ಸೇಲಂ ದಕ್ಷಿಣ ಆರ್ಕಾಡು ಈ ಎರಡು ಜಿಲ್ಲೆಗಳ ದಕ್ಷಿಣದಲ್ಲಿದೆ. ಕೊಯಮುತ್ತೂರು ಮಧುರೆ ತಂಜಾವೂರು ಎಂಬ ಜಿಲ್ಲೆಗಳೂ ಪುದುಕೋಟೆ ಎಂಬ ಆಶ್ರಿತರಾಜ್ಯವೂ ಇದರ ನಾಲ್ಕು ಸುತ್ತಲೂ ಸುತ್ತಿವೆ. ಇದರ ವಿಸ್ತಾರವು

4935 ಚದರಮೈಲು. ಈ ಜಿಲ್ಲೆಯ ಈಶಾನ್ಯ ದಿಕ್ಕಿನಲ್ಲಿ ಪಚ್ಚಮಲೆ ಎಂಬ ಮಲೆಯು ಉದ್ದಕ್ಕೆ ಚಾಚಿಕೊಂಡಿದೆ. ತೆಂಕು ಪಡು ದಿಕ್ಕಿನಲ್ಲಿ ಕೆಲವು ಗುಡ್ಡಗಳು ಇವೆ. ಇತರ ಭಾಗಗಳೆಲ್ಲಾ ಸಮತಟ್ಟಾದ ಪ್ರದೇಶವಾಗಿವೆ. ಈ ಜಿಲ್ಲೆಯ ಮುಖ್ಯ ನದಿಯಾದ ಕಾವೇರಿಯು ಪಶ್ಚಿಮದಿಂದ ಪೂರ್ವಕ್ಕೆ ಹರಿಯುತ್ತದೆ. ಇದು ತಿರುಚಿನಾಪಳ್ಳಿ ಪಟ್ಟಣಕ್ಕೆ ಪಶ್ಚಿಮದಲ್ಲಿ 11 ಮೈಲು ದೂರದಲ್ಲಿ ಕವಲೊಡೆದು, ಒಂದು ಶಾಖೆಯು ಈ ಜಿಲ್ಲೆಗೂ ತಂಜಾವೂರಿಗೂ ನಡುವೆ ಈಶಾನ್ಯ ಮೇರೆಯಾಗಿಯೂ, ಇನ್ನೊಂದು ನೈಋತ್ಯಕ್ಕೆ ತಿರುಚಿನಾಪಳ್ಳಿಗೆ ಸಮೀಪವಾಗಿ ತಂಜಾವೂರು ಜಿಲ್ಲೆಯಲ್ಲಿ ಹರಿದು ಸಮುದ್ರಕ್ಕೆ ಬೀಳುತ್ತದೆ. ಈ ಎರಡು ಶಾಖೆಗಳ ನಡುವೆ ಒಂದು ದ್ವೀಪವೆದ್ದಿದೆ. ಅದಕ್ಕೇನೇ ಶ್ರೀರಂಗ ಎಂದು ಹೆಸರು. ವೆಳ್ಳಾರು ಹೊಳೆಯು ಈ ಜಿಲ್ಲೆಗೂ ದಕ್ಷಿಣ ಆರ್ಕಾಡಿಗೂ ಮಧ್ಯದಲ್ಲಿ ಹರಿಯುತ್ತದೆ. ಮದ್ರಾಸ ಸಂಸ್ಥಾನದ ಅತ್ಯುಷ್ಣವಾದ ಜಿಲ್ಲೆಗಳಲ್ಲಿ ಈ ಜಿಲ್ಲೆಯು ಒಂದಾಗಿದ್ದರೂ, ಇದು ಆರೋಗ್ಯಕ್ಕೆ ಹಿತಕರವಾಗಿದೆ. ಇಲ್ಲಿ ವರ್ಷಕ್ಕೆ ಸರಾಸರಿ 43 ಇಂಚಿಗೆ ಕಡಮೆಯಾಗದಷ್ಟು ಮಳೆ ಬೀಳುತ್ತದೆ. ಈ ಜಿಲ್ಲೆಯಲ್ಲಿ ನೆರೆಯ ನೀರಿಗೆ ಹರಿದುಬರುವ ಗೊಬ್ಬರವು ಚೆನ್ನಾಗಿದೆ. ಕಾವೇರಿಯ ಶಾಖೆಯಾದ ಕೊಳ್ಳಡಂ ಹೊಳೆಯಲ್ಲಿ ನೆರೆಬಂದರೆ ಈ ಗೊಬ್ಬರವು ಸಿಗುತ್ತದೆ. ನದಿಗಳಲ್ಲಿ ಅಲ್ಲಲ್ಲಿ ಅಣೆಕಟ್ಟಿ, ನೀರನ್ನು ನಿಲ್ಲಿಸಿ, ಶಾಖೆಗಳ ಮೂಲಕ ಕೃಷಿಗೆ ಏರ್ಪಾಡು ಮಾಡಿರುವರು.

ಕಾವೇರಿಯೂ ಕೊಳ್ಳಡವೂ ಹರಿಯುವ ತಗ್ಗುಗಳಲ್ಲಿ ನೆಲ್ಲು, ಜೋಳ, ಹತ್ತಿ, ರಾಗಿ, ಹೊಗೆಸೊಪ್ಪು, ಅವರೆ ಮೊದಲಾದುವನ್ನು ಕೃಷಿಮಾಡುತ್ತಾರೆ. ಇತರ ಸ್ಥಳಗಳಲ್ಲಿ ನೆಲಗಡಲೆಯೇ ಮುಖ್ಯ ಕೃಷಿ. ಈ ಜಿಲ್ಲೆ ಜಾನುವಾರುಗಳಿಗೆ ಹೆಸರುವಾಸಿಯಾಗಿದೆ. ಇಲ್ಲಿಯ ಕಾಡುಗಳಲ್ಲಿ ತೇಗು, ಚಂದಸ, ಬಿದಿರು ಸುಲಭವಾಗಿ ಬೆಳೆಯುತ್ತವೆ. ಇಲ್ಲಿಯ ಧಾತುಗಳಲ್ಲಿ ವಿಶೇಷವಾಗಿ ಹೇಳತಕ್ಕದ್ದು ಯಾವದೂ ಇಲ್ಲ. ವೈಷ್ಣವರ ನಾಮಧಾರಣೆಯ ಉಪಯೋಗಕ್ಕೆ ಬೀಳುವ ಗೋಪಿಚಂದನ ಎಂಬ ಒಂದು ಬಗೆಯ ಮಣ್ಣು ಇಲ್ಲಿ ಧಾರಾಳವಾಗಿ ಸಿಗುತ್ತದೆ. ಮುಖ್ಯವಾದ ವೃತ್ತಿ ನೇಯಿಗೆ ಮತ್ತು ಚುಟ್ಟಾ ಸುತ್ತುವುದು. ಚುಟ್ಟಾ ಸುತ್ತುವುದಕ್ಕೆ ಇಲ್ಲಿ ಬೆಳಿಸುವ ಹೊಗೆಸೊಪ್ಪು ವಿನಾ ಅದನ್ನು ಡಿಂಡಿಗಲ್ಲಿನಿಂದಲೂ ತರಿಸುತ್ತಾರೆ.

ಜನಸಂಖ್ಯೆ.—21,00,000.



TRICHINOPOLY FORT ತಿರುಚಿನಾಪಳ್ಳಿಯ ಕೋಟೆ.

ಪ್ರಧಾನ ಪುರಗಳು.—ತಿರುಚಿನಾಪಳ್ಳಿ ಮುಖ್ಯ ಪಟ್ಟಣವು ಇತಿಹಾಸದಲ್ಲಿ ಪ್ರಸಿದ್ಧವಾಗಿದೆ. 275 ಅಡಿ ಎತ್ತರದ ಅಲ್ಲಿಯ ಒಂದು ಬಂಡೆಕಲ್ಲಿನ ಮೇಲೆ ಕಟ್ಟಿದ ಒಂದು ದೇವಸ್ಥಾನವು ನೋಡಲಿಕ್ಕೆ ಬಹಳ ಆಶ್ಚರ್ಯಕರವಾಗಿದೆ. ಗುಡ್ಡದ ಬುಡದಲ್ಲಿ ಇರುವ ತೆಪ್ಪಕೊಳಂ ಎಂಬ ಹೆಸರಿನ ಸರೋವರದ ಬಳಿಯಲ್ಲಿ ಎರಡು ದೊಡ್ಡ ಮಿಶ್ಯನೆರಿಗಳ ಕೊಲೇಜುಗಳಲ್ಲಿ ಸೆಂಟ್ ಜೋಸೆಫ್ ಕೊಲೇಜು ಎಂಬುದು ಕೆಥೊಲಿಕ ಮಿಶ್ಯನೆರಿಯವರಿಂದ ಸ್ಥಾಪಿಸಲ್ಪಟ್ಟು, ಇವೆರಡರಲ್ಲಿ ದೊಡ್ಡದಾಗಿದೆ. ತಿರುಚಿನಾಪಳ್ಳಿಗೆ ಎರಡು ಮೈಲು ದೂರ ಶ್ರೀರಂಗವೆಂಬ ಸಣ್ಣ ದ್ವೀಪದಲ್ಲಿ ಹೆಸರುಗೊಂಡ ಶ್ರೀರಂಗನಾಥ ಎಂಬ ವಿಷ್ಣುದೇವಾಲಯವು ದಕ್ಷಿಣ ಹಿಂದುಸ್ಥಾನದಲ್ಲಿ ಬಹಳ ದೊಡ್ಡದಾಗಿದೆ. ಇಲ್ಲಿಂದ ಅರ್ಧ ಮೈಲು ದೂರಕ್ಕೆ ಜಂಬುಕೇಶ್ವರವೆಂಬ ಒಂದು ಶಿವಾಲಯವಿದೆ. ಕಾವೇರಿಯೂ ಅಮರಾವತಿಯೂ ಕೂಡುವ ಸ್ಥಳದಲ್ಲಿರುವ ಕರೂರು ಎಂಬ ಪಟ್ಟಣದಲ್ಲಿ ಕೀರ್ತಿಪಟ್ಟ ಇನ್ನೊಂದು ದೇವಸ್ಥಾನದಲ್ಲಿ ಪ್ರತಿಷ್ಠಿತವಾದ ಶಿವಲಿಂಗವು ಐದಡಿ ಎತ್ತರವಾಗಿದೆ. ಈ ಪಟ್ಟಣದಲ್ಲಿ ದೊಡ್ಡದೊಂದು ಕೈಗಾರಿಕೆ ಶಾಲೆ ಇದೆ. ಕರೂರು ಬಹಳ ವ್ಯಾಪಾರ ನಡೆಯುವ ಸ್ಥಳವಾಗಿದೆ.

---

೬. ಉತ್ತರ ಆರ್ಕಾಡು.

ಈ ಜಿಲ್ಲೆಯ ವಿಸ್ತಾರವು 4920 ಚದರಮೈಲು. ಪಾಲಾರುನದಿಯ ದಡದಲ್ಲಿರುವ ಆರ್ಕಾಡು ಎಂಬ ಸಣ್ಣ ಪಟ್ಟಣವು ಪೂರ್ವದಲ್ಲಿ ಬಹಳ ಹೆಸರುವಾಸಿ ಪಡೆದಿದ್ದ ಒಂದು ಪಟ್ಟಣವಾಗಿತ್ತು. ಉತ್ತರ ಆರ್ಕಾಡಿನಲ್ಲಿ ದೊಡ್ಡ ಮಲೆಗಳಲ್ಲಿ ಒಂದಾದ ಜವಾತ್‌ಮಲೆಯ ಒಂದು ಅಂಶವು ಈ ಜಿಲ್ಲೆಯ ನೈಋತ್ಯದಿಕ್ಕಿನಲ್ಲಿಯೂ ಒಂದು ಅಂಶವು ಸೇಲಂ ಜಿಲ್ಲೆಯಲ್ಲಿಯೂ ಚಾಚಿಕೊಂಡಿವೆ. ಜವಾತ್‌ಮಲೆಯ ಇಲ್ಲಿಯ ಭಾಗವು 3000 ಅಡಿ ಎತ್ತರವಿದೆ. ಇದಕ್ಕೂ ಪೂರ್ವಘಟ್ಟಕ್ಕೂ ಮಧ್ಯದಲ್ಲಿ ಪಾಲಾರುನದಿಯು ಹರಿಯುತ್ತದೆ.

ಪಾಲಾರಿನ ಉಪನದಿಯಾದ ಚೆಯ್ಯಾರು ಹೊಳೆಯು ಜವಾತ್‌ಮಲೆಯಲ್ಲಿ ಹುಟ್ಟಿ, ಈ ಜಿಲ್ಲೆಯಲ್ಲಿ ಹರಿದು, ಚೆಂಗಲ್ಪಟ್ಟು ಜಿಲ್ಲೆಯನ್ನು ದಾಟಿ, ಅಲ್ಲಿರುವ ವಾಲಾಜಬಾದು ಪಟ್ಟಣದ ಹತ್ತಿರ ಪಾಲಾರಿಗೆ ಕೂಡುತ್ತದೆ. ಚೆಯ್ಯಾರು ಮತ್ತು ಪಾಲಾರು ಇವೆರಡೂ ವರ್ಷದ ಕೆಲವು ಮಾಸಗಳಲ್ಲಿ ಬತ್ತಿಹೋಗುತ್ತ

ವಾದರೂ, ಮಳೆಗಾಲದಲ್ಲಿ ಪಾಲಾರು ಉಕ್ಕಿ ದಡಗಳ ಮೇಲೆ ಹರಿದುಹೋಗಿ ಇಕ್ಕಡೆಗಳಲ್ಲಿರುವ ಅನೇಕ ಗ್ರಾಮಗಳನ್ನು ಹಾಳುಮಾಡುತ್ತದೆ. ಈ ಎರಡು ನದಿಗಳಿಗೂ ಅಣೆಯನ್ನು ಕಟ್ಟಿ, ನೀರನ್ನು ಕಾಲುವೆಗಳ ಮೂಲಕ ಕೃಷಿಗೆ ಉಪಯೋಗಿಸುತ್ತಾರೆ.

ಈ ಜಿಲ್ಲೆಯಲ್ಲಿರುವ ಅನೇಕ ಏರಿಗಳಲ್ಲಿ ಮಾವಲತೂರು ಎಂಬ ಏರಿಯೇ ಬಹಳ ದೊಡ್ಡದು. ಇದರಲ್ಲಿ ವರ್ಷದಲ್ಲೆಲ್ಲಾ ನೀರು ಇದ್ದೇ ಇರುತ್ತದೆ. ಇದರ ದಡವು ಎರಡು ಮಲೆಗಳ ಮಧ್ಯದಲ್ಲಿದೆ. ಇವುಗಳಲ್ಲಿ ಒಂದು ಮಲೆಯಲ್ಲಿ ಅನೇಕ ಗುಹೆಗಳು ಇವೆ.

ಏರಿಗಳಲ್ಲದೆ ಈ ಜಿಲ್ಲೆಯಲ್ಲಿ ಕೃಷಿಗೆ ಉಪಯೋಗವಾಗುವ ಅನೇಕ ಬಾವಿಗಳೂ ಕೆರೆಗಳೂ ಇವೆ. ಈ ಜಿಲ್ಲೆಯ ಸಮಭೂಮಿಯು ಬಹು ಉಷ್ಣವಾಗಿದೆ. ಎತ್ತರ ಪ್ರದೇಶಗಳು ಮೈಸೂರು ಪೀಠಭೂಮಿಯಂತೆ ಚಳಿಯಾಗಿವೆ. ಜವಾತ್‌ಮಲೆಗೆ ಸಮೀಪವಾದ ಪ್ರದೇಶಗಳಲ್ಲಿ ಮಲೆಜ್ವರವು ಹಬ್ಬಿರುತ್ತದೆ. ಇಲ್ಲಿ ವರ್ಷಂಪ್ರತಿ ಸುಮಾರು 37 ಇಂಚು ವರೆಗೆ ಮಳೆ ಬೀಳುತ್ತದೆ. ನೆಲವು ಹೆಚ್ಚಾಗಿ ಫಲವತ್ತಾಗಿದೆ. ಮೇಲೆ ಹೇಳಿದ ಎರಡು ನದಿಗಳೂ ಅವುಗಳಲ್ಲಿ ತೋಡಿದ ಕಾಲಿವೆಗಳೂ ಸಾಗುವಳಿಗೆ ಉಪಯುಕ್ತವಾಗಿವೆ. ಇಲ್ಲಿಯ ಮುಖ್ಯ ಕೃಷಿಗಳಲ್ಲಿ ಕಬ್ಬು ಒಂದಾಗಿದೆ. ಅದಲ್ಲದೆ ನೆಲಗಡಲೆ, ರಾಗಿ, ಎಳ್ಳು ಮೊದಲಾದುವು ಧಾರಾಳವಾಗಿ ಬೆಳೆಯುತ್ತವೆ. ಜವಾತ್‌ಮಲೆಯಲ್ಲಿ ಬಂಗಿಯ ಬೆಳವಣಿಗೆ ಇದೆ. ಗುಡಿಯಾಟ್ಲಂ, ವೇಲೂರು ಎಂಬೀ ಎರಡು ಪಟ್ಟಣಗಳಲ್ಲಿ ಬೆಳಿಸುವ ಮಾವು ಶ್ರೇಷ್ಠತರದ್ದೆಂದು ಹೇಳುತ್ತಾರೆ.

ಜವಾತ್‌ಮಲೆಯ ದೊಡ್ಡ ಕಾಡುಗಳಲ್ಲಿ ಚಂದನ, ಕರಿಮರ, ತೇಗು ಮೊದಲಾದ ಬೆಲೆ ಬಾಳುವ ಮರಗಳು ಅನೇಕವಾಗಿವೆ. ಗುಡಿಯಾಟ್ಲಂ ಎಂಬುದು ಆಡುಗಳಿಗೂ, ಆರಣಿ ಎಂಬುದು ನೇಯಿಗೆಗೂ, ವಾಂತಿವಾಸ ಎಂಬುದು ಹುಲ್ಲುಚಾಪೆಗೂ ಹೆಸರುವಾಸಿಯಾಗಿವೆ. ಈ ಜಿಲ್ಲೆಯಲ್ಲಿ ತೊಗಲಿನ ವ್ಯಾಪಾರವು ಹೇರಳವಾಗಿದೆ. ತೊಗಲಿನ ವ್ಯಾಪಾರದ ಮುಖ್ಯ ಸ್ಥಾನವು ಗುಡಿಯಾಟ್ಲಂ ಎಂಬುದು. ಈ ವ್ಯಾಪಾರವು ತಮಿಳು ಮಾತನ್ನು ಆಡುವ ಮಹಮ್ಮದೀಯರ ಕೈಯಲ್ಲಿದೆ.

ಜನಸಂಖ್ಯೆ.—4,45,000.

ಮುಖ್ಯ ಪಟ್ಟಣಗಳು.—ಈ ಜಿಲ್ಲೆಯ ಮುಖ್ಯ ಪಟ್ಟಣವು ವೆಲ್ಲೂರು

೨. ಚಿತ್ತೂರು ಜಿಲ್ಲೆ.

ಈ ಜಿಲ್ಲೆಯ ವಿಸ್ತಾರವು 5670 ಚದರಮೈಲು. ಪೂರ್ವಘಟ್ಟಗಳ ಒಂದಂಶವಾದ ನಗರಿಮಲೆಯು ಈ ಜಿಲ್ಲೆಯಲ್ಲಿದೆ. ಆ ಮಲೆಯ ಎತ್ತರವು 2000 ಅಡಿ. ಈ ಸಂಸ್ಥಾನದಲ್ಲಿ ಹೆಸರುವಾಸಿ ಪಡೆದ ತಿರುಪತಿಮಲೆಯು ಸಹ ಪೂರ್ವಘಟ್ಟಗಳ ಒಂದು ಭಾಗವಾಗಿದೆ. ಈ ಮಲೆಗಳ ಮಧ್ಯವಿರುವ ಹಳ್ಳ ಪ್ರದೇಶದಲ್ಲಿ ಕಡಪೆಗೆ ಹೋಗುವ ಕಿರುದಾರಿಯಿದೆ. ಮದ್ರಾಸಿನಿಂದ ಬೊಂಬಯಿಗೆ ಹೋಗುವ ರೈಲುರಸ್ತೆಯು ಈ ಸಂದಿನಲ್ಲಿ ಹೋಗುತ್ತದೆ. ಈ ಜಿಲ್ಲೆಯಿಂದ ಮೈಸೂರು ಪೀಠಭೂಮಿಗೆ ಹೋಗುವುದಕ್ಕೆ ಈ ರೀತಿಯ ಕಿರುದಾರಿಗಳು ಅನೇಕವಿವೆ. ಈ ಜಿಲ್ಲೆಯಲ್ಲಿ ನೀರಿಗೆ ಬಹಳ ತತ್ವಾರ. ಇಲ್ಲಿಯ ಕೆಲವು ಪ್ರದೇಶಗಳಲ್ಲಿ ವರ್ಷಕ್ಕೆ 40 ಇಂಚು, ಇನ್ನು ಕೆಲವು ಕಡೆ 33 ಇಂಚು ಮಾತ್ರ ಮಳೆ ಸುರಿಯುತ್ತದೆ. ಜೂನ್ ಜುಲಾಯಿ ಮಾಸಗಳಲ್ಲಿ ಪೀಠಭೂಮಿಯಲ್ಲಿಯೂ, ಒಕ್ಟೋಬರ್ ನವಂಬರ್ ಮಾಸಗಳಲ್ಲಿ ಸಮಭೂಮಿಯಲ್ಲಿಯೂ ಮಳೆ ಬೀಳುತ್ತದೆ.

ಕೃಷಿಯೂ ಕೈಗಾರಿಕೆಯೂ.—ನೆಲ್ಲು, ರಾಗಿ, ಕಂಬು, ಇವೇ ಮುಖ್ಯವಾದ ಬೆಳೆಗಳು. ಕೃಷಿಯು ಹೆಚ್ಚಾಗಿ ಬಾವಿಗಳ ಮೂಲಕವಾಗಿಯೇ ನಡೆಯುತ್ತದೆ. ತೋಟಗಳಲ್ಲಿ ಕಬ್ಬನ್ನು ಅಧಿಕವಾಗಿ ಬೆಳಿಸುತ್ತಾರೆ. ಮಾವು ಮತ್ತು ಕಿತ್ತಳೆ, ಈ ಜಿಲ್ಲೆಯಲ್ಲಿ ಸಮೃದ್ಧಿಯಾಗಿ ಬೆಳೆಯುತ್ತವೆ. ಚಿತ್ತೂರೂ ಚಂದ್ರಗಿರಿಯೂ ಮಾವಿನಹಣ್ಣಿಗೆ, ಕರ್ವಟ್ಪ ನಗರವು ಕಿತ್ತಳೆಹಣ್ಣಿಗೆ, ಹೆಸರುವಾಸಿಯಾಗಿವೆ. ಪುಂಗನೂರುದನ ಎಂಬದಾಗಿ ಪ್ರಖ್ಯಾತಿಪಟ್ಟ ಒಂದು ಜಾತಿಯ ದನವನ್ನು ಈ ಜಿಲ್ಲೆಯಲ್ಲಿ ಸಾಕುತ್ತಾರೆ. ಚಂದ್ರಗಿರಿಯಲ್ಲಿಯೂ ಪಲವನೇರಿಯಲ್ಲಿಯೂ ವಿಶಾಲವಾದ ಕಾಡುಗಳು ಇವೆ. ನಾರಾಯಣವನಂ ಎಂಬ ಸ್ಥಳದಲ್ಲಿ ನೇಯಿಗೆ ಕೆಲಸವೂ ತಿರುಪತಿಕ್ಷೇತ್ರದಲ್ಲಿ ಕೆಂಪು ಛಂದನದ ನೂತನವಾದ ಗೊಂಬೆಯ ಕೆಲಸವೂ ಜರಗುತ್ತವೆ.

ಜನಸಂಖ್ಯೆ.—12,40,000. ಮುಖ್ಯಭಾಷೆ ತೆಲುಗು.

ಮುಖ್ಯ ಪಟ್ಟಣಗಳು.—ಜಿಲ್ಲೆಯ ಮುಖ್ಯ ಪಟ್ಟಣವಾದ ಚಿತ್ತೂರು ಬಹಳ ಸಣ್ಣ ಪಟ್ಟಣ. ಜಿಲ್ಲೆಯ ಕಲೆಕ್ಟರರೂ ಜಡ್ಜಿಯೂ ಇರುವುದು ಇಲ್ಲಿಯೇ. ಆರೋಗ್ಯಕ್ಕೆ ಹೆಸರುಗೊಂಡ ಊರು ಮದನಪಳ್ಳಿ; ಇದು, ಸಮುದ್ರಮಟ್ಟದಿಂದ 2250 ಅಡಿ ಎತ್ತರವಾಗಿದೆ. ಕ್ಷಯರೋಗಿಗಳ ಚಿಕಿತ್ಸೆಗಾಗಿ

ಇಲ್ಲಿ ಒಂದು ಆಸ್ಪತ್ರೆಯನ್ನು ಕಟ್ಟಿಸಿರುತ್ತಾರೆ. ರೈಲು ಆಫೀಸಿನಿಂದ ಏಳು ಮೈಲು ದೂರವಿರುವ ಈ ಸ್ಥಳದಲ್ಲಿ ವ್ಯಾಪಾರವು ಚೆನ್ನಾಗಿ ನಡೆಯುತ್ತದೆ. ಇದರ ಹಾಗೆ ಆರೋಗ್ಯಕರವಾದ ತಂಪು ಹವೆಯುಳ್ಳ ಬೇರೊಂದು ಪಟ್ಟಣವು ಪಲವನೇರಿ. ವಾಯಲ್ಪಾಡಿ ಎಂಬುದು ಕಬ್ಬಿನ ಕೃಷಿಗಾಗಿ ಹೆಸರುಗೊಂಡ ಸ್ಥಳ. ಈ ಜಿಲ್ಲೆಯಲ್ಲಿ ಅನೇಕ ಪುಣ್ಯಸ್ಥಳಗಳೂ ಇವೆ. ಇವುಗಳಲ್ಲಿ ಮುಖ್ಯ ವಾದದ್ದು ತಿರುಪತಿ. ಇದು ದಕ್ಷಿಣ ಹಿಂದುಸ್ಥಾನದ ಪುಣ್ಯಕ್ಷೇತ್ರಗಳಲ್ಲೆಲ್ಲಾ ಅತ್ಯಂತ ಐಶ್ವರ್ಯವುಳ್ಳದ್ದಾಗಿದೆ. ಕಾಳಹಸ್ತಿ, ತಿರುತ್ತಣಿಗ ಎಂಬೀ ಎರಡು ಪಟ್ಟಣಗಳಲ್ಲಿ ಒಂದೊಂದು ಶಿವಕ್ಷೇತ್ರವಿದೆ. ಕಾಳಹಸ್ತಿಗೆ ದಕ್ಷಿಣ ಕೈಲಾಸ ವೆಂಬ ಹೆಸರು ಸಲ್ಲುತ್ತದೆ.

5. ದಕ್ಷಿಣ ಪೀಠಭೂಮಿಯಲ್ಲಿರುವ ಜಿಲ್ಲೆಗಳು.

೧. ಕಡಪಾ ೨. ಕರ್ನೂಲು ೩. ಬಳ್ಳಾರಿ ೪. ಅನಂತಪುರ.

ದಕ್ಷಿಣ ಪೀಠಭೂಮಿಯಲ್ಲಿಯ ಕಡಪ, ಕರ್ನೂಲು, ಬಳ್ಳಾರಿ, ಅನಂತ ಪುರ ಎಂಬ ಜಿಲ್ಲೆಗಳು ಹಿಂದೆ ಒಂದು ಕಾಲದಲ್ಲಿ ಮೈಸೂರು ರಾಜ್ಯಕ್ಕೆ ಸೇರಿ ದ್ದವುಗಳು. ಹಿಂದಕ್ಕೆ ಆ ರಾಜ್ಯದೊಡನೆ ನಡೆದ ಕೆಲವು ಯುದ್ಧಗಳ ದೆಸೆ ಯಿಂದ ಈ ಜಿಲ್ಲೆಗಳು ಹೈದರಾಬಾದು ರಾಜ್ಯಕ್ಕೆ ಸೇರಿ, ಕೊನೆಗೆ ಇಂಗ್ಲಿಷರ ವಶವಾದವು. ಆದಕಾರಣ ಇವುಗಳಿಗೆ ಸೀಡೆಡ್ ಡಿಸ್ಟ್ರಿಕ್ಟ್ಸ ಎಂದರೆ ಇಂಗ್ಲಿಷ ರಿಗೆ ಕೊಟ್ಟ ಜಿಲ್ಲೆಗಳು ಎಂದು ಹೆಸರು ಬಂತು. ಇಲ್ಲಿ ಇರುವ ಮಲೆಗಳ ಮಧ್ಯದಲ್ಲಿ ನದಿಗಳು ಹರಿಯುತ್ತವೆ. ಈ ಜಿಲ್ಲೆಗಳ ನೆಲವು ಒಂದೇ ತೆರ ನಾಗಿದೆ. ಶೀತೋಷ್ಣಸ್ಥಿತಿಯೂ ಒಂದೇಯಾಗಿದೆ. ಬೇಸಿಗೆಯಲ್ಲಿ ಉಷ್ಣವು ಅಧಿಕ; ಶೀತಕಾಲದಲ್ಲಿ ಚಳಿ ಹೆಚ್ಚು. ಇಲ್ಲಿ ಮಳೆಯು ಸಾಕಷ್ಟು ಇಲ್ಲ. ನಂಜ ನೆಲವು ಹೆಚ್ಚು ಇದ್ದದ್ದರಿಂದ ಬತ್ತದ ಸಾಗುವಳಿ ಬಹಳ ಕಡಮೆ. ರಾಗಿ, ಜೋಳ, ಹತ್ತಿ, ಇವೇ ಚೆನ್ನಾಗಿ ಬೆಳಿಯುತ್ತವೆ. ಕೈಗಾರಿಕೆಯೂ ವ್ಯಾಪಾರವೂ ಹೇಳತಕ್ಕ ಹಾಗಿಲ್ಲ. ಜನಸಂಖ್ಯೆ ಬಹಳ ಕಡಮೆ. ಈ ನಾಲ್ಕು ಜಿಲ್ಲೆಗಳೂ ಎಲ್ಲಾ ವಿಧದಲ್ಲಿಯೂ ಒಂದೇ ರೀತಿಯಾಗಿವೆ.

ಮಲೆಗಳು.— ಮೂಡುಕಡೆಯಲ್ಲಿ ಪೂರ್ವಘಟ್ಟಗಳಿಗೆ ಸೇರಿದ ತೊಡರು ಮಲೆ ಕರ್ನೂಲು ಕಡಪೆ ಜಿಲ್ಲೆಗಳಲ್ಲಿ ವ್ಯಾಪಿಸುತ್ತದೆ. ಈ ಮಲೆಗೆ ಅಲ್ಲಲ್ಲಿ

ಬೇರೆ ಬೇರೆ ಹೆಸರುಗಳಿವೆ. ಕರ್ನೂಲಿನಲ್ಲಿರುವ ಈ ಮಲೆಯ ತುಂಡನ್ನು ವೇಲ್ಕೊಂಡ ಎಂದೂ ಇನ್ನೊಂದನ್ನು ನಲ್ಲಮಲೆ ಎಂದೂ ಕರೆಯುತ್ತಾರೆ. ವೇಲ್ಕೊಂಡಕ್ಕೂ ನಲ್ಲಮಲೆಗೂ ಮಧ್ಯದ ತಗ್ಗುಭೂಮಿಯನ್ನು ಚೆನ್ನಾಗಿ ನೋಡೋಣ. ಕಡಪೆ ಜಿಲ್ಲೆಯಲ್ಲಿ ವೇಲ್ಕೊಂಡಮಲೆಗೆ ತೆಂಕುಭಾಗದಲ್ಲಿ ಪಾಲ್ಕೊಂಡ ಎಂಬ ಹೆಸರುಳ್ಳ ಮಲೆ ಇದೆ. ಇಂಥ ದೊಡ್ಡ ಮಲೆಗಳು ಬಳ್ಳಾರಿ ಅನಂತಪುರ ಜಿಲ್ಲೆಗಳಲ್ಲಿ ಇಲ್ಲ. ಆದರೆ ಅಲ್ಲಲ್ಲಿ ದುರ್ಗಗಳೆಂಬ ಹೆಸರಿರುವ ಕೆಲವು ಸಣ್ಣ ಮಲೆಗಳು ಇವೆ. ಬಳ್ಳಾರಿ ಜಿಲ್ಲೆಯಲ್ಲಿ ಇಂಥ ಸಣ್ಣ ಮಲೆಗಳ ನಡುವೆ ಸಂಡೂರು ಎಂಬ ಒಂದು ದೇಶೀಯ ರಾಜ್ಯವಿದೆ. ಸಂಡೂರಿಗೆ ಬಡಗುದಿಕ್ಕಿನಲ್ಲಿ ತುಂಗಭದ್ರಾನದಿಯ ಹತ್ತಿರ ಕೆಲವು ಸಣ್ಣ ಮಲೆಗಳು ಇವೆ. ಈ ಮಲೆನಾಡಿನಲ್ಲಿಯೇ ಹಿಂದೆ ಅತ್ಯಂತ ಪ್ರಖ್ಯಾತವಾದ ವಿಜಯನಗರ ಸಾಮ್ರಾಜ್ಯದ ಮುಖ್ಯ ಪಟ್ಟಣವು ಇತ್ತು. ಅನಂತಪುರದಲ್ಲಿರುವ ಪೆನುಕೊಂಡ ಎಂಬ ಮಲೆಯು ಸುಮಾರು 3000 ಅಡಿ ಎತ್ತರವಾಗಿದೆ.

ನದಿಗಳು.—ಉತ್ತರಪಿನಾಕಿನಿ ಎಂಬ ಬಡಗು ಪೆನ್ನಾರು ಹೊಳೆಯು ಅನಂತಪುರ ಕಡಪ ಜಿಲ್ಲೆಗಳಲ್ಲಿ ಹರಿಯುತ್ತದೆ. ಈ ಜಿಲ್ಲೆಗಳಲ್ಲಿ ಬೀಳುವ ಮಳೆಯ ನೀರು ಈ ನದಿಗೆ ಬಂದು ಕೂಡುತ್ತದೆ. ಪಿನಾಕಿನಿಯ ಉಪನದಿಯಾಗಿರುವ ಚಿತ್ರಾವತಿ ಕೂಡ ಈ ಜಿಲ್ಲೆಗಳಲ್ಲಿ ಹರಿಯುತ್ತದೆ; ಇದು ಕಡಪಾ ಜಿಲ್ಲೆಯ ಬಡಗು ಭಾಗದಲ್ಲಿ ಪೆನ್ನೆಯಾರಿನಲ್ಲಿ ಬಂದು ಸೇರುತ್ತದೆ. ತುಂಗಭದ್ರಾ ನದಿಯೂ ಅದರ ಉಪನದಿಯಾದ ವಿಗರಿಯೂ ಬಳ್ಳಾರಿ ಜಿಲ್ಲೆಯಲ್ಲಿ ಹರಿಯುತ್ತವೆ. ತುಂಗಭದ್ರಾನದಿಯು ವಿಜಯನಗರ ಸಮೀಪದ ಮಲೆನಾಡುಗಳಲ್ಲಿ ಹರಿಯುವಾಗ ಬಹಳ ರಮ್ಯವಾಗಿ ಕಾಣುತ್ತದೆ. ತುಂಗಭದ್ರೆಯು ಬಳ್ಳಾರಿ ಜಿಲ್ಲೆಯಿಂದ ಕರ್ನೂಲು ಜಿಲ್ಲೆಯನ್ನು ಪ್ರವೇಶಿಸಿ, ಕರ್ನೂಲು ಪಟ್ಟಣದ ಬಳಿಯಲ್ಲಿ ಕೃಷ್ಣಾನದಿಗೆ ಸಂಗಮವಾಗುತ್ತದೆ. ಗುಂಡಲಕಾಮಾ ಎಂಬ ನದಿಯು ಕರ್ನೂಲು ಜಿಲ್ಲೆಯಲ್ಲಿರುವ ಮಲೆಗಳ ಮಧ್ಯದಲ್ಲಿರುವ ತಗ್ಗುಪ್ರದೇಶವಲ್ಲಿ ಹರಿದು, ಗುಂಟೂರು ಜಿಲ್ಲೆಯನ್ನು ಪ್ರವೇಶಿಸಿ, ಪೂರ್ವಕ್ಕೆ ತೊಡರುಮಲೆಯನ್ನು ಕೊರೆದುಕೊಂಡು ಹೋಗುತ್ತದೆ. ಅಲ್ಲಿ ಈ ಹೊಳೆಗೆ 57 ಅಡಿ ಎತ್ತರದ ಒಂದು ಅಣೆಯನ್ನು ಕಟ್ಟಿ ದೊಡ್ಡದೊಂದು ಏರಿಯನ್ನು ಮಾಡಿರುತ್ತಾರೆ. ಇದೇ ಪ್ರಸಿದ್ಧವಾದ ಕಂಬಂ ಎಂಬ ಏರಿ.

ಶೀತೋಷ್ಣಸ್ಥಿತಿ.—ಈ ಜಿಲ್ಲೆಗಳಲ್ಲಿ ಮೂರು ಇಲ್ಲವೆ ನಾಲ್ಕು ತಿಂಗಳು



TIPPU'S ROCK, BELLARY ಟಿಪ್ಪುವಿನ ಬಂಡೆ, ಬಳ್ಳಾರಿ.

ಉಷ್ಣವು ಸಹಿಸಲಾರದಷ್ಟು ಕಠಿನವಾಗಿದೆ. ಕಡಪೆ ಜಿಲ್ಲೆಯಲ್ಲಿ ಅಂತು ಬೇಸಿಗೆಯ ಉಷ್ಣವು ದುಸ್ಸಹವಾಗಿದೆ. ಇತರ ತಿಂಗಳುಗಳಲ್ಲಿ ಹವೆಯು ಆರೋಗ್ಯಕರವಾಗಿದೆ. ಮಲೆನಾಡು ಬಹಳ ಶೀತವುಳ್ಳದ್ದು. ಮಲೆಗಳ ಬುಡ

ದಲ್ಲಿಯೂ ಮೈದಾನದಲ್ಲಿಯೂ ಜ್ವರವು ಹರಡಿರುತ್ತದೆ. ಈ ಜಿಲ್ಲೆಗಳಲ್ಲಿ ಕಾಲಕಾಲಕ್ಕೆ ಮಳೆ ಬಾರದೆ ಯಾವಾಗಲೂ ನೀರಿನ ಕೊರತೆ ತಪ್ಪುವುದಿಲ್ಲ. ಮಳೆ ಬಂತೆಂದರೆ ಅತಿರೇಕವಾಗಿ ಬಂದು, ರೈಲು ಸೇತುವೆಗಳು ಕುಸಿದು ಬಿದ್ದು, ಗ್ರಾಮಗಳು ಮುಳುಗಿ ನಾಶವಾಗಿ ಹೋಗುವುದೂ ಉಂಟು. ಈ ಜಿಲ್ಲೆಗಳಲ್ಲಿ ಅನೇಕ ಏರಿಗಳಿವೆ. ಕಂಬಂ ಏರಿಯನ್ನು ಕುರಿತು ಮೊದಲೇ ಹೇಳಿದೆ. ನದಿಗಳ ನೀರನ್ನು ತೋಡುಗಳ ಮೂಲಕ ಕೃಷಿಗೆ ಉಪಯೋಗಿಸುತ್ತಾರೆ. ಬಹಳ ಆಳಕ್ಕೆ ತೋಡಿದರೂ ಒಳ್ಳೇ ಒರತೆಯು ದೊರೆಯುವುದಿಲ್ಲ. ಅನೇಕ ಸ್ಥಳಗಳಲ್ಲಿ ಜನರು ಉಷ್ಣಕಾಲದಲ್ಲಿ ಕುಡಿಯುವುದಕ್ಕೆ ನೀರಿಲ್ಲದೆ ಬಹಳ ಸಂಕಷ್ಟಪಡುತ್ತಾರೆ. ನೆಲವು ಫಲವತ್ತಾದ್ದಲ್ಲ. ಅನೇಕ ಕಡೆಗಳಲ್ಲಿ ಮಣ್ಣೆಲ್ಲಾ ಕಪ್ಪುಮಣ್ಣು. ಇದು ತೇವವಿದ್ದು ಮಳೆ ನೀರನ್ನು ಹೀರಿಕೊಳ್ಳುವುದಿಲ್ಲ. ಇಂಥಾ ನೆಲದಲ್ಲಿ ಮಳೆ ಚೆನ್ನಾಗಿ ಹೊಯ್ಯದಿದ್ದರೂ ಕಂಬು, ಜೋಳ, ರಾಗಿ, ಹುರುಳಿ, ಮೊದಲಾದ ಪುಂಜ ಧಾನ್ಯಗಳು ಉಷ್ಣಕಾಲದಲ್ಲಾದರೂ ಚೆನ್ನಾಗಿ ಬೆಳೆಯುತ್ತವೆ. ಹತ್ತಿಯು ಅಧಿಕವಾಗಿ ಬೆಳೆಯುತ್ತದೆ. ನೀರಿನ ಆಶ್ರಯವಿರುವ ಕಡೆಗಳಲ್ಲಿ ನೆಲ್ಲು, ಕಬ್ಬು, ನೀಲಿ, ಹೊಗೆಸೊಪ್ಪು, ಇವನ್ನು ಬೆಳಿಸುತ್ತಾರೆ. ಕಡಪಾ ಜಿಲ್ಲೆಯು ನೀಲಿಯ ಕೃಷಿಗೆ ಹೆಸರುಗೊಂಡದೆ. ತುಂಗಭದ್ರಾನದಿಯು ಹರಿಯುವ ಕಡೆಗಳಲ್ಲಿ ಕಬ್ಬನ್ನು ಧಾರಾಳವಾಗಿ ಬೆಳಿಸುತ್ತಾರೆ. ಕಡಪೆ ಜಿಲ್ಲೆಯ ಪಿನಾಕಿನಿ ತೀರವೂ ಕರ್ನೂಲಿನಲ್ಲಿಯ ತುಂಗಭದ್ರಾ ತೀರವೂ ಹತ್ತಿಗೆ ಪ್ರಖ್ಯಾತಿಪಟ್ಟ ಪ್ರದೇಶಗಳು. ಈ ಜಿಲ್ಲೆಯಲ್ಲಿ ಕಾಲ್ನಡೆಗಳನ್ನು ಹೆಚ್ಚಾಗಿ ಸಾಕುವುದಿಲ್ಲ. ಕಡಪ ಕರ್ನೂಲು ಜಿಲ್ಲೆಗಳಿಗೆ ನೆಲ್ಲೂರು ಗುಂಟೂರು ಜಿಲ್ಲೆಗಳಿಂದಲೂ, ಬಳ್ಳಾರಿ ಅನಂತಪುರ ಜಿಲ್ಲೆಗಳಿಗೆ ಮೈಸೂರಿನಿಂದಲೂ ದನಕರುಗಳನ್ನು ತರಿಸುತ್ತಾರೆ.

ಕರ್ನೂಲು ಜಿಲ್ಲೆಯಲ್ಲಿರುವ ನಲ್ಲಮಲೆಯಲ್ಲಿ ಕಾಡುಗಳಿವೆ. ಅಲ್ಲಿ ತೇಗು ಮೊದಲಾದ ಹಲವು ವಿಧದ ಮರಗಳೂ ಬೆಳೆಯುತ್ತವೆ. ಗಂಧದ ಮರವು ಕೆಲವು ಕಡೆ ಇದೆ. ಅನಂತಪುರ ಜಿಲ್ಲೆಯಲ್ಲಿರುವ ಚಿನ್ನದ ಗನಿಗಳನ್ನೂ ಕಡಪ ಜಿಲ್ಲೆಯಲ್ಲಿರುವ ಕಡಪಾ ಕಲ್ಲುಗಳನ್ನೂ ಕುರಿತು ಈ ಮೊದಲೇ ಹೇಳಿದೆ. ಕರ್ನೂಲಿನಲ್ಲಿ ಹಿಂದೆ ವಜ್ರದ ಗನಿಗಳು ಇದ್ದವು. ನೇಯಿಗೆಯು ಮುಖ್ಯ ವೃತ್ತಿ. ಚೆನ್ನಾಗಿ ಬಾಳಿಕೆ ಬರುವ ಒಂದು ತರದ ದಪ್ಪ ಬಟ್ಟೆಯನ್ನು ಅಧಿಕವಾಗಿ ನೇಯುತ್ತಾರೆ. ಕಡಪೆಯಲ್ಲಿರುವ ಪುಲ್ಲಂಪೇಟೆಯಲ್ಲಿ ಒಳ್ಳೇ

ಜರಿವಸ್ತ್ರಗಳ ನೇಯಿಗೆಯು ನಡೆಯುತ್ತದೆ. ಅನಂತಪುರ ಜಿಲ್ಲೆಯ ಧರ್ಮವರದಲ್ಲಿ ಪಟ್ಟೆವಸ್ತ್ರವನ್ನು ನೇಯುತ್ತಾರೆ. ಅನೇಕ ಸ್ಥಳಗಳಲ್ಲಿ ಇತರ ವಿಧದ ನೇಯಿಗೆ ಇವೆ. ಇವುಗಳಲ್ಲಿ ಆದವಾನಿ ಎಂಬಲ್ಲಿ ತಯಾರಾಗುವ ಬಟ್ಟೆಯೇ ವಿಶೇಷ ತರದ್ದು. ಕರ್ನೂಲು ಜಿಲ್ಲೆಯ ನಂದಿಕೋಲು ಗ್ರಾಮದಲ್ಲಿಯೂ ಬಳ್ಳಾರಿಯ ಅನೇಕ ಸ್ಥಳಗಳಲ್ಲಿಯೂ ಕಂಬಳಿಗಳನ್ನು ನೇಯುತ್ತಾರೆ. ಹತ್ತಿಯು ವಿಶೇಷವಾಗಿ ಬೆಳೆಯುವುದರಿಂದ ಅದನ್ನು ಶುದ್ಧಮಾಡಿ ಒತ್ತಿ ಕಟ್ಟುವ ಯಂತ್ರಗಳು ನಂದಿಯಾಲ ಮೊದಲಾದ ಸ್ಥಳಗಳಲ್ಲಿವೆ.

ಪಟ್ಟಣಗಳು.—(1) ಕಡಪೆ ಜಿಲ್ಲೆಯ ಮುಖ್ಯ ಪಟ್ಟಣವು ಕಡಪೆ. ಇದು ಬಡಗು ಪೆಣ್ಣಾರಿನಿಂದ ಸ್ವಲ್ಪ ದೂರದಲ್ಲಿದೆ. ಸುತ್ತಲು ಬಳಸಿಕೊಂಡಿರುವ ಮೂರು ಪರ್ವತಗಳ ನಡುವಣ ಒಂದು ತಗ್ಗುಭೂಮಿಯಲ್ಲಿ ಕಡಪಾ ಪಟ್ಟಣವು ಇರುವುದರಿಂದ ಅಲ್ಲಿ ಜ್ವರ ಬಾಧೆ ತಪ್ಪುವುದಿಲ್ಲ. ಜಿಲ್ಲೆಯ ಮುಖ್ಯ ಕಚೇರಿಗಳನ್ನು ಬೇರೊಂದು ಸ್ಥಳಕ್ಕೆ ವರ್ಗಾಯಿಸುವುದಕ್ಕೆ ಯೋಗ್ಯವಾದ ಬೇರೆ ಊರುಗಳೂ ಇಲ್ಲ. ಇತ್ತಲಾಗೆ ಕಡಪೆಯಲ್ಲಿ ಒಳ್ಳೇ ನೀರಿನ ಸೌಕರ್ಯಗಳನ್ನು ಮಾಡಿರುವುದರಿಂದ ಜ್ವರವು ಕೊಂಚಮಟ್ಟಿಗೆ ಕಡಮೆಯಾಗಿದೆ. ಕಡಪೆಯೇ ಈಗಲೂ ಮುಖ್ಯ ಪಟ್ಟಣವಾಗಿದೆ. ಜಮ್ಮಲಮಡಗು ಎಂಬ ಪಟ್ಟಣವು ಹಿಂದೆ ಹೇಳಿದ ಬಡಗು ಪೆಣ್ಣೆಯಾರಿಗೆ ಸಮೀಪವಿದ್ದ ಪ್ರಸಿದ್ಧ ವ್ಯಾಪಾರಸ್ಥಳವಾಗಿದೆ. ಇಲ್ಲಿ ತುಪ್ಪ, ಹತ್ತಿ, ನೂಲು ಮೊದಲಾದವು ಧಾರಾಳವಾಗಿ ದೊರೆಯುತ್ತವೆ. (2) ಕರ್ನೂಲ್ ಜಿಲ್ಲೆಯ ಮುಖ್ಯ ಪಟ್ಟಣವು ಕರ್ನೂಲು. ಇದು ತುಂಗಭದ್ರೆಯು ಕೃಷ್ಣಾನದಿಗೆ ಸಂಗಮವಾಗುವ ಸ್ಥಳದಲ್ಲಿದ್ದು, ಆರೋಗ್ಯಕರವಾಗಿದೆ. ಕಡಪೆ ಕರ್ನೂಲು ಕಾಲುವೆಯು ಈ ಜಿಲ್ಲೆಯಲ್ಲಿ ಹರಿಯುತ್ತದೆ. ಇದರಿಂದ ಈ ಪಟ್ಟಣಕ್ಕೆ ನಳಿಗೆಯ ಮೂಲಕವಾಗಿ ಒಳ್ಳೇ ನೀರನ್ನು ತರಿಸಿರುತ್ತಾರೆ. ಬಂಗನಪಳ್ಳಿ ಎಂಬ ದೇಶೀಯ ರಾಜ್ಯವು ಈ ಜಿಲ್ಲೆಯಲ್ಲಿದೆ. ನಂದಿಯಾಲವು ಹತ್ತಿಯ ಮತ್ತು ಧಾನ್ಯಗಳ ಸಾಧಾರಣ ವ್ಯಾಪಾರ ನಡೆಯುವ ಸ್ಥಳವಾಗಿದೆ. ಇಲ್ಲಿ ಅರಗಿನಿಂದ ತಯಾರಾದ ಆಟದ ಸಾಮಾನುಗಳು ದೊರೆಯುತ್ತವೆ. ಪತ್ತಿಕೊಂಡ ಎಂಬದು ಸರ್ ಥೋಮಸ್ ಮನ್ರೊ ಎಂಬವನ ಸಮಾಧಿಸ್ಥಳ. ಈ ಸಂಸ್ಥಾನದಲ್ಲಿ ಮೊದಲು ಹಲವು ಹುದ್ದೆಗಳಲ್ಲಿ ಕೆಲಸ ನಡಿಸಿ, ರೈತರಿಗೆ ಬಹಳ ಉಪಕಾರವನ್ನು ಮಾಡಿ, ರೈತರ ತಂದೆ ಎಂದು ಹೆಸರುವಾಸಿ ಪಡೆದ ಆ ಮನ್ರೊ ದೊರೆಯ ಹೆಸರಿನಲ್ಲಿ ಒಂದು ಕೊಳ

ಭವ್ಯವಾದ ಕೋಟೆ ಇದೆ. ಬಳ್ಳಾರಿಗೆ ಎರಡನೇದಾದ ಹೊಸಪೇಟೆಯು ಬೆಲ್ಲಕ್ಕಾಗಿ ಪ್ರಸಿದ್ಧವಾದ ವ್ಯಾಪಾರಸ್ಥಳ. ಈ ಪಟ್ಟಣದ ಸಮೀಪದಲ್ಲಿ ತುಂಗಭದ್ರಾ ನದಿತೀರದಲ್ಲಿ ಹಂಪಿ ಎಂಬ ಒಂದು ಗ್ರಾಮವಿದೆ. ಇತಿಹಾಸಪ್ರಸಿದ್ಧವಾದ ವಿಜಯನಗರ ಸಾಮ್ರಾಜ್ಯದ ಮುಖ್ಯ ಪಟ್ಟಣವಾಗಿಯೂ ಪೂರ್ವಕಾಲದಲ್ಲಿ ಒಂಭತ್ತು ಚದರಮೈಲು ವಿಸ್ತೀರ್ಣವಾಗಿಯೂ ಇದ್ದ ಊರು ಹಂಪಿ ಬಳಿಯಲ್ಲಿ ಇತ್ತು. ಹಾಳುಬಿದ್ದ ಕೋಟೆಕೊತ್ತಲಗಳು, ಗುಡಿದೇಗುಲಗಳು, ಮನೆಮಠಗಳು, ಈಗಲೂ ಈ ಸ್ಥಳದಲ್ಲಿ ವಿಸ್ಮಯವನ್ನು ಉಂಟುಮಾಡುತ್ತವೆ. ಆದವಾನಿ ಎಂಬದು ತುಂಗಭದ್ರಾ ಕೃಷ್ಣಾ ನದಿಗಳ ಮಧ್ಯದಲ್ಲಿ ನಿಂತಿರುವುದರಿಂದ ಅತಿ ಫಲವತ್ತಾಗಿದ್ದು, ಬಣ್ಣಗಾರರ ಕೆಲಸಕ್ಕೆ ಬಹಳ ಪ್ರಸಿದ್ಧವಾಗಿದೆ. ಇದರ ಸುತ್ತಲು ಹತ್ತಿಯ ಬೆಳೆಯು ವಿಶೇಷವಾಗಿ ನಡೆಯುವುದರಿಂದ, ಆ ಹತ್ತಿಯನ್ನು ಸರಿಗೊಳಿಸಿ ಒತ್ತಿ ಕಟ್ಟುವ ಯಂತ್ರಗಳು ಈ ಪಟ್ಟಣದಲ್ಲಿವೆ. (4) ಅನಂತಪುರ ಜಿಲ್ಲೆಗೆ ಅನಂತಪುರವೇ ಮುಖ್ಯ ಪಟ್ಟಣವು. ಅನಂತಪುರವನ್ನು ಒಂದು ಪಟ್ಟಣವನ್ನಾಗಿ ಮಾಡಿದ ಸರ್ ಥೋಮಸ್ ಮನ್ರೊ ಎಂಬಾತನ ಕಚೇರಿಸ್ಥಳವನ್ನು ಈಗಲೂ ಇಲ್ಲಿ ಕಾಣಬಹುದು. ಗುತ್ತಿ ಎಂಬ ಪಟ್ಟಣದಲ್ಲಿ ಮಲೆದುರ್ಗಗಳು ಇವೆ. ಧರ್ಮಾವರಂ ಎಂಬದು ರೈಲುಬಂಡಿಗಳು ಕೂಡುವ ಸ್ಥಳ. ಇಲ್ಲಿಂದ ರೈಲುರಸ್ತೆಯು ಅನಂತಪುರಕ್ಕೆ ಅಲ್ಲಿಂದ ಗುಂಟಕಲ್ಲಿಗೂ ಬೆಂಗಳೂರಿಗೂ ಚಿತ್ತೂರಿಗೂ ಹೋಗುತ್ತದೆ. ದೊಡ್ಡ ರೈಲುರಸ್ತೆ ಕೂಡುವ ಗುಂಟಕಲ್ಲು ಈ ಜಿಲ್ಲೆಯಲ್ಲಿಯೇ ಇದೆ.

ಎರಡನೇ ಭಾಗ.

ಹಿಂದುಸ್ಥಾನ.


ಈ ವರೆಗೆ ಮದ್ರಾಸ ಸಂಸ್ಥಾನಕ್ಕೆ ಸಂಬಂಧಪಟ್ಟ ವಿವರಣೆಯನ್ನು ಹೇಳಿದೆವು. ಇಂಡಿಯದ ಒಂದು ಭಾಗವಾದ ಮದ್ರಾಸ ಸಂಸ್ಥಾನವು ಇಂಡಿಯದ ದಕ್ಷಿಣದಲ್ಲಿಯೂ ಆಗ್ನೇಯಭಾಗದಲ್ಲಿಯೂ ಇದೆ. ಮದ್ರಾಸ ಸಂಸ್ಥಾನದ ವಿಸ್ತಾರವೆಷ್ಟು? ಇಂಡಿಯದ ಒಟ್ಟಾರೆ ವಿಸ್ತೀರ್ಣವು 1,770,000 ಚದರಮೈಲು.


ಮದ್ರಾಸ ಸಂಸ್ಥಾನಕ್ಕಿಂತಲೂ ಇದು ಎಷ್ಟು ಪಾಲಿಗೆ ದೊಡ್ಡದು? ಇಂಡಿಯದಲ್ಲಿ 315,000,000 ಜನಸಂಖ್ಯೆಯಾಗಿದೆ. ಭೂಪಟದಲ್ಲಿ ಇಂಡಿಯದ ಆಕೃತಿಯನ್ನು ಮನಸ್ಸಿನಲ್ಲಿ ಯೋಚಿಸಿರಿ. ಬಡಗುಭಾಗವು ವಿಸ್ತಾರವಾಗಿದೆ, ತೆಂಕುಭಾಗವು ಅಗಲಕಿರಿದಾಗಿದೆ. ಪೂರ್ವದಿಕ್ಕಿನಲ್ಲಿ ಬಂಗಾಳ ಸಮುದ್ರವೂ ದಕ್ಷಿಣದಲ್ಲಿ ಹಿಂದುಸಾಗರವೂ ಪಶ್ಚಿಮದಲ್ಲಿ ಅರಬಿಸಮುದ್ರವೂ ಇವೆ.

ಹಿಮಾಲಯ ಪರ್ವತ.—ಬಡಗುಭಾಗದ ಮಲೆಗಳು ವಾಯವ್ಯದಿಂದ ಆಗ್ನೇಯದ ವರೆಗೆ ಚಾಚಿಕೊಂಡಿವೆ. ಈ ಮಲೆಗಳಿಗೆ ಹಿಮಾಲಯ ಪರ್ವತಗಳೆಂದು ಹೆಸರು. ಪ್ರಪಂಚದಲ್ಲಿರುವ ಪರ್ವತಗಳಲ್ಲೆಲ್ಲಾ ಹಿಮಾಲಯವೇ ಅತಿ ಉನ್ನತವಾಗಿದೆ. ಸಮುದ್ರಮಟ್ಟದಿಂದ ಮೇಲೆ ಹೋಗುವಷ್ಟಕ್ಕೆ ಚಳಿ ಹೆಚ್ಚಾಗುತ್ತಿದೆ ಎಂಬುದನ್ನು ಈ ಮೊದಲೇ ಹೇಳಿದ್ದೆವಷ್ಟೆ. ಹಿಮಾಲಯ ಪರ್ವತದ ಮೇಲೆ ನೀರು ಯಾವಾಗಲೂ ಗಡ್ಡೆಕಟ್ಟುತ್ತದೆ; ಅದು ಅಷ್ಟು ಎತ್ತರವಾಗಿದೆ. ಹಿಮಾಲಯ ಪರ್ವತವೆಂದರೆ ಹಿಮಗಡ್ಡೆ ಮುಚ್ಚಿದ ಪರ್ವತವೆಂಬ ಅರ್ಥ. ಇದರಲ್ಲಿ ಹೆಚ್ಚುಕಡಮೆ ಐದು ಇಲ್ಲವೆ ಆರು ಮೈಲು ಎತ್ತರವುಳ್ಳ ಶಿಖರಗಳಿವೆ. ಅವುಗಳಲ್ಲಿ ಬಲು ಏರಾಗಿರುವ ಎವರೆಸ್ಟ್ ಎಂಬ ಶಿಖರವು 29,000 ಫೀಟ್ ಎತ್ತರವಿದ್ದು, ಭೂಲೋಕದ ಪರ್ವತಶಿಖರಗಳಲ್ಲೆಲ್ಲಾ ಅತ್ಯುನ್ನತವಾಗಿದೆ. ವಾಯವ್ಯದಿಂದ ಆಗ್ನೇಯಕ್ಕೆ ಚಾಚಿಕೊಂಡಿರುವ ಈ ಪರ್ವತಶ್ರೇಣಿಯನ್ನು ನೋಡಿರಿ. ಈ ಪರ್ವತಸಾಲುಗಳಲ್ಲಿ ಖೈಬರ್ ಎಂಬ ಕಣಿವೆ ಇದ್ದರೂ ಆ ಕಣಿವೆಯ ದಾರಿಯು ಬಹಳ ಕಡಿದಾಗಿದೆ. ಇಂಡಿಯಾ ದೇಶದ ಹೊರಗುಳ್ಳ ಅನ್ಯದೇಶಗಳಿಗೆ ನೆಲದಾರಿಯಿಂದ ಇಂಡಿಯದ ವಾಯವ್ಯದಿಕ್ಕಿ

ನಿಂದ ಹೋಗಬೇಕಾದರೆ ಈ ಕಣಿವೆಯ ದಾರಿಯಾಗಿಯೇ ಹೋಗಬೇಕು. ಈ ಹಿಮಾಲಯಗಳು ನಮ್ಮ ದೇಶಕ್ಕೆ ದೊಡ್ಡ ಗೋಡೆಯಂತೆ ಭದ್ರವಾಗಿ ನಿಂತಿದ್ದರೂ, ಅಲ್ಲಲ್ಲಿ ಕಣಿವೆಗಳು ಇರುವುದರಿಂದ ಅವುಗಳಿಂದ ಶತ್ರುಗಳು ನಮ್ಮ ದೇಶವನ್ನು ಒಳನುಗ್ಗುವುದಕ್ಕೆ ಅವಕಾಶವಿದೆ. ಹಿಮಾಲಯ ಪರ್ವತದ ಪೂರ್ವಭಾಗದಲ್ಲಿಯೂ ಮಲೆಗಳು ದಕ್ಷಿಣೋತ್ತರವಾಗಿ ಹಬ್ಬಿಕೊಂಡಿವೆ. ಈ ಮಲೆಗಳುಳ್ಳ ನಾಡುಗಳೇ ಇಂಡಿಯಾ ದೇಶದ ಪ್ರಥಮಭಾಗವೆನ್ನಬಹುದು. ಮಲೆಗಳ ಬುಡದಲ್ಲಿ ಮಳೆ ಅಧಿಕವಾಗಿದೆ. ಪಶ್ಚಿಮಕ್ಕೆ ಹೋಗುತ್ತ ಹೋಗುತ್ತ, ಮಳೆ ಕಡಮೆಯಾಗುತ್ತಿದೆ. ಆದರೆ ಕಾಡುಗಳು ಮಾತ್ರ ವಿಸ್ತರಿಸುತ್ತಿವೆ. ಎಲ್ಲಾ ವಿಧದ ಫಲವೃಕ್ಷಗಳು ಅಲ್ಲಿ ಇವೆ. ತೇಗು ಮುಂತಾದ ಮರಗಳೂ ಧಾರಾಳವಾಗಿ ಇವೆ. ಆದರೆ ಜನಸಂಖ್ಯೆ ಬಹಳ ಕಡಮೆ. ಉಷ್ಣಕಾಲದಲ್ಲಿ ವಿಲಾಯತಿಯವರು ವಾಸಮಾಡತಕ್ಕ ಸ್ಥಳಗಳು ಇಲ್ಲಿ ಇವೆ. ಇವುಗಳಲ್ಲಿ ಸಿಮ್ಲ ಎಂಬುದೇ ಪ್ರಸಿದ್ಧವಾಗಿದೆ; ಇಂಡಿಯದ ನಮ್ಮ ವೈಸರಾಯನು ವಾಸ ಮಾಡುವುದು ಇಲ್ಲಿಯೇ. ಇಂಡಿಯದ ಎರಡನೆಯ ಭಾಗವು ಗಂಗಾ ಸಿಂಧು ನದಿಗಳ ಮೈದಾನವು; ಸಾವಿರಾರು ವರ್ಷಗಳ ಹಿಂದೆ ಹಿಮಾಲಯಪರ್ವತದ ತೆಂಕುಭಾಗವು ಸಮುದ್ರದ ಪಾಲಾಗಿತ್ತೆಂದು ತಿಳಿಯಬಂದಿದೆ. ಈ ಪರ್ವತದ ಮೇಲೆ ಸುರಿದ ಮಳೆಯ ನೀರಿನೊಡನೆ ಮಣ್ಣು ಮಳಲು ಕೊಚ್ಚಿಕೊಂಡು ಬಂದು ಆ ಸಮುದ್ರದಲ್ಲಿ ಸೇರಿ, ಕ್ರಮೇಣ ಸಮುದ್ರವು ಬಯಲುಭೂಮಿಯಾಗಿ ಪರಿಣಮಿಸಿತೆಂದು ಹೇಳುತ್ತಾರೆ. ಈ ಬಯಲುಭೂಮಿಯು ಬಂಗಾಳದಿಂದ ಅರಬಿಸಮುದ್ರದ ವರೆಗೆ ವ್ಯಾಪಿಸಿದೆ. ಈ ತಗ್ಗುಪ್ರದೇಶವು ಮಧ್ಯಭಾಗದಲ್ಲಿ ಸಮುದ್ರಮಟ್ಟಕ್ಕಿಂತ ಹೆಚ್ಚುಕಡಮೆ ಸಾವಿರ ಫೀಟ್ ಏರಾಗಿದೆ. ಇದರಲ್ಲಿ ಮೂಡುಕಡೆಯ ತಗ್ಗುಪ್ರದೇಶವು ಪಡುವಣ ತಗ್ಗುಪ್ರದೇಶಕ್ಕಿಂತ ವಿಸ್ತಾರವಾಗಿದೆ. ಹಿಂದೂಗಳಿಗೆ ಪವಿತ್ರವಾದ ಗಂಗಾನದಿಯು ಹಿಮಾಲಯದಲ್ಲಿ ಹುಟ್ಟಿ, ಈ ಮೂಡುಬಯಲಲ್ಲಿ ಹರಿಯುತ್ತದೆ. ಇದಕ್ಕೆ ಕೂಡುವ ಅನೇಕ ಉಪನದಿಗಳಲ್ಲಿ ಯಮುನಾನದಿಯೇ ಬಹಳ ಪ್ರಸಿದ್ಧಿಪಟ್ಟಿದೆ. ಈ ತಗ್ಗುಪ್ರದೇಶದ ತೆಂಕುಭಾಗದಿಂದ ಅನೇಕ ಉಪನದಿಗಳು ಬಂದು ಯಮುನಾನದಿಗೆ ಸೇರುತ್ತವೆ.

ಹಿಮಾಲಯದಲ್ಲಿ ಉಗಮವಾಗುವ ಬ್ರಹ್ಮಪುತ್ರವು ಸಮುದ್ರಕ್ಕೆ ಸಂಗಮವಾಗುವಲ್ಲಿ ಗಂಗೆಯೊಡನೆ ಕಲೆತು, ಬಂಗಾಳಸಮುದ್ರಕ್ಕೆ ಕೂಡುತ್ತದೆ.


ಇಂಡಿಯಾ
ಬರ್ವಾ ಹೊರ್ತು
ಇಂಗ್ಲಿಷ ಮೈಲುಗಳು
0 50 100 150 200 250 300
70
80
90
30
ತಿಬೇತು
ಹಿಂದುಕುಶ ಪರ್ವತಗಳು
ಥಾರ (ಇಂಡಿಯದ)
ಮರುಭೂಮಿ
ಲುನಿ
ಬಿಕಾನೇರ್
ಭರತಪುರ
ಆಗ್ರಾ
ಬರೇಲಿ
ಜಯಪುರ
ಲಖ್ನೋ
ಪಾಟ್ನಾ
ಕತಿಹಾರ್
ಅಸ್ಸಾಮ್
ನಾಗಪುರ
ಬಿಲಾಸಪುರ
ರಾಯ್ಪುರ
ಕಟಕ್
ಪೋರಬಂದರ
ಕಚ್ಛದ
ಕೊಲ್ಲಿ
ಚಂದನಗರ (Fr.)
ಬಡೋಡೆ
ದಿಲ್ಲಿ
ಸೂರತ್


ಅ ರ ಬೀ
ಸ ಮು ದ್ರ
ಬ ಂ ಗಾ ಳ
ಕೊ ಲ್ಲಿ
ಹಿ ಂ ದೀ
ಮ ಹಾ ಸಾ ಗ ರ
ಮುಂಬಯಿ
ಹೈದ್ರರಾಬಾದು
ಬಿಜಾಪುರ
ಮಂಗಳೂರು
ಲಕ್ಷದ್ವೀಪಗಳು
ಮಾಹೆ (Fr.)
ಕಲ್ಲಿಕೋಟೆ
ಕೊಚ್ಚಿ
ತ್ರಾವಣಕೋರ
ತಿರುವನನ್ತರಮು
ಕನ್ಯಾಕುಮಾರೀ ಭೂಶಿರ
ಮಾಲದಿವ್
ದ್ವೀಪಗಳು
ಬಳ್ಳಾರಿ
ಬೆಂಗಳೂರು
ನೆಲ್ಲೂರು
ಮದ್ರಾಸು
ಪುದುಚೇರಿ (Fr.)
ಕಾರಿಕಲ್ (Fr.)
ಈರೋಡು
ತಿರುಚಿನಾಪಳ್ಳಿ
ಮದುರಾ
ತುತ್ತುಕೋಡಿ
ತಿನ್ನವೆಲ್ಲಿ
ಮನ್ನಾರ ಕೊಲ್ಲಿ
ಪಾಕ್‌ಜಲಸಂಧು
ಸೀಲೋನು
ಕೊಲೊಂಬೊ
ಗಾಲ್ಲಿ ಭೂಶಿರ
ಮತರಾ
ಯನವ್ (Fr.)
ಮಚಲಿಪಟ್ಣ
ವಿಶಾಖಾಪಟ್ಣ
ಚಿಕ್ಕಾಕೋಲ
ಜಗದಲ್‌ಪುರ
ಗೋದಾವರೀನದಿ
ಕೃಷ್ಣಾನದಿ
ಸೂಚನೆ:
ಸಂಸ್ಥಾನದ ಗಡು
ಬ್ರೋಡ್‌ಗೇಜ್ ರೇಲ್ವೆ
ನೆರೊ ಗೇಜ್ ರೇಲ್ವೆ
70°
80°
90°
10°
20

ಈ ತಗ್ಗುಪ್ರದೇಶದಲ್ಲಿ ಮಳೆಯು ಅಧಿಕ; ನೆಲವು ಬಹಳ ಸಾರವತ್ತಾಗಿದೆ. ನೆಲ್ಲು, ಸಣಬು ಮೊದಲಾದುವು ಇಲ್ಲಿ ಧಾರಾಳವಾಗಿ ಬೆಳೆಯುವುದರಿಂದ ಇಲ್ಲಿ ಜನಗಳ ಗುಡಿಕಟ್ಟು ಹೆಚ್ಚು. ಕಲ್ಕತ್ತಾ, ಕಾಶಿ ಮೊದಲಾದ ದೊಡ್ಡ ದೊಡ್ಡ ಪಟ್ಟಣಗಳು ಗಂಗಾನದಿಯ ದಡದಲ್ಲಿ ಇವೆ.

ಪಶ್ಚಿಮ ತಗ್ಗುಪ್ರದೇಶದಲ್ಲಿ ಸಿಂಧುನದಿ ಇದೆ. ಈ ನದಿಯು ಸಹ ಹಿಮಾಲಯದಲ್ಲಿ ಜನಿಸಿ, ಮಲೆನಾಡು ದಾರಿಯಾಗಿ ಪ್ರವಹಿಸಿ, ತಗ್ಗುಪ್ರದೇಶಕ್ಕೆ ಬಂದು, ಅಲ್ಲಿ ಐದು ಉಪನದಿಗಳ ನೀರನ್ನು ಒಳಕೊಂಡು ಮುಂದರಿಸಿ, ಅರಬಿ ಸಮುದ್ರಕ್ಕೆ ಬೀಳುತ್ತದೆ. ಆ ಐದು ನದಿಗಳ ಪ್ರದೇಶಕ್ಕೆ ಪಶ್ಚಿಮದಲ್ಲಿರುವ ತಗ್ಗುಭೂಮಿಯ ಭಾಗವು ಮಳೆ ಇಲ್ಲದ ದೊಡ್ಡ ಮರುಭೂಮಿಯಾಗಿದ್ದರೂ, ಸಿಂಧುನದಿಯು ಅದರ ಮಧ್ಯೆ ಹರಿಯುವುದರಿಂದ, ಅದು ವಾಸಕ್ಕೆ ಯೋಗ್ಯವಾಗಿದೆ. ಸಿಂಧುನದಿಯು ಈ ಮರಳುಕಾಡನ್ನು ದಾಟಿ ಅರಬಿಸಮುದ್ರಕ್ಕೆ ಬೀಳುವಲ್ಲಿ ಇದರ ಅಳಿವೆಯ ಹತ್ತಿರವಿರುವ ಕರಾಚಿ ಎಂಬ ಬಂದರು ಬಹಳ ಶ್ರೇಷ್ಠವಾಗಿದೆ. ಈ ತಗ್ಗುಭೂಮಿಯಲ್ಲಿ ಧಾರಾಳವಾಗಿ ಬೆಳೆಗಳು ಬೆಳೆಯುತ್ತವೆ. ಹಿಂದೆ ಹೇಳಿದ ಗಂಗಾಸಿಂಧು ಮೈದಾನು ಹೊರತು ಇಂಡಿಯದ ಪೂರ್ವ ಮತ್ತು ಪಶ್ಚಿಮ ಸಮುದ್ರಗಳ ತೀರದಲ್ಲಿ ತಗ್ಗುಭೂಮಿಗಳೂ ಇವೆ. ಮದ್ರಾಸ ಸಂಸ್ಥಾನದಲ್ಲಿರುವ ಈ ತಗ್ಗುಪ್ರದೇಶಗಳನ್ನು ಕುರಿತು ಈ ಮೊದಲೇ ಹೇಳಿದೆ. ಈ ತಗ್ಗುಪ್ರದೇಶಗಳನ್ನು ಈ ಸಂಸ್ಥಾನದ ಪಟದಲ್ಲಿ ಗೊತ್ತುಮಾಡಬಹುದು. ಪಶ್ಚಿಮ ತಗ್ಗುಪ್ರದೇಶದಲ್ಲಿ ಬೊಂಬಯಿ ಎಂಬ ಬಂದರು ಇದೆ.

ಪೀಠಭೂಮಿ.—ಗಂಗಾಸಿಂಧು ಮೈದಾನದ ದಕ್ಷಿಣಕ್ಕೆ ಮಲೆಗಳು ಇವೆ. ಅವಕ್ಕೆ ವಿಂಧ್ಯಪರ್ವತವೆಂದು ಹೆಸರು. ಈ ಪರ್ವತವು ಹಿಮಾಲಯಗಳಷ್ಟು ಎತ್ತರವಾಗಿಲ್ಲ. ವಿಂಧ್ಯಪರ್ವತವು ಪಶ್ಚಿಮದಿಂದ ಪೂರ್ವಕ್ಕೆ ಚಾಚಿಕೊಂಡಿದ್ದು ಪೂರ್ವಕ್ಕೆ ಹೋಗುವಷ್ಟಕ್ಕೆ ಇಳಿಜಾರಾಗುತ್ತ ಬರುತ್ತದೆ. ವಿಂಧ್ಯದ ತೆಂಕುಕಡೆಗೆ ಇರುವ ಪರ್ವತಕ್ಕೆ ಸತ್ಪುರಾಬೆಟ್ಟ ಎಂದು ಹೆಸರು. ಇದರ ಪಡುಕಡೆಯ ಇಳಿಜಾರುಗಳ ಸಮೀಪದಲ್ಲಿಯೇ ಪಶ್ಚಿಮಘಟ್ಟಗಳು (ಪಶ್ಚಿಮ ತೊಡರುಮಲೆ) ಆರಂಭಿಸುತ್ತವೆ. ಅಲ್ಲಿಯೇ ಪೂರ್ವಘಟ್ಟಗಳೂ ಪಶ್ಚಿಮಘಟ್ಟಗಳೂ ಕೂಡುತ್ತವೆ.

ಪೂರ್ವದಲ್ಲಿ ಪೂರ್ವಘಟ್ಟ, ಪಶ್ಚಿಮದಲ್ಲಿ ಪಶ್ಚಿಮಘಟ್ಟ, ಇವುಗಳ ನಡುವೆ ಇರುವ ತ್ರಿಕೋಣಾಕಾರದ ಭಾಗಕ್ಕೆ ದಕ್ಷಿಣ ಪೀಠಭೂಮಿ ಇಲ್ಲವೆ ದಕ್ಕಣ

ಎನ್ನುತ್ತಾರೆ. ದಕ್ಕಣ ಪೀಠಭೂಮಿಗೆ ತೆಂಕುದಿಕ್ಕಿನಲ್ಲಿರುವ ಮೈಸೂರು ಬಹಳ ಏರಾಗಿದೆ. ಮದ್ರಾಸ ಸಂಸ್ಥಾನದ ದಕ್ಷಿಣ ಜಿಲ್ಲೆಗಳೂ ಹೈದರಾಬಾದು ಎಂಬ ರಾಜ್ಯವೂ ದಕ್ಕಣ ಪೀಠಭೂಮಿಗೆ ಸೇರಿದ ಭಾಗಗಳಾಗಿವೆ. ವಿಂಧ್ಯಪರ್ವತದ ಬಡಗುದಿಕ್ಕಿಗೆ ಒಂದು ಸಣ್ಣ ಪೀಠಭೂಮಿ ಇದೆ. ಅದಕ್ಕೆ ಮಾಲವಾ ಇಲ್ಲವೆ ಮಧ್ಯ ಇಂಡಿಯಾ ಪೀಠಭೂಮಿ ಎಂದು ಹೆಸರು. ಇದು ತ್ರಿಕೋಣಾಕಾರ ವಾಗಿದ್ದು ಪಶ್ಚಿಮಕ್ಕೆ ಎತ್ತರವಾಗಿಯೂ ಪೂರ್ವಕ್ಕೆ ಬರಬರುತ್ತ ಇಳಿಜಾರಾ ಗಿಯೂ ಇದೆ. ಈ ಕಾರಣದಿಂದ ಮದ್ರಾಸ ಸಂಸ್ಥಾನದಲ್ಲಿದ್ದಂತೆಯೇ ಇಲ್ಲಿಯ ನದಿಗಳೂ ಪಶ್ಚಿಮದಿಂದ ಪೂರ್ವಕ್ಕೆ ಹರಿಯುತ್ತವೆ. ಮದ್ರಾಸ ಸಂಸ್ಥಾನದ ಬಡಗುಕಡೆ ಹರಿಯುವ ನದಿಗಳಲ್ಲಿ ಮಹಾನದಿಯೇ ಮುಖ್ಯವಾದದ್ದು. ಈ ಪೀಠಭೂಮಿಯಲ್ಲಿಯ ನದಿಗಳು ಬಹುತರ ಪಶ್ಚಿಮದಿಂದ ಪೂರ್ವಕ್ಕೆ ಹರಿಯುತ್ತವಾದರೂ ನರ್ಮದಾ ತಪತಿ ಎಂಬೀ ಎರಡು ನದಿಗಳು ಪೂರ್ವ ದಿಂದ ಪಶ್ಚಿಮಕ್ಕೆ ಪ್ರವಹಿಸಿ, ಅರಬಿ ಸಮುದ್ರಕ್ಕೆ ಕಲೆಯುತ್ತವೆ. ವಿಂಧ್ಯ ಪರ್ವತದ ತೆಂಕುಕಡೆಯಲ್ಲಿ ಹರಿಯುವ ನರ್ಮದಾ ನದಿಯು ಹಿಂದುಗಳಿಗೆ ಪುಣ್ಯನದಿಯಾಗಿದೆ. ತಪತಿಯು ಸತ್ಪುರಾ ಮಲೆಗೆ ತೆಂಕುಕಡೆಯಾಗಿ ಹೋಗುತ್ತದೆ.

ಬರ್ಮಾ.—ಇದು ಬಂಗಾಳದ ಪೂರ್ವದಿಕ್ಕಿನಲ್ಲಿದೆ. ಇಂಗ್ಲಿಷರು ಇದನ್ನು ಜಯಿಸಿ ಇಂಡಿಯಾದೇಶಕ್ಕೆ ಸೇರಿಸಿದರೂ ವಾಸ್ತವಿಕವಾಗಿ ಇದು ಇಂಡಿಯಕ್ಕೆ ಸೇರಿದ್ದಲ್ಲ. ಬರ್ಮಾದೇಶದಲ್ಲಿಯ ಅನೇಕ ಮಲೆಗಳು ಬಡಗಿ ನಿಂದ ತೆಂಕುಕಡೆಗೆ ಚಾಚಿಕೊಂಡಿವೆ. ಈ ಮಲೆಗಳ ನಡುವಿನಲ್ಲಿ ಹರಿಯುವ ಮುಖ್ಯ ನದಿಗಳಲ್ಲಿ ಐರಾವತಿಯೇ ಹೆಸರಾದದ್ದು. ಈ ದೇಶದಲ್ಲಿ ನೆಲ್ಲು ಧಾರಾಳವಾಗಿ ಆಗುತ್ತದೆ. ರಂಗೂನು, ಇದೇ ಬರ್ಮದ ಮುಖ್ಯ ಪಟ್ಟಣ.

ಮೂರನೇ ಭಾಗ.

ಖಂಡಗಳೂ ಸಾಗರಗಳೂ.

ಇಂಡಿಯಾ. — ಇದು ಆಸ್ಯ ಖಂಡದ ಒಂದು ಭಾಗವು. ಅನೇಕ ದೇಶಗಳು ಇರುವ ಭೂಭಾಗಕ್ಕೆ ಖಂಡ ಎಂದು ಹೆಸರು. ಭೂಪಟವನ್ನು ನೋಡಿ ಆಸ್ಯ ಖಂಡವನ್ನು ಗೊತ್ತುಹಚ್ಚಬಹುದು. ಆಸ್ಯ ಖಂಡದ ತೆಂಕುಕಡೆಯಲ್ಲಿ ಹರಿಯುವ ಸಾಗರವೇ ಹಿಂದೂಸಾಗರ. ಆಸ್ಯ ಖಂಡದ ತೆಂಕುಕಡೆಯ ಹಲವು ದೇಶಗಳು ಈ ಸಾಗರದಲ್ಲಿ ಚಾಚಿಕೊಂಡಿವೆ. ಆಸ್ಯ ಖಂಡದಲ್ಲಿ ತೆಂಕುದಿಕ್ಕಿನಲ್ಲಿ ಹೀಗೆ ಮೂರು ಕಡೆ ನೀರೂ ಒಂದು ಕಡೆ ನೆಲವೂ ಇದ್ದು ಹಿಂದೂಸಾಗರದಲ್ಲಿ ಚಾಚಿಕೊಂಡಿರುವ ಅರ್ಧದ್ವೀಪಗಳು ಮೂರು ಇವೆ. ಅವುಗಳಲ್ಲಿ ನಮ್ಮ ಇಂಡಿಯವು ಮಧ್ಯದಲ್ಲಿರುವ ಅರ್ಧದ್ವೀಪವಾಗಿದೆ. ಆಸ್ಯ ಖಂಡದ ಪಶ್ಚಿಮಕ್ಕೆ ಯುರೋಪು ಎಂಬ ಖಂಡವಿದೆ. ಅದು ಆಸ್ಯ ಖಂಡದಲ್ಲಿ ಬೆರೆತುಕೊಂಡಿದೆ. ಯುರೋಪ ಖಂಡದ ಒಂದು ದಿಕ್ಕಿನಲ್ಲಿ ಆಸ್ಯ ಖಂಡವೂ ಉಳಿದ ಮೂರು ದಿಕ್ಕುಗಳಲ್ಲಿ ಸಮುದ್ರವೂ ಇರುವುದರಿಂದ ಯುರೋಪ ಖಂಡವು ದೊಡ್ಡದಾದ ಅರ್ಧದ್ವೀಪದಂತಿದೆ. ಈ ಎರಡು ಖಂಡಗಳೂ ವಾಸ್ತವಿಕವಾಗಿ ಒಂದೇ ಖಂಡವಾಗಿವೆ. ಇದಕ್ಕೆ ಯೂರೇಶಿಯ ಎನ್ನುತ್ತಾರೆ. ಯೂರೇಶಿಯದ ಸುತ್ತಣ ದೊಡ್ಡ ಸಮುದ್ರಗಳು ಮಹಾಸಾಗರಗಳೇ; ಆ ಜಲಭಾಗಗಳೆಲ್ಲಾ ಒಂದನ್ನೊಂದು ಕೂಡಿರುವುದರಿಂದ ಅವನ್ನು ಭೂಪಟದಲ್ಲಿ ಚೆನ್ನಾಗಿ ಗುರುತಿಸಿ ನೋಡಿಕೊಳ್ಳಿರಿ. ಉತ್ತರಕ್ಕಿರುವ ಸಮುದ್ರಕ್ಕೆ ಆರ್ಕಟಿಕ್ ಮಹಾಸಾಗರ (ಉತ್ತರ ಧ್ರುವಸಾಗರ) ಎಂದು ಹೆಸರು. ಇದು ನಮ್ಮ ದೇಶದಿಂದ ಬಲುದೂರ ಬಡಗುಕಡೆಯಲ್ಲಿದೆ. ವಿಷುವವೃತ್ತದಿಂದ ಈ ಸಾಗರವು ಬಹಳ ದೂರದಲ್ಲಿರುವುದರಿಂದ ಇಲ್ಲಿ ಬಿಸಿಲು ಬಹಳ ಕಡಮೆ; ವರ್ಷದ ಬಹು ಭಾಗದಲ್ಲಿ ಇಲ್ಲಿಯ ನೀರು ತಣಿದು ತಣಿದು ಗಡ್ಡೆಕಟ್ಟುತ್ತದೆ. ಯೂರೇಶಿಯದ ಪೂರ್ವಕ್ಕೆ ಪೆಸಿಫಿಕ್ ಸಾಗರವಿದೆ. ಲೋಕದಲ್ಲಿರುವ ಜಲಭಾಗಗಳಲ್ಲಿ ಇದೇ ಬಹಳ ವಿಸ್ತಾರವಾದದ್ದು. ಕೆಲವು ಸ್ಥಳಗಳಲ್ಲಿ ಈ ಪೆಸಿಫಿಕ್ ಸಾಗರವು ಆರು ಮೈಲು ಆಳವಿದೆ. ಈ ಮಹಾಸಾಗರಕ್ಕೆ ಆಚೆ ಎಂದರೆ, ಇನ್ನೂ ಪೂರ್ವಕ್ಕೆ ಆಸ್ಯ ಖಂಡಕ್ಕೆ ಎದುರಾಗಿ ದೊಡ್ಡದೊಂದು ಖಂಡ ಇದೆ. ಆ

ಖಂಡಕ್ಕೂ ಆಸ್ಯ ಖಂಡಕ್ಕೂ ಮಧ್ಯದಲ್ಲಿ ಕೆಲವು ಸ್ಥಳಗಳಲ್ಲಿ 1200 ಮೈಲು ದೂರದ ಅಂತರವಿದೆ. ಇದರಿಂದ ಈ ಪೆಸಿಫಿಕ್ ಸಾಗರವು ಎಷ್ಟು ವಿಸ್ತಾರ ವಾಗಿದೆ ಎಂಬದನ್ನು ನೀವೇ ಊಹಿಸಿರಿ. ಪ್ರಪಂಚದಲ್ಲಿರುವ ಭೂಭಾಗಗಳನ್ನು ತಂದು ಒಂದೇಯಾಗಿ ಹರಡಿದರೂ ಅವು ಈ ಮಹಾಸಾಗರದಷ್ಟು ವಿಸ್ತಾರವಾಗ ಲಾರವು. ಈ ಸಾಗರವೂ ಆರ್ಕಟಿಕ್ ಸಾಗರವೂ ನಮ್ಮ ದೇಶದ ಈಶಾನ್ಯ ದಿಕ್ಕಿಗೆ ಕಲೆತುಕೊಳ್ಳುವುದನ್ನು ಪಟದಲ್ಲಿ ನೋಡಿರಿ. ಈ ಸಾಗರಗಳು ಸಂಗಮವಾಗುವ ಸ್ಥಳವು ತೀರ ಅಗಲಕಿರಿದಾಗಿದೆ. ಹೀಗಾಗಲು ಕಾರಣ ವೇನು? ಇದಕ್ಕೆ ಬಹಳ ಸಮೀಪದಲ್ಲಿ ಇಕ್ಕಡೆಗಳಲ್ಲಿಯೂ ನೆಲವಿರುವುದನ್ನು ನೋಡಿರಿ. ಇವುಗಳಲ್ಲಿ ಒಂದು ಹಿಂದೆ ಹೇಳಿದ ಯೂರೇಶಿಯ; ಇನ್ನೊಂದು ಭಾಗದಲ್ಲಿರುವ ಭೂಭಾಗಕ್ಕೆ ಅಮೇರಿಕ ಖಂಡವೆಂದು ಹೆಸರು. ಈ ಎರಡು ಖಂಡಗಳು ಇಲ್ಲಿ ಇಷ್ಟು ಸಮೀಪದಲ್ಲಿದ್ದರೂ ತೆಂಕು ಹೋಗುವಷ್ಟಕ್ಕೆ ಅವು ದೂರದೂರವಾಗುತ್ತಾ ಪ್ರತ್ಯೇಕವಾಗಿ ಹೋಗುತ್ತವೆ. ಪೂರ್ವದಿಕ್ಕಿಗೆ ಪೆಸಿ ಫಿಕ್ ಸಾಗರದ ಕರಾವಳಿಯ ಸಮೀಪ ಹಲವು ಸಣ್ಣ ಸಣ್ಣ ದ್ವೀಪಗಳು ಒತ್ತೊತ್ತಾಗಿರುವುದನ್ನು ಪಟದಲ್ಲಿ ನೋಡಬಹುದು. ಇವೇ ಜಾಪಾನು ದ್ವೀಪ ಗಳು. ಜಾಪಾನು ದೇಶದವರು ಬಹಳ ನಾಗರಿಕರು. ಅವರು ಬೌದ್ಧ ಮತ ಸ್ಥರು. ಜಾಪಾನು ದೇಶಕ್ಕೆ ಹತ್ತಿರವಿರುವ ದೊಡ್ಡ ದೇಶಕ್ಕೆ ಚೀನಾ ದೇಶವೆಂತ ಹೆಸರು. ಈ ಚೀನಾ ದೇಶವು ಇಂಡಿಯದ ಈಶಾನ್ಯಮೂಲೆಯ ವರೆಗೆ ವ್ಯಾಪಿಸಿರುತ್ತದೆ. ಚೀನಿಯರು ಬೌದ್ಧ ಮತಸ್ಥರು. ಬಹು ಪುರಾತನ ಕಾಲ ದಿಂದ ಇವರು ನಾಗರಿಕರೆಂದು ಪ್ರಸಿದ್ಧಿ ಪಡೆದಿರುವರು.

ಯೂರೇಶಿಯ ಖಂಡದ ಪಶ್ಚಿಮಕ್ಕಿರುವ ಭಾಗಕ್ಕೆ ಅತ್ಲಾಂತಿಕ್ ಮಹಾ ಸಾಗರವೆನ್ನುತ್ತಾರೆ. ಅತ್ಲಾಂತಿಕ್ ಸಾಗರವೂ ಆರ್ಕಟಿಕ್ ಸಾಗರವೂ ನಮಗೆ ಬಡಗುದಿಕ್ಕಿನಲ್ಲಿ ಒಂದಾಗಿ ಸೇರುತ್ತವೆ. ಅತ್ಲಾಂತಿಕ್ ಸಾಗರವು ಪೆಸಿಫಿಕ್ ಸಾಗರದಷ್ಟು ದೊಡ್ಡದಲ್ಲ. ಆದರೂ ಪೆಸಿಫಿಕ್ ಸಾಗರಕ್ಕಿಂತ ಅತ್ಲಾಂತಿಕ್ ಸಾಗರವು ವ್ಯಾಪಾರದ ದೊಡ್ಡ ಹೆದ್ದಾರಿಯಾಗಿದೆ. ಆಸ್ಯ ಖಂಡಕ್ಕೆ ಎದುರಾಗಿ ಪೆಸಿಫಿಕ್ ಸಾಗರದ ಆಚೆ ಅಮೇರಿಕಾ ಖಂಡವು ಇದ್ದಹಾಗೆ, ಯೂರೋಪ ಖಂಡಕ್ಕೆ ಎದುರಾಗಿ ಅತ್ಲಾಂತಿಕ್ ಸಮುದ್ರದ ಆಚೆ ಅಮೇರಿಕಾ ಖಂಡವು ಇದೆ; ಅಮೇರಿಕಾ ಖಂಡದ ಪೂರ್ವಕ್ಕೆ ಅತ್ಲಾಂತಿಕ್ ಸಾಗರವೂ ಪಶ್ಚಿಮಕ್ಕೆ ಪೆಸಿಫಿಕ್ ಸಾಗರವೂ ಇವೆ ಎಂದು ಹೇಳಿದ ಹಾಗಾಯಿತು. ಭೂಪಟವನ್ನು ನೋಡಿದರೆ

ಮಾತ್ರ ಈ ಸಂಗತಿಯು ಸ್ಪಷ್ಟವಾಗುತ್ತದೆ. ನಿಮ್ಮ ಶಾಲೆಯಲ್ಲಿರುವ ಗ್ಲೋಬನ್ನು ಕೈಯಲ್ಲಿ ಹಿಡಿದುಕೊಂಡು ಚೆನ್ನಾಗಿ ಪರೀಕ್ಷಿಸಿ ನೋಡಿದರೆ, ಈ ಸಂಗತಿಯು ನಿಮಗೆ ಗೊತ್ತಾಗುವುದು. ಯೂರೋಪಿಗೆ ಪಶ್ಚಿಮದಲ್ಲಿರುವ ಅತ್ಲಾಂತಿಕ್ ಸಾಗರದ ದಡದ ಹತ್ತಿರ ಕೆಲವು ದ್ವೀಪಗಳನ್ನು ಆ ಗ್ಲೋಬಿನಲ್ಲಿ ಕಾಣಬಹುದು. ಇದಕ್ಕೆ ಬ್ರಿಟಿಷ ದ್ವೀಪಗಳೆಂದು ಹೆಸರು. ಇಂಡಿಯಾ ದೇಶದ ಈಶಾನ್ಯಕ್ಕೆ ಜಾಪಾನು ದ್ವೀಪಗಳು ಇರುವಂತೆಯೇ ಇಂಡಿಯದ ವಾಯವ್ಯಕ್ಕೆ ಅತ್ಲಾಂತಿಕ್ ಸಾಗರದಲ್ಲಿ ಈ ಬ್ರಿಟಿಷ ದ್ವೀಪಗಳು ಇವೆ. ಈ ದ್ವೀಪದಲ್ಲಿರುವವರೇ ನಮ್ಮನ್ನು ಆಳುವವರು. ನಮ್ಮ ಚಕ್ರವರ್ತಿಯಾದ ಐದನೇ ಜಾರ್ಜರೂ ಚಕ್ರವರ್ತಿನಿಯಾದ ಮೇರಿ ರಾಣಿಯವರೂ ಇಲ್ಲಿಯೇ ವಾಸಿಸುತ್ತಾರೆ.

ಬ್ರಿಟಿಷ ದ್ವೀಪಗಳ ಆಗ್ನೇಯದಲ್ಲಿ ಫ್ರಾನ್ಸ್ ದೇಶವು ಇದೆ. ನಮ್ಮ ಮದ್ರಾಸ ಸಂಸ್ಥಾನದಲ್ಲಿ ನೀವು ಓದಿದ ಪುದುಚೇರಿ ಎಂಬ ಪಟ್ಟಣವು ಈ ರಾಜ್ಯದವರದಾಗಿದೆ. ಫ್ರಾನ್ಸ್ ದೇಶದ ಹತ್ತಿರದಲ್ಲಿ ಬೆಲ್ಜಿಯಮ್ ಮತ್ತು ಜರ್ಮನಿ ಎಂಬ ದೇಶಗಳಿವೆ. ಯೂರೋಪ ಖಂಡದ ತೆಂಕುಕಡೆಯ ಸಣ್ಣ ಜಲಭಾಗವನ್ನು ನೋಡಿರಿ. ಇದಕ್ಕೆ ಮೆಡಿಟೆರೆನಿಯನ್ ಸಮುದ್ರ ಎಂದು ಹೆಸರು. ಈ ಮೆಡಿಟೆರೆನಿಯನ್ ಸಮುದ್ರವು ಅತ್ಲಾಂತಿಕ್ ಸಾಗರದ ಒಂದು ಭಾಗವು. ಪೂರ್ವಿಕರು ಈ ಸಮುದ್ರವು ಭೂಮಿಯ ಮಧ್ಯದಲ್ಲಿದೆ ಎಂದು ನೆನಸಿ, ಮೆಡಿಟೆರೆನಿಯನ್ (ಭೂಮಧ್ಯಸಮುದ್ರ) ಎಂಬ ಹೆಸರನ್ನು ಅದಕ್ಕೆ ಇಟ್ಟರು. ಆಸ್ಯ ಖಂಡದ ದಕ್ಷಿಣ ಭಾಗವು ಹಿಂದೂಸಾಗರದಲ್ಲಿ ಪರ್ಯಾಯ ದ್ವೀಪಗಳಾಗಿ ಚಾಚಿಕೊಂಡಿರುವಂತೆಯೇ ಯುರೋಪ್ ಖಂಡದ ತೆಂಕು ಕಡೆಯು ಅರ್ಧದ್ವೀಪಗಳಾಗಿ ಭೂಮಧ್ಯಸಮುದ್ರದಲ್ಲಿ ನೀಡಿಕೊಂಡಿದೆ. ಅಲ್ಲಿ ಇರುವಂತೆ ಇಲ್ಲಿಯೂ ಮೂರು ಪರ್ಯಾಯ ದ್ವೀಪಗಳಿವೆ. ಇವುಗಳಲ್ಲಿ ಮಧ್ಯದಲ್ಲಿರುವುದಕ್ಕೆ ಇಟಲಿ ಎಂದು ಹೆಸರು. ಇಟಲಿಯ ಪೂರ್ವಕ್ಕೆ ಗ್ರೀಸ್ ದೇಶವಿದೆ. ಎರಡು ಸಾವಿರ ವರ್ಷಗಳ ಹಿಂದೆ ಇಟಲಿ ದೇಶದವರೂ ಗ್ರೀಸ್ ರಾಜ್ಯದವರೂ ಬಹಳ ಕಾಲದ ವರೆಗೆ ನಾಗರಿಕರಾಗಿದ್ದರು. ಭೂಮಧ್ಯ ಸಮುದ್ರಕ್ಕೆ ಇನ್ನೂ ತೆಂಕುಕಡೆಯಲ್ಲಿರುವ ದೊಡ್ಡ ಭೂಭಾಗವನ್ನು ನೋಡಿರಿ. ಇದೇ ಆಫ್ರಿಕಾ ಖಂಡ. ಈ ಖಂಡವು ಅದರ ಈಶಾನ್ಯಮೂಲೆಯಲ್ಲಿ ಆಸ್ಯ ಖಂಡಕ್ಕೆ ಸಂಧಿಸಿರುವುದನ್ನು ಭೂಪಟದಲ್ಲಿ ಗೊತ್ತುಮಾಡಿಕೊಳ್ಳಿರಿ. ಈ

ಎರಡು ಖಂಡಗಳು ಒಂದಕ್ಕೊಂದು ಕೂಡುವ ತುಂಡು ನೆಲಕ್ಕೆ ಸುವೇಜ ಭೂಸಂಧಿ ಎಂದು ಹೆಸರು. ಈ ಭೂಸಂಧಿ ಅಗಲಕಿರಿದಾದ ನೆಲವು. ಇದರ ಎರಡು ಕಡೆಗಳಲ್ಲಿಯೂ ಸಮುದ್ರವಿದೆ. ಇದಕ್ಕೆ ತೆಂಕುಕಡೆಯಲ್ಲಿರುವ ರೆಡ್ ಕಡಲು ಹಿಂದೂಮಹಾಸಾಗರದ ಒಂದು ಭಾಗವು. ಇದರ ಬಡಗುಕಡೆ ಮೆಡಿಟೆರೆನಿಯನ್ ಸಮುದ್ರವಿದೆ. ಆ ಮೆಡಿಟೆರೆನಿಯನ್ ಸಮುದ್ರಕ್ಕೂ ಈ ರೆಡ್ ಸಮುದ್ರಕ್ಕೂ ನಡುವೆ ಒಂದು ಕಾಲಿವೆಯನ್ನು ತೋಡಿ ಇವೆರಡನ್ನೂ ಒಂದುಗೂಡಿಸಿದ್ದಾರೆ. ಇದಕ್ಕೆ ಸುವೇಜ ಕಾಲಿವೆ ಎಂದು ಹೆಸರು. ಇದು ಬಹಳ ಪ್ರಾಮುಖ್ಯವಾದ ಒಂದು ಕಾಲಿವೆ. ನಮ್ಮ ದೇಶಕ್ಕೂ ಬ್ರಿಟಿಷ ರಾಜ್ಯಕ್ಕೂ ನಡೆಯುವ ಚಲಾವಣೆಯೆಲ್ಲಾ ಈ ಕಾಲಿವೆಯ ದಾರಿಯಾಗಿ ನಡೆಯುತ್ತದೆ. ಈ ಕಾಲಿವೆಯನ್ನು ತೋಡಿದನಂತರ ಆಫ್ರಿಕಾ ಖಂಡವು ಒಂದು ದ್ವೀಪದಂತಾಯಿತು. ಕಾಲಿವೆಯಾದಂದಿನಿಂದ ಆಫ್ರಿಕಾ ಖಂಡದ ಉತ್ತರಕ್ಕೆ ಭೂಮಧ್ಯಸಮುದ್ರ, ಪೂರ್ವಕ್ಕೆ ಸುವೇಜ ಕಾಲಿವೆ ಮತ್ತು ಹಿಂದೂಸಾಗರ, ಪಶ್ಚಿಮಕ್ಕೆ ಅತ್ಲಾಂತಿಕ್ ಸಾಗರ, ಹೀಗೆ ಆ ಖಂಡದ ಮೇರೆಗಳಾದುವು.

ಅತ್ಲಾಂತಿಕ್ ಸಾಗರದ ಪೂರ್ವಕ್ಕೆ ಉತ್ತರಭಾಗದಲ್ಲಿ ಯುರೋಪ ಖಂಡವೂ ದಕ್ಷಿಣಭಾಗದಲ್ಲಿ ಆಫ್ರಿಕಾ ಖಂಡವೂ ಪಶ್ಚಿಮದಲ್ಲಿ ಅಮೇರಿಕಾ ಖಂಡವೂ ಇವೆ. ನಮ್ಮ ದೇಶದ ತೆಂಕುಭಾಗವು ಹಿಂದೂಮಹಾಸಾಗರದಲ್ಲಿ ತ್ರಿಕೋನಾಕಾರವಾಗಿರುವಂತೆ ಆಫ್ರಿಕಾ ಖಂಡದ ತೆಂಕುಪಾರ್ಶ್ವವು ತ್ರಿಭುಜಾಕೃತಿಯಲ್ಲಿದೆ. ಇಲ್ಲಿಯೇ ಹಿಂದೂಮಹಾಸಾಗರವೂ ಅತ್ಲಾಂತಿಕ್ ಮಹಾಸಾಗರವೂ ಒಂದಕ್ಕೊಂದು ಕೂಡುತ್ತವೆ. ಹೀಗೆ ಕೂಡಿದ ಜಲರಾಶಿಯು ಇನ್ನು ದಕ್ಷಿಣಕ್ಕೆ ಬಹುದೂರದ ವರೆಗೆ ಹೋಗಿ, ಅಂಟಾರ್ಕಟಿಕ್‌ಸಾಗರ ಅಥವಾ ದಕ್ಷಿಣ ಮಹಾಸಾಗರ ಎಂದು ಕರೆಯಲ್ಪಡುತ್ತದೆ. ಈ ಅಂಟಾರ್ಕಟಿಕ್ ಮಹಾಸಾಗರವು ಆರ್ಕಟಿಕ್ ಸಾಗರವೆಂಬ ಉತ್ತರ ಮಹಾಸಾಗರದಂತೆಯೇ ವಿಷುವವೃತ್ತದಿಂದ ಬಹಳ ದೂರ ಇರುವುದರಿಂದ, ವರ್ಷದಲ್ಲಿ ಚಿರಕಾಲ ಮಂಜುಗಡ್ಡೆಯಿಂದ ತುಂಬಿಹೋಗುತ್ತದೆ. ಸುವೇಜ ಕಾಲಿವೆಯನ್ನು ತೋಡುವ ಮೊದಲು ಯುರೋಪದಿಂದ ಇಂಡಿಯಕ್ಕೆ ಬರುವ ಯುರೋಪಿಯನರು ಅತ್ಲಾಂತಿಕ್ ಸಾಗರದ ಮಾರ್ಗವಾಗಿ ಬಂದು, ಆಫ್ರಿಕದ ದಕ್ಷಿಣಭಾಗವನ್ನು ಬಳಸಿ, ಅಲ್ಲಿಂದ ಈಶಾನ್ಯಕ್ಕೆ ತಿರುಗಿ, ಹಿಂದುಸ್ಥಾನಕ್ಕೆ ಬರುತಿದ್ದರು. ಈ ಪ್ರಯಾಣಕ್ಕೆ ಸುಮಾರು 180 ದಿನ ಕಾಲ ಹಿಡಿಯುತಿತ್ತು. ಈಗ ಇಂಗ್ಲಂಡಿನಿಂದ ಸುವೇಜ

ಕಾಲಿವೆಯ ಮೂಲಕ ಹಡಗುದಾರಿಯಾಗಿ 21 ದಿನಗಳಲ್ಲಿ ಇಂಡಿಯಕ್ಕೆ ಬಂದು ಮುಟ್ಟುತ್ತಾರೆ.

ಆಫ್ರಿಕಾ ಖಂಡದ ಬಡಗುಕಡೆ ಇಜಿಪ್ತ ದೇಶದಲ್ಲಿರುವವರು ನಾಗರಿಕತೆಯುಳ್ಳವರಾಗಿದ್ದರೂ ಆ ಖಂಡದ ಮೂಡುಕಡೆಯ ನಿವಾಸಿಗಳು ತೀರಾ ವನ್ಯಸ್ಥಿತಿಯಲ್ಲಿ ಇರುವವರು. ಈ ಖಂಡದ ತೆಂಕುಕಡೆಗೆ ನಮ್ಮ ದೇಶದವರು ಹೋಗಿ ನೆಲೆನಿಂತಿದ್ದಾರೆ. ದಕ್ಷಿಣ ಆಫ್ರಿಕಕ್ಕೆ ಎದುರು ಪೆಸಿಫಿಕ್ ಮಹಾಸಾಗರದಲ್ಲಿರುವ ಒಂದು ಭೂಭಾಗವನ್ನು ಪಟದಲ್ಲಿ ನೋಡಿರಿ. ಇದೇ ಔಸ್ತ್ರಾಲಿಯ ಖಂಡವು. ಇದು ಒಂದು ದೊಡ್ಡ ದ್ವೀಪವಾಗಿದೆ. ಭೂಖಂಡಗಳಲ್ಲೆಲ್ಲಾ ಇದೇ ಸಣ್ಣದು. ಇದು ಬ್ರಿಟಿಷ ರಾಜ್ಯಕ್ಕೆ ಸೇರಿದೆ. ಖಂಡಗಳಲ್ಲಿ ಅಮೇರಿಕ ಖಂಡವೇ ಅತ್ಯಂತ ದೊಡ್ಡದು. ಅಮೇರಿಕ ಖಂಡವನ್ನು ಹೆಚ್ಚು ಕಡಮೆ 500 ವರ್ಷಗಳ ಹಿಂದೆ ಕೊಲಂಬಸ್ ಎಂಬ ಯುರೋಪಿಯಾನನು ಕಂಡುಹಿಡಿದನು. ಭೂಪಟವನ್ನು ನೋಡಿ, ಈ ಖಂಡದ ಬಡಗುಪಾರ್ಶ್ವವೂ ತೆಂಕುಪಾರ್ಶ್ವವೂ ಎರಡು ದೊಡ್ಡ ಹೋಳುಗಳಂತೆ ಇರುವುದನ್ನೂ, ಆ ಹೋಳುಗಳು ಒಂದು ಭೂಸಂಧಿಯಿಂದ ಜೋಡಿಸಲ್ಪಟ್ಟಿರುವುದನ್ನೂ ನೀವು ಗೊತ್ತುಮಾಡಿಕೊಳ್ಳಬಹುದು. ಹೀಗೆ ಆ ಎರಡು ಭೂಭಾಗಗಳನ್ನು ಸಂಧಿಸಿರುವ ಸಣ್ಣ ನೆಲಸಂದಿಗೆ ಪನಮಾಭೂಸಂಧಿ ಎಂದು ಹೆಸರು. ಇಲ್ಲಿ ಇತ್ತಲಾಗೆ ಒಂದು ಕಾಲಿವೆಯನ್ನು ತೋಡಿದ್ದಾರೆ. ಈ ಕಾಲಿವೆಯು ಅಮೇರಿಕ ಖಂಡದ ಪೂರ್ವದಿಕ್ಕಿಗೆ ಇರುವ ಅತ್ಲಾಂತಿಕ್ ಸಾಗರವನ್ನೂ ಪಶ್ಚಿಮದಿಕ್ಕಿಗೆ ಇರುವ ಪೆಸಿಫಿಕ್ ಸಾಗರವನ್ನೂ ಕೂಡಿಸಿಬಿಡುತ್ತದೆ. ಈ ಕಾಲಿವೆ ಆದಂದಿನಿಂದ ಉತ್ತರ ಅಮೇರಿಕವೂ ದಕ್ಷಿಣ ಅಮೇರಿಕವೂ ವಿಂಗಡಿಸಲ್ಪಟ್ಟು ಬೇರೆ ಬೇರೆ ಎರಡು ದೊಡ್ಡ ದ್ವೀಪಗಳಂತೆ ತೋರುತ್ತವೆ. ಉತ್ತರ ಅಮೇರಿಕದ ಬಡಗುದಿಕ್ಕಿಗೆ ಉತ್ತರ ಮಹಾಸಾಗರವು ಇದೆ. ಇದೇ ಸಾಗರವು ಯುರೋಪದ ಬಡಗುದಿಕ್ಕಿಗೂ ಇದೆ ಎಂದು ಹಿಂದೆ ಹೇಳಿದ್ದೇವೆ. ಗೋಲವನ್ನು ನೋಡಿದರೆ ಉತ್ತರ ಮಹಾಸಾಗರವು ಅಮೇರಿಕ ಮತ್ತು ಯುರೋಪು ಎಂಬ ಎರಡು ಭೂಭಾಗಗಳ ಉತ್ತರಕ್ಕೆ ಈ ರೀತಿಯಾಗಿ ಇರುವುದನ್ನು ಚೆನ್ನಾಗಿ ತಿಳಿಯಬಹುದು. ಅಮೇರಿಕ ಖಂಡದ ತೆಂಕುದಿಕ್ಕಿಗೆ ಅಂಟಾರ್ಕಟಿಕ್ ಮಹಾಸಾಗರವಿದೆ. ಗೋಲವನ್ನು ನೋಡಿ, ಆರ್ಕಟಿಕ್ ಮತ್ತು ಅಂಟಾರ್ಕಟಿಕ್ ಮಹಾಸಾಗರಗಳಲ್ಲಿ ದೊಡ್ಡದು ಯಾವುದೆಂದು ಹೇಳಿರಿ. ಮೇಲೆ ಹೇಳಿದ ಎಲ್ಲಾ ಜಲಭಾಗಗಳೂ ನೆಲಭಾಗಗಳೂ ಕೂಡಿ ಇರುವುದಕ್ಕೆ ಭೂಮಿ

ಇಲ್ಲವೆ ಪೃಥ್ವಿ ಎಂದು ನಾವು ಕರೆಯುತ್ತೇವೆ. ಈ ಭೂಮಿಯು ಗೋಲಾಕಾರವಾಗಿರುವುದರಿಂದ ಅದರ ಆಕೃತಿಯನ್ನು ತೋರಿಸುವುದಕ್ಕೆ ಈ ರೀತಿಯಾಗಿ ಗೋಲವನ್ನು ಮಾಡಿರುತ್ತಾರೆ. ಕೆಳಗೆ ಹೇಳಿದ್ದನ್ನು ಚೆನ್ನಾಗಿ ವಿಚಾರಿಸಿ ಮಂದಟ್ಟುಮಾಡಿಕೊಳ್ಳಬೇಕು.

ಈ ಭೂಮಿಯನ್ನು ಎರಡು ಸರಿಯಾದ ಹೋಳುಗಳನ್ನಾಗಿ ವಿಭಾಗಿಸಬಹುದು; ಅದನ್ನು ದಕ್ಷಿಣೋತ್ತರವಾಗಿ ನೀಟಕ್ಕೆ ವಿಂಗಡಿಸಿ ಆಗುವ ಹೋಳುಗಳಲ್ಲಿ ಒಂದನ್ನು ಪೂರ್ವಾರ್ಧಗೋಲವೆಂದೂ ಮತ್ತೊಂದನ್ನು ಪಶ್ಚಿಮಾರ್ಧಗೋಲವೆಂದೂ ಹೇಳುತ್ತೇವೆ. ಗೋಲದ ಪೂರ್ವಾರ್ಧದಲ್ಲಿ ಯುರೋಪ, ಆಸ್ಯ, ಆಫ್ರಿಕ, ಔಸ್ತ್ರಾಲಿಯ ಎಂಬ ಖಂಡಗಳೂ, ಆರ್ಕಟಿಕ್, ಅಂಟಾರ್ಕಟಿಕ್, ಪೆಸಿಫಿಕ್, ಹಿಂದು, ಎಂಬ ಮಹಾಸಾಗರಗಳೂ ಸೇರುತ್ತವೆ. ಗೋಲದ ಪಶ್ಚಿಮಾರ್ಧದಲ್ಲಿ ಅಮೇರಿಕ ಖಂಡವೂ, ಆರ್ಕಟಿಕ್, ಅಂಟಾರ್ಕಟಿಕ್, ಪೆಸಿಫಿಕ್, ಅತ್ಲಾಂತಿಕ್, ಎಂಬ ಮಹಾಸಾಗರಗಳೂ ನಿಲ್ಲುತ್ತವೆ.

ನಾವು ಹಿಂದೆ ಹೇಳಿದಂತೆ ಗೋಲವನ್ನು ಪೂರ್ವಪಶ್ಚಿಮವಾಗಿ ಅಡ್ಡಕ್ಕೆ ವಿಭಾಗಿಸಿದರೂ ಎರಡು ಹೋಳುಗಳು ಆಗುತ್ತವಷ್ಟೆ. ಹಾಗೆ ಹೋಳುಗಳನ್ನು ಮಾಡಿದರೆ ಬಡಗು ಹೋಳನ್ನು ಉತ್ತರಾರ್ಧಗೋಲವೆಂದೂ ತೆಂಕು ಹೋಳನ್ನು ದಕ್ಷಿಣಾರ್ಧಗೋಲವೆಂದೂ ತಿಳಿಯಬಹುದು. ಹೀಗೆ ವಿಭಾಗಿಸಲಿಕ್ಕೆ ನಾವು ಗೋಲದ ಮೈಮೇಲೆ ಅದರ ಮಧ್ಯಕ್ಕಾಗಿ ಎಳೆಯತಕ್ಕ ಒಂದು ಗೆರೆಯನ್ನು ಹಿಡಿಯಬೇಕಾಗುತ್ತದೆ. ಈ ರೇಖೆಗೆ ವಿಷುವವೃತ್ತವೆಂದು ಹೆಸರು. ಈ ರೇಖೆಯ ಬಡಗುಕಡೆಯಲ್ಲಿ ನೆಲಭಾಗವೇ ಅಧಿಕವಾಗಿದೆ. ತೆಂಕುಕಡೆಯಲ್ಲಿ ಜಲಭಾಗವೇ ಅಧಿಕವಾಗಿದೆ. ಈ ರೇಖೆಯ ಬಡಗುದಿಕ್ಕಿನಲ್ಲಿ ಯುರೋಪು, ಉತ್ತರ ಅಮೇರಿಕ, ಆಫ್ರಿಕದ ಅರ್ಧಾಂಶ, ಇಷ್ಟಿವೆ. ಅದರ ತೆಂಕುದಿಕ್ಕಿನಲ್ಲಿ ಏನಿದೆ ಎಂದು ಊಹಿಸಿ ಹೇಳು. ಭೂಮಿಯ ಮೇಲ್ಗಡೆ ಜಲಭಾಗವು ಮೂರು ಪಾಲಾಗಿಯೂ ನೆಲಭಾಗವು ಒಂದು ಪಾಲಾಗಿಯೂ ಇವೆ ಎಂದು ನೀನು ಗೊತ್ತುಮಾಡಿಕೊಳ್ಳಬಹುದು.

ನಾಲ್ಕನೇ ಭಾಗ.

ಭೂಮಿಯ ಆಕೃತಿ.

ಭೂಮಿಯು ನಮ್ಮ ಕಣ್ಣಿಗೆ ಚಟ್ಟೆಯಾಗಿ ಕಾಣುತ್ತದಾದರೂ ನಿಜವಾಗಿ ಅದು ಗುಂಡಗೆ ಇದೆ. ಭೂಮಿಯ ಮೇಲಿನ ಯಾವುದೊಂದು ಸ್ಥಳದಿಂದ ಹೊರಟು ದಿಕ್ಕು ತಪ್ಪದೆ ನೆಟ್ಟಗೆ ಮುಂದೆ ಹೋಗುವುದಾದರೆ ಹೊರಟ ಸ್ಥಳವನ್ನೇ ಬಂದು ಸೇರುತ್ತೇವೆ. ಹೀಗೆ ಬಂದು ಮುಟ್ಟಲಿಕ್ಕೆ ಭೂಮಿಯ ಗೋಲಾಕಾರವೇ ಕಾರಣವಾಗಿದೆ. ಈ ಚಿತ್ರದಲ್ಲಿಯ



ಒಂದು ಚೆಂಡಿನ ಮೇಲೆ ಒಂದು ಇರುವೆ ಹರಿಯುವುದನ್ನು ನೋಡಿ ಭೂಮಿಯ ಆಕೃತಿಯನ್ನು ಸ್ಪಷ್ಟವಾಗಿ ಗೊತ್ತುಮಾಡಿಕೊಳ್ಳಬಹುದು. ಇರುವೆಯು ಚೆಂಡನ್ನು ಸುತ್ತುಸುತ್ತಿ ಹೊರಟ ಸ್ಥಾನಕ್ಕೆನೇ ಬಂದು ಸೇರುವ ಹಾಗೆಯೇ ಭೂಮಿಯ ಮೇಲೆ ಒಂದು ಸ್ಥಳದಿಂದ ಬಿಟ್ಟ ಹಡಗನ್ನು ಅತ್ತಿತ್ತ ತಿರುಗಿಸದೆ ನೇರಾಗಿ ನಡಿಸಿದರೆ, ಅದು ಹೊರಟ ಸ್ಥಳಕ್ಕೆ ಬಂದು ಮುಟ್ಟುತ್ತದೆ. ಹೀಗೆ ಜನರು ಭೂಮಿಯನ್ನು ಸುತ್ತಿಕೊಂಡು ಭೂಪ್ರದಕ್ಷಿಣೆ ಮಾಡಿರುತ್ತಾರೆ.

ಭೂಮಿಯು ಗುಂಡಗೆ ಇದೆ ಎಂಬದಕ್ಕೆ ಇನ್ನೊಂದು ಪ್ರಮಾಣ ಹೇಳಬಹುದು. ಸಮುದ್ರತೀರದ ಮೇಲೆ ನಿಂತುಕೊಂಡು, ದಡಬಿಟ್ಟು ಹೋಗುವ ಒಂದು ಹಡಗನ್ನು ನೋಡಿದರೆ, ಅದು ಸ್ವಲ್ಪ ದೂರ ಹೋಗುವಷ್ಟರಲ್ಲಿ ಮೊತ್ತ ಮೊದಲು ಅದರ ದೊಡ್ಡದಾದ ಅಡಿಭಾಗ, ತರುವಾಯ ಅದರ ಹೊಗೆನಳಿಗೆ, ಅನಂತರ ಅದರ ಕೂವೆಮರ, ಕಟ್ಟಕಡೆಗೆ ಕೂವೆಮರದ ತುದಿ, ಹೀಗೆ ಹಡಗಿನ ಭಾಗಗಳು ಒಂದೊಂದಾಗಿ ಮೆಲ್ಲಮೆಲ್ಲನೆ ಕಾಣದೆ ಹೋಗುತ್ತವೆ. ಆದರೆ ಕೂಡಲೆ ಸಮುದ್ರತೀರದಲ್ಲಿರುವ ಒಂದು ಗೋಪುರವನ್ನಾಗಲಿ ಎತ್ತರದ ಒಂದು ಕಟ್ಟಡವನ್ನಾಗಲಿ ಹತ್ತಿ ನೋಡಿದರೆ ಮೊದಲು ಕಾಣದೆಹೋದ ಹಡಗು ತಿರಿಗಿ ಕಣ್ಣಿಗೆ ಬೀಳುವುದು. ಹೀಗೆ ಅದು ಮೊದಲು ಮರೆಯಾಗಲಿಕ್ಕೂ ಮತ್ತೆ ಕಣ್ಣಿಗೆ ಕಾಣಲಿಕ್ಕೂ ಕಾರಣವೇನೆಂದು ನೀವೇ ಆಲೋಚಿಸಿರಿ.

ಭೂಮಿಯು ಚಪ್ಪಟೆಯಾಗಿದ್ದರೆ ಆ ಹಡಗು ದೂರ ಹೋಗುವಷ್ಟಕ್ಕೆ ಇಡೀ ಸಣ್ಣದಾಗಿ ಕಾಣಬರಬೇಕಿತ್ತಲ್ಲದೆ ಅದರ ಒಂದೊಂದು ಭಾಗವು ಕ್ರಮವಾಗಿ ಮಾಯವಾಗಲಾರದು. ಬಹಳ ದೂರ ಹೋಗಿದ್ದು ಕಣ್ಣಿಗೆ ಕಾಣದಿದ್ದ ಆ ಹಡಗು ಆ ಎತ್ತರವಾದ ಸ್ಥಳದಿಂದ ಕೂಡಲೆ ದೃಷ್ಟಿಗೆ ಗೋಚರವಾಗುವುದು ಹೇಗೆ? ಭೂಮಿಯು ಗೋಲಾಕಾರವಾಗಿರುವುದರಿಂದಲೇ ಇದು ಸಾಧ್ಯವು. ಈ ಭೂಮಿಯು ಗುಂಡಗಿದ್ದಂತೆ ಸೂರ್ಯಬಿಂಬವು ಗೋಲಾಕಾರವಾಗಿ ಕಾಣುತ್ತದೆ. ಹಾಗೆಯೇ ಚಂದ್ರನೂ ನಕ್ಷತ್ರಗಳೂ ಗೋಲಗಳಾಗಿ ಕಾಣುತ್ತವೆ. ಭೂಗೋಲದ ತ್ರಿಜ್ಯವು 3000 ಮೈಲು; ಅದರ ಸುತ್ತಳತೆ 25,000 ಮೈಲು. ನಾವು ಭೂಮಿಯಿಂದ ಸೂರ್ಯಮಂಡಲವನ್ನು ನೋಡಿದರೆ, ಅದು ಬಲು ಸಣ್ಣದಾಗಿ ಕಾಣುತ್ತದೆ. ಆದರೂ ಸೂರ್ಯನು ಭೂಮಿಯಿಂದ 1,000,000 ಪಾಲಷ್ಟು ದೊಡ್ಡವನು. ಸೂರ್ಯಗೋಲವು ಅಷ್ಟು ದೊಡ್ಡದಾಗಿದ್ದರೂ ಅದು ಭೂಮಿಗೆ ಬಹಳ ದೂರದಲ್ಲಿರುವುದರಿಂದ ತೀರ ಸಣ್ಣದಾಗಿಯೇ ಕಾಣುತ್ತದೆ. ನಮ್ಮ ಕಣ್ಣಿಗೆ ದೂರದಲ್ಲಿರುವ ವಸ್ತುಗಳು ಯಾವಾಗಲೂ ಸಣ್ಣಗೆ ತೋರುತ್ತವೆ. ಸೂರ್ಯನನ್ನು ಕುರಿತು ಇನ್ನೊಂದು ವಿಶೇಷ ಸಂಗತಿ ಇದೆ. ಅದೇನಂದರೆ ಸೂರ್ಯಬಿಂಬವು ಹಗಲಲ್ಲಿ ಉದಯಿಸಿ, ಆಕಾಶಮಾರ್ಗವಾಗಿ ಮಧ್ಯಾಹ್ನದಲ್ಲಿ ನೆತ್ತಿಯ ಮೇಲೆ ಬಂದು, ಸಾಯಂಕಾಲದಲ್ಲಿ ಅಸ್ತಮಿಸುವಂತೆ ಕಾಣಬರುತ್ತದೆ. ರಾತ್ರಿಯಲ್ಲಿ ಕಾಣದೆ ಹೋಗುತ್ತದೆ. ಮರುದಿವಸ ಹಾಗೆಯೇ ತೋರುತ್ತದೆ. ಆದರೆ ನಿಜವಾಗಿಯೂ ಸೂರ್ಯನು ಚಲಿಸುವುದಿಲ್ಲ. ನಾವು ಬಹು ವೇಗ ಓಡುವ ರೈಲುಬಂಡಿಯನ್ನು ಹತ್ತಿ ಹೋಗುವಾಗ ಸಮೀಪದಲ್ಲಿರುವ ಮರಗಿಡಗಳೂ ಮನೆಮಠಗಳೂ ಓಡುವಂತೆ ತೋರುತ್ತವೆ. ಪರಂತು ನಾವು ಹತ್ತಿದ್ದ ಬಂಡಿಯು ವೇಗವಾಗಿ ಚಲಿಸುವಂತೆ ನಮಗೆ ಬೋಧೆಯಾಗುವುದಿಲ್ಲ. ಹಾಗೆಯೇ ಭೂಮಿಯ ಮೇಲಿರುವ ನಮಗೆ ಸೂರ್ಯನು ಚಲಿಸುವಂತೆ ಕಾಣುವುದು ನಿಜ; ಆದರೆ ನಿಜವಾಗಿ ಭೂಮಿಯೇ ಚಲಿಸಿ ಸೂರ್ಯನ ಸುತ್ತುಸುತ್ತು ಬರುತ್ತದೆ. ರಾತ್ರಿಯಲ್ಲಿ ಒಂದು ದೀಪದ ಮುಂದೆ ಒಂದು ಗುಂಡಗಾದ ಪಾತ್ರೆಯನ್ನೂ ಚೆಂಡನ್ನೂ ಹಿಡಿದು ನೋಡಿರಿ. ದೀಪದ ಬೆಳಕು ಚೆಂಡಿನ ಒಂದು ಭಾಗಕ್ಕೆ ಮಾತ್ರ ಬೀಳುತ್ತದಲ್ಲದೆ ಅದರ ಇನ್ನೊಂದು ಅಂಶಕ್ಕೆ ತಗಲುವುದಿಲ್ಲ. ಅದು ಕತ್ತಲಲ್ಲಿಯೇ ಇರುತ್ತದೆ. ಚೆಂಡನ್ನು ಒಂದು ಸುತ್ತು ತಿರುಗಿಸಿದರೆ ಮೊದಲು ಕತ್ತಲಾಗಿದ್ದ ಭಾಗವು ಪ್ರಕಾಶಮಯವಾಗಿಯೂ ಪ್ರಕಾಶವುಳ್ಳ

ಭಾಗವು ಕತ್ತಲಾಗಿಯೂ ಕಾಣಬರುವುದು. ಹೀಗೆ ಭೂಮಿಯು ಬೊಗರಿಯಂತೆ ತಿರುಗುತ್ತಿರುವಾಗ ಸೂರ್ಯನ ಎದುರಾಗಿರುವ ಭೂಭಾಗಕ್ಕೆ ಹಗಲೂ ಉಳಿದ ಭಾಗಕ್ಕೆ ಇರುಳೂ ಆಗುತ್ತವೆ. ಭೂಮಿಯು ಹೀಗೆ ಸುತ್ತುವುದರಿಂದಲೇ ಹಗಲಿರುಳುಗಳು ಉಂಟಾಗುತ್ತವೆ. ಈ ಪ್ರಕಾರ ಭೂಮಿಯು ಬೊಗರಿ ಸುತ್ತಿದಂತೆ ಸುತ್ತಿಕೊಂಡು ಸೂರ್ಯನ ಸುತ್ತು ಬರುವುದಕ್ಕೆ ಒಂದು ವರ್ಷ ಕಾಲ ಬೇಕು. ಈ ಒಂದು ವರ್ಷವನ್ನು ಹನ್ನೆರಡು ಮಾಸಗಳಾಗಿ ವಿಭಾಗಿಸಿದ್ದಾರೆ. ಒಂದು ವರ್ಷಕಾಲವನ್ನು ಹನ್ನೆರಡು ಮಾಸಗಳಾಗಿ ವಿಭಾಗಿಸಿದ ಕಾರಣವನ್ನು ಕೆಳಗಿನ ಸಂಗತಿಯಿಂದ ಗೊತ್ತುಮಾಡಿಕೊಳ್ಳಬಹುದು. ಸೂರ್ಯನು ದೊಡ್ಡದೊಂದು ಬೆಂಕಿಯ ಗೋಲ. ಲೋಕದಲ್ಲಿಯ ಉಷ್ಣಕ್ಕೆ ಈ ಗೋಲವೇ ಮೂಲವು. ಸೂರ್ಯನಿಲ್ಲದಿದ್ದರೆ ಮಳೆ ಹೊಯ್ಯುತಿರಲಿಲ್ಲ, ಗಿಡಗಳು ಮೊಳೆಯುತಿರಲಿಲ್ಲ. ಮನುಷ್ಯನ ಬಾಳುವೆಯೇ ಕಷ್ಟವಾಗುತಿತ್ತು. ಚಂದ್ರಬಿಂಬವು ಕೂಡ ಸೂರ್ಯನಂತೆ ಗೋಲಾಕಾರವಾಗಿದೆ. ಸೂರ್ಯಚಂದ್ರರ ನಡುವೆ ಇರುವ ಪರಸ್ಪರ ವ್ಯತ್ಯಾಸವನ್ನು ನಿಮ್ಮಿಂದ ಹೇಳಲಿಕ್ಕೆ ಸಾಧ್ಯವುಂಟೇ? ಚಂದ್ರನು ಬೆಂಕಿಯ ಗೋಲವಲ್ಲ. ಚಂದ್ರಪ್ರಕಾಶವು ಎಷ್ಟು ಶೀತಳವಾಗಿದೆ. ಚಂದ್ರನಿಗೆ ಸ್ವಂತ ಪ್ರಕಾಶವಿಲ್ಲ. ಸೂರ್ಯನ ಪ್ರಕಾಶವು ಚಂದ್ರನ ಮೇಲೆ ಬೀಳುತ್ತದೆ. ಅದೇ ಪ್ರಕಾಶವು ನಮಗೆ ಕಾಣುತ್ತದೆ.

ಸೂರ್ಯನ ಹಾಗೆ ಚಂದ್ರನು ದಿನಂಪ್ರತಿ ಪ್ರಕಾಶಿಸುವುದಿಲ್ಲ. ತಿಂಗಳಲ್ಲಿ ಒಂದು ದಿವಸ ಅಂದರೆ ಅಮಾವಾಸ್ಯೆಯ ದಿನ ಚಂದ್ರಬಿಂಬವು ತೀರ ಕಾಣುವುದೇ ಇಲ್ಲ. ಇನ್ನೊಂದು ದಿನ ಅಂದರೆ ಪೂರ್ಣಿಮೆಯ ದಿನ ಬೆಳ್ಳಗಾಗಿಯೂ ದುಂಡಗಾಗಿಯೂ ಪೂರ್ಣವಾಗಿಯೂ ಕಾಣುತ್ತದೆ. ಪೌರ್ಣಿಮೆಯಿಂದ ಚಂದ್ರನು ಕುಂದುತ್ತಾ ಪ್ರಕಾಶಹೀನನಾಗುತ್ತಾ ಹೋಗುವನು. ಹೀಗೆ ಕ್ಷಯಿಸುತ್ತಾ ಕ್ಷಯಿಸುತ್ತಾ ಕಡೆಗೆ ಅಮಾವಾಸ್ಯೆ ದಿನ ಕಾಣುವುದೇ ಇಲ್ಲ. ಅನಂತರ ಅಮಾವಾಸ್ಯೆಯಿಂದ ದಿನೇ ದಿನೇ ಆಕಾರದಲ್ಲಿಯೂ ಪ್ರಕಾಶದಲ್ಲಿಯೂ ವೃದ್ಧಿಯಾಗುತ್ತಾ ಹೋಗುವನು. ಸೂರ್ಯಚಂದ್ರರು ಅಲ್ಲದೆ ಅನೇಕಾನೇಕ ನಕ್ಷತ್ರಗಳೂ ಇವೆ. ಸೂರ್ಯ, ಚಂದ್ರ, ಭೂಮಿ, ನಕ್ಷತ್ರ, ಇವನ್ನು ದೇವರು ನಮ್ಮ ಕಲ್ಯಾಣಕ್ಕಾಗಿ ಕರುಣೆಯಿಂದ ಸೃಷ್ಟಿಸಿರುವನು. ಇವು ನಮ್ಮ ಕಲ್ಯಾಣವನ್ನು ಯಾವ ಬಗೆಯಲ್ಲಿ ಮಾಡುತ್ತವೆ ಎಂಬದನ್ನು ಹೇಳತಕ್ಕ ಶಾಸ್ತ್ರಕ್ಕೆ ಭೂಮಿ ಶಾಸ್ತ್ರವೆಂದು ಹೆಸರು.



1. ಗುರು.　　3. ನೆಪ್ಚೂನ್.　　5. ಪೃಥ್ವಿ.　　7. ಕುಜ.

2. ಶನಿ.　　4. ಯುರೇನಸ್.　　6. ಶುಕ್ರ.　　8. ಬುಧ.